# Current affairs of September 2021 from KPSCVaani

## 01-09-2021

### ಟೋಕಿಯೊ ಪ್ಯಾರಾಲಂಪಿಕ್ಸ್ ನ ಹೈ ಜಂಪ್ ವಿಭಾಗದಲ್ಲಿ ಮರಿಯಪ್ಪನ್ ಗೆ ಬೆಳ್ಳಿ, ಶರದ್ ಗೆ ಕಂಚು



* ಪ್ರಸ್ತುತ ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಂಪಿಕ್ಸ್ ನ ಹೈ ಜಂಪ್ ವಿಭಾಗದಲ್ಲಿ ಭಾರತೀಯ ಕ್ರೀಡಾಪಟುಗಳು ಬೆಳ್ಳಿ ಮತ್ತು ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ.
* ಭಾರತೀಯ ಕ್ರೀಡಾಪಟು ಮರಿಯಪ್ಪನ್ ತಂಗವೇಲು ಅವರು ಹೈ ಜಂಪ್ ನಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಶರದ್ ಕುಮಾರ್ ಅವರು ಹೈ ಜಂಪ್ ನಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.
* ಭಾರತೀಯ ಈ ಕ್ರೀಡಾಪಟುಗಳು ಕ್ಲಾಸ್ ಟಿ42 ಪಾಲ್ಗೊಂಡಿರುವ ಮರಿಯಪ್ಪನ್ ತಂಗವೇಲು 1.86 ಮೀ. ಜಿಗಿದು ಬೆಳ್ಳಿ ಪದಕ ಪಡೆದಿದ್ದಾರೆ, ಈ ಮೊದಲು ಇವರು 2016 ರ ರಿಯೋ ಒಲಂಪಿಕ್ಸ್ ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು, ಹಾಗೂ ಇದು ಇವರ 2 ನೇ ಪದಕವಾಗಿದೆ.
* ಶರದ್ ಕುಮಾರ್ 1.83 ಮೀ. ಜಿಗಿದು ಕಂಚಿನ ಪದಕವಾನ್ನಿ ಜಯಿಸಿದ್ದಾರೆ.
* ಪ್ರಸ್ತುತ ಅಮೇರಿಕದ ಸ್ಯಾಮ್ ಗ್ರೀವೆ ಅವರು 1.88 ಮೀ. ಜಿಗಿದ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ.

### ವಿಶ್ವದ ಅತಿ ಎತ್ತರದ ಮೋಟಾರು ರಸ್ತೆ ಲಡಾಖ್ ನಲ್ಲಿ ಉದ್ಘಾಟನೆ



* ವಿಶ್ವದ ಅತಿ ಎತ್ತರದ ಮೋಟಾರು ರಸ್ತೆ ಲಡಾಖ್ ನಲ್ಲಿ ಉದ್ಘಾಟನೆ ಮಾಡಲಾಗಿದೆ, ಈ ರಸ್ತೆಯು ಲೇಹ್ ನಿಂದ ಪಂಗೊಂಗ್ ಸರೋವರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ.
* ಪ್ರಸ್ತುತ ಈ ರಸ್ತೆಯನ್ನು ಲಡಾಖ್ ಸಂಸದ ಜಮ್ಯಾಂಗ್ ಟ್ಸೆರಿಂಗ್ ನಮಗ್ಯಾಲ್ ಅವರು ಉದ್ಘಾಟಿಸಿದ್ದಾರೆ, ಈ ರಸ್ತೆಯು ವಿಶ್ವದ ಅತಿ ಎತ್ತರದ ಮೋಟಾರು ಮಾರ್ಗವಾಗಿದೆ, ಹಾಗೂ ಇದು ಸುಮಾರು 18,600 ಅಡಿ ಎತ್ತರದ ಕೆಲ ಪಾಸ್ ಮೂಲಕ ಹಾದುಹೋಗುವ ರಸ್ತೆಯಾಗಿದೆ ಎಂದಿದ್ದಾರೆ.
* ಈ ರಸ್ತೆಯನ್ನು ಭಾರತೀಯ ಸೇನೆಯ 58 ಎಂಜಿನಿಯರ್ ರೆಜಿಮೆಂಟ್ ನಿರ್ಮಾಣ ಮಾಡಿದೆ, ಈ ರಸ್ತೆಯ ಮಾರ್ಗವು ಲೇಹ್ ನಿಂದ ಪಾಂಗೊಂಗ್ ಸರೋವರದವರೆಗಿನ 41 ಕಿಮೀ ಪ್ರಯಾಣವನ್ನು ಕಡಿಮೆ ಮಾಡಲಿದೆ ಎಂದು ತಿಳಿಸಿದ್ದಾರೆ.
* ಸುಮಾರು 18,600 ಅಡಿ ಎತ್ತರದ ಈ ರಸ್ತೆಯು ವಿಶ್ವದ ಅತಿ ಎತ್ತರದ ಮೋಟರ್ ರಸ್ತೆಯ ಮಾರ್ಗವಾಗಿದೆ.
* ಪ್ರಸ್ತುತ ಉದ್ಘಾಟನೆಗೊಂಡ ಈ ರಸ್ತೆಕಿಂತಲೂ ಮೊದಲು, ಖರ್ದುಂಗ್ಲಾ ಪಾಸ್ ಎಂಬ 18,380 ಅಡಿ ರಸ್ತೆಯು ವಿಶ್ವದ ಅತಿ ಎತ್ತರದ ಮೋಟರ್ ರಸ್ತೆಯಾಗಿತ್ತು.

### ದಕ್ಷಿಣ ಆಫ್ರಿಕಾದ ವೇಗಿ ಡೇಲ್ ಸ್ಟೇಯ್ನ್ ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ




* ಪ್ರಸ್ತುತ ದಕ್ಷಿಣ ಆಫ್ರಿಕಾದ ವೇಗಿ ಡೇಲ್ ಸ್ಟೇನ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ತಿಳಿಸಿದ್ದಾರೆ.
* ದಕ್ಷಿಣ ಆಫ್ರಿಕಾದ ವೇಗಿ ಡೇಲ್ ಸ್ಟೇನ್ ಅವರು ತಮ್ಮ 17 ವರ್ಷಗಳ ಕ್ರಿಕೆಟ್ ವೃತ್ತಿಜೀವನದ ನಿವೃತ್ತಿಯನ್ನು ಘೋಷಣೆ ಮಾಡಿದ್ದಾರೆ.
* ಅಂತಾರಾಷ್ಟ್ರೀಯ ಕ್ರಿಕೆಟ್ ನಲ್ಲಿ ಡೇಲ್ ಸ್ಟೇನ್ ಅವರು ಒಟ್ಟಾರೆ 635 ವಿಕೆಟ್ ಗಳನ್ನು ಕಲೆಹಾಕಿದ್ದಾರೆ.
* ಡೇಲ್ ಸ್ಟೇನ್ ಅವರು ದಕ್ಷಿಣ ಆಫ್ರಿಕಾ ತಂಡದ ಪರವಾಗಿ 93 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ ಅದರಲ್ಲಿ 435 ವಿಕೆಟ್ ಗಳನ್ನೂ ಕಲೆಹಾಕಿದ್ದಾರೆ, ಅಲ್ಲದೇ 125 ಏಕದಿನ ಪಂದ್ಯದಲ್ಲಿ 196 ವಿಕೆಟ್, ಹಾಗೂ 47 ಟಿ20 ಪಂದ್ಯಗಳಿಂದ 64 ವಿಕೆಟ್ ಪಡೆದುಕೊಂಡಿದ್ದಾರೆ

### ಭಾರತಕ್ಕೆ ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ನಲ್ಲಿ ಒಟ್ಟಾರೆ 39 ಪದಕ



* ಪ್ರಸ್ತುತ ದುಬೈನಲ್ಲಿ ನಡೆದ ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಭಾರತಕ್ಕೆ ಒಟ್ಟಾರೆ 39 ಜಯಿಸಿದೆ, ಅದರಲ್ಲಿ 14 ಚಿನ್ನದ ಪದಕಗಳಿವೆ.
* ಈ ಮೊದಲು ಆಡಿದ ಜೂನಿಯರ್ ಸ್ಪರ್ಧೆಯಲ್ಲಿ ಭಾರತಕ್ಕೆ '8' ಚಿನ್ನ, '5' ಬೆಳ್ಳಿ ಹಾಗೂ '6' ಕಂಚಿನ ಪದಕಗಳು ಸೇರಿ ಒಟ್ಟಾರೆ 19 ಪದಕಗಳನ್ನು ಜಯಿಸಿತ್ತು.
* ಇದಲ್ಲದೇ ಯುವ ಬಾಕ್ಸರ್‌ಗಳು ಸ್ಪರ್ಧೆಯಲ್ಲಿ ಭಾರತದ ಪರವಾಗಿ '6' ಚಿನ್ನ, '9' ಬೆಳ್ಳಿ ಮತ್ತು '5' ಕಂಚು, ಒಟ್ಟಾರೆ 20 ಪದಕಗಳನ್ನು ಪಡೆದುಕೊಂಡಿದ್ದಾರೆ.
* ನೇಹಾ ಅವರು ಯುವ ಮಹಿಳೆಯರ 54 ಕೆಜಿ ವಿಭಾಗದಲ್ಲಿ ಕಜಕಿಸ್ತಾನದ ಐಶಾಗುಲ್ ಏಳುಬಾಯೇವಾ ವಿರುದ್ಧ ಗೆದ್ದು ಭಾರತಕ್ಕೆ ಚಿನ್ನದ ಪದಕವನ್ನು ತಂದುಕೊಟ್ಟಿದ್ದಾರೆ.
* ಭಾರತದ ಬಾಕ್ಸರ್ ಪ್ರೀತಿ ದಹಿಯಾ ಅವರು 2021 ರ ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಾಂಪಿಯನ್ ಆಗಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಇದೇ ಕ್ರೀಡಾಕೂಟದಲ್ಲಿ ಸ್ನೇಹಾ ಕುಮಾರಿ 66 ಕೆಜಿ ವಿಭಾಗದಲ್ಲಿ ಹಾಗೂ ಖುಷಿ 75 ಕೆಜಿ ವಿಭಾಗದಲ್ಲಿ ಚಿನ್ನದ ಪದಕಗಳನ್ನು ಜಯಿಸಿದ್ದಾರೆ.

## ಪ್ಯಾರಾಲಿಂಪಿಕ್ಸ್ ನಲ್ಲಿ ಕಂಚು ಗೆದ್ದ ಸಿಂಗ್‌ರಾಜ್ ಆಧಾನ



* ಪ್ರಸ್ತುತ ಭಾರತದ ಸಿಂಗ್‌ರಾಜ್ ಆಧಾನ ಅವರು ಈ ಟೋಕಿಯೊ ಪ್ಯಾರಾಲಿಂಪಿಕ್ಸ್ ನ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಎಸ್‌ಎಚ್1 ನ ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದಿದ್ದಾರೆ.
* ಭಾರತವು ಈ ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ಇಲ್ಲಿಯವರೆಗೆ 8 ಪದಕಗಳನ್ನು ಜಯಿಸಿದೆ.
* ಸಿಂಗ್‌ರಾಜ್ ಅವರ ಸಾಧನೆಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಏಕಕಾಲದಲ್ಲಿ ಸುಪ್ರೀಂಕೋರ್ಟ್ ನ 9 ನ್ಯಾಯಾಧೀಶರ ಪ್ರಮಾಣವಚನ ಸ್ವೀಕಾರ



* ಇದೇ ಮೊದಲ ಬಾರಿ ಏಕಕಾಲದಲ್ಲಿ '3' ಮಹಿಳೆಯರು ಸೇರಿ ಒಟ್ಟಾರೆ '9' ಹೊಸ ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ, ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ಅವರು ಪ್ರಮಾಣವಚನ ಬೋಧಿಸಿದರು.
* ಈ '9' ಹೊಸ ನ್ಯಾಯಾಧೀಶರುಗಳಲ್ಲಿ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಅವರು ಈ ಮೊದಲು ಕರ್ನಾಟಕ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಯಾಗಿದ್ದರು, ಮತ್ತು ನ್ಯಾಯಮೂರ್ತಿ ವಿಕ್ರಮ್ ನಾಥ್ ಈ ಮೊದಲು ಗುಜರಾತ್ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಾಧೀಶರಾಗಿದ್ದರು, ಹಾಗೂ ನ್ಯಾಯಮೂರ್ತಿ ಜಿತೇಂದ್ರ ಕುಮಾರ್ ಮಹೇಶ್ವರಿ ಅವರು ಈ ಮೊದಲು ಸಿಕ್ಕಿಂ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಯಾಗಿದ್ದರು, ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರು ಈ ಮೊದಲು ತೆಲಂಗಾಣ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ನ್ಯಾಯಮೂರ್ತಿ.ಬಿ.ವಿ.ನಾಗರತ್ನ ಈ ಮೊದಲು ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದರು.
* ಭಾರತದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಿ, ನ್ಯಾಯಮೂರ್ತಿ ನಾಗರತ್ನ ಅವರು 2027 ರ ಸೆಪ್ಟೆಂಬರ್ ನಲ್ಲಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ.
* ಪ್ರಮಾಣ ವಚನ ಸ್ವೀಕರಿಸಿದ ಹೊಸ ನ್ಯಾಯಾಧೀಶರು: ನ್ಯಾಯಮೂರ್ತಿ ಸಿ.ಟಿ.ರವಿಕುಮಾರ್ ನ್ಯಾಯಮೂರ್ತಿ ಎಂ.ಎಂ.ಸುಂದ್ರೇಶ್, ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ, ಹಾಗೂ ನ್ಯಾಯಮೂರ್ತಿ ಪಿ. ಎಸ್. ನರಸಿಂಹ.
* ಪ್ರಸ್ತುತ ಮುಖ್ಯ ನ್ಯಾಯಾಧೀಶರು ಸೇರಿ ಸುಪ್ರೀಂ ಕೋರ್ಟ್‌ನ ಬಲವು 33 ರಷ್ಟಿದೆ ಎಂದು ತಿಳಿಸಲಾಗಿದೆ

## ರಾಷ್ಟ್ರೀಯ ಸಣ್ಣ ಕೈಗಾರಿಕೆ ದಿನ



* ಭಾರತದಲ್ಲಿ ಪ್ರತಿ ವರ್ಷ ಆಗಸ್ಟ 30 ರಂದು ರಾಷ್ಟ್ರೀಯ ಸಣ್ಣ ಕೈಗಾರಿಕಾ ದಿನವನ್ನು, ಸಣ್ಣ ಉದ್ಯಮಗಳ ಮೌಲ್ಯವನ್ನು ಗುರುತಿಸಲು ಆಚರಣೆ ಮಾಡಲಾಗುತ್ತದೆ.
* ಈ ರಾಷ್ಟ್ರೀಯ ಸಣ್ಣ ಕೈಗಾರಿಕೆಯು ದೇಶಾದ್ಯಂತ ಸಣ್ಣ ಉದ್ಯಮಗಳನ್ನು ಹಾಗೂ ಸಣ್ಣ ವ್ಯಾಪಾರಿಗಳಿಗೆ ಉತ್ತೇಜನ ನೀಡಲು ವಾರ್ಷಿಕ ಆಚರಣೆ ಮಾಡಲಾಗುತ್ತದೆ, ಹಾಗೂ ಇದೇ ದಿನದಂದು ಉದ್ಯೋಗವಿಲ್ಲದವರಿಗೆ ಉದ್ಯೋಗ ಅವಕಾಶಗಳನ್ನು ನೀಡುವ ನಿಟ್ಟಿನಲ್ಲಿ ಆಚರಣೆ ಮಾಡಲಾಗುತ್ತದೆ.
* ಪ್ರಸ್ತುತ 2000 ರ ಆಗಸ್ಟ 30, ರಂದು ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವಾಲಯವು (SSI) ವಲಯಕ್ಕೆ ಸಮಗ್ರವಾದ ಪಾಲಿಸಿ ಪ್ಯಾಕೇಜ್ ನ್ನು ಆರಂಭಿಸಿದೆ.
* ಆಗಸ್ಟ 30 ನ್ನು 'SSI ದಿನ' ಎಂದು ಘೋಷಣೆ ಮಾಡಲು ಸಚಿವಾಲಯವು ಒಪ್ಪಿಗೆ ನೀಡಿದೆ

## ಭಾರತೀಯ ಮತ್ತು ಅಲ್ಜೀರಿಯನ್ ನೌಕಾಪಡೆಗಳು ಮೊದಲ ವ್ಯಾಯಾಮ



* ಪ್ರಸ್ತುತ 2021 ರ ಆಗಸ್ಟ. 29 ರಂದು ಭಾರತೀಯ ಮತ್ತು ಅಲ್ಜೀರಿಯನ್ ನೌಕಾಪಡೆಗಳು ಮೊದಲ ನೌಕಾ ವ್ಯಾಯಾಮವನ್ನು ಅಲ್ಜೀರಿಯಾ ತೀರದಲ್ಲಿ ನಡೆಸಿವೆ.
* ಈ ವ್ಯಾಯಾಮದಂದು INS ತಬರ್ ಭಾರತವನ್ನು ಪ್ರತಿನಿಧಿಸಿದೆ, ಹಾಗೂ INS ಎಜೇಜರ್ ನೌಕಾ ಹಡಗು ಅಲ್ಜೀರಿಯಾ ದೇಶವನ್ನು ಪ್ರತಿನಿಧಿಸಿದೆ.
* ಈ ನೌಕಾಪಡೆಯ ವ್ಯಾಯಾಮವು ಉಭಯ ರಾಷ್ಟ್ರಗಳ ಕಾರ್ಯಾಚರಣೆಯಾಗಿದೆ, ಇದರಿಂದಾಗಿ ಭವಿಷ್ಯದ ಸಹಕಾರವನ್ನು ವೃದ್ಧಿಸಲಿದೆ ಎಂದು ತಿಳಿಸಿದ್ದಾರೆ.
* ಹೊಸದಿಲ್ಲಿಯಲ್ಲಿ ಅಲ್ಜೀರಿಯಾ ರಾಯಭಾರ ಕಚೇರಿಯನ್ನು ಹೊಂದಿದೆ, ಹಾಗೂ ಈ ದೇಶಗಳ ನಡುವಿನ ವ್ಯಾಪಾರವು 2001 ರಲ್ಲಿ US $ 55 ದಶಲಕ್ಷದಿಂದ 2011 ರಲ್ಲಿ US $ 3.4 ಶತಕೋಟಿಗೆ ಏರಿಕೆಕಂಡಿದೆ.
* ಭಾರತ ದೇಶವು ಈ ಹಿಂದೆ 2003 ರ ಮೇ ತಿಂಗಳಲ್ಲಿ

ಅಲ್ಜೀರಿಯಾದಲ್ಲಿ ನಡೆದ ಭೂಕಂಪದ ಸಂತ್ರಸ್ತರಿಗೆ ಸಹಾಯ ನೀಡುವ ನಿಟ್ಟಿನಲ್ಲಿ ಭಾರತ ಅಲ್ಜೀರಿಯಾಕ್ಕೆ US $ 1 ಮಿಲಿಯನ್ ಮಾನವೀಯ ನೆರವು ನೀಡಿದೆ.
* ಅಲ್ಜೀರಿಯಾ ರಾಷ್ಟ್ರವು 2010 ರಲ್ಲಿ ಭಾರತದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಸಹಾಯದಿಂದ ಉಪಗ್ರಹ ಅಲ್ಸಾಟ್ 2 ಎ ನ್ನು ಕಕ್ಷೆಗೆ ಹಾರಿಸಿದೆ.

## ಅಫ್ಘಾನಿಸ್ತಾನದಲ್ಲಿನ 20 ವರ್ಷಗಳ ಯುದ್ಧವನ್ನು ಕೊನೆಗೊಳಿಸಿದ ಅಮೇರಿಕ



* 2021 ರ ಆಗಸ್ಟ್ 31 ರಂದು ಅಫ್ಘಾನಿಸ್ತಾನದಲ್ಲಿ ತನ್ನ 20 ವರ್ಷಗಳ ಯುದ್ಧದ ಅಂತ್ಯವನ್ನು ಯುನೈಟೆಡ್ ಸ್ಟೇಟ್ಸ್ ಘೋಷಣೆ ಮಾಡಿ ತನ್ನ ಸೇನೆಯನ್ನು ಮರಳಿ ಕರೆಸಿಕೊಂಡಿದೆ.
* ಈ ಮೊದಲು ಅಮೇರಿಕ ಸೇನೆಯು ಇದೇ ಆಗಸ್ಟ್ 31 ರೊಳಗೆ ಅಫ್ಘಾನಿಸ್ತಾನ ರಾಷ್ಟ್ರವನ್ನು ತೊರೆಯಲಿದೆ ಎಂದು ಅಮೇರಿಕ ತಿಳಿಸಿತ್ತು, ಅದರಂತೆಯೇ ಇದೀಗ ಅಮೇರಿಕದ ಕೊನೆಯ ಮಿಲಿಟರಿ ವಿಮಾನ ಕಾಬೂಲ್‌ನ ಹಮೀದ್ ಕರ್ಜೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತೊರೆದಿದೆ.
* ಅಲ್ ಖೈದಾ ಭಯೋತ್ಪಾದಕರು ಸೆಪ್ಟೆಂಬರ್ 9/11 ರ 20 ನೇ ವಾರ್ಷಿಕೋತ್ಸವದ ಮೊದಲು ನ್ಯೂಯಾರ್ಕ್ ನಲ್ಲಿ ನ ಅವಳಿ ಗೋಪುರಗಳನ್ನು ಹೊಡೆದುರುಳಿಸಿದರು.
* ಈ ಭಯೋತ್ಪಾದಕ ದಾಳಿಯಿಂದಾಗಿ ಅಮೇರಿಕ ಅಫ್ಘಾನಿಸ್ತಾನಕ್ಕೆ ಪ್ರವೇಶ ಮಾಡಿತು, ಹಾಗೂ ತಾಲಿಬಾನ್ ಆಡಳಿತವನ್ನು ಉರುಳಿಸಲು ಸಿದ್ದವಾಯಿತು.
* ಪ್ರಸ್ತುತ 2001 ರಿಂದ 2021 ರವರೆಗೆ ಅಫ್ಘಾನಿಸ್ತಾನದಲ್ಲಿ ನಡೆದ ಸಂಘರ್ಷಗಳು: ಅಫ್ಘಾನಿಸ್ತಾನದಲ್ಲಿನ ತಾಲಿಬಾನ್ ಆಡಳಿತದ ಅಫ್ಘಾನಿಸ್ತಾನ ಇಸ್ಲಾಮಿಕ್ ಎಮಿರೇಟ್ ನ್ನು ಹೊಡೆದ ಉರುಳಿಸಲು ಯುನೈಟೆಡ್ ಸ್ಟೇಟ್ಸ್ ಹಾಗೂ ಮಿತ್ರರಾಷ್ಟ್ರ ಆಕ್ರಮಣದಿಂದ ಈ ಯುದ್ಧ ಆರಂಭಗೊಂಡಿದೆ.
* ತಾಲಿಬಾನ್ ದಂಗೆಕೋರರ ವಿರುದ್ಧ ಮಿತ್ರರಾಷ್ಟ್ರವಾದ ನ್ಯಾಟೋ ಮತ್ತು ಅಫ್ಘಾನ್ ಸಶಸ್ತ್ರ ಪಡೆಗಳು ಅಧಿಕೃತವಾಗಿ ಯುದ್ಧವನ್ನು ನಡೆಸಿದವು, ಆದರೆ ಈ ಯುದ್ಧದಲ್ಲಿ ತಾಲಿಬಾನ್ ಅಫ್ಘಾನಿಸ್ತಾನದ ಸೈನ್ಯವನ್ನು ಸೋಲಿಸಿತು, ಹಾಗೂ ಇದುವೇ ಯುನೈಟೆಡ್ ಸ್ಟೇಟ್ಸ್ ಇತಿಹಾಸದಲ್ಲಿ ಸುದೀರ್ಘ ಯುದ್ಧವಾಗಿದೆ.

# 02-09-2021

## ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ಒಕ್ಸಾನಾಗೆ 2 ನೇ ಚಿನ್ನ



* ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ನಲ್ಲಿ ಅಮೇರಿಕದ ಒಕ್ಸಾನಾ ಮಾಸ್ಟರ್ಸ್, 2 ನೇ ಚಿನ್ನದ ಪದಕ ಜಯಿಸಿದ್ದಾರೆ, ಇದಕ್ಕೂ ಮೊದಲೇ ಇವರು ಮಹಿಳೆಯರ ರಸ್ತೆ ರೇಸ್ ಎಚ್5 ವಿಭಾಗದಲ್ಲಿ ಚಿನ್ನ ಜಯಿಸಿದ್ದರು.
* ಈ ಹಿಂದೆ 1986 ರಲ್ಲಿ ಉಕ್ರೇನ್ ನ ಚೆರ್ನೊಬಿಲ್ ನಲ್ಲಿ ನಡೆದ ಅಣು ಸ್ಥಾವರ ಸ್ಫೋಟದ ಕಾರಣದಿಂದಾಗಿ ಒಕ್ಸಾನಾ ಮಾಸ್ಟರ್ಸ್ ಅವರು ಹುಟ್ಟಿನಿಂದಲೇ ಕಾಲುಗಳ ಶಕ್ತಿಯನ್ನು ಕಳೆದುಕೊಂಡಿದ್ದಾರೆ.
* ಒಕ್ಸಾನಾ ಮಾಸ್ಟರ್ಸ್ ಅವರು 1989 ರಲ್ಲಿ ಉಕ್ರೇನ್‌ನಲ್ಲಿ ಜನಿಸಿದ್ದಾರೆ, ಪ್ರಸ್ತುತ ಇವರು ಬಾಲಕಿಯಾಗಿರುವಾಗ ಅಮೇರಿಕದ ಮೂಲದ ಮಹಿಳೆ ಇವರನ್ನು ದತ್ತು ಪಡೆದಿದ್ದಾರೆ.

## ಭಾರತವು ವಿಶ್ವಸಂಸ್ಥೆ ಭದ್ರತಾ ಮಂಡಳಿ ಅಧ್ಯಕ್ಷೀಯ ಸ್ಥಾನವನ್ನು ಯಶಸ್ವಿಯಾಗಿ ನಿರ್ವಹಿಸಿದೆ



* ಪ್ರಸ್ತುತ ಭಾರತವು ಆಗಸ್ಟ್ ಸಮಯಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಾರತ ಅಧ್ಯಕ್ಷೀಯ ಸ್ಥಾನವನ್ನು ಸ್ವೀಕರಿಸಿತ್ತು, ಈ ಸಂಧರ್ಭದಲ್ಲಿ ಭಾರತವು ಅಫ್ಘಾನಿಸ್ತಾನ ದೇಶ ಹಾಗೂ ಜಾಗತಿಕ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಉತ್ತಮ ನಿರ್ಧಾರಗಳನ್ನು ತಗೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.
* ಪ್ರಸ್ತುತ ಅಫ್ಘಾನಿಸ್ತಾನದ ಭೂ ಪ್ರದೇಶವನ್ನು ಭಯೋತ್ಪಾದಕ ಚಟುವಟಿಕೆಗಳಿಗೆ ಮತ್ತು ದೇಶಗಳನ್ನು ಬೆದರಿಸಲು ಬಳಸಿಕೊಳ್ಳಬಾರದು ಎಂಬ ಕಠಿಣ ತೀರ್ಮಾನವನ್ನು ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷೀಯ ಸ್ಥಾನ ವಹಿಸಿಕೊಂಡ ನಂತರ ಅಂಗೀಕರಿಸಿದೆ.
* ಭಾರತ ದೇಶವು ಜಾಗತಿಕ ಸುರಕ್ಷತೆ, ಉಗ್ರವಾದಕ್ಕೆ ಸಂಬಂಧಿಸಿ ತನ್ನ ನಿಲುವನ್ನು ತಿಳಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷೀಯ ಸ್ಥಾನವನ್ನು ಯಶಸ್ವಿಯಾಗಿ ನಿರ್ವಹಿಸಿದೆ, ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ರಾಯಭಾರಿಯ ಕಾಯಂ ಪ್ರತಿನಿಧಿಯಾಗಿರುವ.ಎಸ್.ತಿರುಮೂರ್ತಿ ಟ್ವೀಟ್ ಮೂಲಕ ತಿಳಿಸಿದ್ದಾರೆ.
* ಇನ್ನು ಮುಂದೆ ಸೆಪ್ಟೆಂಬರ್ ಅವಧಿಯವರೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷೀಯ ಸ್ಥಾನವನ್ನು ಐರ್ಲೆಂಡ್ ವಹಿಸಿಕೊಳ್ಳಲಿದೆ ಎಂದು ತಿಳಿದು ಬಂದಿದೆ.

## ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮಥುರಾದಲ್ಲಿ ಮದ್ಯ, ಮಾಂಸ ಮಾರಾಟ ನಿಷೇಧಿಸಿದ್ದಾರೆ



* ಉತ್ತರ ಪ್ರದೇಶ ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮಥುರಾದಲ್ಲಿ ಮದ್ಯ ಮತ್ತು ಮಾಂಸ ಮಾರಾಟ ಮಾಡುವದನ್ನು ಸಂಪೂರ್ಣ ನಿಷೇಧಿಸಿದ್ದಾರೆ.
* ಉತ್ತರ ಭಾರತದ ಉತ್ತರ ಪ್ರದೇಶದಲ್ಲಿ ಮಥುರಾ ಒಂದು ಪವಿತ್ರ

ನಗರ. ಶ್ರೀಕೃಷ್ಣ ದೇವರು ಹಿಂದೂ ದೇವಾಲಯವಾದ ಶ್ರೀ ಕೃಷ್ಣ ಈ ಜನ್ಮ ಭೂಮಿಯಲ್ಲಿ ಜನಿಸಿದರು ಎಂದು ಹೇಳಲಾಗುತ್ತದೆ. ಯಮುನಾ ನದಿಯಲ್ಲಿ 25 ಘಾಟ್‌ಗಳಿವೆ ಅದರಲ್ಲಿ ವಿಶ್ರಾಮ ಘಾಟ್'ನ್ನು ಅತ್ಯಂತ ಪವಿತ್ರವೆಂದು ಗುರುತಿಸಲಾಗಿದೆ.
* ಸತಿ ಬುರ್ಜ್ 16 ನೇ ಶತಮಾನದ ಸ್ಮಾರಕ ಗೋಪುರ, ಹಾಗೂ ಕೃಷ್ಣನ ಅಮೃತಶಿಲೆಯ ವಿಗ್ರಹವು ಈ ನಗರದಲ್ಲಿದೆ, ಈ ಕಾರಣದಿಂದ ಧಾರ್ಮಿಕ ನಗರವಾದ ಮಥುರಾದಲ್ಲಿ ಇನ್ನು ಮುಂದೆ ಮದ್ಯ ಮತ್ತು ಮಾಂಸ ಮಾರಾಟ ಮಾಡುವದನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ

## ಕಾಶ್ಮೀರದ ಯುವ ಪ್ರತಿಭೆಗಳಿಗಾಗಿ ಜಶ್ನ್ ಇ ಜನೂಬ್ ಕ್ರೀಡಾ ಹಬ್ಬ ಆಯೋಜಿಸಿದ ಭಾರತೀಯ ಸೇನೆ




* ಪ್ರಸ್ತುತ ಕಣಿವೆ ರಾಜ್ಯವಾದ ಜಮ್ಮು ಮತ್ತಕಾಶ್ಮೀರದಲ್ಲಿನ ಯುವಕರು ಭಯೋತ್ಪಾದನೆಯತ್ತ ಹೋಗುವದನ್ನು ತಡೆಯಲು ಇದೀಗ ಭಾರತೀಯ ಸೇನೆಯು ಕಾಶ್ಮೀರದ ಯುವ ಪ್ರತಿಭೆಗಳಿಗಾಗಿ ಜಶ್ನ್ ಇ ಜನೂಬ್ ಕ್ರೀಡಾ ಹಬ್ಬವನ್ನು ಆಯೋಜಿಸಿದೆ.
* ಭಾರತೀಯ ಸೇನೆಯು ಸುಮಾರು 15 ದಿನಗಳ ಈ ಸುದೀರ್ಘ ಕಾರ್ಯಕ್ರಮವನ್ನು ಕಾಶ್ಮೀರದ ಯುವಕರನ್ನು ಕ್ರೀಡಾ ಚಟುವಟಿಕೆಗಳತ್ತ ಸೆಳೆಯಲು ಈ ಜಶ್ನ್ ಇ ಜನೂಬ್ ಎಂಬ ಕ್ರೀಡಾ ಉತ್ಸವವನ್ನು ಆರಂಭಿಸಿತ್ತು. * ಈ ಕ್ರೀಡಾಕೂಟವು ಮಂಗಳವಾರ ಕೊನೆಗೊಂಡಿದೆ, ಈ ಕ್ರೀಡಾ ಉತ್ಸವದಲ್ಲಿ ಕಬಡ್ಡಿ, ಓಟ ಮತ್ತು ಸ್ಕೈ ಡೈವಿಂಗ್, ಮಾರ್ಷಲ್ ಆರ್ಟ್ಸ್ ಸೇರಿದಂತೆ ವಿವಿಧ ಕ್ರೀಡೆಗಳನ್ನು ನಡೆಸಲಾಗಿದೆ, ಈ ಕ್ರೀಡೆಗಳಲ್ಲಿ ಹಲವಾರು ಕಾಶ್ಮೀರದ ಯುವಕರು ಪಾಲ್ಗೊಂಡಿದ್ದರು.

## ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸಂಸದೀಯ ಕಾರ್ಯಕ್ರಮವನ್ನು ಉದ್ಘಾಟಿಸಿದರು



* ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶದಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಬಲೀಕರಣಗೊಳಿಸುವ ಸಂಸದೀಯ ಕಾರ್ಯಕ್ರಮವನ್ನು ಪ್ರಾರಂಭಿಸಿದರು.
* ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಈ ಕಾರ್ಯಕ್ರಮವನ್ನು ಶ್ರೀನಗರದ ಶೇರ್ ಐ ಕಾಶ್ಮೀರ ಅಂತರಾಷ್ಟ್ರೀಯ ಸಮಾವೇಶ ಕೇಂದ್ರದಲ್ಲಿ ಉದ್ಘಾಟಿಸಿದರು.
* ಈ ಕಾರ್ಯಕ್ರಮದ ಅಡಿಯಲ್ಲಿ ಅಧಿಕಾರ ಹೊಂದಿರುವ ಪಂಚಾಯತ್‌ಗಳು ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ್ತು ಜನರ ವಿಶ್ವಾಸವನ್ನು ಹೆಚ್ಚಿಸಲು ಈ ಕಾರ್ಯಕ್ರಮವು ಸಹಾಯ ಮಾಡಲಿದೆ.
* ಸಂಸದೀಯ ಪ್ರಚಾರ ಕಾರ್ಯಕ್ರಮವು ಆಡಳಿತ ಹಾಗೂ ಯೋಜನಾ ಸಂಸ್ಥೆಗಳನ್ನೂ ತಳಮಟ್ಟದಲ್ಲಿ ಬಲಪಡಿಸಲು ಮಾಡುತ್ತಿರುವ ಮೊದಲ ಕಾರ್ಯಕ್ರಮ ಇದಾಗಿದೆ.

*ಕಾರ್ಯಕ್ರಮದ ಆವೃತ್ತಿಗಳು:
*ಮೊದಲನೇ ಆವೃತ್ತಿ: 2021ರ ಜನವರಿ. 8 ರಂದು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಪ್ರಥಮ ಔಟ್‌ರೀಚ್ ಕಾರ್ಯಕ್ರಮವನ್ನು ಆಯೋಜಿಸಿತ್ತು, ಈ ಕಾರ್ಯಕ್ರಮದಲ್ಲಿ 445 ಪಂಚಾಯತ್ ಪ್ರತಿನಿಧಿಗಳು ಪಾಲ್ಗೊಂಡಿದ್ದರು.
* 2 ನೇ ಆವೃತ್ತಿ: 2021 ರ ಫೆಬ್ರವರಿಯಲ್ಲಿ ಮೇಘಾಲಯ ಹಾಗೂ ಈಶಾನ್ಯರಾಜ್ಯಗಳ ಅನುಕೂಲಕ್ಕಾಗಿ ಈ ಕಾರ್ಯಕ್ರಮವನ್ನು ಶಿಲ್ಲಾಂಗ್ ನಲ್ಲಿ ನಡೆಸಲಾಗಿತ್ತು, ಇದರಲ್ಲಿ ಈಶಾನ್ಯ ರಾಜ್ಯಗಳ ಸ್ಥಳೀಯ ಸಂಸ್ಥೆಗಳ 115 ಸದಸ್ಯರು ಪಾಲ್ಗೊಂಡಿದ್ದರು.
* 3 ನೇ ಆವೃತ್ತಿ: 2021 ರ ಆಗಸ್ಟ. 27 ರಂದು ಲಡಾಖ್‌ನ ಕೇಂದ್ರಾಡಳಿತ ಪ್ರದೇಶದ ಸಂಸ್ಥೆಗಳಿಗಾಗಿ ನಡೆಸಲಾಗಿದೆ, ಇದರಲ್ಲಿ 195 ಪಂಚಾಯತ್‌ನ ಪ್ರತಿನಿಧಿಗಳು ಪಾಲ್ಗೊಂಡಿದ್ದರು.
* 4 ನೇ ಆವೃತ್ತಿ: 2021 ರ ಆಗಸ್ಟ್. 31 ರಂದು ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶದ ಶ್ರೀನಗರದ 'ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣಕ್ಕಾಗಿ ಪಾರ್ಲಿಮೆಂಟರಿ ಔಟ್ರೀಚ್ ಪ್ರೋಗ್ರಾಂ' ಎಂಬ ವಿಷಯದ ಅಡಿಯಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ

## ಆಹಾರ ತುರ್ತುಸ್ಥಿತಿಯನ್ನು ಘೋಷಿಸಿದ ಶ್ರೀಲಂಕಾ



* ಶ್ರೀಲಂಕಾ ದೇಶವು 2021 ರ ಆಗಸ್ಟ್. 31 ರಂದು ಆಹಾರ ಕೊರತೆಯ ಮೇಲೆ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ.
* ಪ್ರಸ್ತುತ ಶ್ರೀಲಂಕಾ ರಾಷ್ಟ್ರವು ಅತಿಯಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ, ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರು ಸಕ್ಕರೆ, ಅಕ್ಕಿ ಮತ್ತು ಇತರ ಅಗತ್ಯ ಆಹಾರಗಳ ಸಂಗ್ರಹವನ್ನು ಎದುರಿಸಲು ತುರ್ತು ನಿಯಮಗಳನ್ನು ಘೋಷಿಸಿದ್ದಾರೆ.
* ಶ್ರೀಲಂಕಾ ಕರೋನವೈರಸ್'ನೊಂದಿಗೆ ಹೋರಾಡುತ್ತಿದೆ, ಇದರ ಮಧ್ಯೆ ಇದೀಗ ಆಹಾರದ ಕೊರತೆ ಎದುರಾಗಿದೆ.
* ಪ್ರಸ್ತುತ ಶ್ರೀಲಂಕಾ ರಾಷ್ಟ್ರದ ಆರ್ಥಿಕತೆಯು ಕೋವಿಡ್ 19 ಸಾಂಕ್ರಾಮಿಕ ರೋಗದಿಂದ 2020 ರಲ್ಲಿ 3.6 ಶೇಕಡಾ ಕಡಿಮೆಯಾಗಿದೆ.
* ಶ್ರೀಲಂಕಾ 2021 ರ ಆಗಸ್ಟ ವೇಳೆಗೆ ವಿಶ್ವದಾದ್ಯಂತ ಕೋವಿಡ್ 19 ರೋಗಕ್ಕೆ ಅತಿ ಹೆಚ್ಚು ದೈನಂದಿನ ಸಾವುಗಳನ್ನು ಹೊಂದಿರುವ ನಾಲ್ಕನೇ ದೇಶವಾಗಿದೆ.
* ಅತಿ ಹೆಚ್ಚು ದೈನಂದಿನ ಸಾವುಗಳನ್ನು ಹೊಂದಿರುವ ಇತರೆ ಮೂರು ದೇಶಗಳು ಇಂತಿವೆ: ಜಾರ್ಜಿಯಾ, ಟುನೀಶಿಯಾ ಮತ್ತು ಮಲೇಷಿಯಾ.

## ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೆ ಮಾರ್ಗದಲ್ಲಿ ಆಟಿಕೆ ರೈಲು ಸಫಾರಿ ಆರಂಭ



* ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೇ ಮಾರ್ಗದಲ್ಲಿ ಈಶಾನ್ಯ ಗಡಿನಾಡು ರೈಲ್ವೇಸ್ ಜಂಗಲ್ ಟೀ ಟಾಯ್ ರೈಲು ಸಫಾರಿ ಆರಂಭಿಸಿದೆ.
* ಪ್ರಸ್ತುತ ಈ ಟಾಯ್ ರೈಲು ಸಫಾರಿ ರೈಲು ಡಾರ್ಜಿಲಿಂಗ್ ಹಿಮಾಲಯನ್ ಸಿಲಿಗುರಿ ಜಂಕ್ಷನ್‌ನಿಂದ ಪಶ್ಚಿಮ ಬಂಗಾಳದ ರೊಂಗ್‌ಟಾಂಗ್ ರೈಲು ನಿಲ್ದಾಣದವರೆಗೆ ಚಲಿಸುತ್ತದೆ.
* ಈ ಮೊದಲು ಪ್ರಾರಂಭಿಸಲಾಗಿರುವ ಪಾರಂಪರಿಕ ಆಟಿಕೆ ರೈಲು ಸೇವೆಯು ಪಶ್ಚಿಮ ಬಂಗಾಳದ ನ್ಯೂ ಜಲ್ಪೈಗುರಿ ಹಾಗೂ ಡಾರ್ಜಿಲಿಂಗ್ ನಡುವೆ ಮತ್ತೆ ಆರಂಭವಾಗಿವೆ.
* ಪ್ರಸ್ತುತ ಈ ರೈಲುಗಳು ಕೋವಿಡ್ 19 ಸಾಂಕ್ರಾಮಿಕದ ರೋಗದ ಮಧ್ಯೆ ತನ್ನ ಸೇವೆಯನ್ನು ಸುಮಾರು 17 ತಿಂಗಳು ಸ್ಥಗಿತಗೊಳಿಸಲಾಗಿತ್ತು.
* ವಿಶ್ವಸಂಸ್ಥೆಯು 1999 ರ ಡಿಸೆಂಬರ್. 5 ರಂದು ಈ ಆಟಿಕೆ ರೈಲುನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣ ಎಂದು ಘೋಷಣೆ ಮಾಡಿದೆ.
* ಈ ಪ್ರದೇಶದಲ್ಲಿ ಟಾಯ್ ರೈಲುಗಳ ಮೂಲಕ ಪ್ರವಾಸೋದ್ಯಮ ವಲಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಆಟಿಕೆ ರೈಲು ಸಫಾರಿಯುನ್ನು ಆರಂಭಿಸಲಾಗಿದೆ.

## 'ಲಾಥಮ್ಸ್ ಸ್ನಿಪ್' ವಲಸೆ ಹಕ್ಕಿ



* ಪ್ರಸ್ತುತ ಲಾಥಮ್‌ನ ಸ್ನೈಪ್ ವಲಸೆ ಹಕ್ಕಿಯು ಜಪಾನ್‌ನಿಂದ ಆಸ್ಟ್ರೇಲಿಯಾಕ್ಕೆ ವರ್ಷಕ್ಕೆ ಎರಡು ಬಾರಿ ತಡೆರಹಿತವಾಗಿ ಹಾರುತ್ತದೆ, ಹಾಗೂ ಈ ಹಕ್ಕಿಯು ಸಾವಿರಾರು ಕಿ.ಮೀ. ಸಾಗರದ ದೂರವನ್ನು ಕ್ರಮಿಸಲು 5 ದಿನಗಳನ್ನು ಕಾಲಾವಕಾಶ ತೆಗೆದುಕೊಳ್ಳುತ್ತದೆ.
* ಈ ಹಕ್ಕಿಯನ್ನು ಜಪಾನೀಸ್ ಸ್ನಿಪ್ ಎನ್ನುವರು, ಅಲ್ಲದೇ ವೈಜ್ಞಾನಿಕವಾಗಿ ಗಲ್ಲಿನಾಗೋ ಹಾರ್ಡ್ವಿಕ್ಕಿ ಎಂದು ಕರೆಯುವರು.
* ಈ ಮೊದಲು ಆಸ್ಟ್ರೇಲಿಯಾದಲ್ಲಿ ಈ ಪಕ್ಷಿಯನ್ನು ಗೇಮ್ ಬರ್ಡ್ ಎಂದು ಬೇಟೆಯಾಡಲಾಗುತ್ತಿತ್ತು, ಆದರೆ ಸದ್ಯ ಇದನ್ನು ರಕ್ಷಣೆ ಮಾಡಲಾಗುತ್ತಿದೆ.
* ಪ್ರಸ್ತುತ ರಾಷ್ಟ್ರೀಯ ಉದ್ಯಾನಗಳು ಹಾಗೂ ವನ್ಯಜೀವಿ ಕಾಯಿದೆ 1972 ರ ಅಡಿಯಲ್ಲಿ ದಕ್ಷಿಣ ಆಸ್ಟ್ರೇಲಿಯಾದಲ್ಲಿ ಈ ಹಕ್ಕಿಯನ್ನು ಅಪರೂಪ ಪಕ್ಷಿ ಎಂದು ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ.

## ಭಾರತವು ತಾಲಿಬಾನ್ ಜೊತೆ ಮೊದಲ ಸಭೆ ನಡೆಸಿತು



* ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಾರ ಕತಾರ್‌ನ ರಾಯಭಾರಿ ದೀಪಕ್ ಮಿತ್ತಲ್, ಹಾಗೂ ತಾಲಿಬಾನ್‌ನ ರಾಜಕೀಯ ಕಚೇರಿಯ ಮುಖ್ಯಸ್ಥ ಶೇರ್ ಮೊಹಮ್ಮದ್ ಅಬ್ಬಾಸ್ ಸ್ಟಾನೆಕ್ ಜಾಯ್ ಅವರನ್ನು 2021 ರ ಆಗಸ್ಟ್. 31 ರಂದು ಭೇಟಿಯಾದರು.
* ಪ್ರಸ್ತುತ ಭಾರತೀಯ ಭದ್ರತಾ ಅಧಿಕಾರಿಗಳು ಹಾಗೂ ರಾಜತಾಂತ್ರಿಕರು ತಾಲಿಬಾನ್'ನೊಂದಿಗೆ ಕೆಲ ತಿಂಗಳುಗಳ ಕಾಲ ಒಪ್ಪಂದ ಮಾಡಿಕೊಂಡಿದೆ, ಈ ಸಭೆಯಲ್ಲಿ, ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಭಾರತೀಯ ಪ್ರಜೆಗಳನ್ನು ಸುರಕ್ಷತೆ, ಭದ್ರತೆ ಮತ್ತು ಆರಂಭಿಕ ವಾಪಸಾತಿಯ ವಿಷಯದ ಬಗ್ಗೆ ಚರ್ಚಿಸಲಾಯಿತು.
* ಸದ್ಯ ಅಫ್ಘಾನಿಸ್ತಾನದಲ್ಲಿ 140 ಭಾರತೀಯರು ಮತ್ತು ಸಿಖ್ ಅಲ್ಪಸಂಖ್ಯಾತ ಪ್ರಜೆಗಳು ಕಾಬೂಲ್‌ನಲ್ಲಿ ಉಳಿದುಕೊಂಡಿದ್ದಾರೆ, ಭಾರತವು ಇಲ್ಲಿಯತನಕ 112 ಅಫ್ಘಾನ್ ಪ್ರಜೆಗಳು ಸೇರಿ 565 ಜನರನ್ನು ದೆಹಲಿಗೆ ರವಾನಿಸಿದೆ

## BIMSTEC ದೇಶಗಳ ಕೃಷಿ ತಜ್ಞರ ಜೊತೆ 8 ನೇ ಸಭೆ




* ಭಾರತವು 2021 ರ ಆಗಸ್ಟ್ .31 ರಂದು BIMSTEC ದೇಶಗಳ 8ನೇ ಕೃಷಿ ತಜ್ಞರ ಸಭೆಯನ್ನು ಆಯೋಜಿಸಿತ್ತು.
* ಈ BIMSTEC ಸಭೆಯಲ್ಲಿ ಬಾಂಗ್ಲಾದೇಶ, ಭೂತಾನ್, ನೇಪಾಳ, ಶ್ರೀಲಂಕಾ, ಭಾರತ, ಮ್ಯಾನ್ಮಾರ್ ಮತ್ತು ಥೈಲ್ಯಾಂಡ್‌ನ ಕೃಷಿ ಸಚಿವಾಲಯಗಳು ಪಾಲ್ಗೊಂಡಿದ್ದವು, ಹಾಗೂ ಈ ಸಭೆಯಲ್ಲಿ ಆಯಾ ರಾಷ್ಟ್ರಗಳ ಅಧ್ಯಕ್ಷರು ವಿಶ್ವಸಂಸ್ಥೆಯ ಆಹಾರ ವ್ಯವಸ್ಥೆ ಶೃಂಗಸಭೆ 2021 ಹಾಗೂ ಜಾಗತಿಕವಾಗಿ ಕೃಷಿ ಮತ್ತು ಆಹಾರ ವ್ಯವಸ್ಥೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ವಿವರಿಸಿದೆ.
* ಪ್ರಸ್ತುತ ಈ BIMSTEC ನ್ನು 1997 ರಲ್ಲಿ ಸ್ಥಾಪನೆ ಮಾಡಲಾಗಿದೆ, ಈ BIMSTEC ರಾಷ್ಟ್ರಗಳು ಪರಸ್ಪರ ವ್ಯಾಪಾರ, ಸಂಪರ್ಕ ಹಾಗೂ ಸಾಂಸ್ಕೃತಿಕ, ತಾಂತ್ರಿಕ ಮತ್ತು ಆರ್ಥಿಕ ಅಭಿವೃದ್ಧಿಯ ಸಲುವಾಗಿ ಸ್ಥಾಪಿಸಿದ್ದಾರೆ.
* ಈ ಮೊದಲು BIMSTEC ನ್ನು ತಂತ್ರಜ್ಞಾನ, ವ್ಯಾಪಾರ, ಶಕ್ತಿ, ಸಾರಿಗೆ, ಮೀನುಗಾರಿಕೆ ಮತ್ತು ಪ್ರವಾಸೋದ್ಯಮ ಎಂಬ '6' ವಲಯಗಳನ್ನು ಒಳಗೊಂಡಿತ್ತು, ಇದೀಗ ಇದನ್ನು 14 ಕ್ಷೇತ್ರಗಳಿಗೆ ವಿಸ್ತರಿಸಲಾಗಿದೆ.
* ಈ ಹಿಂದೆ 2019 ರ ಜುಲೈ. 12 ರಂದು BIMSTEC ಕೃಷಿ ಮಂತ್ರಿಗಳ ಮೊದಲ ಸಭೆ ಮ್ಯಾನ್ಮಾರ್‌ನಲ್ಲಿ ನಡೆದಿದೆ

# 03-09-2021

## ಅಸ್ಸಾಂ ನ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದ ಮರುನಾಮಕರಣಕ್ಕೆ ಸಂಪುಟ ನಿರ್ಧಾರ



* ಅಸ್ಸಾಂ ರಾಜ್ಯದಲ್ಲಿನ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ಹೆಸರನ್ನು 'ಒರಂಗ್ ನ್ಯಾಷನಲ್ ಪಾರ್ಕ್' ಎಂದು ಬದಲಾವಣೆ ಮಾಡಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ, ಈ ಮಾಹಿತಿಯನ್ನು
ಅಸ್ಸಾಂ ನ ಜಲಸಂಪನ್ಮೂಲ ಸಚಿವ ಪೀಯೂಷ್ ಹಜಾರಿಕಾ ಅವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.
* ಈ ರಾಷ್ಟ್ರೀಯ ಉದ್ಯಾನವು ದರಾಂಗ್ ಮತ್ತು ಸೋನಿತ್ ಪುರ ಜಿಲ್ಲೆಗಳ ಮೂಲಕ ಹರಿಯುವ ಬ್ರಹ್ಮಪುತ್ರ ನದಿಯ ಉತ್ತರ ತೀರದಲ್ಲಿದೆ.
* 1985 ರಲ್ಲಿ ಈ ಅರಣ್ಯವನ್ನು ವನ್ಯಜೀವಿ ಧಾಮ ಎಂದು ಹೆಸರಿಸಲಾಗಿತ್ತು, ಮತ್ತೇ 1999 ರಲ್ಲಿ ಈ ಅರಣ್ಯಕ್ಕೆ ರಾಷ್ಟ್ರೀಯ ಉದ್ಯಾನ ಎಂದು ಹೆಸರಿಸಲಾಗಿದೆ.
* ಅಸ್ಸಾಂ ರಾಜ್ಯದಲ್ಲಿ ಯಾವುದೇ ರಾಷ್ಟ್ರೀಯ ಉದ್ಯಾನವನಕ್ಕೆ ವ್ಯಕ್ತಿಯ ಹೆಸರನ್ನು ಇಡಲಾಗಿಲ್ಲ, ಆದರೆ 2005 ರಲ್ಲಿ ಕಾಂಗ್ರೆಸ್ ಸರ್ಕಾರವು ಈ ಉದ್ಯಾನವಕ್ಕೆ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ಎಂದು ನಾಮಕರಣ ಮಾಡಿತ್ತು.
* ಆಸ್ಸಾಂನ ಒರಾಂಗ್ ರಾಷ್ಟ್ರೀಯ ಉದ್ಯಾನವನದ ಹೆಸರು ಬದಲಾವಣೆ ಕುರಿತಂತೆ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸ್ಪಷ್ಟನೆ ನೀಡಿದ್ದಾರೆ

## ವೇಗವಾಗಿ 23,000 ಅಂತರ್ ರಾಷ್ಟ್ರೀಯ ರನ್ ದಾಖಲಿಸಿದ ವಿರಾಟ್ ಕೊಹ್ಲಿ



* ಪ್ರಸ್ತುತ ಭಾರತೀಯ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಕ್ರಿಕೆಟ್ ಇತಿಹಾಸದಲ್ಲಿ ಅತ್ಯಂತ ವೇಗವಾಗಿ 23,000 ಅಂತರ್ ರಾಷ್ಟ್ರೀಯ ರನ್ ಗಳನ್ನು ಕಲೆಹಾಕಿ ದಾಖಲೆಯನ್ನು ನಿರ್ಮಿಸಿದ್ದಾರೆ.
* ವಿರಾಟ್ ಕೊಹ್ಲಿ ಈ ಸಾಧನೆಯನ್ನು ಕೇವಲ 490 ಇನಿಂಗ್ಸ್ ಗಳಲ್ಲಿ ನಿರ್ಮಿಸಿದ್ದಾರೆ, ಆದರೆ ಇದೇ ದಾಖಲೆಯನ್ನು ನಿರ್ಮಿಸಲು ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರು ಸುಮಾರು 522 ಇನ್ನಿಂಗ್ಸ್ ಗಳನ್ನು ತೆಗೆದುಕೊಂಡಿದ್ದರು.
* ಅಲ್ಲದೇ 23,000 ಅಂತರ್ ರಾಷ್ಟ್ರೀಯ ರನ್ ಗಳಿಸಲು ಆಸ್ಟ್ರೇಲಿಯಾದ ಮಾಜಿ ನಾಯಕ ರಿಕಿ ಪಾಂಟಿಂಗ್ 544 ಇನಿಂಗ್ಸ್ ತೆಗೆದುಕೊಂಡಿದ್ದರು.

## ಅಂತರರಾಷ್ಟ್ರೀಯ ಫುಟ್‌ಬಾಲ್ ನಲ್ಲಿ ದಾಖಲೆ ಬರೆದ ರೊನಾಲ್ಡೊ




* ಪ್ರಸ್ತುತ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಅಂತರರಾಷ್ಟ್ರೀಯ ಫುಟ್ ಬಾಲ್ ನಲ್ಲಿ ಅತಿ ಹೆಚ್ಚು ಗೋಲುಗಳನ್ನು ಬಾರಿಸುವ ಮೂಲಕ ವಿಶ್ವ ದಾಖಲೆ ಬರೆದಿದ್ದಾರೆ.
* ಪೋರ್ಚುಗಲ್‌ನ ಫುಟ್‌ಬಾಲ್ ಆಟಗಾರ ರೊನಾಲ್ಡೊ ಅವರು ಈ ಮೊದಲು 109 ಗೋಲು ಬಾರಿಸಿ ವಿಶ್ವ ದಾಖಲೆ ಬರೆದಿದ್ದ ಇರಾನ್‌ನ ಮಾಜಿ ದಿಗ್ಗಜ ಅಲಿ ದಾಯಿ ಅವರ ದಾಖಲೆಯನ್ನು ಮೀರಿಸಿದ್ದಾರೆ.
* ಕ್ರಿಸ್ಟಿಯಾನೊ ರೊನಾಲ್ಡೊ ಅವರು ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ 111 ನೇ ಗೋಲನ್ನು ಬಾರಿಸುವ ಮೂಲಕ ದಾಖಲೆಯನ್ನು ಬರೆದಿದ್ದಾರೆ.
* ಇದರೊಂದಿಗೆ ಐರ್ಲೆಂಡ್ ವಿರುದ್ಧ 2 1 ಗೋಲುಗಳ ಅಂತರದ ರೋಚಕ ಗೆಲುವು ದಾಖಲಿಸಲು
* ಪೋರ್ಚುಗಲ್ ದೇಶದ ಫುಟ್‌ಬಾಲ್ ಆಟಗಾರ 36 ವರ್ಷ ವಯಸ್ಸಿನ ರೊನಾಲ್ಡೊ ಅವರು ಇತ್ತೀಚಿಗೆ ಜ್ಯುವೆಂಟಸ್ ತಂಡವನ್ನು ತೊರೆದು ಮ್ಯಾಂಚೆಸ್ಟರ್ ಯುನೈಟೆಡ್ ತಂಡವನ್ನು ಸೇರಿಕೊಂಡಿದ್ದಾರೆ

## ಇಸ್ಕಾನ್ ಗೆ ಅಭಿನಂದನೆ ತಿಳಿಸಿದ ಪ್ರಧಾನಿ ಮೋದಿ



* ಪ್ರಸ್ತುತ ಜಗತ್ತಿನಾದ್ಯಂತ ಇರುವ ಇಸ್ಕಾನ್ ದೇವಾಲಯಗಳು ತಮ್ಮ ಮೂಲಕ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ತಿಳಿಸುತ್ತಿವೆ, ಎಂದು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.
* ಕೇಂದ್ರ ಸರ್ಕಾರವು ಸಿದ್ಧಪಡಿಸಿರುವ 125 ರೂ. ಮೌಲ್ಯದ ಬೆಳ್ಳಿ ನಾಣ್ಯಗಳನ್ನು ಅಂತಾರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಸ್ಥೆಯ (ಇಸ್ಕಾನ್) ಸಂಸ್ಥಾಪಕರಾದ ಶ್ರೀ ಶ್ರೀಮದ್ ಭಕ್ತಿವೇದಾಂತ ಪ್ರಭುಪಾದರ 125 ನೇ ಜನ್ಮದಿನೋತ್ಸವದ ಸ್ಮರಣೆಗಾಗಿ ಬಿಡುಗಡೆ ಮಾಡಿದೆ.
* ಇಸ್ಕಾನ್ ಸಂಸ್ಥೆಯು ಭಾರತೀಯ ಸಮಾಜಕ್ಕಾಗಿ ನೀಡಿದ ಅಪಾರ ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನೆನಪಿಸಿಕೊಳ್ಳುತ್ತಾ, ಈ ಹಿಂದೆ 2001 ರಲ್ಲಿ ಕಛ್ ನಲ್ಲಿ ಭೂಕಂಪವಾದಾಗ ಸಂದರ್ಭದಲ್ಲಿ ಉತ್ತರಾಖಾಂಡ, ಒಡಿಶಾ, ಪಶ್ಚಿಮ ಬಂಗಾಳಗಳಲ್ಲಿ ನೈಸರ್ಗಿಕ ವಿಕೋಪಗಳಿಗೆ ತುತ್ತಾದಾಗ ಈ ಎಲ್ಲ ಪ್ರದೇಶಗಳಿಗೆ ಇಸ್ಕಾನ್ ಸಂಸ್ಥೆಯು ಅಪಾರವಾದ ಸೇವೆಯನ್ನು ನೀಡಿದೆ ಎಂದು ತಿಳಿಸಿದರು

## ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಸಯ್ಯದ್ ಅಲಿ ಶಾ ಗಿಲಾನಿ ನಿಧನ



* ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಸೈಯದ್ ಅಲಿ ಶಾ ಗಿಲಾನಿ ಅವರು ತಮ್ಮ 91 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.
* ಪಾಕಿಸ್ತಾನ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಇವರ ಈ ನಿಧನಕ್ಕೆ

ಸಂತಾಪ ಸೂಚಿಸಿದ್ದಾರೆ, ಹಾಗೂ ಇವರನ್ನು ಕಾಶ್ಮೀರ ಸ್ವಾತಂತ್ರ್ಯ ಹೋರಾಟಗಾರ ಎಂದು ಬಣ್ಣಿಸಿದ್ದಾರೆ.

* ಕಾಶ್ಮೀರದ ಸ್ವಾತಂತ್ರ್ಯ ಹೋರಾಟಗಾರ ಸೈಯದ್ ಅಲಿ ಗಿಲಾನಿ ಅವರು ತಮ್ಮ ಪ್ರಜೆಗಳ ಹಕ್ಕಿಗಾಗಿ ತಮ್ಮ ಜೀವನವೆಲ್ಲಾ ಹೋರಾಡಿದ್ದಾರೆ, ಆದರೆ ಭಾರತ ಇವರಿಗೆ ಸೆರೆವಾಸ ಹಾಗೂ ಚಿತ್ರಹಿಂಸೆಯನ್ನು ನೀಡಿದೆ ಎಂದು ಪಾಕ್ ಪ್ರಧಾನಿ ತಿಳಿಸಿದ್ದಾರೆ.

* ಸೈಯದ್ ಅಲಿ ಶಾ ಗಿಲಾನಿ ಅವರು ನಿಧನದ ಹಿನ್ನಲೆಯಲ್ಲಿ ಪಾಕಿಸ್ತಾನದಲ್ಲಿ ಒಂದು ದಿನದ ಅಧಿಕೃತ ಶೋಕಾಚರಣೆಯನ್ನು ಪಾಕ್ ಪ್ರಧಾನಿ ಇಮ್ರಾಮ್ ಖಾನ್ ಘೋಷಣೆ ಮಾಡಿದ್ದಾರೆ.

## CBDCಯೋಜನೆಯನ್ನು ಆರಂಭಿಸಿದ ಆಸ್ಟ್ರೇಲಿಯಾ, ಮಲೇಷ್ಯಾ, ಸಿಂಗಾಪುರ್ ಮತ್ತು ದಕ್ಷಿಣ ಆಫ್ರಿಕಾ




* ಪ್ರಸ್ತುತ ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿಗಳ (CBDC) ಯೋಜನೆಯನ್ನು 2021 ರ ಆಗಸ್ಟ್. 2 ರಂದು ಆಸ್ಟ್ರೇಲಿಯಾ, ಸಿಂಗಾಪುರ, ಮಲೇಷ್ಯಾ ಮತ್ತು ದಕ್ಷಿಣ ಆಫ್ರಿಕಾದ ಕೇಂದ್ರೀಯ ಬ್ಯಾಂಕುಗಳು ಪ್ರಾರಂಭಿಸಿವೆ.

* CBDC ಎನ್ನುವ ಯೋಜನೆಯು ಗಡಿಯಾಚೆಗಿನ ಪಾವತಿಗಳ ವಿಚಾರಣೆಯಾಗಿದೆ, ಈ ಯೋಜನೆಯಲ್ಲಿ ಕೇಂದ್ರೀಯ ಡಿಜಿಟಲ್ ಕರೆನ್ಸಿಗಳನ್ನು (CBDC) ಬಳಸಲಾಗುತ್ತದೆ, ಹಾಗೂ ಸುಲಭವಾಗಿ ವಹಿವಾಟುಗಳನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡುತ್ತದೆ.

* ಕೇಂದ್ರೀಯ ಡಿಜಿಟಲ್ ಕರೆನ್ಸಿ (CBDC)ಗಳು ಅಸ್ತಿತ್ವದಲ್ಲಿರುವ ಕರೆನ್ಸಿಗಳ ಡಿಜಿಟಲ್ ನ ರೂಪಗಳಾಗಿವೆ.

* ಪ್ರಸ್ತುತ ಚೀನಾ ದೇಶದಲ್ಲಿ ಚಲಾವಣೆಯಲ್ಲಿರುವ ನಗದನ್ನು ಪುನರಾವರ್ತಿಸಲು ಈ ಅಭಿವೃದ್ಧಿಪಡಿಸಿರುವ ಚಿಲ್ಲರೆ ಕೇಂದ್ರಿತ CBDC ಗಳನ್ನು ಟ್ರಯಲ್ ಮಾಡುತ್ತಿದೆ.

* ಸದ್ಯ ಗಡಿಯಾಚೆಗಿನ ಪಾವತಿಗಳಿಗಾಗಿ CBDC ಗಳನ್ನು ಅನ್ವೇಷಿಸಲು ಬಿಐಎಸ್ ನೇತೃತ್ವದ ಯೋಜನೆಯನ್ನು ಚೀನಾ, ಹಾಂಕಾಂಗ್, ಯುಎಇ ಮತ್ತು ಕೇಂದ್ರೀಯ ಬ್ಯಾಂಕುಗಳು ಪ್ರಕ್ರಿಯೆಯನ್ನು ನಡೆಸುತ್ತಿವೆ.

* ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿ (CBDC): ಒಂದು ನಿರ್ದಿಷ್ಟ ದೇಶ ಅಥವಾ ಪ್ರದೇಶದಲ್ಲಿ ಫಿಯಟ್ ಕರೆನ್ಸಿಯ ವಾಸ್ತವ ಸ್ವರೂಪವಾಗಿದೆ, ಹಾಗೂ ಇದು ಅಧಿಕೃತ ಕರೆನ್ಸಿಯ ಡಿಜಿಟಲ್ ಟೋಕನ್ ಆಗಿದೆ.

* ಪ್ರಸ್ತುತ ಈ ಕರೆನ್ಸಿಯನ್ನು ವಿತ್ತೀಯ ಪ್ರಾಧಿಕಾರವು ವಿತರಣೆ ಹಾಗೂ ನಿಯಂತ್ರವನ್ನು ಮಾಡುತ್ತದೆ.

## ಜಮ್ಮು ಮತ್ತು ಕಾಶ್ಮೀರದ ಸ್ವ ಸಹಾಯ ಗುಂಪು (SHG) ಮಹಿಳೆಯರಿಗಾಗಿ 'ಸಾಥ್' ಉಪಕ್ರಮ ಆರಂಭ




* ಪ್ರಸ್ತುತ 2021 ರ ಸೆಪ್ಟೆಂಬರ್. 1 ರಂದು ಜಮ್ಮು ಮತ್ತು ಕಾಶ್ಮೀರ ನ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸ್ವ ಸಹಾಯ ಗುಂಪು (SHG) ಮಹಿಳೆಯರಿಗಾಗಿ 'ಸಾಥ್' ಎಂಬ ಗ್ರಾಮೀಣ ಉದ್ಯಮಗಳ ವೇಗವರ್ಧನೆ ಕಾರ್ಯಕ್ರಮವನ್ನು ಆರಂಭಿಸಿದರು.

* ಈ 'ಸಾಥ್' ಎಂಬ ಉಪಕ್ರಮವು ಜಮ್ಮು ಮತ್ತು ಕಾಶ್ಮೀರದಲ್ಲಿನ '4' ಲಕ್ಷ ಮಹಿಳೆಯರನ್ನು ಒಳಗೊಂಡ 48,000 ಸ್ವಸಹಾಯ ಸಂಘಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ, ಈ ಉಪಕ್ರಮವು ಮಹಿಳೆಯರಿಂದ ತಯಾರಿಸಿದ ಉತ್ಪನ್ನಗಳಿಗೆ ಮಾರ್ಗದರ್ಶನ ಮತ್ತು ಮಾರುಕಟ್ಟೆಯನ್ನು ಒದಗಿಸುತ್ತದೆ.

* ಭಾರತ ಸರ್ಕಾರವು ಮುಂದಿನ ದಿನಗಳಲ್ಲಿ 11,000 ಸ್ವಸಹಾಯ ಸಂಘಗಳನ್ನು ರಚಿಸುವ ಗುರಿಯನ್ನು ಹೊಂದಿದೆ.

* ಈ 'ಸಾಥ್' ಎಂಬ ಉಪಕ್ರಮದ ಅಡಿಯಲ್ಲಿ ಸುಮಾರು 5,000 ಮಹಿಳೆಯರಿಗೆ ಕಾರ್ಯಾಗಾರಗಳನ್ನು ಆರಂಭಿಸಿ ಅದರಲ್ಲಿ 500 ಮಂದಿಯನ್ನು ಮುಂದಿನ ಹಂತದ ತರಬೇತಿಗೆ ಆಯ್ಕೆ ಮಾಡಲಾಗುತ್ತದೆ, ಅಲ್ಲದೇ ಇನ್ನು 100 ಜನರನ್ನು ಮಾರ್ಗದರ್ಶನಕ್ಕೆ ಆಯ್ಕೆ ಮಾಡಲಾಗುತ್ತದೆ.

* ಈ 'ಸಾಥ್' ಎಂಬ ಉಪಕ್ರಮದ ಅಡಿಯಲ್ಲಿ ಆಯ್ಕೆ ಮಾಡಲಾಗಿರುವ ಮಹಿಳೆಯರಿಗೆ ಕೃಷಿ, ಕೋಳಿ ಸಾಕಣೆ, ಪಶು ಸಂಗೋಪನೆ, ಕೈಮಗ್ಗ, ಕರಕುಶಲ ಇತ್ಯಾದಿ ಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುತ್ತದೆ.

## ಟ್ವಿಟರ್ ಸಂಸ್ಥೆ 'ಸೂಪರ್ ಫಾಲೋಸ್' ಎಂಬ ಹೊಸ ಫೀಚರ್ ಆರಂಭಿಸಿದೆ




* ಟ್ವಿಟರ್ ಸಂಸ್ಥೆಯು 'ಸೂಪರ್ ಫಾಲೋಸ್' ಎಂಬ ಹೊಸ ವೈಶಿಷ್ಟ್ಯವನ್ನು ಆರಂಭಿಸಿದೆ.

* ಈ ಸೂಪರ್ ಫಾಲೋ ವೈಶಿಷ್ಟ್ಯವು ಸೃಷ್ಟಿಕರ್ತರಿಗೆ ವಿಶೇಷ ವಿಷಯವನ್ನು ಹಂಚಿಕೊಳ್ಳಲು ಚಂದಾದಾರಿಕೆಗಳನ್ನು ಮಾರಾಟ ಮಾಡಲು ಅವಕಾಶವನ್ನು ನೀಡುತ್ತದೆ.

* ಟ್ವಿಟರ್ ನ ಈ ಸೂಪರ್ ಫಾಲೋಸ್ ಹೊಸ ವೈಶಿಷ್ಟ್ಯವನ್ನು ಪರೀಕ್ಷಿಸುತ್ತಿದೆ, ಹಾಗೂ ಇದನ್ನು ಅಧಿಕೃತವಾಗಿ ಉತ್ತರ ಅಮೆರಿಕಾದಲ್ಲಿನ ಸೃಷ್ಟಿಕರ್ತರ ಒಂದು ಸಣ್ಣ ಗುಂಪಿನೊಂದಿಗೆ ಆರಂಭಿಸಲಾಗಿದೆ.


* ಪ್ರಸ್ತುತ ಈ ಹೊಸ ವೈಶಿಷ್ಟ್ಯವನ್ನು ಆಂಡ್ರಾಯ್ಡ್ ಸಾಫ್ಟ್‌ವೇರ್‌ನಿಂದ ಕಾರ್ಯ ನಿರ್ವಹಿಸುವ ಸ್ಮಾರ್ಟ್‌ಫೋನ್ ಹಾಗೂ twitter.com ವೆಬ್‌ಸೈಟ್‌ಗೆ ತರಲಾಗುವುದು, ಹಾಗೂ ಇದು ಬ್ರೌಸರ್‌ಗಳ ಮೂಲಕ ಲಭ್ಯವಾಗಲಿದೆ.

* ಟ್ವಿಟರ್ ಸಂಸ್ಥೆಯು 'ಸೂಪರ್ ಫಾಲೋಸ್' ಎಂಬ ಹೊಸ ವೈಶಿಷ್ಟ್ಯದ ವಹಿವಾಟು ಶುಲ್ಕ: ಈ ಪ್ಲಾಟ್‌ಫಾರ್ಮ್‌ನಲ್ಲಿ ಸೃಷ್ಟಿಕರ್ತ $ 50,000 ಸಂಪಾದಿಸುವವರೆಗೆ ಟ್ವಿಟರ್ ಸಂಸ್ಥೆ ಮೂರು ಶೇಕಡಾಕ್ಕಿಂತ ಹೆಚ್ಚಿನ ಚಂದಾದಾರಿಕೆಗಳನ್ನು ವಹಿವಾಟು ಶುಲ್ಕವಾಗಿ ತೆಗೆದುಕೊಳ್ಳುವುದಿಲ್ಲ, ನಂತರ

* 50,000 ಕ್ಕಿಂತ ಹೆಚ್ಚಿನ ಮೊತ್ತ ಸಂಪಾದಿಸುವವರೆಗೆ ಟ್ವಿಟರ್ ನ ಪಾಲು 20 ಪ್ರತಿಶತಕ್ಕೆ ಹೆಚ್ಚಾಗುತ್ತದೆ, ಅಲ್ಲದೇ ಚಂದಾದಾರಿಕೆಗಳ ಮಾರಾಟ

ಮಾಡುವ ಸೃಷ್ಟಿಕರ್ತರು ಆಪ್ ಸ್ಟೋರ್ ಶುಲ್ಕವನ್ನು ಪಾವತಿಸುತ್ತಾರೆ ಎಂದು ಸಂಸ್ಥೆ ತಿಳಿಸಿದೆ.

## ಭಾರತೀಯ ನೌಕಾಪಡೆಯು ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಪೂರೈಸಲು BEL ನೊಂದಿಗೆ ಒಪ್ಪಂದ



* ಪ್ರಸ್ತುತ ಭಾರತೀಯ ನೌಕಾಪಡೆಯು ಭಾರತ್ ಲಿಮಿಟೆಡ್ (BEL) ನೊಂದಿಗೆ ಮೊದಲ ಡ್ರೋನ್ ವಿರೋಧಿ ಡ್ರೋನ್ ವ್ಯವಸ್ಥೆ ಪೂರೈಸುವ ಒಪ್ಪಂದಕ್ಕೆ ಸಹಿ ಹಾಕಿದೆ.
* ಈ ನವಲ್ ಆಂಟಿ ಡ್ರೋನ್ ಸಿಸ್ಟಮ್ (NADS) 'ಹಾರ್ಡ್ ಕಿಲ್' ಹಾಗೂ 'ಸಾಫ್ಟ್ ಕಿಲ್' ಸಾಮರ್ಥ್ಯಗಳನ್ನು ಒಳಗೊಂಡಿದೆ.
* ಈ ನವಲ್ ಆಂಟಿ ಡ್ರೋನ್ ಸಿಸ್ಟಮ್ (NADS)ನ್ನು DRDO ಅಭಿವೃದ್ಧಿಪಡಿಸಿದೆ ಹಾಗೂ ಇವುಗಳನ್ನು BELನಿಂದ ಸಿದ್ಧಪಡಿಸಲಾಗಿದೆ, ಪ್ರಸ್ತುತ ಭಾರತೀಯ ಸಶಸ್ತ್ರ ಪಡೆಗೆ ಸೇರ್ಪಡೆಯಾಗುವ ಮೊದಲ ಸ್ವದೇಶಿ ಅಭಿವೃದ್ಧಿ ಹೊಂದಿದ ಡ್ರೋನ್ ವಿರೋಧಿ ವ್ಯವಸ್ಥೆಯಾಗಿದೆ.
* ಪ್ರಸ್ತುತ ಈ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಮಚಿಲಿಪಟನಂನಲ್ಲಿ BEL ನ ಘಟಕಗಳು ಒಟ್ಟಾಗಿ ಸಿದ್ಧಪಡಿಸಿವೆ.
* ಈ ನವಲ್ ಆಂಟಿ ಡ್ರೋನ್ ಸಿಸ್ಟಮ್ (NADS)ಗಳು ಮೈಕ್ರೋ ಡ್ರೋನ್ ಗಳನ್ನು ಪತ್ತೆಹಚ್ಚುವ ಮತ್ತು ಜಾಮ್ ಮಾಡುವ ಸಾಮರ್ಥ್ಯವನ್ನು ಹೊಂದಿವೆ, ಹಾಗೂ ಇವುಗಳಲ್ಲಿ ಲೇಸರ್ ಆಧಾರಿತ ಕಿಲ್ ಮೆಕ್ಯಾನಿಸಂ ನ್ನು ಬಳಸಲಾಗುತ್ತದೆ, ಇದರಿಂದ ನೌಕಾ ಪಡೆಯ ಡ್ರೋನ್ ಬೆದರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
* ಪ್ರಧಾನಿ ನರೇಂದ್ರ ಮೋದಿಯವರ 2021 ರ ಗಣರಾಜ್ಯೋತ್ಸವದ ಸ್ವಾತಂತ್ರ್ಯ ದಿನದ ಭಾಷಣದ ಸಂಧರ್ಭದಲ್ಲಿ ಈ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಭದ್ರತಾ ರಕ್ಷಣೆಗಾಗಿ ಮೊದಲು ನಿಯೋಜನೆ ಮಾಡಲಾಗಿತ್ತು.
* ಈ ಹಿಂದೆ 2021 ರ ಗಣರಾಜ್ಯೋತ್ಸವದ ಸಮಯದಲ್ಲಿ ಭಾರತೀಯ ಪ್ರಧಾನಿ ಮೋದಿ ಹಾಗೂ ಅಮೇರಿಕದ ಮಾಜಿ ಅಧ್ಯಕ ಟ್ರಂಪ್ ರೋಡ್‌ಶೋಗಾಗಿ ಈ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಅಹಮದಾಬಾದ್‌ನಲ್ಲಿ ನಿಯೋಜಿಸಲಾಗಿತ್ತು

## ಲಸಿಕೆ ವಿಜ್ಞಾನಿ ಡಾ. ಫಿರ್ದೌಸಿ ಖಾದ್ರಿಗೆ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ



* ಬಾಂಗ್ಲಾದೇಶದ ವಿಜ್ಞಾನಿ ಡಾ. ಫಿರ್ದೌಸಿ ಖಾದ್ರಿ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಪಡೆದಿದ್ದಾರೆ.
* ಡಾ. ಖಾದ್ರಿ ಅಂತರಾಷ್ಟ್ರೀಯ ಡಯರೀಸ್ ಡಿಸೀಸ್ ರಿಸರ್ಚ್, ಹಾಗೂ ಬಾಂಗ್ಲಾದೇಶದ ಅಂತರಾಷ್ಟ್ರೀಯ ವಿಜ್ಞಾನಿಯಾಗಿದ್ದಾರೆ.
* ವಿಜ್ಞಾನಿ ಡಾ. ಫಿರ್ದೌಸಿ ಖಾದ್ರಿ ಅವರು 2020 ರ ಲೊರಿಯಲ್ ಯುನೆಸ್ಕೋ ಫಾರ್ ವುಮೆನ್ ಇನ್ ಸೈನ್ಸ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ಪ್ರಸ್ತುತ ಆರಂಭಿಕ ರೋಗನಿರ್ಣಯ ಮತ್ತು ಜಾಗತಿಕ ವ್ಯಾಕ್ಸಿನೇಷನ್ ಮತ್ತು ಅಭಿವೃದ್ಧಿಶೀಲ ದೇಶಗಳಾದ್ಯಂತ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಂಕ್ರಾಮಿಕ ರೋಗಗಳನ್ನು ಅರ್ಥಮಾಡಿಕೊಳ್ಳುವ ಮತ್ತು ತಡೆಗಟ್ಟುವ ಕಾರ್ಯಕ್ಕಾಗಿ ಇವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.
* ವಿಜ್ಞಾನಿ ಡಾ. ಖಾದ್ರಿ ಅವರು ಕಾಲರಾ ಲಸಿಕೆ ಹಾಗೂ ಟೈಫಾಯಿಡ್ ಕಾಂಜುಗೇಟ್ ಲಸಿಕೆಯ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ್ದರು.
* ವಿಜ್ಞಾನಿ ಡಾ. ಖಾದ್ರಿ ಅವರಿಂದ ಈ ವಿಜ್ಞಾನ ಮತ್ತು ಆರೋಗ್ಯ ಉಪಕ್ರಮಗಳನ್ನು ಅಭಿವೃದ್ಧಿಪಡಿಸುವ ಸಂಸ್ಥೆಯು 2014 ರಲ್ಲಿ ಸ್ಥಾಪಿಸಿದ್ದಾರೆ, ಈ ಸಂಸ್ಥೆಯು ಬಾಂಗ್ಲಾದೇಶದ ಸ್ಥಳೀಯ ಹಾಗೂ ಭೇಟಿ ನೀಡುವ ವಿಜ್ಞಾನಿಗಳ ವೈಜ್ಞಾನಿಕ ಚಟುವಟಿಕೆಯ ಕೇಂದ್ರವಾಗಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಈ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಏಷ್ಯಾದ ಅತ್ಯುನ್ನತ ಗೌರವ ಪ್ರಶಸ್ತಿಯಾಗಿದೆ, ಈ ಪ್ರಶಸ್ತಿಯನ್ನು 1957 ರ ಏಪ್ರಿಲ್ ನಲ್ಲಿ ಸ್ಥಾಪಿಸಲಾಗಿದೆ, ಹಾಗೂ ಈ ಪ್ರಶಸ್ತಿಯನ್ನು ಏಷ್ಯಾದಲ್ಲಿ ನೊಬೆಲ್ ಪ್ರಶಸ್ತಿಗೆ ಸಮನಾಗಿದೆ ಪರಿಗಣಿಸಲಾಗಿದೆ.
* ಪ್ರಸ್ತುತ ಈ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಏಷ್ಯಾದಲ್ಲಿ ಬಡತನ ನಿರ್ಮೂಲನೆ ಮತ್ತು ಸಮಾಜದ ಅಭಿವೃದ್ಧಿಯಲ್ಲಿ ಕೊಡುಗೆ ನೀಡಿದ ವ್ಯಕ್ತಿಗಳಿಗೆ ನೀಡಲಾಗುತ್ತದೆ

# 04-09-2021

## ಟೋಕಿಯೊ ಪ್ಯಾರಾಲಿಂಪಿಕ್ಸ್ ನ ಅರ್ಚರಿ (ಬಿಲ್ಲುಗಾರಿಕೆ)ಯಲ್ಲಿ ಭಾರತಕ್ಕೆ ಮೊದಲ ಪದಕ



* ಪ್ರಸ್ತುತ ಟೋಕಿಯೊ ಪ್ಯಾರಾಲಿಂಪಿಕ್ಸ್'ನಲ್ಲಿನ ಅರ್ಚರಿ (ಬಿಲ್ಲುಗಾರಿಕೆ)ಯಲ್ಲಿ ಭಾರತ ಮೊದಲ ಪದಕವನ್ನು ಜಯಿಸಿದೆ, ಪುರುಷರ ವೈಯಕ್ತಿಕ ರಿಕರ್ವ್ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಹರ್ವಿಂದರ್ ಸಿಂಗ್ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.
* ಭಾರತೀಯ ಹರ್ವಿಂದರ್ ಸಿಂಗ್ ಅವರು ದಕ್ಷಿಣ ಕೊರಿಯಾದ ಕಿಮ್ ಮಿನ್ ಸು ವಿರುದ್ಧ ಜಯಿಸಿದ್ದಾರೆ.
* 2018 ರಲ್ಲಿ ನಡೆದ ಏಷ್ಯಾನ್ ಗೇಮ್ಸ್ ಕ್ರೀಡಾಕೂಟದಲ್ಲಿ ಹರ್ವಿಂದರ್ ಸಿಂಗ್ ಅವರು ಚಿನ್ನದ ಪದಕವನ್ನು ಜಯಿಸಿದ್ದರು.
* ಟೋಕಿಯೊದಲ್ಲಿನ ಪ್ಯಾರಾಲಿಂಪಿಕ್ಸ್ ನಲ್ಲಿ ಭಾರತ 13 ಪದಕ ಗಳಿಸಿದೆ

## ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ 2 ಪದಕಗಳನ್ನು ಪಡೆದ ಭಾರತದ ಪ್ರಥಮ ಮಹಿಳೆ ಅವನಿ ಲೇಖರ್



* ಪ್ರಸ್ತುತ ಟೋಕಿಯೋ ಪ್ಯಾರಾಲಿಂಪಿಕ್ಸ್ ನ 10 ಮೀ. ಏರ್ ರೈಫಲ್ ನಲ್ಲಿ ಅವನಿ ಲೇಖರ್ ಅವರು ಚಿನ್ನದ ಪದಕವನ್ನು ಜಯಿಸಿದ್ದರು, ಅಲ್ಲದೇ 50 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.
* ಅವನಿ ಲೇಖರ್ ಅವರು ಈ ಬಾರಿಯ ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ '2' ಪದಕಗಳನ್ನು ಜಯಿಸಿದ್ದಾರೆ.

## ಫೋರ್ಬ್ಸ್ ನ ಶ್ರೀಮಂತರ ಪಟ್ಟಿಯಲ್ಲಿ ಟೆನಿಸ್ ಆಟಗಾರ ರೋಜರ್ ಫೆಡರರ್ ಗೆ ಅಗ್ರಸ್ಥಾನ



* ಪ್ರಸ್ತುತ ಫೋರ್ಬ್ಸ್ ನ ಶ್ರೀಮಂತ ಆಟಗಾರರ ಪಟ್ಟಿಯಲ್ಲಿ ಟೆನಿಸ್ ಆಟಗಾರ ರೋಜರ್ ಫೆಡರರ್ ಕಳೆದ ಒಂದು ವರ್ಷದಲ್ಲಿ ವಿಶ್ವದ ಅತ್ಯಂತ ಹೆಚ್ಚು ಆದಾಯಗಳಿಸಿರುವ ಆಟಗಾರರಾಗಿದ್ದಾರೆ.
* ಟೆನಿಸ್ ಆಟಗಾರ ರೋಜರ್ ಫೆಡರರ್ ಅವರು ಸುಮಾರು 90.6 ಮಿಲಿಯನ್ ಡಾಲರ್ ಆದಾಯವನ್ನು ಗಳಿಸಿದ್ದಾರೆ ಎಂದು ಫೋರ್ಬ್ಸ್ ವರದಿ ಮಾಡಿದೆ.
* ಜಪಾನ್‌ನ ಆಟಗಾರ್ತಿ ನವೋಮಿ ಒಸಾಕಾ ಅವರು 60.1 ಮಿಲಿಯನ್ ಆದಾಯಗಳಿಸುವ ಮೂಲಕ ಈ ಪಟ್ಟಿಯಲ್ಲಿ 2 ನೇ ಸ್ಥಾನದಲ್ಲಿದ್ದಾರೆ. * ಫೋರ್ಬ್ಸ್ ನ ಶ್ರೀಮಂತರ ಈ ಪಟ್ಟಿಯಲ್ಲಿ ಸೆರೆನಾ ವಿಲಿಯಮ್ಸ್, ನೊವಾಕ್ ಜೊಕೊವಿಕ್ ಹಾಗೂ ರಫೆಲ್ ನಡಾಲ್ ಮೊದಲ '5' ಸ್ಥಾನಗಳನ್ನು ಪಡೆದಿದ್ದಾರೆ

## ಕೆನಡಾದ ಬರ್ನಾಬಿ ನಗರವು ಸೆಪ್ಟೆಂಬರ್ 5 ನ್ನು 'ಗೌರಿ ಲಂಕೇಶ್ ದಿನ' ಎಂದು ಘೋಷಿಸಿದೆ



* ಪ್ರಸ್ತುತ ಕೆನಡಾದ ಬರ್ನಾಬಿ ನಗರವು ಸೆಪ್ಟೆಂಬರ್ 5 ನ್ನು 'ಗೌರಿ ಲಂಕೇಶ್ ದಿನ' ಎಂದು ಘೋಷಣೆ ಮಾಡಿದೆ, ಪತ್ರಕರ್ತೆ ಗೌರಿ ಲಂಕೇಶ್ ರ ಕೊಲೆಯಾಗಿ ಸೆಪ್ಟೆಂಬರ್ 5 ಕ್ಕೆ ನಾಲ್ಕು ವರ್ಷ ಪೂರೈಸಲಿದೆ.
* ಗೌರಿ ಲಂಕೇಶ್ ಅವರು 2017 ರ ಸೆಪ್ಟೆಂಬರ್ 5 ರಂದು ದುಷ್ಕರ್ಮಿಗಳಿಂದ ಬೆಂಗಳೂರಿನ ತಮ್ಮ ನಿವಾಸದ ಬಳಿಯೇ ಕೊಲೆಯಾಗಿದ್ದರು.
* ಕೆನಡಾದ ಬರ್ನಾಬಿ ನಗರವು ಆಗಸ್ಟ್ 30 ನಡೆದ ಕೌನ್ಸಿಲ್ ಸಭೆಯಲ್ಲಿ ಮುಂಬರುವ ಸೆಪ್ಟೆಂಬರ್ 5 ರಂದು ಗೌರಿ ಲಂಕೇಶ್ ದಿನ ಎಂದು ಆಚರಿಸಲು ನಿರ್ಧಾರವನ್ನು ಕೈಗೊಂಡಿದೆ.
* ಬರ್ನಾಬಿ ನಗರದ ಈ ನಿರ್ಧಾರಕ್ಕೆ ನಗರದ ಮೇಯರ್ ಮೈಕ್ ಹರ್ಲೆ ಸಹಿ ಹಾಕಿ ಅಧಿಕೃತ ವೆಬ್‌ಸೈಟ್ ನಲ್ಲಿ ಪ್ರಕಟಿಸಿದ್ದಾರೆ.
* ಕೆನಡಾದ ಬರ್ನಾತ್ ನಗರವು 2020 ರ ಎಪ್ರಿಲ್ 14 ರಂದು ಡಾ. ಬಿ ಆರ್ ಅಂಬೇಡ್ಕರ್ ದಿನವಾಗಿ ಆಚರಣೆ ಮಾಡಲು ನಿರ್ಧಾರ ಕೈಗೊಂಡು ಆಚರಿಸಿದೆ.

## ನ್ಯೂಯಾರ್ಕ್ ನಲ್ಲಿ 'ಇಡಾ' ಚಂಡಮಾರುತ ತುರ್ತು ಪರಿಸ್ಥಿತಿ ಘೋಷಣೆ




* ಪ್ರಸ್ತುತ ಅಮೆರಿಕದ ಈಶಾನ್ಯ ರಾಜ್ಯಗಳಲ್ಲಿ ಐಡಾ ಚಂಡಮಾರುತವು ಭಾರಿ ಪ್ರವಾಹವನ್ನು ಉಂಟು ಮಾಡಿದೆ ಎಂದು ಸುದ್ದಿ ವಾಹಿನಿ ಎಪಿ ವರದಿ ಮಾಡಿದೆ, ಈ ಕಾರಣದಿಂದಾಗಿ ನ್ಯೂಯಾರ್ಕ್'ನಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದಾರೆ.
* ಈ ಐಡಾ ಚಂಡಮಾರುತವು ಆಗಸ್ಟ್. 29 ರಂದು ಲೂಯಿಸಿಯಾನದಲ್ಲಿ ಭೂಕುಸಿತವನ್ನು ಉಂಟು ಮಾಡಿದೆ, ಅಮೇರಿಕದ ಈಶಾನ್ಯ ಯುನೈಟೆಡ್ ಸ್ಟೇಟ್ಸ್ ಗಳಲ್ಲಿ ಭಾರಿ ಪ್ರಮಾಣದ ಹಾನಿಯನ್ನು ಉಂಟು ಮಾಡಿದೆ, ಈ ಕಾರಣದಿಂದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ನ್ಯೂಯಾರ್ಕ್ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ ಎಂದು ಶ್ವೇತ ಭವನ ಮಾಹಿತಿ ನೀಡಿದೆ.

## ವಿಶ್ವ ಆರೋಗ್ಯ ಸಂಸ್ಥೆ 2030 ರ ವೇಳೆಗೆ 78 ಮಿಲಿಯನ್ ಜನತೆಗೆ ಬುದ್ಧಿಮಾಂಧ್ಯತೆ




* ಪ್ರಸ್ತುತ ವಿಶ್ವದಾದ್ಯಂತ '55' ಮಿಲಿಯನ್ ಗಿಂತಲೂ ಅಧಿಕ ಜನ ಬುದ್ಧಿಮಾಂದ್ಯತೆಯನ್ನು ಹೊಂದಿದ್ದಾರೆ, ಈ ಬುದ್ಧಿಮಾಂದ್ಯತೆಯ ಪ್ರಮಾಣವು 2030 ರ ವೇಳೆಗೆ '78' ಮಿಲಿಯನ್ ಹಾಗೂ 2050 ರ ವೇಳೆಗೆ 139 ಮಿಲಿಯನ್'ಗೆ ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.
* ಪ್ರಸ್ತುತ ಹೃದಯಾಘಾತ, ಮೆದುಳಿನಗಾಯ ಅಥವಾ ಅಲ್ಝೀಮರ್ಸ್ ಕಾಯಿಲೆಯಿಂದಾಗಿ ಬುದ್ಧಿಮಾಂದ್ಯತೆ ಉಂಟಾಗುವ ಸಾಧ್ಯತೆಗಳಿವೆ, ಇದೀಗ ವಿಶ್ವದಲ್ಲಿ ಅಂದಾಜು '55' ಮಿಲಿಯನ್ ಜನರು ಈ ಬುದ್ಧಿಮಾಂದ್ಯತೆಯ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ನಿರ್ದೇಶಕ ಟೆಡ್ರೋಸ್

ಅಧ್ನಾಮ್ ಘೆಬ್ರೆಯೆಸುಸ್ ತಿಳಿಸಿದ್ದಾರೆ.

## ಯುಕೆ ಮ್ಯಾನ್ಮಾರ್ ವಿರುದ್ಧ ಹೊಸ ನಿರ್ಬಂಧಗಳನ್ನು ಘೋಷಿಸಿದೆ



* ಯುನೈಟೆಡ್ ಕಿಂಗ್‌ಡಂನ ವಿದೇಶಾಂಗ ಕಾರ್ಯದರ್ಶಿ ಡೊಮಿನಿಕ್ ರಾಬ್, ಮ್ಯಾನ್ಮಾರ್ ವಿರುದ್ಧ ಹೊಸ ನಿರ್ಬಂಧಗಳನ್ನು ಘೋಷಿಸಿದ್ದಾರೆ. * ಪ್ರಸ್ತುತ ಮಯನ್ಮಾರ್ ನ ಮಿಲಿಟರಿ ಆಡಳಿತಕ್ಕೆ ಹಣಕಾಸಿನ ನೆರವು ನೀಡುವ ವ್ಯವಹಾರಗಳ ಮೇಲೆ ಪರಿಣಾಮ ಹೇರಲು ಯುನೈಟೆಡ್ ಕಿಂಗ್‌ಡಂ ಮ್ಯಾನ್ಮಾರ್ ದೇಶದ ಮೇಲೆ ಹೊಸ ನಿರ್ಬಂಧಗಳನ್ನು ಹೇರಿದೆ.
* ಈ ನಿರ್ಬಂಧಗಳಿಂದ, ಯುಕೆ ಆಡಳಿತ ಮತ್ತು ಹಣಕಾಸು ಸಂಪನ್ಮೂಲಗಳ ಪ್ರವೇಶವನ್ನು ನಿರ್ಬಂಧಿಸಲು ಕಾಂಕ್ರೀಟ್ ಕ್ರಮಗಳನ್ನು ತೆಗೆದುಕೊಳ್ಳುತ್ತದೆ, ಪ್ರಸ್ತುತ ಇದು ಮಯನ್ಮಾರ್'ನ ಮಿಲಿಟರಿ ಆಡಳಿತದ ವ್ಯಾಪಾರ ಜಾಲವನ್ನು ಗುರಿಯಾಗಿಸಿದೆ.
* ಪ್ರಸ್ತುತ ಮಯನ್ಮಾರ್ ಮಿಲಟರಿಯು ತನ್ನ ದೇಶದ ಜನರ ಮೇಲಿನ ಕ್ರೂರ ದಾಳಿಯನ್ನು ನಿಲ್ಲಿಸುವ ಯಾವುದೇ ಸಾಧ್ಯತೆಗಳು ಕಾಣಿಸುತ್ತಿಲ್ಲ ಎಂದು ಯುಕೆ ಈ ಹೊಸ ನಿರ್ಬಂಧಗಳನ್ನು ಹೇರಿದೆ.
* ಮ್ಯಾನ್ಮಾರ್ ಸೇನೆಯು ದೇಶದಲ್ಲಿ ಒಂದು ವರ್ಷದ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ.

## ತನ್ನ ಮೊದಲ ರಾಕ್ ಮಾದರಿಯನ್ನು ಸಂಗ್ರಹಿಸಿದ ನಾಸಾ (NASA)ದ ಮಂಗಳಯಾನ




* ಅಮೆರಿಕದ ಬಾಹ್ಯಾಕಾಶ ಸಂಸ್ಥೆ (NASA)ಯ ಹೊಸ ಮಂಗಳಯಾನ ನೌಕೆಯು ತನ್ನ ಮೊದಲ ರಾಕ್ ಮಾದರಿಯನ್ನು ನಾಸಾ ಯಶಸ್ವಿಯಾಗಿ ಸಂಗ್ರಹಿಸಿದೆ.
* ರೋವರ್‌ನ ಮುಖ್ಯ ಎಂಜಿನಿಯರ್ ಆಗಿರುವ ಆಡಮ್ ಸ್ಟೆಲ್ಟ್ಜ್ನರ್ ಅವರು ರಾಕ್ ಸ್ಯಾಂಪಲ್ ನ್ನು ಪರಿಪೂರ್ಣ ಕೋರ್ ಸ್ಯಾಂಪಲ್ ನ ಪರಿಶ್ರಮ ಎಂದಿದ್ದಾರೆ.
* 2021 ರ ಫೆಬ್ರುವರಿಯಲ್ಲಿ ಜೆಜೆರೊ ಕ್ರೇಟರ್ ಆಫ್ ಮಾರ್ಸ್‌ಗೆ ಪರಿಶ್ರಮ ಬಂದಿದೆ, ಈ ಜೆಜೆರೊ ಕ್ರೇಟರ್ ಶತಕೋಟಿ ವರ್ಷಗಳ ಹಿಂದೆ ಸೊಂಪಾದ ಸರೋವರದ ಹಾಸಿಗೆ ಹಾಗೂ ನದಿ ಡೆಲ್ಟಾಗಳ ನೆಲೆಯಾಗಿದೆ ಎಂದು ತಿಳಿಸಲಾಗಿದೆ.
* ಮಂಗಳ 2020 ಇದು ಒಂದು 'ಮಂಗಳ ರೋವರ್ ಮಿಷನ್' ಆಗಿದೆ, ಇದು ನಾಸಾದ ಮಂಗಳ ಪರಿಶೋಧನೆ ಕಾರ್ಯಕ್ರಮವಾಗಿದೆ. ಈ ಕಾರ್ಯಾಚರಣೆಯನ್ನು 2020 ರ ಜುಲೈ. 30 ರಂದು ಭೂಮಿಯಿಂದ ಅಟ್ಲಾಸ್ V ಉಡಾವಣಾ ವಾಹನ ಬಳಸಿಕೊಂಡು ಉಡಾವಣೆ ಮಾಡಲಾಗಿದೆ, ಹಾಗೂ ಇದು 2021 ರ ಫೆಬ್ರವರಿ. 18 ರಂದು ಮಂಗಳವನ್ನು ತಲುಪಿತು.

## 5 ಸ್ಟಾರ್ 'ಈಟ್ ರೈಟ್ ಸ್ಟೇಷನ್' ಪ್ರಮಾಣಪತ್ರ ಪಡೆದ ಚಂಡೀಗಢ ರೈಲು ನಿಲ್ದಾಣ




* ಪ್ರಸ್ತುತ ಚಂಡೀಗಢ ರೈಲು ನಿಲ್ದಾಣಕ್ಕೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (FSSAI) 5 ಸ್ಟಾರ್ 'ಈಟ್ ರೈಟ್ ಸ್ಟೇಷನ್' ಪ್ರಮಾಣಪತ್ರವನ್ನು ನೀಡಿದೆ.
* ಚಂಡೀಗಢ ರೈಲು ನಿಲ್ದಾಣವು ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ, ಪೌಷ್ಟಿಕ ಆಹಾರವನ್ನು ಒದಗಿಸಿದ್ದಕ್ಕಾಗಿ ಈ ಪ್ರಮಾಣಪತ್ರವನ್ನು ನೀಡಲಾಗಿದೆ ಎಂದು ತಿಳಿದು ಬಂದಿದೆ.
* ಭಾರತೀಯ ರೈಲ್ವೇ ನಿಲ್ದಾಣಗಳ ಅಭಿವೃದ್ಧಿ ನಿಗಮ (IRSDC) ರೈಲ್ವೇಗೆ ಆಹಾರ ಪೂರೈಕೆಯ ಮಾಡುವ ಜವಾಬ್ದಾರಿಯನ್ನು ಹೊಂದಿದೆ, ಹಾಗೂ ರೈಲ್ವೇ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಹಕ್ಕನ್ನು ಹೊಂದಿದೆ, ಪ್ರಸ್ತುತ IRSDC ಚಂಡೀಗಢ ರೈಲ್ವೇ ನಿಲ್ದಾಣವನ್ನು ವಿಶ್ವ ದರ್ಜೆಯ ರೈಲ್ವೇ ನಿಲ್ದಾಣದ ಮೇಲ್ದರ್ಜೆಗೇರಿಸಲು ಆಯ್ಕೆ ಮಾಡಿಕೊಂಡಿದೆ.
* ಈಟ್ ರೈಟ್ ಸ್ಟೇಷನ್ ಸರ್ಟಿಫಿಕೇಷನ್ ಎನ್ನುವುದು ರೈಲ್ವೆಯಲ್ಲಿನ ಎಲ್ಲಾ ಭಾರತೀಯರಿಗೆ ಸುರಕ್ಷಿತ, ಆರೋಗ್ಯಕರ ಹಾಗೂ ರುಚಿಕರ ಆಹಾರವನ್ನು ಖಚಿತಪಡಿಸಿ ನೀಡಲು ಭಾರತದಲ್ಲಿ ಆಹಾರ ವ್ಯವಸ್ಥೆಯನ್ನು ಪರಿವರ್ತಿಸಲುFSSAI ಸಿದ್ಧ ಪಡಿಸಿರುವ ದೊಡ್ಡ ಪ್ರಮಾಣದ ಪ್ರಯತ್ನವಾಗಿದೆ.
* ಪ್ರಸ್ತುತ ಚಂಡೀಗಢ ರೈಲ್ವೇ ನಿಲ್ದಾಣವು ಈ ಪ್ರಮಾಣಪತ್ರವನ್ನು ಪಡೆದ ಭಾರತದ 5 ನೇ ರೈಲು ನಿಲ್ದಾಣವಾಗಿದೆ.
* 5 ಸ್ಟಾರ್ 'ಈಟ್ ರೈಟ್ ಸ್ಟೇಷನ್' ಪ್ರಮಾಣಪತ್ರ ಪಡೆದ ರೈಲ್ವೆ ನಿಲ್ದಾಣಗಳು: ದೆಹಲಿಯ ಆನಂದ್ ವಿಹಾರ್ ಟರ್ಮಿನಲ್ ರೈಲ್ವೆ ನಿಲ್ದಾಣ, ಮುಂಬೈನಲ್ಲಿ ಛತ್ರಪತಿ ಶಿವಾಜಿ ಟರ್ಮಿನಸ್, ಮುಂಬೈನಲ್ಲಿ ಮುಂಬೈ ಸೆಂಟ್ರಲ್ ರೈಲ್ವೇ ನಿಲ್ದಾಣ, ವಡೋದರಾದಲ್ಲಿನ ವಡೋದರಾ ರೈಲ್ವೇ ನಿಲ್ದಾಣ.

## ಚೀನಾ ದೇಶವು ಮಂಗಳಯಾನಕ್ಕಾಗಿ ಚಿಕಣಿ ಹೆಲಿಕಾಪ್ಟರ್ ನ್ನು ಅಭಿವೃದ್ಧಿಪಡಿಸಿದೆ



* ಭವಿಷ್ಯದ ಮಂಗಳಯಾನಗಳ ಮೇಲೆ ಕಣ್ಣಾವಲು ಇರಿಸುವ ನಿಟ್ಟಿನಲ್ಲಿ ಚೀನಾ ದೇಶವು ಒಂದು ಮಾದರಿ ಚಿಕಣಿ ಹೆಲಿಕಾಪ್ಟರ್ ನ್ನು ಅಭಿವೃದ್ಧಿಪಡಿಸಿದೆ.

* ಪ್ರಸ್ತುತ ಮಂಗಳದಲ್ಲಿ ರೋಬೋಟಿಕ್ ರೋವರ್‌ನ ಇಳಿಸಿದ ನಂತರ ಈ ಚಿಕಣಿ ಹೆಲಿಕಾಪ್ಟರ್ ನ್ನು ಅಭಿವೃದ್ಧಿಪಡಿಸಲಾಗಿದೆ, ಹಾಗೂ ಇದನ್ನು ನಾಸಾ ತನ್ನ ಪರಿಶ್ರಮ ಕಾರ್ಯಾಚರಣೆಗೆ ಅಭಿವೃದ್ಧಿಪಡಿಸಿದೆ.
* ಚೀನಾ ದೇಶವು ಅಭಿವೃದ್ಧಿ ಪಡಿಸಿರುವ ಈ ಹೆಲಿಕಾಪ್ಟರ್ 2 ರೋಟರ್ ಬ್ಲೇಡ್‌ಗಳು, ಸೆನ್ಸರ್ ಹಾಗೂ ಕ್ಯಾಮೆರಾ ಬೇಸ್ ಮತ್ತು 4ತೆಳುವಾದ ಕಾಲುಗಳನ್ನು ಒಳಗೊಂಡಿದೆ.
* ಚೀನಾ ದೇಶವು 2033 ಕ್ಕೆ ತನ್ನ ಮೊದಲ ಸಿಬ್ಬಂದಿ ಕಾರ್ಯಾಚರಣೆಯನ್ನು ಮಂಗಳ ಗ್ರಹಕ್ಕೆ ಆಯೋಜಿಸಿದೆ.
* ಚೀನಾದ ರೋವರ್ 2021 ರ ಮೇ ನಲ್ಲಿ ಮಂಗಳಯಾನ ನೌಕೆಯನ್ನು ತಲುಪಿದೆ, ಹಾಗೂ ಇದು ಚೀನಾ ದೇಶದ ಮೊದಲ ಗ್ರಹವಾಗಿದೆ.
* ಅಮೇರಿಕ ದೇಶದ ನಂತರ ಮಂಗಳನಲ್ಲಿ ಈ ತರಹದ ಕಾರ್ಯಾಚರಣೆಯನ್ನು ಕೈಗೊಂಡಿರುವ 2 ನೇ ದೇಶವಾಗಿದೆ.

# 06-09-2021

## 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಗೆ ಮುಖ್ಯಮಂತ್ರಿ ಬೊಮ್ಮಾಯಿ ಚಾಲನೆ




* ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಗೆ ಚಾಲನೆ ನೀಡಿದ್ದಾರೆ, ಈ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಭಾಗಿಯಾಗಿದ್ದರು.
* ಕರ್ನಾಟಕ ಸರ್ಕಾರವು ಈ ರೈತ ವಿದ್ಯಾನಿಧಿ ಯೋಜನೆ ಅಡಿಯಲ್ಲಿ ರೈತರ ಮಕ್ಕಳಿಗೆ ಶಿಷ್ಯ ವೇತನ ನೀಡಲಿದೆ, ವಿದ್ಯಾರ್ಥಿಗಳ ಖಾತೆಗೆ ವಿದ್ಯಾನಿಧಿ ಹಣವನ್ನು ಸಾಂಕೇತಿಕವಾಗಿ ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ವರ್ಗಾವಣೆ ಮಾಡಿದರು.
* ಈ ರೈತ ವಿದ್ಯಾನಿಧಿ ಯೋಜನೆಯಿಂದಾಗಿ ಸರಿ ಸುಮಾರು 17 ಲಕ್ಷ ರೈತರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ದಾರಿಯಾಗಲಿದೆ, ಪಿಯುಸಿ, ಐಟಿಐ, ಡಿಪ್ಲೊಮಾ ವಿದ್ಯಾರ್ಥಿಗಳಿಗೆ 2,500 ರೂಪಾಯಿ. ಮತ್ತು ವಿದ್ಯಾರ್ಥಿನಿಯರಿಗೆ 3 ಸಾವಿರ ರೂ.ಗಳನ್ನು ರಾಜ್ಯ ಸರ್ಕಾರ ನೀಡಲಿದೆ.
* ಅಲ್ಲದೇ ಪದವೀಧರ ವಿದ್ಯಾರ್ಥಿಗಳಿಗೆ 5 ಸಾವಿರ ರೂ, ವಿದ್ಯಾರ್ಥಿನಿಯರಿಗೆ 5,500 ರೂ. ಹಣವನ್ನು, ಹಾಗೂ ಎಲ್‌ಎಲ್‌ಬಿ, ಪ್ಯಾರಾಮೆಡಿಕಲ್, ಬಿ ಫಾರ್ಮ್, ನರ್ಸಿಂಗ್, ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಕ್ರಮವಾಗಿ 7,500 ರೂ, ಹಾಗೂ 8 ಸಾವಿರ ರೂ. ಹಣವನ್ನು ರಾಜ್ಯ ಸರ್ಕಾರ ನೀಡಲಿದೆ ಎಂದು ತಿಳಿಸಿದ್ದಾರೆ.
* ಎಂಬಿಬಿಎಸ್ (MBBS), ಬಿಇ, ಬಿ.ಟೆಕ್ ಸ್ನಾತಕೋತ್ತರ ಕೋರ್ಸ್ ಕಲಿಯುತ್ತಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಕ್ರಮವಾಗಿ 10 ಸಾವಿರ, ಮತ್ತು 11,000 ರೂ. ಶಿಷ್ಯ ವೇತನ ನೀಡಲಿದೆ ಎಂದಿದ್ದಾರೆ

## ಪ್ಯಾರಾಲಿಂಪಿಕ್ಸ್ ನ ಬ್ಯಾಡ್ಮಿಂಟನ್ ನಲ್ಲಿ ಚಿನ್ನ, ಬೆಳ್ಳಿ ಜಯಿಸಿದ ಭಾರತೀಯ ಕ್ರೀಡಾಪಟುಗಳು



* ಪ್ರಸ್ತುತ ಟೋಕಿಯೊ ಪ್ಯಾರಾಲಿಂಪಿಕ್ಸ್ ಬ್ಯಾಡ್ಮಿಂಟನ್ ವಿಭಾಗದ ಸಿಎಚ್ 6 ವರ್ಗದ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ ಕೃಷ್ಣಾ ನಾಗರ್ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಬ್ಯಾಡ್ಮಿಂಟನ್ ಫೈನಲ್ ಪಂದ್ಯದಲ್ಲಿ ಜೈಪುರದ ಕೃಷ್ಣಾ ನಾಗರ್ ಅವರು ಹಾಂಕಾಂಗ್‌ನ ಚು ಮನ್ ಕಾಯ್ ಅವರ ಎದುರು ಗೆಲುವು ದಾಖಲಿಸಿದ್ದಾರೆ.
* ಈ ಮೊದಲು ಭಾರತೀಯ ಪ್ರಮೋದ್ ಭಗತ್ ಬ್ಯಾಡ್ಮಿಂಟನ್ ವಿಭಾಗದ ಎಸ್‌ಎಲ್ 3 ವರ್ಗದ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದರು.
* ಒಟ್ಟಾರೆ ಭಾರತಕ್ಕೆ ಈ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಐದು(5) ಚಿನ್ನದ ಪದಕ ಲಭಿಸಿದೆ.
* ಈ ಪ್ಯಾರಾಲಿಂಪಿಕ್ಸ್'ನಲ್ಲಿ ಬ್ಯಾಡ್ಮಿಂಟನ್ ಸ್ಪರ್ಧೆಯ ಎಸ್‌ಎಲ್4 ಫೈನಲ್ ಪಂದ್ಯದಲ್ಲಿ ಕನ್ನಡಿಗ IAS ಅಧಿಕಾರಿ ಶಿವಮೊಗ್ಗದ ಸುಹಾಸ್ ಯತಿರಾಜ್ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಪ್ರಸ್ತುತ ಶಿವಮೊಗ್ಗದ ಕನ್ನಡಿಗ IAS ಅಧಿಕಾರಿ ಸುಹಾಸ್ ಯತಿರಾಜ್ ಅವರು ಸದ್ಯ ಉತ್ತರ ಪ್ರದೇಶದ ಗೌತಮಬುದ್ಧ ನಗರದ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ

## ಜನಪ್ರಿಯ ನಾಯಕರಲ್ಲಿ ಜಾಗತಿಕವಾಗಿ ಪ್ರಧಾನಿ ನರೇಂದ್ರ ಮೋದಿಗೆ ಅಗ್ರಸ್ಥಾನ



* ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಜಾಗತಿಕ ಜನಪ್ರಿಯ ನಾಯಕರ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿದ್ದಾರೆ.
* ಈ ಮಾಹಿತಿಯನ್ನು ಅಮೇರಿಕದ ಗುಪ್ತಚರ 'ಮಾರ್ನಿಂಗ್ ಕನ್ಸಲ್ಟ್' ಎಂಬ ಸಂಸ್ಥೆಯು ಈ ಮಾಹಿತಿಯನ್ನು ನೀಡಿದೆ, ಈ ಮಾಹಿತಿಯನ್ನು 13 ರಾಷ್ಟ್ರಗಳ ನಾಯಕರುಗಳ ರಾಷ್ಟ್ರೀಯ ರೇಟಿಂಗ್ಸ್ ಆಧಾರದ ಮೇಲೆ ಈ ಸ್ಥಾನವನ್ನು ನೀಡಲಾಗಿದೆ ಎಂದು ತಿಳಿಸಲಾಗಿದೆ. * ಇತ್ತೀಚಿನ ಗ್ಲೋಬಲ್ ಅಪ್ರೂವಲ್ ರೇಟಿಂಗ್ಸ್ ಪ್ರಕಾರ (ಜಾಗತಿಕ ಸಮೀಕ್ಷೆಯೊಂದರ ಪ್ರಕಾರ) ಶೇ.70 ರಷ್ಟು ಜನರು ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಒಪ್ಪಿಕೊಂಡಿದ್ದಾರೆ.
* ಮೆಕ್ಸಿಕೊ ಅಧ್ಯಕ್ಷ ಆಯಂಡ್ರೀಸ್ ಮ್ಯಾನುಯೆಲ್ ಲೋಪೆಜ್ ಒಬ್ರಡರ್ ಅವರು ಶೇ.64 ರಷ್ಟು ರೇಟಿಂಗ್ಸ್ ಪಡೆದು 2 ನೇ ಸ್ಥಾನದಲ್ಲಿದ್ದಾರೆ.

* ಇಟಲಿ ಪ್ರಧಾನಿ ಮರಿಯೊ ದ್ರಾಘಿ ಅವರು ಶೇ.63 ರಷ್ಟು ರೇಟಿಂಗ್ಸ್ ಪಡೆದು 3 ನೇ ಸ್ಥಾನದಲ್ಲಿದ್ದಾರೆ, ಹಾಗೂ ಜರ್ಮನಿ ಪ್ರಧಾನಿ ಏಂಜೆಲಾ ಮರ್ಕೆಲ್ ಅವರು ಶೇ.52 ರಷ್ಟು, ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಶೇ.48ರಷ್ಟು, ಮತ್ತು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸ್ಸನ್ ಶೇ.48 ರಷ್ಟು ರೇಟಿಂಗ್ಸ್ ಪಡೆದು ನಂತರದ ಸ್ಥಾನದಲ್ಲಿದ್ದಾರೆ.

## ಲಡಾಖ್ ಸರ್ಕಾರವು ರಸ್ತೆ ಜಾಲ ಮೇಲ್ದರ್ಜೆಗೆ ಬಿಆರ್ಒ(BRO)ದೊಂದಿಗೆ ಒಪ್ಪಂದ




* ಭಾರತೀಯ ಕೇಂದ್ರಾಡಳಿತ ಪ್ರದೇಶವಾದ ಲಡಾಖ್ ತನ್ನ ವ್ಯಾಪ್ತಿಯಲ್ಲಿನ ರಸ್ತೆ ಸಂಪರ್ಕ ಜಾಲದ ಸುಧಾರಣೆ ಮತ್ತು ಮೇಲ್ದರ್ಜೆಗೇರಿಸಲು ಲಡಾಖ್'ನ ಆಡಳಿತ ಸರ್ಕಾರವು ಬಾರ್ಡರ್ ರೋಡ್ ಆರ್ಗನೈಜೇಷನ್(BRO)ದೊಂದಿಗೆ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿವೆ.
* ಪ್ರಸ್ತುತ ಕೇಂದ್ರಾಡಳಿತ ಪ್ರದೇಶ ಲಡಾಖ್ ಒಟ್ಟು 7 ಯೋಜನೆಗಳ ನಿರ್ಮಾಣದ ಜವಾಬ್ದಾರಿಯನ್ನು BRO ಗೆ ವಹಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ಕೇಂದ್ರಾಡಳಿತ ಪ್ರದೇಶ ಲಡಾಖ್‌ನಲ್ಲಿನ ರಸ್ತೆ ಹಾಗೂ ಸೇತುವೆಗಳ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬಾರ್ಡರ್ ರೋಡ್ ಆರ್ಗನೈಜೇಷನ್(BRO) 'ಪ್ರಾಜೆಕ್ಟ್ ಹಿಮಂಕ್' ಹಾಗೂ 'ಪ್ರಾಜೆಕ್ಟ್ ವಿಜಯಕ್' ಎಂಬ ಯೋಜನೆಗಳನ್ನು ರಚಿಸಿದೆ.

## ಪ್ಯಾರಾಲಿಂಪಿಕ್ಸ್ ನ ಶೂಟಿಂಗ್ ವಿಭಾಗದಲ್ಲಿ ಮನೀಶ್‌ಗೆ ಚಿನ್ನ, ಸಿಂಗರಾಜ್‌ಗೆ ಬೆಳ್ಳಿ



* ಪ್ರಸ್ತುತ ಜಪಾನ್'ನ ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ಶೂಟಿಂಗ್ ಪಿ4 ಮಿಶ್ರ 50 ಮೀ. ಪಿಸ್ತೂಲ್ ಎಚ್1 ವಿಭಾಗದಲ್ಲಿ ಭಾರತೀಯ ಮನೀಶ್ ನರ್ವಾಲ್ ಅವರು ಚಿನ್ನ, ಹಾಗೂ ಸಿಂಗರಾಜ್ ಅದಾನಾ ಬೆಳ್ಳಿ ಪದಕಗಳನ್ನು ಗೆದಿದ್ದಾರೆ.
* ಭಾರತೀಯ ಶೂಟರ್ ಮನೀಶ್ ನರ್ವಾಲ್ ಅವರು 218.2 ಪಾಯಿಂಟ್'ಗಳಿಸಿ ಈ ಪ್ಯಾರಾಲಿಂಪಿಕ್ಸ್ ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಸಿಂಗರಾಜ್ ಅದಾನಾ ಅವರು 216.7 ಪಾಯಿಂಟ್'ಗಳಿಸಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ, ಈ ಮೊದಲು ಸಿಂಗರಾಜ್ ಅವರು ಪುರುಷರ ಪಿ1 10 ಮೀ. ಏರ್ ಪಿಸ್ತೂಲ್ ಎಸ್‌ಎಚ್1 ವಿಭಾಗದಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ, ಒಟ್ಟಾರೆ ಇವರು ಈ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಸಾಧನೆ ಮಾಡಿದ್ದಾರೆ.

## 'ದಾಸೋಹ ದಿನ' ಆಚರಿಸಲು ಸಿದ್ದವಾದ ಕರ್ನಾಟಕ ರಾಜ್ಯ ಸರ್ಕಾರ



* ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರವು ತುಮಕೂರು ಸಿದ್ದಗಂಗಾ ಮಠದ ದಾಸೋಹಿಯಾಗಿರುವ ಶ್ರೀ ಶಿವಕುಮಾರ ಸ್ವಾಮೀಜಿ ಲಿಂಗೈಕ್ಯರಾದ ದಿನ ಅಂದರೆ ಜನೇವರಿ 21 ನ್ನು 'ದಾಸೋಹ ದಿನ'ವಾಗಿ ಆಚರಿಸಲು ತೀರ್ಮಾನವನ್ನು ಕೈಗೊಂಡು ಈ ವಿಷಯದ ಬಗ್ಗೆ ಆದೇಶವನ್ನು ಹೊರಡಿಸಿದೆ.
* ತುಮಕೂರು ಸಿದ್ದಗಂಗಾ ಮಠದ ಲಿಂಗೈಕ್ಯರಾದ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿನ ಅಪೂರ್ವ ಸೇವೆಯನ್ನು ಸ್ಮರಿಸುವ ಸಲುವಾಗಿ ಈ ದಿನವನ್ನು ಆಚರಿಸಲು ರಾಜ್ಯ ಸರ್ಕಾರವು ನಿರ್ಧರಿಸಿದೆ.

## ಎರಡು ಕೃಷಿ ಯೋಜನೆಗಳನ್ನು ಆರಂಭಿಸಿದ ಅರುಣಾಚಲ ಪ್ರದೇಶ



* ಪ್ರಸ್ತುತ 2021 ರ ಸೆಪ್ಟೆಂಬರ್. 3 ರಂದು ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೆಮಾ ಖಂಡು ಅವರು ಎರಡು ಕೃಷಿ ಯೋಜನೆಗಳನ್ನು ಆರಂಭಿಸಿದ್ದಾರೆ.
* ಅರುಣಾಚಲ ಪ್ರದೇಶದ ಕೃಷಿ ವಲಯದಲ್ಲಿ ಒಂದು ಯೋಜನೆಯನ್ನು ಆರಂಭಿಸಲಾಗಿದೆ, ಅದುವೇ 'ಆತ್ಮನಿರ್ಭರ್ ಕೃಷಿ ಯೋಜನೆ'ಯಾಗಿದೆ.
* ಇನ್ನೊಂದು ತೋಟಗಾರಿಕಾ ವಲಯದಲ್ಲಿ 2 ನೇ ಯೋಜನೆಯನ್ನು ಆರಂಭಿಸಲಾಗಿದೆ, ಅದುವೇ 'ಆತ್ಮನಿರ್ಭರ್ ಬಾಗವಾನಿ ಯೋಜನೆ', ಪ್ರಸ್ತುತ ಈ ಆತ್ಮನಿರ್ಭರ್ ಕೃಷಿ ಯೋಜನೆಗೆ 120 ಕೋಟಿ ರೂ. ಮತ್ತು ಆತ್ಮನಿರ್ಭರ್ ಬಾಗವಾನಿ ಯೋಜನೆಗೆ 60 ಕೋಟಿ ರೂ. ಘೋಷಣೆ ಮಾಡಲಾಗಿದೆ.
* ಈ ಯೋಜನೆಗಳನ್ನು ಪಡೆಯಲು ಅಲ್ಲಿನ ರೈತರು ಸ್ವ ಸ್ವಾಧೀನ ಪ್ರಮಾಣಪತ್ರ, ಹಾಗೂ ಯಾವುದೇ ಭೂ ದಾಖಲೆಯು SHG ಗಳಿಗೆ ಅಗತ್ಯವಿಲ್ಲ, ಆದರೆ ಕೇವಲ EAC, CO ಅಥವಾ BDO ನಂತಹ ಸರಳ ಪ್ರಮಾಣಪತ್ರಗಳ ಅಗತ್ಯವಿದೆ ಎಂದು ತಿಳಿಸಿದ್ದಾರೆ.
* ಈ ಯೋಜನೆಯಡಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅರುಣಾಚಲ ಪ್ರದೇಶ ಗ್ರಾಮೀಣ ಬ್ಯಾಂಕ್ ಮತ್ತು ಅರುಣಾಚಲ ಪ್ರದೇಶ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಂದ ಫಲಾನುಭವಿಗಳಿಗೆ ಕ್ರೆಡಿಟ್ ಲಿಂಕ್ ನೀಡಲಾಗುತ್ತದೆ, ಅಲ್ಲದೇ ಶೇ. 45 ರಷ್ಟು ಅರುಣಾಚಲ ಪ್ರದೇಶ ಸರ್ಕಾರದ ಸಬ್ಸಿಡಿಯಾಗಿ, ಹಾಗೂ ಶೇ. 45 ರಷ್ಟು ಬ್ಯಾಂಕ್ ಸಾಲವಾಗಿ

ನೀಡುತ್ತದೆ, ರೈತರು ಕೇವಲ ಶೇ. 10 ರಷ್ಟು ಭರಿಸಬೇಕಾಗುತ್ತದೆ ಎಂದು ಅಲ್ಲಿನ ಸರ್ಕಾರ ತಿಳಿಸಿದೆ.

### ಕಿಸಾನ್ ಸ್ಟೋರ್ ಆರಂಭಿಸಿದ ಅಮೆಜಾನ್ ಇಂಡಿಯಾ




* ಅಮೆಜಾನ್ ಇಂಡಿಯಾ 2021 ರ ಸೆಪ್ಟೆಂಬರ್. 2 ರಂದು ಕಿಸಾನ್ ಸ್ಟೋರ್ ನ್ನು ಆರಂಭಿಸಿದೆ, ಈ ಕಿಸಾನ್ ಮಳಿಗೆಯನ್ನು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಪ್ರಾರಂಭಿಸಿದ್ದಾರೆ.
* ಕಿಸಾನ್ ಸ್ಟೋರ್ ಒಂದು ಆನ್‌ಲೈನ್ ವೇದಿಕೆಯಾಗಿದೆ, ಈ ವೇದಿಕೆಯು ರೈತರಿಗೆ ಕೃಷಿ ಉಪಕರಣಗಳು ಹಾಗೂ ಬಿತ್ತನೆ ಬೀಜಗಳು, ಸಸ್ಯ ಸಂರಕ್ಷಣೆ, ಪೋಷಣೆ ವಸ್ತುಗಳನ್ನು ಪಡೆಯಲು ಸಹಾಯಮಾಡಲಿದೆ.
* ಪ್ರಸ್ತುತ ಈ ಕಿಸಾನ್ ಮಳಿಗೆಯು ಹಿಂದಿ, ತೆಲುಗು, ಕನ್ನಡ, ತಮಿಳು ಮತ್ತು ಮಲಯಾಳಂನಂತಹ ಭಾಷೆಗಳಲ್ಲಿ ವ್ಯವಹರಿಸಲು ಲಭ್ಯವಿರಲಿದೆ.

### ಆಯುಷ್ ಸಚಿವಾಲಯವು 'ಆಯುಷ್ ಆಪ್ಕೆ ದ್ವಾರ' ಅಭಿಯಾನವನ್ನು ಆರಂಭಿಸಿದೆ



* ಕೇಂದ್ರ ಆಯುಷ್ ಸಚಿವಾಲಯವು ಭಾರತದ ಸುಮಾರು 45 ಸ್ಥಳಗಳಿಂದ 'ಆಯುಷ್ ಆಪ್ಕೆ ದ್ವಾರ' ಎಂಬ ಅಭಿಯಾನವನ್ನು ಪ್ರಾರಂಭಿಸಿದೆ.
* ಈ 'ಆಯುಷ್ ಆಪ್ಕೆ ದ್ವಾರ' ಅಭಿಯಾನದಲ್ಲಿ ಸುಮಾರು 21 ರಾಜ್ಯಗಳು ಪಾಲ್ಗೊಳ್ಳಲಿವೆ, ಹಾಗೂ ಈ ಅಭಿಯಾನದ ಮೂಲಕ ಭಾರತದಲ್ಲಿ 2 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ವಿತರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* ಈ ಅಭಿಯಾನದ ಮೂಲಕ ಕೇವಲ ಒಂದೇ ವರ್ಷದಲ್ಲಿ ಭಾರತದಲ್ಲಿನ 75 ಲಕ್ಷ ಮನೆಗಳಿಗೆ ಔಷಧೀಯ ಸಸ್ಯ ಸಸಿಗಳನ್ನು ನೀಡುವ ಉದ್ದೇಶದಿಂದ ಆಯುಷ್ ಆಪ್ಕೆ ದ್ವಾರ ಅಭಿಯಾನವನ್ನು ಆರಂಭಿಸಲಾಗಿದೆ.
* ಈ ಮೊದಲು ಆಯುಷ್ ಸಚಿವಾಲಯವನ್ನು 'ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ, ಸೋವ ರಿಗ್ಪಾ ಮತ್ತು ಹೋಮಿಯೋಪತಿ ಸಚಿವಾಲಯ' ಎಂದು ಕರೆಯುತ್ತಿದ್ದರು, ಹಾಗೂ ಇದನ್ನು 2014 ರ ನವೆಂಬರ್. 9 ರಂದು ಸ್ಥಾಪನೆ ಮಾಡಲಾಗಿದೆ, ಮತ್ತೇ ಈ ಸಚಿವಾಲಯವನ್ನು 2021 ರ ಏಪ್ರಿಲ್. 13 ರಂದು 'ಆಯುಷ್ ಸಚಿವಾಲಯ' ಎಂದು ಮರುನಾಮಕರಣ ಮಾಡಲಾಯಿತು.

### ಪ್ಲಾಸ್ಟಿಕ್ ಒಪ್ಪಂದವನ್ನು ಆರಂಭಿಸಿದ ಏಷ್ಯಾದ ಮೊದಲ ದೇಶ ಭಾರತ

INDIA PLASTICS PACT

* ಭಾರತ ದೇಶವು ಪ್ಲಾಸ್ಟಿಕ್ ಒಪ್ಪಂದವನ್ನು ಆರಂಭಿಸಿದ ಏಷ್ಯಾದ ಮೊದಲ ದೇಶವಾಗಿದೆ.
* ಈ ಹೊಸ ವೇದಿಕೆಯನ್ನು ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ ಇಂಡಿಯಾ, ಹಾಗೂ ಭಾರತೀಯ ಕೈಗಾರಿಕಾ ಒಕ್ಕೂಟದ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿದೆ, ಹಾಗೂ ಪ್ಲಾಸ್ಟಿಕ್‌ಗಾಗಿ ವೃತ್ತಾಕಾರದ ವ್ಯವಸ್ಥೆಯನ್ನು ಉತ್ತೇಜಿಸಲು ಸಹಾಯ ಮಾಡಲಿದೆ ಎಂದು ತಿಳಿಸಲಾಗಿದೆ.
* ಈ ಹೊಸ ವೇದಿಕೆಯನ್ನು ಭಾರತದಲ್ಲಿನ ಬ್ರಿಟಿಷ್ ಹೈ ಕಮೀಷನರ್ ಅಲೆಕ್ಸಾಂಡರ್ ಎಲ್ಲಿಸ್ ಅವರಿಂದ ಆರಂಭಿಸಲಾಗಿದೆ.
* ಪ್ರಸ್ತುತ ಈ ಒಪ್ಪಂದದ ಅಡಿಯಲ್ಲಿ ಪ್ಲಾಸ್ಟಿಕ್'ನ್ನು ಆರ್ಥಿಕತೆಯಲ್ಲಿ ಮತ್ತು ನೈಸರ್ಗಿಕ ಪರಿಸರದಿಂದ ದೂರವಿರಿಸುವ ಗುರಿಯನ್ನು ಹೊಂದಿದೆ.
* ಭಾರತದ ಈ ಒಪ್ಪಂದದಿಂದ 100 ಪ್ರತಿಶತ ಪ್ಲಾಸ್ಟಿಕ್ ಪ್ಯಾಕೇಜಿಂಗ್'ನ್ನು ಮರುಬಳಕೆ ಮಾಡಬಹುದು ಅಥವಾ 50 ಪ್ರತಿಶತ ಪ್ಲಾಸ್ಟಿಕ್ ಪ್ಯಾಕೇಜಿಂಗ್'ನ್ನು ಪರಿಣಾಮಕಾರಿಯಾಗಿ ಮರುಬಳಕೆ ಮಾಡಲಾಗುತ್ತದೆ, ಹಾಗೂ ಎಲ್ಲಾ ಪ್ಲಾಸ್ಟಿಕ್ ಪ್ಯಾಕೇಜಿಂಗ್‌ನಾದ್ಯಂತ ಶೇಕಡಾ 25 ರಷ್ಟು ಮರುಬಳಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.
* ಭಾರತದಲ್ಲಿ ವಾರ್ಷಿಕವಾಗಿ ಸರಿ ಸುಮಾರು 9.46 ಮಿಲಿಯನ್ ಟನ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಲಾಗಿದೆ, ಇದರಲ್ಲಿ ಶೇ 40 ರಷ್ಟು ಹಣವನ್ನು ಕೂಡ ಸಂಗ್ರಹಿಸಲಾಗಿಲ್ಲ.
* ಪ್ರಸ್ತುತ ಭಾರತದಲ್ಲಿ ಪ್ಲಾಸ್ಟಿಕ್ ಉತ್ಪಾದನೆಯ ಅರ್ಧದಷ್ಟು ಕೇವಲ ಪ್ಯಾಕೇಜಿಂಗ್ ಸಲುವಾಗಿ ಬಳಸಲಾಗುತ್ತದೆ, ಆದರೆ ಅದರಲ್ಲಿ ಅತೀ ಪ್ಲಾಸ್ಟಿಕ್ ಒಂದೇ ಸಾರಿ ಬಳಸುವ ಪ್ಲಾಸ್ಟಿಕ್ ಆಗಿದೆ.

## 07-09-2021

### ಐಸಿಸಿ (ICC) ತಿಂಗಳ ಆಟಗಾರ ಜಸ್‌ಪ್ರೀತ್ ಬೂಮ್ರಾ




* ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ICC) ಆಗಸ್ಟ್ ತಿಂಗಳ ಆಟಗಾರ ಪ್ರಶಸ್ತಿಯನ್ನು ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಪಡೆದುಕೊಂಡಿದ್ದಾರೆ.
* ಪ್ರಸ್ತುತ ಜಸ್‌ಪ್ರೀತ್ ಬೂಮ್ರಾ ಅವರು ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಉತ್ತಮ ಪ್ರದರ್ಶನವನ್ನು ನೀಡಿದ್ದರಿಂದ ಈ ತಿಂಗಳ ಆಟಗಾರ ಪ್ರಶಸ್ತಿ ಇವರಿಗೆ ಲಭಿಸಿದೆ.

* ಪುರುಷರ ವಿಭಾಗದ ತಿಂಗಳ ಆಟಗಾರರ ಪಟ್ಟಿಯಲ್ಲಿ ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಜೋ ರೂಟ್ ಮತ್ತು ಪಾಕಿಸ್ತಾನದ ವೇಗಿ ಶಹೀನ್ ಅಫ್ರಿದಿ ಕೂಡ ಇದ್ದಾರೆ.

* ಮಹಿಳೆಯರ ವಿಭಾಗದ ತಿಂಗಳ ಆಟಗಾರರ ಪಟ್ಟಿಯಲ್ಲಿ ಥಾಯ್ಲೆಂಡ್‌ನ ನಟಾಯ ಬೂಚಥಾಮ್ ಹಾಗೂ ಐರ್ಲೆಂಡ್‌ನಗ್ಯಾಬಿ ಲ್ಯೂಯಿಸ್ ಮತ್ತು ಎಮಿಯರ್ ರಿಚರ್ಡ್ಸನ್ ಸ್ಥಾನ ಪಡೆದುಕೊಂಡಿದ್ದಾರೆ.

* ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಬೂಮ್ರಾ 9 ವಿಕೆಟ್ ಪಡೆದಿದ್ದಾರೆ.

* ಜೋ ರೂಟ್ ಆಗಸ್ಟ್‌ನಲ್ಲಿ ನಡೆದ ಭಾರತ ವಿರುದ್ದದ 3 ಟೆಸ್ಟ್ ಪಂದ್ಯಗಳಲ್ಲಿ 3 ಶತಕಗಳನ್ನು ಸಿಡಿಸಿದ್ದಾರೆ.

* ಪಾಕಿಸ್ತಾನದ ಶಹೀನ್ ಅಫ್ರಿದಿ ಅವರು ವೆಸ್ಟ್ ಇಂಡೀಸ್ ವಿರುದ್ದದ 2 ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಒಟ್ಟು 18 ವಿಕೆಟ್ ಪಡೆದುಕೊಂಡಿದ್ದಾರೆ, ಈ ಕಾರಣಕ್ಕಾಗಿ ಇವರಿಗೆ ICC ತಿಂಗಳ ಆಟಗಾರ ಪ್ರಶಸ್ತಿ ಲಭಿಸಿದೆ.

## ತಮಿಳನಾಡು ಸ್ಟಾಲಿನ್ ಸರ್ಕಾರವು ಸೆ.17 ರಂದು 'ಸಾಮಾಜಿಕ ನ್ಯಾಯದಿನ' ಆಚರಿಸಲು ನಿರ್ಧರಿಸಿದೆ



* ತಮಿಳನಾಡು ರಾಜ್ಯ ಸರ್ಕಾರವು ಪ್ರತಿ ವರ್ಷವು ರಾಜ್ಯದಾದ್ಯಂತ ಸೆ.17 ನ್ನು 'ಸಾಮಾಜಿಕ ನ್ಯಾಯದಿನ' ಎಂದು ಆಚರಿಸಲು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸರ್ಕಾರವು ನಿರ್ಧರಿಸಿದೆ.

* ಪ್ರಸ್ತುತ ಸೆ.17 ಸಮಾಜ ಸುಧಾರಕ ಇ.ವಿ. ರಾಮಸ್ವಾಮಿ ಪೆರಿಯಾರ್ ಅವರ ಜನ್ಮದಿನವಾಗಿದೆ ಇವರು ಪ್ರತಿಪಾದಿಸಿದ ಸಮಾನತೆಯ ತತ್ವಗಳನ್ನು ಅಳವಡಿಸಿಕೊಳ್ಳಲು ಈ ದಿನವನ್ನು ಆಚರಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆ.

## ಭಾರತದಲ್ಲಿ ಪ್ರತಿ ನಿತ್ಯ 1.25 ಕೋಟಿ ಕೋವಿಡ್ 19 ಲಸಿಕೆ ಹಂಚಿಕೆ



* ಭಾರತದಲ್ಲಿ ಪ್ರತಿ ನಿತ್ಯವು 1.25 ಕೋಟಿ ಡೋಸ್‌ಗಳಷ್ಟು ಕೋವಿಡ್ 19 ಲಸಿಕೆಗಳನ್ನು ನೀಡಲಾಗುತ್ತಿದೆ, ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

* ಪ್ರಸ್ತುತ ಹಿಮಾಚಲ ಪ್ರದೇಶದಲ್ಲಿ ಸಂಚಾರ ಸಾರಿಗೆ ಸೌಲಭ್ಯಗಳ ಸಮಸ್ಯೆಗಳಿವೆ ಆದರೆ ಅಲ್ಲಿನ ಸರ್ಕಾರವು ಅರ್ಹ ಜನರಿಗೆ ಕೋವಿಡ್ ಲಸಿಕೆಯನ್ನು ನೀಡಿದ ರಾಜ್ಯವಾಗಿ ಹೊರಹೊಮ್ಮಿದೆ.

* ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಸಭೆಯ ಮೂಲಕ ಹಿಮಾಚಲ ಪ್ರದೇಶ ರಾಜ್ಯದ ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಲಸಿಕೆ ಪಡೆದಿರುವ ಫಲಾನುಭವಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ ಹಾಗೂ ಈ ಕೋವಿಡ್ 19 ಲಸಿಕೆ ಕಾರ್ಯಕ್ರಮವನ್ನು ಅಭಿನಂದಿಸಿದ್ದಾರೆ.

## ರಾಷ್ಟ್ರೀಯ ಮಾನ್ಯತೆ ಪಡೆದ 'ಧಾರವಾಡಿ ಎಮ್ಮೆ ತಳಿ'



* ಪ್ರಸ್ತುತ ನವದೆಹಲಿಯಲ್ಲಿನ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನ ಪಶು ಸಂಗೋಪನೆ ವಿಭಾಗವು ಕರ್ನಾಟಕ ರಾಜ್ಯದ ಧಾರವಾಡ ನಗರದ 'ಧಾರವಾಡಿ ತಳಿ' ಎಮ್ಮೆಗೆ ತಳಿಗೆ ರಾಷ್ಟ್ರೀಯ ಮಾನ್ಯತೆ ದೊರೆತಿದೆ. *ಪ್ರಸ್ತುತ 'ಧಾರವಾಡಿ ಎಮ್ಮೆ ತಳಿಗೆ' 'ಇಂಡಿಯಾ_ಬಫೆಲೊ_0800_ಧಾರವಾಡಿ_01018' ಎಂದು ತಳಿ ಪ್ರವೇಶ ಸಂಖ್ಯೆಯನ್ನು ನೀಡಲಾಗಿದೆ, ಮಾನ್ಯತೆ ಪಡೆದ ರಾಜ್ಯದ ಮೊದಲ ಎಮ್ಮೆ ತಳಿ ಇದಾಗಿದೆ.

* ಪ್ರಸ್ತುತ 1970 ರಿಂದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪಶು ವಿಜ್ಞಾನ ವಿಭಾಗವು 'ಧಾರವಾಡಿ ಎಮ್ಮೆ ತಳಿಗೆ' ಮಾನ್ಯತೆ ಪಡೆಯಲು ಪ್ರಯತ್ನವನ್ನು ಪಡುತಿತ್ತು.

* ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅಂಗ ಸಂಸ್ಥೆಯಾಗಿರುವ ಪಶು ವಂಶವಾಹಿ ಸಂಪನ್ಮೂಲ ಸಂರಕ್ಷಣೆ ರಾಷ್ಟ್ರೀಯ ಸಂಸ್ಥೆ ಮತ್ತು ಕೃಷಿ ವಿ.ವಿಯ ಪಶು ವಿಜ್ಞಾನ ವಿಭಾಗದ ಸಹಯೋಗದಲ್ಲಿ ಸಂಶೋಧನೆ ನಡೆಸಲಾಗಿತ್ತು, 2017 ರಲ್ಲಿ ಈ ತಳಿ ಶುದ್ಧತೆ ವಿಷಯದ ಬಗೆಗಿನ ಸಂಶೋಧಕರು ಪರಿಷತ್‌ಗೆ ವರದಿ ಸಲ್ಲಿಸಲಾಗಿತ್ತು.

* ಪ್ರಸ್ತುತ ದೇಶದ 18 ಎಮ್ಮೆ ತಳಿಯ ಸಾಲಿಗೆ 'ಧಾರವಾಡಿ' ಎಮ್ಮೆ ತಳಿಯು ಹೊಸದಾಗಿ ಸೇರ್ಪಡೆಯಾಗಿದೆ, ಎಂದು ಈ ತಳಿಯ ಸಂಶೋಧನೆಯನ್ನು ನಡೆಸಿರುವ ಧಾರವಾಡ ಕೃಷಿ ವಿಶ್ವವಿದ್ಯಾಲಯ ಪ್ರಾಣಿ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ವಿ.ಎಸ್.ಕುಲಕರ್ಣಿ ಮಾಹಿತಿಯನ್ನು ನೀಡಿದ್ದಾರೆ.

## ಪ್ರವಾಸೋದ್ಯಮವನ್ನು ಹೆಚ್ಚಿಸಲು ವಾರಣಾಸಿ ಚುನಾರ್ ಕ್ರೂಸ್ ಸೇವೆಯುನ್ನು ಆರಂಭಿಸಿದೆ



* ಪ್ರಸ್ತುತ ವಾರಣಾಸಿಯ ಪ್ರವಾಸೋದ್ಯಮವು ವಾರಣಾಸಿ ಚುನಾರ್ ಕ್ರೂಸ್ ಸೇವೆಯು ಆರಂಭಿಸಿದೆ.

* ಪ್ರಸ್ತುತ ಗಂಗಾ ನದಿಯಲ್ಲಿನ ಈ ಕ್ರೂಸ್ ಸೇವೆಯುನ್ನು ವಾರಾಣಸಿಯಿಂದ ಮಿರ್ಜಾಪುರದ ಐತಿಹಾಸಿಕ ಚುನಾರ್ ಕೋಟೆಯವರೆಗೆ ಪ್ರಾರಂಭಿಸಲಾಗಿದೆ, ಇದು ಅಂದಾಜು 30

ಕಿ.ಮೀ. ದೂರದ ಪ್ರಯಾಣವಾಗಿದೆ.

* ಈ ಕ್ರೂಸ್ ಸವಾರಿಯ ರವಿದಾಸ್ ಘಾಟ್‌ನಿಂದ ಆರಂಭವಾಗಿ ಪುನ್ಹ ಸುನಾರ್ ಕೋಟೆಯಿಂದ ವಾರಣಾಸಿಗೆ ವಾಪಸಾಗುತ್ತದೆ.

* ಪ್ರಸ್ತುತ ಈ ಚುನಾರ್ ಕೋಟೆಯು ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯಲ್ಲಿದೆ, ವಾರಣಾಸಿಯಿಂದ 23 ಕಿ.ಮೀ. ದೂರದಲ್ಲಿದೆ, ಈ ಕೋಟೆಯ ಕ್ರಿಸ್ತಪೂರ್ವ 56 ರಿಂದ ಮತ್ತು ಅಫ್ಘಾನಿಸ್ತಾನ ವಂಶಸ್ಥ ಶೇರ್ ಷಾ ಸೂರಿ ಆಳ್ವಿಕೆ, ಹಾಗೂ 1782ರಲ್ಲಿ ಮೊಘಲ್ ಸಾಮ್ರಾಜ್ಯದ ಆಳ್ವಿಕೆ, ಮತ್ತೇ 1804 ರಲ್ಲಿ ಮರಾಠರ ಆಳ್ವಿಕೆಯ, ನಂತರ ಭಾರತವು ಸ್ವಾತಂತ್ರ್ಯ ಪಡೆಯುವ ತನಕ ಅಂದರೆ 1947 ರವರೆಗೆ ಬ್ರಿಟಿಷ್ ರಾಜ್ ಈ ಕೋಟೆಯನ್ನು ಆಕ್ರಮಿಸಿಕೊಂಡಿದೆ.

## ಅಫ್ಘಾನಿಸ್ತಾನದ ಪಂಜಶೀರ್ ಕಣಿವೆಯ ಮಾಹಿತಿ




* ಪ್ರಸ್ತುತ ಅಫ್ಘಾನಿಸ್ತಾನದ ಪಂಜ್‌ಶಿರ್ ಕಣಿವೆಯನ್ನು ನಿಯಂತ್ರಿಸಲು ತಾಲಿಬಾನ್ ಮತ್ತು ಪಂಜ್‌ಶಿರ್‌ದಲ್ಲಿನ ವಿರೋಧ ಪಡೆಗಳು ಹೋರಾಡಿದವು.

* ಈ ಪಂಜಶೀರ್ ಕಣಿವೆಯು ಕಾಬೂಲ್‌ನ ಉತ್ತರಕ್ಕೆ ಇದೆ.

*ಈ ಹಿಂದೆ ತಾಲಿಬಾನ್‌ಗಳು 1996 ರಿಂದ 2001 ರವರೆಗೆ ಅಫ್ಘಾನಿಸ್ತಾನವನ್ನು ಆಳಿದಾಗಲು ಈ ಪಂಜ್‌ಶಿರ್ ಕಣಿವೆಯನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ.

* 2021 ರ ಸೆಪ್ಟೆಂಬರ್. 3 ರಂದು ಪಂಜಶೀರ್ ಪ್ರಾಂತ್ಯದ ಯುದ್ಧವು ಆರಂಭವಾಯಿತು.

* ಪ್ರಸ್ತುತ ಅಫ್ಘಾನಿಸ್ತಾನದ 34 ಪ್ರಾಂತ್ಯಗಳಲ್ಲಿ ಈ ಪಂಜಶೀರ್ ಕಣಿವೆಯ ಒಂದಾಗಿದೆ, ಈ ಪಂಜಶೀರ್ ಕಣಿವೆಯ 512 ಹಳ್ಳಿಗಳು 7 ಜಿಲ್ಲೆಗಳಾಗಿ ವಿಂಗಡಿಸಲಾಗಿದೆ, ಪ್ರಸ್ತುತ ಪಂಜಶೀರ್ ಪ್ರಾಂತೀಯ ರಾಜಧಾನಿ ಬಜಾರಕ್ ಆಗಿದೆ, ಈ ಪಂಜಶೀರ್ ಪ್ರದೇಶವನ್ನು ಅಫ್ಘಾನಿಸ್ತಾನದ ರಾಷ್ಟ್ರೀಯ ಪ್ರತಿರೋಧ ಮುಂಭಾಗವು ನಿಯಂತ್ರಣ ಮಾಡುತ್ತದೆ.

* ಈ ಪಂಜಶೀರ್ ಪ್ರಾಂತ್ಯವು 2004 ರಲ್ಲಿ ಪರ್ವಾನ್ ಪ್ರಾಂತ್ಯದಿಂದ ಒಂದು ಸ್ವತಂತ್ರ ಪ್ರಾಂತ್ಯವಾಗಿದೆ.

## ಕರ್ಬಿ ಆಂಗ್ಲಾಂಗ್ ನ ಶಾಂತಿ ಒಪ್ಪಂದ



* 2021 ರ ಸೆಪ್ಟೆಂಬರ್. 4 ರಂದು ಭಾರತ ಸರ್ಕಾರ, ಹಾಗೂ ಅಸ್ಸಾಂ ಸರ್ಕಾರ ಮತ್ತು ಕಾರ್ಬಿಯ 6 ಬಣಗಳ ನಡುವೆ ಈ ಐತಿಹಾಸಿಕ ತ್ರಿಪಕ್ಷೀಯ ಕಾರ್ಬಿ ಆಂಗ್ಲಾಂಗ್ ಒಪ್ಪಂದಕ್ಕೆ ಸಹಿ ಹಾಕಲಾಯಿತು.

* ಈ ಕಾರ್ಬಿ ಆಂಗ್ಲಾಂಗ್ ಒಪ್ಪಂದದ ಪ್ರಕಾರ, ಸಶಸ್ತ್ರ ಗುಂಪುಗಳು ತಮ್ಮ ಹಿಂಸೆಯ ಹಾದಿಯನ್ನು ಬಿಡಬೇಕು, ಅಲ್ಲದೇ ಅವರ ಶಸ್ತ್ರಾಸ್ತ್ರಗಳನ್ನು ಒಪ್ಪಿಸಬೇಕು ಹಾಗೂ ಈ ಕಾರ್ಬಿ ಆಂಗ್ಲಾಂಗ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಒಂದು ತಿಂಗಳೊಳಗೆ ತಮ್ಮ ಸಂಸ್ಥೆಗಳನ್ನು ವಿಸರ್ಜಿಸಬೇಕು ಎಂದು ಈ ಒಪ್ಪಂದದಲ್ಲಿ ತಿಳಿಸಲಾಗಿದೆ.

* ಈ ಒಪ್ಪಂದದ ಪ್ರಕಾರ ಅಸ್ಸಾಂ ಸರ್ಕಾರವು ಕಾರ್ಬಿಯನ್ನು ಕೆಎಎಸಿಯ ಅಧಿಕೃತ ಭಾಷೆಯಾಗಿ ಸೂಚಿಸಲು ಕಾರ್ಬಿ ಆಂಗ್ಲಾಂಗ್ ಸ್ವಾಯತ್ತ ಮಂಡಳಿಯ ಪ್ರಸ್ತಾಪವನ್ನು ಪರಿಗಣಿಸುತ್ತದೆ ಎಂದು ತಿಳಿಸಿದೆ, ಹಾಗೂ ಇಂಗ್ಲಿಷ್, ಹಿಂದಿ ಮತ್ತು ಅಸ್ಸಾಮೀಸ್ ಅಧಿಕೃತ ಭಾಷೆಗಳಾಗಿ ಬಳಕೆ ಮಾಡಲಾಗುತ್ತದೆ ಎಂದು ತಿಳಿಸಿದೆ.

* ಭಾರತ ಸರ್ಕಾರವು ಕೆಎಎಸಿ ಅಭಿವೃದ್ಧಿಗೆ 500 ಕೋಟಿ ರೂ. ಬಳಕೆಮಾಡಲಿದೆ, ಅಲ್ಲದೇ ಕಾರ್ಬಿ ಯುವಕರನ್ನು ಅಸ್ಸಾಂ ಸರ್ಕಾರದ ಸೇನೆ, ಅರೆಸೇನಾ ಪಡೆಗಳು ಮತ್ತು ಪೋಲೀಸ್ ಹುದ್ದೆಗಳಿಗೆ ನೇಮಿಸಿಕೊಳ್ಳಲು ಕಾರ್ಯಾಚರಣೆಯನ್ನು ಆಯೋಜಿಸಲಾಗುತ್ತದೆ ಎಂದು ತಿಳಿಸಿದೆ.

## ಅಂತಾರಾಷ್ಟ್ರೀಯ ದತ್ತಿ (Charity) ದಿನ




* ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯೊಂದಿಗೆ ಅಂತಾರಾಷ್ಟ್ರೀಯ ದತ್ತಿ ದಿನವನ್ನು ಆಚರಿಸಲಾಗುತ್ತದೆ, ಹಾಗೂ ಈ ದಿನದಂದು ಲೋಕೋಪಕಾರಿ ಮತ್ತು ಮಾನವೀಯ ಪ್ರಯತ್ನಗಳಿಗೆ ಗೌರವ ನೀಡಲಾಗುತ್ತದೆ.

* ಮೊದಲು ಬಾರಿ ಹಂಗೇರಿಯನ್ ನಾಗರಿಕ ಸಮಾಜವು ಹಂಗೇರಿಯ ಸರ್ಕಾರದ ಬೆಂಬಲದೊಂದಿಗೆ ಈ ಅಂತರರಾಷ್ಟ್ರೀಯ ದತ್ತಿ ದಿನವನ್ನು ಆಚರಣೆ ಮಾಡಿದೆ.

* ಪ್ರಸ್ತುತ ಮದರ್ ತೆರೇಸಾ ಅವರ ಮರಣೋತ್ಸವದ ದಿನವಾಗಿ ಈ ಅಂತರರಾಷ್ಟ್ರೀಯ ದತ್ತಿ ದಿನ ಅಂದರೆ ಸೆಪ್ಟೆಂಬರ್. 5 ನ್ನು ಆಚರಿಸಲು ಆಯ್ಕೆ ಮಾಡಲಾಗಿದೆ.

* ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2012 ರ ಡಿಸೆಂಬರ್. 17 ರಂದು ಸೆಪ್ಟೆಂಬರ್ 5 ನ್ನು ಅಂತರರಾಷ್ಟ್ರೀಯ ದತ್ತಿ ದಿನವನ್ನು ಅಂಗೀಕರಿಸಿ ಘೋಷಣೆ ಮಾಡಿದೆ.

## ವತನ್ ಪ್ರೇಮ್ ಯೋಜನೆಯನ್ನು ಆರಂಭಿಸಿದ ಗುಜರಾತ್




* ಪ್ರಸ್ತುತ ಗುಜರಾತ್ ರಾಜ್ಯವು ವತನ್ ಪ್ರೇಮ್ ಯೋಜನೆಯನ್ನು 2021 ರ ಆಗಸ್ಟ್. 7 ರಂದು ಆರಂಭಿಸಿದೆ.

* ಗುಜರಾತ್ ರಾಜ್ಯದ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಅಧ್ಯಕ್ಷತೆಯಲ್ಲಿ ಗಾಂಧಿನಗರದಲ್ಲಿ ಈ ವತನ್ ಪ್ರೇಮ್ ಯೋಜನೆಯ ಸಭೆಯನ್ನು ನಡೆಸಲಾಗಿತ್ತು.

* ಈ ವತನ್ ಪ್ರೇಮ್ ಯೋಜನೆಯಡಿ ಆಡಳಿತ ಮಂಡಳಿಯು ದಾನಿಗಳು ತಮ್ಮ ಹಣವನ್ನು ಅನಿವಾಸಿ ಗುಜರಾತಿಗಳು ಹಾಗೂ NRI

ಗಳು ಗ್ರಾಮ ಮಟ್ಟದ ಯೋಜನೆಯ ವೆಚ್ಚದ ಶೇ. 60 ರಷ್ಟು ಕೊಡುಗೆಯಾಗಿ ನೀಡ ಬಹುದಾಗಿದೆ ಇನ್ನ ಉಳಿದ ಶೇ. 40 ರಷ್ಟು ಮೊತ್ತವನ್ನು ಗುಜರಾತ್ ರಾಜ್ಯ ಸರ್ಕಾರ ಭರಿಸಲಿದೆ ಎಂದಿದ್ದಾರೆ.

* ಈ ವತನ್ ಪ್ರೇಮ್ ಯೋಜನೆಯು ಗುಜರಾತ್ ರಾಜ್ಯ ಸರ್ಕಾರದ ಮದರ್ ಇ ವತನ್ ಯೋಜನೆಯ ಮರು ಪ್ಯಾಕೇಜ್ ನ ಆವೃತ್ತಿಯಾಗಿದೆ.

* ಈ ವತನ್ ಪ್ರೇಮ್ ಯೋಜನೆ ಅಡಿಯಲ್ಲಿನ ಗ್ರಾಮ ಮಟ್ಟದ ಯೋಜನೆಗಳು: ಶಾಲೆಗಳು ಮತ್ತು ಗ್ರಂಥಾಲಯದಲ್ಲಿ ಸ್ಮಾರ್ಟ್ ತರಗತಿಗಳು, ಸಮುದಾಯ ಭವನ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಅಂಗನವಾಡಿಯಲ್ಲಿ ಸಿಸಿಟಿವಿ ಕಣ್ಗಾವಲು ವ್ಯವಸ್ಥೆ, ನೀರಿನ ಮರುಬಳಕೆ, ಒಳಚರಂಡಿ, ಕೊಳಚೆನೀರಿನ ಸಂಸ್ಕರಣೆ, ಬಸ್ ನಿಲ್ದಾಣ, ಸೌರಶಕ್ತಿ ಚಾಲಿತ ಬೀದಿ ದೀಪಗಳು, ಹೀಗೆ ಹಲವು ಯೋಜನೆಗಳನ್ನು ಒಳಗೊಂಡಿದೆ.

## ಯೋಶಿಹಿದೇ ಸುಗಾ ಜಪಾನ್ ಪ್ರಧಾನಿ ಹುದ್ದೆ ತ್ಯಜಿಸಲಿದ್ದಾರೆ



* ಜಪಾನ್‌ನ ಪ್ರಧಾನ ಮಂತ್ರಿ ಯೋಶಿಹಿಡೆ ಸುಗಾ ಅವರು ಇದೆ ಸೆಪ್ಟೆಂಬರ್‌ನಲ್ಲಿ ಜಪಾನ್‌ನ ಪ್ರಧಾನಿ ಹುದ್ದೆ ತ್ಯಜಿಸಲಿದ್ದಾರೆ, ಹಾಗೂ ಪಕ್ಷದ ನಾಯಕರಾಗಿ ಮರು ಚುನಾವಣೆಗೆ ಸ್ಪರ್ಧೆ ಮಾಡುವದಿಲ್ಲ ಎಂದು ತಿಳಿಸಿದ್ದಾರೆ.

* ಈ ಹಿಂದೆ ಜಪಾನ್‌ನ ಪ್ರಧಾನ ಶಿಂಜೋ ಅಬೆ ಅವರು ರಾಜೀನಾಮೆ ನೀಡಿದ ನಂತರ, ಯೋಶಿಹಿದೇ ಸುಗಾ ಅವರನ್ನು 2020 ರಲ್ಲಿ ಪ್ರಧಾನಿಯಾಗಿ ನೇಮಕ ಮಾಡಲಾಗಿತ್ತು.

* ಪ್ರಸ್ತುತ ಜಪಾನ್ ರಾಷ್ಟ್ರವು ಇಲ್ಲಿಯವರೆಗೂ ತುರ್ತು ಪರಿಸ್ಥಿತಿಯಲ್ಲಿದೆ ಹಾಗೂ ಕೋವಿಡ್ 19 ಅಲೆಯೊಂದಿಗೆ ಹೋರಾಡುತ್ತಿದೆ, ಇದೀಗ ದೇಶದಲ್ಲಿ 1.5 ದಶಲಕ್ಷಕ್ಕೂ ಅಧಿಕ ವೈರಸ್ ಪ್ರಕರಣಗಳು ಕಂಡು ಬಂದಿವೆ, ಇದಷ್ಟೇ ಅಲ್ಲದೇ ಸಾಂಕ್ರಾಮಿಕ ರೋಗ ಕೋವಿಡ್ 19 ನಡೆವೆಯೂ ಅಂದರೆ 2021 ರಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟವನ್ನು ನಡೆಸಿದ್ದರಿಂದ ಇಲ್ಲಿನ ಪರಿಸ್ಥಿತಿ ಇನ್ನಷ್ಟು ಹಾಳಾಗಿದೆ ಎಂದಿದ್ದಾರೆ.

* ಪ್ರಸ್ತುತ ಜಪಾನ್‌ನ ಆಡಳಿತದಲ್ಲಿರುವ ಪಕ್ಷವು ಅಧ್ಯಕ್ಷರನ್ನು ಆಯ್ಕೆ ಮಾಡಲು ಇದೇ 2021 ರ ಸೆಪ್ಟೆಂಬರ್. 29 ರಂದು ಚುನಾವಣೆಯನ್ನು ನಡೆಸಲಿದೆ, ಹಾಗೂ ಎಲ್ಡಿಪಿ ಸಂಸತ್ತಿನ ಬಹುಮತವನ್ನು ಪಡೆದವರಿಗೆ ಜಪಾನ್‌ನ ನಾಯಕರಾಗುವ ನಿರೀಕ್ಷೆಯಿದೆ.

* ಯೋಶಿಹಿದೆ ಸುಗಾ ಅವರು ರೈತ ಕುಟುಂಬದಲ್ಲಿ ಜನಿಸಿದ್ದಾರೆ, ಇವರು ಪ್ರಥಮ ಬಾರಿಗೆ 1987 ರಲ್ಲಿ ಯೊಕೊಹಾಮಾ ಸಿಟಿ ಕೌನ್ಸಿಲ್‌ಗೆ ಆಯ್ಕೆಯಾಗಿದ್ದರು, ಮತ್ತೇ 2005 ರಲ್ಲಿ ಇವರು ಆಂತರಿಕ ವ್ಯವಹಾರಗಳು ಮತ್ತು ಸಂವಹನದ ಹಿರಿಯ ಉಪಾಧ್ಯಕ್ಷರಾಗಿ ನೇಮಕಗೊಂಡರು, ನಂತರ ಇವರನ್ನು 2020 ರಲ್ಲಿ ಜಪಾನ್‌ನ ಪ್ರಧಾನಿಯಾಗಿ ನೇಮಕ ಮಾಡಲಾಯಿತು.

# 08-09-2021

## ಚೀನಾದಿಂದ ಭಾರತದ ಅಂತಾರಾಷ್ಟ್ರೀಯ ಗಡಿ ಪ್ರದೇಶಕ್ಕೆ ಹೊಸ ಕಮಾಂಡರ್ ನೇಮಕ



* ಪ್ರಸ್ತುತ ಚೀನಾ ದೇಶವು ಭಾರತದ ಜೊತೆಗೆ ಹಂಚಿಕೆಯಾಗಿರುವ ಅಂತಾರಾಷ್ಟ್ರೀಯ ಗಡಿ ಪ್ರದೇಶದಲ್ಲಿನ ಸೇನೆಯ ಉಸ್ತುವಾರಿಯನ್ನು ವಹಿಸಿಕೊಳ್ಳಲು ಹೊಸ ಕಮಾಂಡರ್‌ನ್ನು ನೇಮಕ ಮಾಡಿದೆ.

* ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಭಾರತ ದೇಶದ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ ಪೀಪಲ್ಸ್ ಲಿಬರೇಷನ್ ಆರ್ಮಿಯ ವೆಸ್ಟರ್ನ್ ಥಿಯೇಟರ್ ಕಮಾಂಡ್ ನ ಮುಖ್ಯಸ್ಥರನ್ನಾಗಿ ಜ.ವಾಂಗ್ ಹೈಜಿಯಾಂಗ್ ಎಂಬವರನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಿದ್ದಾರೆ.

* ಕಮ್ಯೂನಿಸ್ಟ್ ಪಾರ್ಟಿ ಆಫ್ ಚೀನಾದ ಕೇಂದ್ರ ಸೇನಾ ಆಯೋಗವು ಜ. ವಾಂಗ್ ಹಾಗೂ ಇನ್ನು ನಾಲ್ಕು ಸೇನಾಧಿಕಾರಿಗಳಿಗೆ ಬಡ್ತಿ ನೀಡುವದರ ಜೊತೆಗೆ ಈ ಹೊಸ ಕಮಾಂಡ್ ನ ಮುಖ್ಯಸ್ಥ ಹುದ್ದೆಯನ್ನು ಜ. ವಾಂಗ್ ಅವರಿಗೆ ನೀಡಲು ನಿರ್ಧರಿಸಿದೆ.

## ಫಿಲಿಪ್ಪಿನ್ಸ್ ಗೆ ಅಪ್ಪಳಿಸಿದ ಪ್ರಬಲ ಕ್ಯಾನ್ಸನ್ ಚಂಡಮಾರುತ



* ಪ್ರಸ್ತುತ ಪ್ರಬಲ ಕ್ಯಾನ್ಸನ್ ಚಂಡಮಾರುತವು ಪೂರ್ವ ಫಿಲಿಪ್ಪಿನ್ಸ್ ನ್ನು ಅಪ್ಪಳಿಸಿದೆ, ಈ ಚಂಡಮಾರುತದಿಂದಾಗಿ ತೀವ್ರಗಾಳಿ ಬಿಸಿ ಇಲ್ಲಿನ ಕೆಲ ಪ್ರಾಂತ್ಯಗಳಲ್ಲಿ ವಿದ್ಯುತ್ ಅಭಾವ ಉಂಟಾಗಿದೆ.

* ಈ ಕ್ಯಾನ್ಸನ್ ಚಂಡಮಾರುತವು ಗಂಟೆಗೆ ಸರಿ ಸುಮಾರು 120 ರಿಂದ 150 ಕಿ.ಮೀ ವೇಗದಲ್ಲಿ ಬೀಸುತ್ತಿದೆ, ಇದು ಪೂರ್ವ ಸಮಾರ್ ಪ್ರಾಂತ್ಯದ ಕರಾವಳಿ ಪಟ್ಟಣ ಪ್ರದೇಶವಾಗಿರುವ ಹೆರ್ನಾನಿಗೆ ಬಂದು ಅಪ್ಪಳಿಸಿದೆ.

* ಫಿಲಿಪ್ಪಿನ್ಸ್ ದೇಶದಲ್ಲಿ ಮುಂಗಾರು ಮಳೆಯನ್ನು ಬಿಟ್ಟು ಪ್ರತಿ ವರ್ಷ ಸರಿ ಸುಮಾರು 20 ಚಂಡಮಾರುತಗಳು ಅಪ್ಪಳಿಸುತ್ತವೆ.

* ಈ ದೇಶಕ್ಕೆ ಪೆಸಿಫಿಕ್ ರಿಂಗ್ ಆಫ್ ಫೈರ್ ಎಂದು ಕರೆಯಲಾಗುತ್ತದೆ, ಕಾರಣ ಈ ದೇಶದಲ್ಲಿ ಭೂಕಂಪ ಮತ್ತು ಜ್ವಾಲಾಮುಖಿ ಸ್ಫೋಟಗಳು ಪದೇ ಪದೇ ಸಂಭವಿಸುತ್ತಿರುತ್ತವೆ.

## ರಾಜ್ಯದ ರಸ್ತೆಗಳಲ್ಲಿ ಪ್ರತಿಮೆಗಳ ಸ್ಥಾಪನೆ ಮಾಡಲು ಅನುಮತಿ ಇಲ್ಲ, ರಾಜ್ಯ ಹೈಕೋರ್ಟ್‌ನ ಆದೇಶ




* ಪ್ರಸ್ತುತ ಕರ್ನಾಟಕ ರಾಜ್ಯ ಹೈಕೋರ್ಟ್ ಇನ್ನು ಮುಂದೆ ರಾಜ್ಯಾದ್ಯಂತ ಇರುವ ರಸ್ತೆಗಳಲ್ಲಿ ಪ್ರತಿಮೆಗಳ ಸ್ಥಾಪನೆ ಮಾಡಲು ನಿರ್ಬಂಧಕ್ಕೆ ಆದೇಶವನ್ನು ನೀಡಿದೆ, ಅಲ್ಲದೇ ಇದು ಸುಪ್ರೀಂಕೋರ್ಟ್ ಆದೇಶ ಆಧರಿಸಿ ಹೈಕೋರ್ಟ್‌ನ ಸೂಚನೆಯಾಗಿದೆ ಎಂದು ತಿಳಿಸಿದೆ.
* ಇತ್ತೀಚಿಗೆ ರಾಜ್ಯದ ಸಾಂಸ್ಕೃತಿಕ ನಗರ ಮೈಸೂರಿನ ಗನ್ ಹೌಸ್ ಸರ್ಕಲ್ ನಲ್ಲಿ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಪ್ರತಿಮೆ ಸ್ಥಾಪನೆಯ ಕುರಿತು ಕ್ಷತ್ರಿಯ ಮಹಾಸಭಾ ಪ್ರಶ್ನಿಸಿ ಪಿಐಎಲ್ ಸಲ್ಲಿಕೆ ಮಾಡಿತ್ತು, ಈ ವಿಷಯದ ಕುರಿತು ವಿಚಾರಣೆ ನಡೆಸಿರುವ ಹೈಕೋರ್ಟ್ ಇದೀಗ ರಾಜ್ಯಾದ್ಯಂತ ರಸ್ತೆಗಳಲ್ಲಿ ಪ್ರತಿಮೆಗಳ ಸ್ಥಾಪನೆಯ ನಿರ್ಬಂಧಕ್ಕೆ ಆದೇಶವನ್ನು ಹೊರಡಿಸಿದೆ.
* ಸಾಂಸ್ಕೃತಿಕ ನಗರ ಮೈಸೂರಿನ ಗನ್ ಹೌಸ್ ಸರ್ಕಲ್ ರಸ್ತೆಯ ಮಧ್ಯದಲ್ಲಿ ಪ್ರತಿಮೆ ಸ್ಥಾಪನೆಗೆ ಸರ್ಕಾರ, ಮೈಸೂರು ಪಾಲಿಕೆ ಒಪ್ಪಿಗೆಯನ್ನು ನೀಡಿವೆ, ಆದರೆ ಇದಕ್ಕೆ ಸುಪ್ರೀಂಕೋರ್ಟ್ ನಿರ್ಬಂಧ ಹೇರಿದೆ, ಅಲ್ಲದೇ ಯಾವುದೇ ಅನುಮತಿ ನೀಡದಂತೆ ಸರ್ಕಾರಗಳಿಗೆ ಆದೇಶಿಸಿದೆ.

## ಪ್ರಧಾನಿ ಮೋದಿಯಿಂದ 'ಶಿಕ್ಷಕ ಪರ್ವ' ಕಾರ್ಯಕ್ರಮಗಳಿಗೆ ಚಾಲನೆ



* ಪ್ರಧಾನಿ ನರೇಂದ್ರ ಮೋದಿ ಅವರು ಶಿಕ್ಷಣ ಕ್ಷೇತ್ರದ 'ಶಿಕ್ಷಕ ಪರ್ವ' ಕಾರ್ಯಕ್ರಮವನ್ನು ವರ್ಚುಲ್ ಸಭೆಯ ಮೂಲಕ ಚಾಲನೆ ನೀಡಿ ಉದ್ಘಾಟಿಸಿದರು.
* ಈ ಶಿಕ್ಷಕ ಪರ್ವ ಕಾರ್ಯಕ್ರಮಗಳು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಜಾಗತಿಕವಾಗಿ ಸ್ಪರ್ಧಾತ್ಮಕಗೊಳಿಸಲಿದೆ, ಹಾಗೂ ಯುವಕರ ಭವಿಷ್ಯಕ್ಕೆ ಉತ್ತೇಜನ ನೀಡಿಲಿದೆ ಭವಿಷ್ಯವನ್ನು ರೂಪಿಸಲಿದೆ ಎಂದಿದ್ದಾರೆ.
* ಭಾರತೀಯ ಸಂಜ್ಞಾ ಭಾಷೆ ನಿಘಂಟು ಟಾಕಿಂಗ್ ಬುಕ್, ನಿಪುಣ್ ಭಾರತ್ ಹಾಗೂ ವಿದ್ಯಾಂಜಲಿ ಜಾಲತಾಣಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದರು, ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಒಲಿಂಪಿಕ್ಸ್ ಕ್ರೀಡಾಪಟುಗಳು ಕನಿಷ್ಠ ಪಕ್ಷ 75 ಶಾಲೆಗಳಿಗೆ ಭೇಟಿ ನೀಡುವಂತೆ ಮನವಿ ಮಾಡಿಕೊಂಡಿದ್ದಾರೆ.

## ಮ್ಯಾನ್ಮಾರ್ ನ ಸೇನಾ ಸರ್ಕಾರದ ವಿರುದ್ಧ ರಾಷ್ಟ್ರವ್ಯಾಪಿ ದಂಗೆಗೆ ಕರೆ



* ಪ್ರಸ್ತುತ ಮ್ಯಾನ್ಮಾರ್‌ನ ಸೇನಾ ಸರ್ಕಾರದ ವಿರುದ್ಧ ರಾಷ್ಟ್ರವ್ಯಾಪಿ ದಂಗೆಗೆ ಸಿದ್ಧವಾಗುವಂತೆ 'ನ್ಯಾಷನಲ್ ಯೂನಿಟಿ ಗವರ್ನ್‌ಮೆಂಟ್' ಕರೆ ನೀಡಿದೆ.
* ನ್ಯಾಷನಲ್ ಯೂನಿಟಿ ಗವರ್ನ್‌ಮೆಂಟ್ ಈ ಸೇನಾ ಸರ್ಕಾರದ ವಿರುದ್ಧ ದೇಶದಲ್ಲಿನ ಪ್ರತಿ ಗ್ರಾಮ, ಪಟ್ಟಣ, ನಗರದಲ್ಲಿ ಒಂದೇ ಸಮಯದಲ್ಲಿ ದಂಗೆ ಏಳಬೇಕು ಎಂದು ಎನ್‌ಯುಜಿ ಹಂಗಾಮಿ ಅಧ್ಯಕ್ಷ ದುವಾ ಲಶಿ ಲಾ ಅವರು ಕರೆ ನೀಡಿದ್ದಾರೆ, ಅಲ್ಲದೇ ಇದು ಒಂದು ಜನರ ಕ್ರಾಂತಿಯಾಗಿದೆ, ಇದಕ್ಕೆ ಎಲ್ಲಾ ಸೈನಿಕರು ಹಾಗೂ ಪೊಲೀಸರು 'ಪೀಪಲ್ಸ್ ಡಿಫೆನ್ಸ್ ಫೋರ್ಸ್‌ನೊಂದಿಗೆ ಕೈಜೋಡಿಸಬೇಕು ಎಂದು ದುವಾ ಲಶಿ ಅವರು ತಿಳಿಸಿದ್ದಾರೆ, ಹಾಗೂ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ.
* ಪ್ರಸ್ತುತ ದೇಶದಲ್ಲಿನ ಸನ್ನಿವೇಶಗಳನ್ನು ಪರಿಗಣಿಸಿ ಈ ಕ್ರಮವನ್ನು ಕೈಗೊಳ್ಳಲಾಗುತ್ತಿದೆ' ಎಂದು ಛಾಯಾ ಸರ್ಕಾರದ ಪ್ರಧಾನಿ ಮಹನ್ ವಿನ್ ಖೈಂಗ್ ಥನ್ ಅವರು ಹೇಳಿಕೆ ನೀಡಿದ್ದಾರೆ.
* ಮ್ಯಾನ್ಮಾರ್ ಸೇನೆಯು ಫೆಬ್ರುವರಿ 1ರಂದು ಆಂಗ್ ಸಾನ್ ಸೂಕಿ ನೇತೃತ್ವದ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ ಅಧಿಕಾರವನ್ನು ತನ್ನ ವಶಕ್ಕೆ ಪಡೆದುಕೊಂಡಿದೆ.

## ಜಸ್‌ಪ್ರೀತ್ ಬೂಮ್ರಾ ಟೆಸ್ಟ್ ಇತಿಹಾಸದಲ್ಲಿ 100 ವಿಕೆಟ್ ಸಾಧನೆ




* ಜಸ್‌ಪ್ರೀತ್ ಬೂಮ್ರಾ ಅವರು ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್ ನಲ್ಲಿ 100 ವಿಕೆಟ್‌ಗಳನ್ನು ಪಡೆದು ಸಾಧನೆ ಮಾಡಿದ್ದಾರೆ, ಇವರು ಭಾರತ ಕ್ರಿಕೆಟ್ ತಂಡದ ಬಲಗೈ ವೇಗಿ ಬೌಲರ್ ಆಗಿದ್ದಾರೆ.
* ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 100 ವಿಕೆಟ್ ಪಡೆದ ಭಾರತೀಯ ವೇಗದ ಬೌಲರ್ ಇವರಾಗಿದ್ದಾರೆ.
* ಜಸ್‌ಪ್ರೀತ್ ಬೂಮ್ರಾ ಅವರು ಕೇವಲ 24 ನೇ ಟೆಸ್ಟ್ ಪಂದ್ಯಗಳಲ್ಲಿ 100 ವಿಕೆಟ್‌ಗಳ ಸಾಧನೆಯನ್ನು ಮಾಡಿದ್ದಾರೆ.
* ಈ ಹಿಂದೆ ಕಪಿಲ್ ದೇವ್ ಅವರು 25 ಟೆಸ್ಟ್ ಪಂದ್ಯಗಳಲ್ಲಿ 100 ವಿಕೆಟ್‌ಗಳ ಸಾಧನೆಯನ್ನು ಮಾಡಿದ್ದರು, ಇದೀಗ ಜಸ್‌ಪ್ರೀತ್ ಬೂಮ್ರಾ ಅವರು ಈ ಸಾಧನೆಯನ್ನು ಮುರಿದಿದ್ದಾರೆ.

## 'ಐಸಿಸಿ' ಗುಲಾಮ್ ಶಬ್ಬೀರ್ ಗೆ 4 ವರ್ಷಗಳ ಕ್ರಿಕೆಟ್ ಅವಧಿಗೆ ನಿರ್ಬಂಧ ಹೇರಿದೆ



* ಪ್ರಸ್ತುತ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ICC)ಯು ಯುನೈಟೆಡ್ ಅರಬ್ ಎಮಿರೇಟ್ಸ್ (UAE)ನ ವಿಕೆಟ್ ಕೀಪರ್ ಹಾಗೂ ಬ್ಯಾಟ್ಸ ಮನ್ ಆಗಿರುವ ಗುಲಾಮ್ ಶಬ್ಬೀರ್ ಅವರಿಗೆ 4 ವರ್ಷಗಳ ಕ್ರಿಕೆಟ್ ಅವಧಿಗೆ ನಿರ್ಬಂಧ ಹೇರಿದೆ.
* UAE ನ ಗುಲಾಮ್ ಶಬ್ಬೀರ್ ಅವರು ಭ್ರಷ್ಟಾಚಾರ ವಿರೋಧಿ ಶಿಕ್ಷಣ ಅಧಿವೇಶನಗಳಲ್ಲಿ ಪಾಲ್ಗೊಂಡಿರುವ ಆರೋಪ ಸಾಭೀತಾಗಿರುವದರಿಂದ ಇವರನ್ನು 4 ವರ್ಷಗಳ ಕಾಲ ಎಲ್ಲಾ ಮಾದರಿಯ ಕ್ರಿಕೆಟ್ ನಿಂದ ನಿಷೇಧಿಸಲಾಗಿದೆ ಎಂದು 'ಐಸಿಸಿ' ತಿಳಿಸಿದೆ.
* ಗುಲಾಮ್ ಶಬ್ಬೀರ್ ಅವರು ಕನಿಷ್ಠ ಮೂರು ಭ್ರಷ್ಟಾಚಾರ ವಿರೋಧಿ ಶಿಕ್ಷಣ ಅಧಿವೇಶನಗಳಲ್ಲಿ ಪಾಲ್ಗೊಂಡಿದ್ದರು ಎಂದು ತಿಳಿದು ಬಂದಿದೆ.
* ಈ ಮೊದಲು ಗುಲಾಮ್ ಶಬ್ಬೀರ್ ಅವರು 'UAE' ಪರವಾಗಿ 40 ಪಂದ್ಯಗಳಲ್ಲಿ ಆಟವಾಡಿದ್ದಾರೆ.

## ಚೀನಾಕ್ಕೆ ಗೋಮಾಂಸ ರಫ್ತು ನಿಷೇಧಿಸಿದ ಬ್ರೆಝಿಲ್



* ಪ್ರಸ್ತುತ ಬ್ರೆಝಿಲ್ ದೇಶದಲ್ಲಿನ ಹಸುಗಳಿಗೆ ಹುಚ್ಚು ರೋಗದ ದೃಢಪಟ್ಟಿದೆ, ಈ ಕಾರಣದಿಂದಾಗಿ ತಕ್ಷಣದಿಂದಲೇ ಚೀನಾ ದೇಶಕ್ಕೆ ಗೋಮಾಂಸ ರಫ್ತು ಮಾಡುವುದನ್ನು ನಿಷೇದ ಮಾಡಲಾಗಿದೆ ಎಂದು ಬ್ರೆಝಿಲ್'ನ ಕೃಷಿ ಇಲಾಖೆ ಮಾಹಿತಿ ನೀಡಿದೆ.
* ಪ್ರಸ್ತುತ ಬ್ರೆಝಿಲ್ ನ ಮಿನಾಸ್ ಗೆರಾಯ್ಸ ಹಾಗೂ ಮಟೊ ಗ್ರೋಸೊ ರಾಜ್ಯಗಳಲ್ಲಿನ ಜನರು ಜಾನುವಾರುಗಳ ಆರೋಗ್ಯ ತಪಾಸಣೆ ಮಾಡುವ ಸಂದರ್ಭದಲ್ಲಿ ಬೊವೈನ್ ಸ್ಪಾಂಗಿಫಾರ್ಮ್ ಎನ್ಸೆಫಲೋಪಥಿ(ಬಿಎಸ್ಇ) ಎಂಬ ರೋಗದ ಪ್ರಕರಣ ದೃಢಪಟ್ಟಿದೆ ಎಂದು ತಿಳಿದು ಬಂದಿದೆ.
* ಈ ಹಿಂದೆ 1980 ರ ದಶಕದಲ್ಲಿ ಬ್ರಿಟನ್ನಲ್ಲಿ ಮೊದಲ ಬಾರಿಗೆ ಈ ಹುಚ್ಚು ಹಸು ರೋಗ ಪತ್ತೆಯಾಗಿತ್ತು, ನಂತರ ಯುರೋಪ್ ನ ಮೂಲಕ ವಿಶ್ವದೆಲ್ಲೆಡೆ ಹರಡಿತ್ತು.
* ಈ ಹುಚ್ಚು ರೋಗವು ಮೃತಪಟ್ಟ ಜಾನುವಾರುಗಳ ಮಾಂಸವನ್ನು ಬಳಸಿಕೊಂಡು ತಯಾರಿಸಿದ ಪಶು ಆಹಾರವನ್ನು ಸೇವನೆ ಮಾಡುವ ಇತರ ಹಸುಗಳಿಗೆ ಈ ರೋಗ ಹರಡುತ್ತದೆ.
* ಈ ಸೋಂಕು ತಗುಲಿರುವ ಗೋಮಾಂಸ ಸೇವನೆಯಿಂದ ಮನುಷ್ಯರು ಮೃತರಾಗುತ್ತಾರೆ.
* ಪ್ರಸ್ತುತ ವಿಶ್ವದಲ್ಲಿ ಅತ್ಯಧಿಕ ಗೋಮಾಂಸ ರಫ್ತು ಮಾಡುವ ದೇಶ ಬ್ರೆಝಿಲ್, ಚೀನಾ ದೇಶವು ಬ್ರೆಝಿಲ್ ಗೋಮಾಂಸ ಬೇಡಿಕೆಯ ಬೃಹತ್ ಗ್ರಾಹಕ ದೇಶವಾಗಿದೆ.
* ಪ್ರಸ್ತುತ ಬ್ರೆಝಿಲ್ ನಲ್ಲಿನ 50% ಕ್ಕೂ ಹೆಚ್ಚು ಗೋಮಾಂಸ ಚೀನಾ ಮತ್ತು ಹಾಂಕಾಂಗ್ ರಾಷ್ಟ್ರಗಳಿಗೆ ರಫ್ತಾಗುತ್ತದೆ.

## ಚಂದ್ರನನ್ನು 9 ಸಾವಿರಕ್ಕೂ ಹೆಚ್ಚು ಬಾರಿ ಸುತ್ತಿದ ಆರ್ಬಿಟರ್



* ಈ ಹಿಂದೆ ISRO 2019 ರಲ್ಲಿ 'ಚಂದ್ರಯಾನ 2' ಯೋಜನೆಯ ಆರ್ಬಿಟರ್ ನ್ನು ಬಾಹ್ಯಾಕಾಶಕ್ಕೆ ಕಳುಸಿತ್ತು, ಇದೀಗ ಆ ಆರ್ಬಿಟರ್ ಇಲ್ಲಿಯತನಕ ಸುಮಾರು 9,000 ಕ್ಕೂ ಹೆಚ್ಚು ಬಾರಿ ಚಂದ್ರನನ್ನು ಸುತ್ತಿದೆ, ಎಂದು ಇಸ್ರೋ ಅಧ್ಯಕ್ಷ ಕೆ. ಶಿವನ್ ಅವರು ಮಾಹಿತಿಯನ್ನು ನೀಡಿದ್ದಾರೆ.
* ಇಸ್ರೋ ಬಾಹ್ಯಾಕಾಶಕ್ಕೆ ಕಳುಸಿರುವ ಈ ಚಂದ್ರಯಾನ 2 ಯೋಜನೆಯು ಎರಡು ವರ್ಷವನ್ನು ಪೂರೈಸಿದೆ, ಈ ಕಾರಣದಿಂದಾಗಿ ಇಸ್ರೋ ಎರಡು ದಿನಗಳ ಕಾರ್ಯಾಗಾರವನ್ನು ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಆಯೋಜನೆ ಮಾಡಲಾಗಿತ್ತು ಆ ಸಂದರ್ಭದಲ್ಲಿ ಅಧ್ಯಕ್ಷ ಕೆ. ಶಿವನ್ ಅವರು ಮಾಹಿತಿ ನೀಡಿದ್ದಾರೆ.
* ಈ ಆರ್ಬಿಟರ್‌ನಲ್ಲಿನ 8 ಪರಿಕರಗಳು ಚಂದ್ರನ ಮೇಲ್ಮೈ ನಿಂದ ಅಂದಾಜು 100 ಕಿ.ಮೀ. ದೂರದಲ್ಲಿ ಚಂದ್ರನ ಮೇಲ್ಮೈ ಯನ್ನು ಸತತವಾಗಿ ವೀಕ್ಷಣೆಯನ್ನು ಮಾಡುತ್ತಿವೆ ಎಂದು ತಿಳಿಸಿದ್ದಾರೆ.

# 09-09-2021

## ಪ್ರಾಣ (PRANA) ಪೋರ್ಟಲ್ ನ್ನು ಆರಂಭಿಸಿದ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್



* ಪ್ರಸ್ತುತ ಕೇಂದ್ರ ಪರಿಸರ ಸಚಿವರಾದ ಭೂಪೇಂದ್ರ ಯಾದವ್ ಅವರು ಪ್ರಾಣ(PRANA) ಎಂಬ ಪೋರ್ಟಲ್ ನ್ನು ಆರಂಭಿಸಿದ್ದಾರೆ.
* ಪ್ರಸ್ತುತ ಎಲ್ಲ ಜನರಿಗೆ ಶುದ್ಧ ಗಾಳಿ ಹಾಗೂ ನೀಲಿ ಆಕಾಶವನ್ನು ಖಚಿತಪಡಿಸಿಕೊಳ್ಳಲು ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮದ ಪ್ರಗತಿಯನ್ನು ಪತ್ತೆ ಹಚ್ಚಲು ಈ ಪ್ರಾಣ ಜಾಲತಾಣವನ್ನು ಬಳಕೆ ಮಾಡಲಾಗುತ್ತದೆ.
* ಈ ಜಾಲತಾಣವನ್ನು ಅಂತರರಾಷ್ಟ್ರೀಯ ಶುದ್ಧ ಗಾಳಿಯ ದಿನದಂದು ಆರಂಭಿಸಿದ್ದಾರೆ.
* ಈ ಹಿಂದೆ 2019 ರಲ್ಲಿ ಭಾರತದ 86 ನಗರಗಳು ಉತ್ತಮ ವಾಯು ಗುಣಮಟ್ಟವನ್ನು ತೋರಿಸಿದ್ದವು, ಹಾಗೇ 2020 ರಲ್ಲಿ 104 ನಗರಗಳು ಉತ್ತಮ ವಾಯು ಗುಣಮಟ್ಟವನ್ನು ತೋರಿಸಿವೆ.
* ಭಾರತ ದೇಶವು ಸುಮಾರು 132 ಎನ್‌ಎಸಿ/ಮಿಲಿಯನ್ ಪ್ಲಸ್ ನಗರಗಳಲ್ಲಿ ಗಾಳಿಯ ಗುಣಮಟ್ಟವನ್ನು ಸುಧಾರಿಸಲು ನಗರ ನಿರ್ದಿಷ್ಟ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿಕೊಂಡಿದೆ.

* ಈ ಪ್ರಾಣ ಪೋರ್ಟಲ್ ನಗರ ನಿರ್ದಿಷ್ಟ ಕ್ರಿಯಾ ಯೋಜನೆಯ ಭೌತಿಕ ಹಾಗೂ ಆರ್ಥಿಕ ಸ್ಥಿತಿ ಗತಿಯನ್ನು ತಿಳಿಸಲು ಸಹಾಯ ಮಾಡುತ್ತದೆ, ಅಲ್ಲದೇ ಸಾರ್ವಜನಿಕರಿಗೆ ಗಾಳಿಯ ಗುಣಮಟ್ಟದ ಮಾಹಿತಿಯನ್ನು ನೀಡುತ್ತದೆ.

## 'ಅಮೆಜಾನ್ ಪೇ'ನಲ್ಲಿ ಮ್ಯೂಚುವಲ್ ಫಂಡ್ ಮತ್ತು ನಿಶ್ಚಿತ ಠೇವಣಿ ಸೇವೆ ಆರಂಭ

amazon pay

* ಅಮೆಜಾನ್ ಪೇ ಇಂಡಿಯಾ ತನ್ನ ಗ್ರಾಹಕರಿಗೆ ಮ್ಯೂಚುವಲ್ ಫಂಡ್ ಮತ್ತು ನಿಶ್ಚಿತ ಠೇವಣಿಗಳಲ್ಲಿ (FD) ಹೂಡಿಕೆ ಮಾಡುವ ಸೇವೆ ಒದಗಿಸಲು ಸಿದ್ಧವಾಗಿದೆ.
* ಇತ್ತೀಚಿಗೆ 'ಗೂಗಲ್ ಪೇ' ಈ ಬಗೆಯ ಸೌಲಭ್ಯಕ್ಕೆ ಚಾಲನೆಯನ್ನು ನೀಡಿದೆ, ಇದೀಗ ಅಮೆಜಾನ್ ಪೇ ಕೂಡ ಈ ಸೌಲಭ್ಯಗಳನ್ನೂ ನಿರ್ಧಾರವನ್ನು ಕೈಗೊಂಡಿದೆ.
* ಪ್ರಸ್ತುತ 'ಅಮೆಜಾನ್ ಪೇ' ಇಂಡಿಯಾ ಹೂಡಿಕೆ ಪ್ಲಾಟ್ ಫಾರ್ಮ್ ಕುವೇರಾ (Kuvera.in) ಜೊತೆ ಒಪ್ಪಂದವನ್ನು ಮಾಡಿಕೊಳ್ಳಲಿದೆ ಎಂದು ಘೋಷಣೆ ಮಾಡಿದೆ, ಅಲ್ಲದೇ ಇದೀಗ ನಮ್ಮ ಗ್ರಾಹಕರು ಈ ಮ್ಯೂಚುವಲ್ ಫಂಡ್ ಮತ್ತು ಎಫ್.ಡಿ.ಗಳಲ್ಲಿ ಹೂಡಿಕೆ ಮಾಡಬಹುದು ಎಂದು ತಿಳಿಸಿದೆ.
* ಪ್ರಸ್ತುತ 'ಗೂಗಲ್ ಪೇ' ಸಂಸ್ಥೆಯು ಠೇವಣಿ ಆಯ್ಕೆಯನ್ನು ಒದಗಿಸಲು ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ ಎಂದು ತಿಳಿಸಿದೆ, ಆದರೆ ಅಮೆಜಾನ್ ಪೇ ಈ ಯಾವುದೇ ಮಾಹಿತಿ ನೀಡಿಲ್ಲ.

## ಯುದ್ಧವಿಮಾನ ಬರ್ಮಾರ್ ಹೆದ್ದಾರಿಯಲ್ಲಿ ತುರ್ತು ಭೂಸ್ಪರ್ಶ ನೆಲೆಯ ಉದ್ಘಾಟನೆ



* ಪ್ರಸ್ತುತ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ನಿತಿನ್ ಗಡ್ಕರಿ ಅವರು ರಾಜಸ್ಥಾನದ ಬರ್ಮಾರ್‌ನ ಗಾಂಧವ್ ಭಕಾಸರ್ ವಿಭಾಗದ ರಾಷ್ಟ್ರೀಯ ಹೆದ್ದಾರಿ 925 ಎ ಯಲ್ಲಿ ನಿರ್ಮಿಸಲಾಗಿರುವ ತುರ್ತು ವಿಮಾನ ಭೂಸ್ಪರ್ಶ ನೆಲೆಯನ್ನು ಉದ್ಘಾಟಣೆ ಮಾಡಲಿದ್ದಾರೆ.
* ಭಾರತೀಯ ವಾಯುಪಡೆಗೆ ತುರ್ತು ಭೂಸ್ಪರ್ಶದ ಸೌಲಭ್ಯಕ್ಕಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (NHAI) 3 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಿದೆ.
* ಪ್ರಸ್ತುತ ಭಾರತಮಾಲಾ ಪರಿಯೋಜನೆಯ ಅಡಿಯಲ್ಲಿ ಸುಮಾರು 765.52 ಕೋಟಿ ರೂ. ವೆಚ್ಚದಲ್ಲಿ ಒಟ್ಟು 196.97 ಕಿ.ಮೀ. ಉದ್ದನೇಯ ದ್ವಿಪಥದ ರಸ್ತೆಯನ್ನು ಗಗರಿಯಾ ಭಕಾಸರ್ ಹಾಗೂ ಸತ್ತ ಗಾಂಧವ್ ವಿಭಾಗದ ನಿರ್ಮಾಣ ಮಾಡಲಾಗಿದೆ, ಇದೇ ರಸ್ತೆಯಲ್ಲಿ ತುರ್ತು ವಿಮಾನ ಭೂಸ್ಪರ್ಶ ಸೌಲಭ್ಯವನ್ನು ಹೊಂದಿದೆ.


* ದೇಶದ ಪಶ್ಚಿಮ ಭಾಗದ ಅಂತರರಾಷ್ಟ್ರೀಯ ಗಡಿ ಪ್ರದೇಶಗಳಲ್ಲಿ ವಾಯುಪಡೆ ಸೇನೆಗೆ ಅಗತ್ಯವಿರುವ ಕುಂದನಪುರ, ಸಿಂಘಾನಿಯಾ ಮತ್ತು ಭಕಾಸರ್ ಗ್ರಾಮಗಳಲ್ಲಿ 3 ಹೆಲಿಪ್ಯಾಡ್‌ಗಳನ್ನು ನಿರ್ಮಾಣ ಮಾಡಲಾಗಿದೆ, ಇವುಗಳಿಂದ ಭಾರತೀಯ ಸೇನೆ ಬಲ ಬಂದಂತಾಗಿದೆ.

## ಉತ್ತರಾಖಂಡ ರಾಜ್ಯಪಾಲೆ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೇಬಿ ರಾಣಿ ಮೌರ್ಯ



* ಪ್ರಸ್ತುತ ಬೇಬಿ ರಾಣಿ ಮೌರ್ಯ ಅವರು ಉತ್ತರಾಖಂಡ ರಾಜ್ಯದ ರಾಜ್ಯಪಾಲೆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ, ಆದರೆ ಇವರ ಅಧಿಕಾರ ಅವಧಿ ಪೂರ್ಣಗೊಳ್ಳಲು ಇನ್ನು ಎರಡು ವರ್ಷ ಬಾಕಿ ಇದೇ ಎಂದು ತಿಳಿದು ಬಂದಿದೆ.
* ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ಬೇಬಿ ರಾಣಿ ಮೌರ್ಯ ಅವರು ರಾಜೀನಾಮೆ ಪತ್ರವನ್ನು ನೀಡಿದ್ದಾರೆ.
* ಬೇಬಿ ರಾಣಿ ಮೌರ್ಯ ಅವರು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ರಾಜಿನಾಮೆಯನ್ನು ನೀಡಿದ್ದಾರೆ ಎಂದು ತಿಳಿದು ಬಂದಿದೆ.
* 2018, ಆಗಸ್ಟ್ 6 ರಂದು ಬೇಬಿ ರಾಣಿ ಮೌರ್ಯ ಅವರು ಉತ್ತರಾಖಂಡ ರಾಜ್ಯದ ರಾಜ್ಯಪಾಲೆಯಾಗಿ ಅಧಿಕಾರ ಸ್ವೀಕಾರ ಮಾಡಿದ್ದರು.

## ಅಫ್ಘಾನಿಸ್ತಾನದಲ್ಲಿ 'ಮಧ್ಯಂತರ ಸರ್ಕಾರ' ಘೋಷಣೆ ಮಾಡಿದ ತಾಲಿಬಾನ್



* ಇತ್ತೀಚಿಗೆ ತಾಲಿಬಾನ್ ಅಫ್ಘಾನಿಸ್ತಾನ ದೇಶವನ್ನು ತಮ್ಮ ವಶಕ್ಕೆ ತಗೆದುಕೊಂಡಿದೆ, ಇದೀಗ ತಾಲಿಬಾನಿಗಳು ಅಫ್ಘಾನಿಸ್ತಾನದಲ್ಲಿ ತಮ್ಮದೇ ಆದ ಹೊಸ ಸರ್ಕಾರವನ್ನು ರಚಿಸಿ ಘೋಷಣೆ ಮಾಡಿದೆ.
* ತಾಲಿಬಾನಿಗಳ ಈ ಹೊಸ ಸರ್ಕಾರದಲ್ಲಿ ಮುಲ್ಲಾ ಮೊಹಮ್ಮದ್ ಹಸನ್ ಅಖುಂದಾ ಅವರು ಆಫ್ಘಾನಿಸ್ತಾನದ ನೂತನ ಪ್ರಧಾನಿ, ಹಾಗೂ ಮುಲ್ಲಾ ಬರಾದರ್ ಅವರು ಆಫ್ಘಾನಿಸ್ತಾನದ ಉಪ ಪ್ರಧಾನಿಯನ್ನಾಗಿದೆ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.
* ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ಅವರು ಇದೀಗ ಅಫ್ಘಾನಿಸ್ತಾನ ಸ್ವಾತಂತ್ರ್ಯ ಪಡೆದುಕೊಂಡಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಅಮೇರಿಕ ನೇತೃತ್ವದ ಸೇನೆಯು ಅಫ್ಘಾನಿಸ್ತಾನ ತೊರೆದ ನಂತರ ತಾಲಿಬಾನಿಗಳು ಸರ್ಕಾರವನ್ನು ರಚಿಸಿದ್ದಾರೆ.
* ಅಫ್ಘಾನಿಸ್ತಾನ ರಾಜ್ಯವು 18 ನೇ ಶತಮಾನದಲ್ಲಿ ಹೋತಕ್ ಮತ್ತು ದುರಾನಿ ರಾಜವಂಶಗಳೊಂದಿಗೆ ಆರಂಭವಾಯಿತು, ನಂತರ 19 ನೇ ಶತಮಾನದ ಕೊನೆಯಲ್ಲಿ ಅಫ್ಘಾನಿಸ್ತಾನವು ಬ್ರಿಟಿಷ್ ಭಾರತ ಮತ್ತು ರಷ್ಯಾದ

ಸಾಮ್ರಾಜ್ಯದ ನಡುವಿನ 'ಗ್ರೇಟ್ ಗೇಮ್' ನಲ್ಲಿ ಬಫರ್ ರಾಜ್ಯವಾಗಿ ಹೊರಹೊಮ್ಮಿತು.

* 1919 ರಲ್ಲಿ ಮೂರನೇ ಆಂಗ್ಲೋ ಅಫ್ಘಾನ್ ಯುದ್ಧದ ನಂತರ, ಈ ದೇಶವು ವಿದೇಶಿ ಪ್ರಾಬಲ್ಯದಿಂದ ಮುಕ್ತವಾಗಿ ಅಂತಿಮವಾಗಿ 1926 ರ ಜೂನ್ ನಲ್ಲಿ ಅಮಾನುಲ್ಲಾ ರಾಜನ ಅಡಿಯಲ್ಲಿ ಅಫಘಾನಿಸ್ತಾನ ಸಾಮ್ರಾಜ್ಯವಾಗಿ ಮಾರ್ಪಟ್ಟು ಸುಮಾರು ಐವತ್ತು(50) ವರ್ಷಗಳ ಕಾಲ ನಡೆಯಿತು.

* 1980 ರಲ್ಲಿ ಮುಜಾಹಿದ್ದೀನ್ ಬಂಡುಕೋರರ ವಿರುದ್ಧ ಸೋವಿಯತ್ ಅಫಘಾನ್ ಯುದ್ಧಕ್ಕೆ ಪ್ರಚೋದನೇ ನೀಡಿತು, ಮತ್ತೇ 1996 ರ ಹೊತ್ತಿಗೆ ಅಫ್ಘಾನಿಸ್ತಾನದ ಹೆಚ್ಚಿನ ಭಾಗವನ್ನು ಇಸ್ಲಾಮಿಕ್ ಮೂಲಭೂತವಾದಿ ಗುಂಪು ಅಂದರೆ ತಾಲಿಬಾನಿಗಳು ವಶಪಡಿಸಿ ಕೊಂಡು '5' ವರ್ಷಗಳ ಕಾಲ ಆಳ್ವಿಕೆಯನ್ನು ನಡೆಸಿದರು.

* 2001 ರಲ್ಲಿ ಯುಎಸ್(ಅಮೇರಿಕ) ಆಕ್ರಮಣದ ನಂತರ ತಾಲಿಬಾನಿಗಳನ್ನು ಅಧಿಕಾರದಿಂದ ಕೆಳಗಿಳಿಸಿತು, ಆದರೆ ಸರ್ಕಾರ ಮತ್ತು ತಾಲಿಬಾನ್ ನಡುವೆ 20 ವರ್ಷಗಳ ಯುದ್ಧವು 2021 ರ ಕೊನೆಯಾಗಿ, ತಾಲಿಬಾನಿಗಳು ಮತ್ತೇ ಸರ್ಕಾರವನ್ನು ರಚಿಸಿ ಅಧಿಕಾರವನ್ನು ಪಡೆದುಕೊಂಡಿದ್ದಾರೆ.

## ಡಿಜಿಟಲ್ ಪಾವತಿಗಳ ಪಲ್ಸ್ ವರದಿ ಪ್ರಕಟಿಸಿದ ಫೋನ್ ಪೇ




* ಭಾರತದ ಫೋನ್‌ಪೇ ಇದೀಗ 300 ಮಿಲಿಯನ್ ಬಳಕೆದಾರರನ್ನು ಹೊಂದಿದೆ, ಹಾಗೂ ಇದೀಗ ಫೋನ್ ಪೇ ಪಲ್ಸ್ ಎಂಬ ಸಂವಾದಾತ್ಮಕ ವೆಬ್‌ಸೈಟ್ ಅನ್ನು ಪರಿಚಯಿಸಿದೆ.

* ಫೋನ್ ಪೇ ಪಲ್ಸ್ ವೆಬ್‌ಸೈಟ್ ಗ್ರಾಹಕರು ಮಾಡಿದ ಲಕ್ಷಾಂತರ ವಹಿವಾಟುಗಳನ್ನು ಹೊಂದಿದೆ, ಪ್ರಸ್ತುತ ಫೋನ್ ಪೇ ಡೇಟಾ 45% ಕ್ಕಿಂತ ಹೆಚ್ಚು ಮಾರುಕಟ್ಟೆ ಮೌಲ್ಯವನ್ನು ಹೊಂದಿದೆ.

* ಫೋನ್ ಪೇ ಪಲ್ಸ್ ವರದಿಯು ಡಿಜಿಟಲ್ ಅಥವಾ ಆನ್‌ಲೈನ್ ಪಾವತಿ ಅಳವಡಿಕೆ ಹೇಗೆ ಪ್ರಬುದ್ಧವಾಗಿದೆ ಎಂದು ಗ್ರಾಹಕರಿಗೆ ತಿಳಿಸುತ್ತದೆ.

* ಫೋನ್ ಪೇ: ಇದು ಭಾರತೀಯ ಡಿಜಿಟಲ್ ಪಾವತಿ ಹಾಗೂ ಹಣಕಾಸು ಸೇವೆಗಳ ಸಂಸ್ಥೆಯಾಗಿದೆ, ಇದು ತನ್ನ ಪ್ರಧಾನ ಕಚೇರಿಯನ್ನು ಕರ್ನಾಟಕದ ಬೆಂಗಳೂರಿನಲ್ಲಿ ಹೊಂದಿದೆ.

* ಈ ಫೋನ್ ಪೇ ಸಂಸ್ಥೆಯನ್ನು 2015 ರ ಡಿಸೆಂಬರ್ ನಲ್ಲಿ ಸಮೀರ್ ನಿಗಮ್, ರಾಹುಲ್ ಚಾರಿ ಮತ್ತು ಬುರ್ಜಿನ್ ಇಂಜಿನಿಯರ್ ಸ್ಥಾಪನೆ ಮಾಡಿದ್ದಾರೆ, ಹಾಗೂ ಈ ಅಪ್ಲಿಕೇಶನ್ 2016 ರ ಆಗಸ್ಟ್‌ನಲ್ಲಿ ಆರಂಭವಾಯಿತು, ಹಾಗೂ 'UPI' ಯನ್ನು ಆಧರಿಸಿದೆ.

* ಸದ್ಯ ಫೋನ್ ಪೇ ಭಾರತೀಯ 11 ಕ್ಕೂ ಅಧಿಕ ಭಾಷೆಗಳಲ್ಲಿ ಲಭ್ಯವಿದೆ.

## ಪ್ರಧಾನಿ ಮೋದಿ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆ




* ಭಾರತದ ಅಧ್ಯಕ್ಷತೆಯಲ್ಲಿ ನಡೆಯಲಿರುವ 13 ನೇ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆಯನು ಭಾರತೀಯ ಪ್ರಧಾನಿ ಮೋದಿ ವಹಿಸಲಿದ್ದಾರೆ, ಹಾಗೂ ಈ ಸಭೆಯಲ್ಲಿ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಪಾಲ್ಗೊಳ್ಳಲಿದ್ದಾರೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಹುವಾ ಚುನಿಂಗ್ ಅವರು ಮಾಹಿತಿ ನೀಡಿದ್ದಾರೆ.

* ಈ 13 ನೇ ಬ್ರಿಕ್ಸ್ ಶೃಂಗಸಭೆಯು ವರ್ಚುಲ್ ಮೂಲಕ ನಡೆಯಲಿದೆ, ಈ ಸಭೆಯಲ್ಲಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ (BRICS) ನಾಯಕರ ವರ್ಚುವಲ್ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.

* ಈ ಶೃಂಗಸಭೆಯಲ್ಲಿ ಭಾರತವು ಪ್ರಮುಖವಾಗಿ ಬಹುಪಕ್ಷೀಯ ಸುಧಾರಣೆ, ಭಯೋತ್ಪಾದನೆ ನಿಗ್ರಹ, ಸುಸ್ಥಿರ ಅಭಿವೃದ್ಧಿ ಗುರಿ ಹಾಗೂ ಜನರ ವಿನಿಮಯಕ್ಕೆ ಡಿಜಿಟಲ್ ಮತ್ತು ತಾಂತ್ರಿಕ ಕ್ಷೇತ್ರ ಬಗ್ಗೆ ಚರ್ಚೆಯಾಗಲಿದೆ.

* ಭಾರತೀಯ ಪ್ರಧಾನಿ ಮೋದಿ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆಯನ್ನು 2 ನೇ ಬಾರಿ ವಹಿಸಿಕೊಳ್ಳುತ್ತಿದ್ದಾರೆ, ಈ ಮೊದಲು 2016 ರಲ್ಲಿ ಗೋವಾ ಶೃಂಗಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.

## ಸಿಐಎ ಮುಖ್ಯಸ್ಥರನ್ನು ಭೇಟಿಯಾದ ಅಜಿತ್ ದೋವಲ್



* ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಇತ್ತೀಚಿಗೆ ಅಮೇರಿಕದ ಸ್ಪೈಮಾಸ್ಟರ್ ವಿಲಿಯಂ ಬರ್ನ್ಸ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದಾರೆ, ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳು ತಮ್ಮ ಸರ್ಕಾರ ಘೋಷಣೆ ಮಾಡಿದ ನಂತರ ಈ ಭೇಟಿಯು ನಡೆದಿದೆ.

* ಸೆಂಟ್ರಲ್ ಇಂಟೆಲಿಜನ್ಸ್ ಏಜೆನ್ಸಿಯ ಮುಖ್ಯಸ್ಥ ಹಾಗೂ ಅಜಿತ್ ದೋವಲ್ ಭೇಟಿಯ ಯಾವುದೇ ವಿಷಯವನ್ನು ತಿಳಿಸಿಲ್ಲ, ಆದರೆ ಭದ್ರತಾ ವಿಚಾರಗಳು ಚರ್ಚೆಯಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ ಎಂದು ತಿಳಿದು ಬಂದಿದೆ.

* ತಾಲಿಬಾನ್ ಅಫ್ಘಾನಿಸ್ತಾನವನ್ನು ವಶಪಡಿಸಿಕೊಂಡ ನಂತರ ಅಫ್ಘಾನಿಸ್ತಾನದ ರಾಜ್ಯಧಾನಿ ಕಾಬೂಲ್ ನಿಂದ ಎಷ್ಟೋ ದೇಶಗಳು ತಮ್ಮ ರಾಯಭಾರಿ ಕಚೇರಿಯನ್ನು ಸ್ಥಳಾಂತರಿಸಿವೆ, ಅದರಲ್ಲಿ ಭಾರತವು ಒಂದಾಗಿದೆ, ಆದರೆ ರಷ್ಯಾ ಮತ್ತು ಪಾಕಿಸ್ತಾನ ದೇಶಗಳು ತಮ್ಮ ರಾಯಭಾರಿ ಕಚೇರಿಯನ್ನು ಸ್ಥಳಾಂತರಿಸಿಲ್ಲ ಎಂದು ತಿಳಿದು ಬಂದಿದೆ.

## 'ಬಿಸಿನೆಸ್ ಬ್ಲಾಸ್ಟರ್ಸ್' ಕಾರ್ಯಕ್ರಮವನ್ನು ಆರಂಭಿಸಿದ ದೆಹಲಿ ಸರ್ಕಾರ



* ಪ್ರಸ್ತುತ ದೆಹಲಿ ಸರ್ಕಾರದ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು 'ವ್ಯಾಪಾರ(ಬಿಸಿನೆಸ್) ಬ್ಲಾಸ್ಟರ್ಸ್' ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ.
* ಈ ಕಾರ್ಯಕ್ರಮವು ಉದ್ಯಮವನ್ನು ಪ್ರಾರಂಭಿಸುವ ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟದ ಹಣವನ್ನು ನೀಡಲು ಸಿದ್ದವಾಗಿದೆ ಇದರಿಂದಾಗಿ ಶಾಲಾ ಮಟ್ಟದಲ್ಲಿ ಯುವ ಉದ್ಯಮಿಗಳನ್ನು ಅಭಿವೃದ್ಧಿಪಡಿಸಿದಂತಾಗುತ್ತದೆ ಎಂದು ತಿಳಿಸಿದ್ದಾರೆ.
* ಈ 'ಬಿಸಿನೆಸ್ ಬ್ಲಾಸ್ಟರ್ಸ್' ಕಾರ್ಯಕ್ರಮವನ್ನು ದೆಹಲಿ ಸರ್ಕಾರಿ ಶಾಲೆಗಳಲ್ಲಿ 'ಉದ್ಯಮಶೀಲತೆ ಮೈಂಡ್‌ಸೆಟ್ ಪಠ್ಯಕ್ರಮ' ಅಡಿಯಲ್ಲಿ ಜಾರಿತರಲಾಗುತ್ತದೆ, ಹಾಗೂ 11 ಮತ್ತು 12 ನೇ ತರಗತಿಯ ವಿದ್ಯಾರ್ಥಿಗಳಿಗೆ ತಮ್ಮ ಉದ್ಯಮವನ್ನು ಪ್ರಾರಂಭಿಸಲು 2,000 ರೂ ಗಳ ಬೀಜದ ಹಣವನ್ನು ನೀಡಲಾಗುತ್ತದೆ ಎಂದು ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ತಿಳಿಸಿದ್ದಾರೆ.
* ಪ್ರಸ್ತುತ ದೆಹಲಿ ಸರ್ಕಾರವು EMC ಕಾರ್ನೀವಲ್ ನ ವಲಯ ಹಾಗೂ ಜಿಲ್ಲಾ ಮಟ್ಟದಲ್ಲಿ ಬಿಸಿನೆಸ್ ಬ್ಲಾಸ್ಟರ್ಸ್ ಗಳ 100 ಉನ್ನತ ಯೋಜನೆಗಳೊಂದಿಗೆ ಆಯೋಜಿಸಲಿದೆ ಎಂದು ತಿಳಿಸಿದ್ದಾರೆ.

## ಹೊಸ ಎಸಿ 3 ಎಕಾನಮಿ ಕೋಚ್‌ಗಳನ್ನು (economy coaches) ಪರಿಚಯಿಸಿದ ಭಾರತೀಯ ರೈಲ್ವೆ



* ಭಾರತೀಯ ರೈಲ್ವೆ ಎಸಿ 3 ಶ್ರೇಣಿಯ ರೈಲುಗಳಲ್ಲಿ ಹೊಸ ಆರ್ಥಿಕ(economy)ಕೋಚ್‌ಗಳನ್ನು ಪರಿಚಯಿಸಿದೆ, ಈ ಹೊಸ ಬೋಗಿಗಳಿಂದ ರೈಲುಗಳಲ್ಲಿ ಹೆಚ್ಚಿನ ಪ್ರಯಾಣಿಕರಿಗೆ ಅವಕಾಶ ನೀಡಲಾಗುತ್ತದೆ.
* ಹೊಸ ಕೋಚ್‌ಗಳಿಗೆ ಟಿಕೆಟ್ ದರವು ಸಾಮಾನ್ಯ ಎಸಿ 3 ಶ್ರೇಣಿ ಕೋಚ್ ದರಕ್ಕಿಂತಲೂ ಶೇ. 8 ರಷ್ಟು ಕಡಿಮೆ ಇರಲಿದೆ ಎಂದು ತಿಳಿಸಿದೆ. * ಈ ರೈಲು ಸೌಲಭ್ಯವನ್ನು ಮೊದಲ ಬಾರಿಗೆ ಪ್ರಯಾಗರಾಜ್ ಜೈಪುರ ನಡುವಿನ ರೈಲುಗಳಲ್ಲಿ ಒದಗಿಸಲಾಗಿದೆ.
* ಈ ಹೊಸ ಕೋಚ್‌ಗಳ ಟಿಕೆಟ್ ಬೆಲೆಯು ಪ್ರಸ್ತುತ ಎಕ್ಸ್‌ಪ್ರೆಸ್ ರೈಲುಗಳಲ್ಲಿನ ಸ್ಲೀಪರ್ ವರ್ಗದ ಮೂಲ ಬೆಲೆಗಿಂತ 2.4 ಪಟ್ಟು ಹೆಚ್ಚಿರಲಿದೆ, ಪ್ರಸ್ತುತ 2000 ಕಿ.ಮೀ. ವರೆಗೆ ಚಲಿಸುವ ರೈಲುಗಳಿಗೆ, 1757 ರೂ. ದರವನ್ನು ನಿಗದಿಪಡಿಸಿದ್ದಾರೆ, ಹಾಗೂ 5000 ಕಿ.ಮೀ. ವರೆಗೆ ಚಲಿಸುವ ರೈಲುಗಳಿಗೆ 3065 ರೂ. ದರವನ್ನುನಿಗದಿಪಡಿಸಿದೆ ಎಂದು ಭಾರತೀಯ ರೈಲ್ವೆ ಇಲಾಖೆ ತಿಳಿಸಿದೆ.
* ಭಾರತೀಯ ರೈಲ್ವೆಯು ರೈಲ್ವೇ ಸಚಿವಾಲಯದ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಶಾಸನಬದ್ಧ ಸಂಸ್ಥೆಯಾಗಿದೆ, ಹಾಗೂ ರೈಲ್ವೇ ಸಚಿವಾಲಯವು ವಿಶ್ವದ 4 ನೇ ಅತಿದೊಡ್ಡ ರೈಲ್ವೆ ಜಾಲವನ್ನು ನಿರ್ವಹಿಸುತ್ತದೆ.

# 11-09-2021

## ಮಥುರಾ ಕೃಷ್ಣ ಜನ್ಮಸ್ಥಳದ 10 ಕಿ.ಮೀ ಪ್ರದೇಶ 'ತೀರ್ಥಕ್ಷೇತ್ರ'ವೆಂದು ಘೋಷಣೆ



* ಪ್ರಸ್ತುತ ಉತ್ತರ ಪ್ರದೇಶದ ಯೋಗಿ ಸರ್ಕಾರವು ಮಥುರಾ ಕೃಷ್ಣನ ಜನ್ಮಸ್ಥಳದ 10 ಕೀ. ಮೀ. ಪ್ರದೇಶವನ್ನು ತೀರ್ಥಕ್ಷೇತ್ರವೆಂದು ಘೋಷಿಸಿದೆ.
* ಈ ಹಿಂದೆ ಸಿಎಂ ಯೋಗಿ ಆದಿತ್ಯನಾಥ್ ಅವರು ಮಥುರಾದಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ಆಚರಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸ್ತುತ ಉತ್ತರ ಪ್ರದೇಶದಲ್ಲಿ ತೀರ್ಥಕ್ಷೇತ್ರಗಳ ಅಭಿವೃದ್ಧಿಯ ಕೆಲಸ ನಡೆಯುತ್ತಿದೆ, ಹಾಗೂ 2023ರ ವೇಳೆಗೆ ಅಯೋಧ್ಯೆಯಲ್ಲಿನ ಭವ್ಯವಾದ ರಾಮಮಂದಿರವು ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ಸಿಗಲಿದೆ ಎಂದು ತಿಳಿಸಿದ್ದಾರೆ.

## ಭಾರತದಲ್ಲಿ ಉತ್ಪಾದನೆ ನಿಲ್ಲಿಸಿದ ಫೋರ್ಡ್ ಸಂಸ್ಥೆ




* ಪ್ರಸ್ತುತ ಅಮೇರಿಕದ ಆಟೋಮೊಬೈಲ್ ಸಂಸ್ಥೆಯಾಗಿರುವ ಫೋರ್ಡ್ ಭಾರತದ ಚೆನ್ನೈ ನಲ್ಲಿರುವ '2' ಉತ್ಪದನಾ ಘಟಕಗಳನ್ನು ಸ್ಥಗಿತಗೊಳಿಸಲು ನಿರ್ಧಾರವನ್ನು ಕೈಗೊಂಡಿದೆ.
* ಚೆನ್ನೈ ನ ಮರಿಮಲೈ ನಗರದಲ್ಲಿರುವ ಫೋರ್ಡ್ ಸಂಸ್ಥೆಯ ಉತ್ಪದನಾ ಘಟಕವು ಸೆಮಿ ಕಂಡಕ್ಟರ್ ಕೊರತೆಯ ಕಾರಣ ನೀಡಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ, ಅಲ್ಲದೇ 2022 ರ 2ನೇ ತ್ರೈಮಾಸಿಕದಲ್ಲಿ ಈ ಘಟಕವನ್ನು ಸ್ಥಗಿತಗೊಳಿಸುವದಾಗಿ ಫೋರ್ಡ್ ಸಂಸ್ಥೆ ತಿಳಿಸಿದೆ.
* ಫೋರ್ಡ್ ಸಂಸ್ಥೆಯ ಈ ನಿರ್ಣಯದಿಂದ ಅಲ್ಲಿನ 2,700 ತಾಂತ್ರಿಕ ವರ್ಗದ ಉದ್ಯೋಗಿಗಳು, ಹಾಗೂ 600 ಮಂದಿ ಇತರ ಸಿಬ್ಬಂದಿಗಳ ಭವಿಷ್ಯ ಅತಂತ್ರವಾಗಿದೆ.
* ಫೋರ್ಡ್ ಮೋಟಾರ್ ಕಂಪನಿ ಅಮೆರಿಕದ ಮಿಚಿಗನ್‌ನ ಡಿಯರ್ ಬೋರ್ನ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ. ಹಾಗೂ ಅಮೇರಿಕನ್ ಬಹುರಾಷ್ಟ್ರೀಯ ಆಟೋಮೊಬೈಲ್ ತಯಾರಕ ಸಂಸ್ಥೆಯಾಗಿದೆ.
* ಈ ಫೋರ್ಡ ಸಂಸ್ಥೆಯನ್ನು 1903 ರ ಜೂನ್.16ರಂದು ಹೆನ್ರಿ ಫೋರ್ಡ್ ಸ್ಥಾಪಿಸಿದ್ದಾರೆ, ಈ ಕಂಪನಿಯು ಫೋರ್ಡ್ ಬ್ರಾಂಡ್ ಅಡಿಯಲ್ಲಿ ಆಟೋಮೊಬೈಲ್ ಮತ್ತು ವಾಣಿಜ್ಯ ವಾಹನಗಳನ್ನು ಹಾಗೂ ಐಷಾರಾಮಿ ಕಾರುಗಳನ್ನು ಮಾರಾಟ ಮಾಡುತ್ತದೆ.

## ಮತ್ತೇ '4' ರಾಜ್ಯಗಳಿಗೆ ರಾಜ್ಯಪಾಲರ ನೇಮಕ ಮಾಡಿದ ರಾಷ್ಟ್ರಪತಿ




* ಪ್ರಸ್ತುತ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ತಮಿಳುನಾಡು, ಉತ್ತರಾಖಂಡ್, ಪಂಜಾಬ್ ರಾಜ್ಯಗಳಿಗೆ ನೂತನ ರಾಜ್ಯಪಾಲರನ್ನು ನೇಮಕ ಮಾಡಿದ್ದಾರೆ.
* ಅಸ್ಸಾಂನ ರಾಜ್ಯಪಾಲ ಪ್ರೊ. ಜಗದೀಶ್ ಮುಖಿ ಅವರನ್ನು ನಾಗಾಲ್ಯಾಂಡ್‌ನ ಉಸ್ತುವಾರಿ ರಾಜ್ಯಪಾಲರಾಗಿ ನೇಮಕಮಾಡಿದ್ದಾರೆ.
* ತಮಿಳುನಾಡು ರಾಜ್ಯದ ರಾಜ್ಯಪಾಲರಾಗಿ ಆರ್. ಎನ್. ರವಿ ಅವರನ್ನು ನೇಮಕ ಮಾಡಲಾಗಿದೆ.
* ಉತ್ತರಾಖಂಡ್ ರಾಜ್ಯದ ನೂತನ ರಾಜ್ಯಪಾಲರಾಗಿ ಲೆಫ್ಟಿನೆಂಟ್ ಗವರ್ನರ್ ಗುರ್ ಮೀತ್ ಸಿಂಗ್ ಅವರನ್ನು ನೇಮಕ ಮಾಡಲಾಗಿದೆ.
* ಪಂಜಾಬ್ ರಾಜ್ಯದ ರಾಜ್ಯಪಾಲರಾಗಿ ಬನ್ವರಿಲಾಲ್ ಪುರೋಹಿತ್ ಅವರನ್ನು ನೇಮಕ ಮಾಡಿ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ಆದೇಶ ಹೊರಡಿಸಿದ್ದಾರೆ.
* ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಥಾವರ್ ಚಂದ್ ಗೆಹ್ಲೋಟ್ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಕೇಂದ್ರ ಸರ್ಕಾರದಿಂದ ಬೆಳಗಾವಿ, ಕಲಬುರಗಿಯಲ್ಲಿ ಪೈಲಟ್ ತರಬೇತಿ ಕೇಂದ್ರವನ್ನು ಆರಂಭ



* ಪ್ರಸ್ತುತ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂದಿಯಾ ಅವರು ನೀಡಿರುವ ಮಾಹಿತಿಯ ಪ್ರಕಾರ ಕರ್ನಾಟಕದ ಬೆಳಗಾವಿ ಹಾಗೂ ಕಲಬುರಗಿಯ ವಿಮಾನ ನಿಲ್ದಾಣಗಳಲ್ಲಿ ತಲಾ ಎರಡು ಹೊಸ ಪೈಲಟ್ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಗುವದು ಎಂದು ತಿಳಿಸಿದ್ದಾರೆ.
* ಈ ಹೊಸ ಪೈಲಟ್ ತರಬೇತಿ ಕೇಂದ್ರಗಳನ್ನು ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.
* ಮುಂಬರುವ 100 ದಿನಗಳಲ್ಲಿ ದೇಶದ '5' ವಿಮಾನ ನಿಲ್ದಾಣಗಳು, ಹಾಗೂ '6' ಹೆಲಿಪ್ಯಾಡ್‌ಗಳು, ಅಲ್ಲದೇ '50'ವಾಯು ಮಾರ್ಗಗಳನ್ನು ಜನಸೇವೆಗೆ ಲಭ್ಯವಾಗುವಂತೆ ಮಾಡಲು ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ.

## ಚೀನಾ ದೇಶವು ಟಿಬೆಟ್ ಮತ್ತು ಷಿಂಜಿಯಾಂಗ್‌ನಲ್ಲಿ 30 ಏರ್‌ಪೋರ್ಟ್ ನಿರ್ಮಾಣ



* ಪ್ರಸ್ತುತ ಚೀನಾ ದೇಶವು ಭಾರತಕ್ಕೆ ಹೊಂದಿಕೊಂಡಿರುವ ಟಿಬೆಟ್ ಹಾಗೂ ಷಿಂಜಿಯಾಂಗ್ ಪ್ರದೇಶಗಳಲ್ಲಿ ಸರಿ ಸುಮಾರು 30 ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುತ್ತಿದೆ ಎಂದು ಚೀನಾದ ಸುದ್ದಿ ವಾಹಿನಿಗಳು ವರದಿಯನ್ನು ಪ್ರಸಾರ ಮಾಡಿವೆ.
* ಇತ್ತೀಚಿನ ದಿನಗಳಲ್ಲಿ ಚೀನಾ ದೇಶವು ಟಿಬೆಟ್‌ನಲ್ಲಿ ಮೂಲಸೌಕರ್ಯವನ್ನು ಹೆಚ್ಚಿಸುತ್ತಿದೆ, ಹಾಗೂ ಕೆಲ ದಿನಗಳ ಹಿಂದೆ ಭಾರತದ ಅರುಣಾಚಲ ಪ್ರದೇಶದ ಸಮೀಪದಲ್ಲಿರುವ ಚೀನಾದ ನಿಯಿಂಗ್ಚಿಯನ್ನು ಪ್ರಾದೇಶಿಕ ರಾಜಧಾನಿ ಲಾಸಾಕ್ಕೆ ಬುಲೆಟ್ ರೈಲನ್ನು ಆರಂಭಿಸಿದೆ.
* ಪ್ರಸ್ತುತ ಪೀಪಲ್ಸ್ ಲಿಬರೇಶನ್ ಆರ್ಮಿ (PLA) ಗಡಿ ಪ್ರದೇಶಗಳಲ್ಲಿ ನಾಗರಿಕ ವಿಮಾನಯಾನದ ಅಭಿವೃದ್ಧಿಯು ವಾಯು ಸಾರಿಗೆಗೆ ಅನುಕೂಲ ನೀಡಲಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಚೀನಾದ ಪಿಎಲ್ಎ'ನ ಭಾಗವಾಗಿರುವ "ವೆಸ್ಟರ್ನ್ ಥಿಯೇಟರ್ ಕಮಾಂಡ್" ಟಿಬೆಟ್ ಸ್ವಾಯತ್ತ ಪ್ರದೇಶ ಮತ್ತು ಭಾರತದೊಂದಿಗಿನ ಗಡಿ ಪ್ರದೇಶದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ.

## ಇಬ್ಬರು ಭಾರತೀಯರಿಗೆ 2021ರ ಗ್ಲೋಬಲ್ ಟೀಚರ್ ಪ್ರಶಸ್ತಿ




* ಪ್ರಸ್ತುತ 2021ರ ಗ್ಲೋಬಲ್ ಟೀಚರ್ ಪ್ರಶಸ್ತಿಯನ್ನು ಬಿಹಾರದ ಭಾಗಲ್ಪುರದ ಗಣಿತ ಶಿಕ್ಷಕ ಸತ್ಯಂ ಮಿಶ್ರ ಹಾಗೂ ಹೈದರಾಬಾದ್‌ನ ಸಮಾಜ, ಇಂಗ್ಲಿಷ್ ಮತ್ತು ಗಣಿತ ಶಿಕ್ಷಕಿ ಮೇಘನಾ ಮುಸುನುರಿ ಅವರಿಗೆ ಲಭಿಸಿದೆ.
* ಈ ಮೊದಲು ಗ್ಲೋಬಲ್ ಟೀಚರ್ ಪ್ರಶಸ್ತಿಯು ಮಹಾರಾಷ್ಟ್ರದ ರಂಜಿತ್ ಸಿನ್ಹಾ ದಿಸಳೆ ಅವರಿಗೆ ಲಭಿಸಿತ್ತು.
* 2021 ನೇ ವರ್ಷದ 'ಗ್ಲೋಬಲ್ ಟೀಚರ್ ಪ್ರಶಸ್ತಿ' ಪಟ್ಟಿಯಲ್ಲಿನ 50 ಅಗ್ರ ಶಿಕ್ಷಕರಲ್ಲಿ ಇಬ್ಬರು ಭಾರತೀಯರು ಸ್ಥಾನ ಪಡೆದಿದ್ದಾರೆ.
* ಈ 'ಗ್ಲೋಬಲ್ ಟೀಚರ್ ಪ್ರಶಸ್ತಿ'ಯನ್ನು ವಾರ್ಕಿ ಫೌಂಡೇಷನ್ ಯುನೆಸ್ಕೊ ಸಹಭಾಗಿತ್ವದಲ್ಲಿ ನೀಡಲಾಗುತ್ತದೆ, ಈ ಪ್ರಶಸ್ತಿಯ ಜತೆಗೆ 10 ಲಕ್ಷ ಡಾಲರ್ ನಗದು ಹೊಂದಿದೆ.
* ಈ ಪ್ರಶಸ್ತಿಗೆ 121 ದೇಶಗಳಿಂದ 8,000 ಶಿಕ್ಷಕರು ನಾಮನಿರ್ದೇಶಗಳಾಗಿದ್ದವು.
* ಇದಲ್ಲದೇ ಗ್ಲೋಬಲ್ ಸ್ಟೂಡೆಂಟ್ ಪ್ರಶಸ್ತಿಗೆ ಆಯ್ಕೆ ಯಾಗಿರುವ ಅಗ್ರ 50 ವಿದ್ಯಾರ್ಥಿಗಳ ಪಟ್ಟಿಯಲ್ಲಿ ನವದೆಹಲಿಯ ಆರ್ಕಿಟೆಕ್ಚರ್ ವಿದ್ಯಾರ್ಥಿ ಜಾಮಿಯಾ ಮಿಲಿಯಾ, ಅಹ್ಮದಾಬಾದ್‌ನ ಎಂಬಿಎ ವಿದ್ಯಾರ್ಥಿ ಆಯುಷ್ ಗುಪ್ತಾ, ಜಾರ್ಖಂಡ್‌ನ ವಿದ್ಯಾರ್ಥಿನಿ ಸೀಮಾ ಕುಮಾರಿ, ಮತ್ತು ಹರಿಯಾಣದ ಕೇಂದ್ರೀಯ ವಿಶ್ವವಿದ್ಯಾಲಯದ

ವಿದ್ಯಾರ್ಥಿ ವಿಪಿನ್ ಕುಮಾರ್ ಶರ್ಮಾ ಅಗ್ರ 50 ಮಂದಿಯ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.
* ನವೆಂಬರ್ ತಿಂಗಳಿನಲ್ಲಿ ಪ್ಯಾರಿಸ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

## ಕೇಂದ್ರ ಹಣಕಾಸು ಸಚಿವಾಲಯದಿಂದ 17 ರಾಜ್ಯಗಳಿಗೆ 9,871 ಕೋಟಿ ರೂ. ಅನುದಾನ ಬಿಡುಗಡೆ




* ಕೇಂದ್ರ ಹಣಕಾಸು ಸಚಿವಾಲಯದಿಂದ 17 ರಾಜ್ಯಗಳಿಗೆ 9,871 ಕೋಟಿ ರೂ.ಗಳನ್ನು ಅನುದಾನ ಬಿಡುಗಡೆ ಮಾಡಿದ ಕೇಂದ್ರ ಸರ್ಕಾರ.
* ಪ್ರಸ್ತುತ ಸಂವಿಧಾನದ ಪರಿಚ್ಛೇದ 275ರ ಅಡಿಯಲ್ಲಿನ ಹಣಕಾಸು ವರ್ಷದಲ್ಲಿನ ಪಿಡಿಆರ್‌ಡಿ ಅನುದಾನವಾಗಿ ಅರ್ಹ ರಾಜ್ಯಗಳಿಗೆ ಒಟ್ಟು 59,226 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. * ಪ್ರಸ್ತುತ 15ನೇ ಹಣಕಾಸು ಆಯೋಗದ ಶಿಫಾರಸಿನಂತೆ 2021 22ರ ಅವಧಿಯಲ್ಲಿ 17 ರಾಜ್ಯಗಳ ಕಂದಾಯ ಖಾತೆಗಳಲ್ಲಿನ ಅಂತರವನ್ನು ಪೂರೈಸಲು ಮಾಸಿಕ ಕಂತುಗಳಲ್ಲಿ ಅನುದಾನ ಬಿಡುಗಡೆ ನೀಡಲಾಗುತ್ತಿದೆ.
* 15ನೇ ಹಣಕಾಸು ಆಯೋಗವು 2021 22 ರ ಆರ್ಥಿಕ ವರ್ಷದಲ್ಲಿ 17 ರಾಜ್ಯಗಳಿಗೆ ಒಟ್ಟು 1,18,452 ಕೋಟಿ ರೂ.ಗಳ ಹಂಚಿಕೆ ಕಂದಾಯ ಕೊರತೆಯ ಅನುದಾನವನ್ನು ಶಿಫಾರಸು ಮಾಡಿದೆ, ಆದರೆ ಅದರಲ್ಲಿ ಇದೀಗ ರೂ. 59,226 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಹಣಕಾಸು ಸಚಿವಾಲಯ ಮಾಹಿತಿ ನೀಡಿದೆ.

## ಸ್ಥಳೀಯ ತಳಿ ಮಾನ್ಯತೆ ಪಡೆದ ಒಡಿಶಾ ರಾಜ್ಯದ 'ಮಂಡ ಎಮ್ಮೆ'



* ಒಡಿಶಾ ರಾಜ್ಯದ ಮಲ್ಕನ್‌ಗಿರಿ ಮತ್ತು ನಬರಂಗ್ಪುರ ಪ್ರದೇಶದಲ್ಲಿ ಕಾಣಿಸಿಕೊಳ್ಳುವ 'ಮಂಡ ಎಮ್ಮೆ'ಗೆ ಸ್ವದೇಶಿ ತಳಿ ಎಂಬ ಹೆಗ್ಗಳಿಕೆ ಪಾತ್ರವಾಗಿದೆ, ಈ ಎಮ್ಮೆಗಳನ್ನು ನ್ಯಾಶನಲ್ ಬ್ಯೂರೋ ಆಫ್ ಅನಿಮಲ್ ಜೆನೆಟಿಕ್ ರಿಸೋರ್ಸಸ್ ಸ್ಥಳೀಯ ತಳಿ ಎಂದು ಘೋಷಣೆ ಮಾಡಿದೆ.
* ಈ ಹಿಂದೆ 2019 ರಲ್ಲಿ ಒಡಿಶಾ ರಾಜ್ಯದ ಪ್ರಾಣಿ ಸಂಪನ್ಮೂಲಗಳ ಅಭಿವೃದ್ಧಿ ಇಲಾಖೆಯು, ಕೃಷಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಈ ಸಮೀಕ್ಷೆಯನ್ನು ಕೈಗೊಂಡಿತ್ತು.
* ಪ್ರಸ್ತುತ ಒಡಿಶಾದ ಮಲ್ಕಂಗಿರಿ ಮತ್ತು ನಬರಂಗಪುರ ಜಿಲ್ಲೆಗಳಲ್ಲಿ ಕೃಷಿ ಕಾರ್ಯಾಚರಣೆಯಲ್ಲಿ ಈ ಎಮ್ಮೆಗಳನ್ನು ಬಳಸುತ್ತಾರೆ.
* ದೇಶದಲ್ಲಿ ಇದುವರೆಗೆ ಒಟ್ಟು 202 ತಳಿಗಳು ಮಾನ್ಯತೆ ಪಡೆದಿವೆ.

## ದೇಶದಲ್ಲೇ ಅತ್ಯುತ್ತಮ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಬೆಂಗಳೂರಿನ 'IISC' (Indian Institute of Science)



* ದೇಶದ ಅತ್ಯುತ್ತಮ ವಿಶ್ವವಿದ್ಯಾಲಯ ಮತ್ತು ಅತ್ಯುತ್ತಮ ಸಂಶೋಧನಾ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಬೆಂಗಳೂರು ಐಐಎಸ್ಸಿ(IISC) ಪಡೆದುಕೊಂಡಿದೆ.
* ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್'ನ್ನು ಕೇಂದ್ರ ಶಿಕ್ಷಣ ಸಚಿವಾಲಯ ಪ್ರಕಟಿಸಿದೆ, ಅದರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ಅತ್ಯುತ್ತಮ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.
* ಪ್ರಸ್ತುತ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ದೇಶದ ವಿಶ್ವವಿದ್ಯಾಲಯಗಳಲ್ಲಿ ಮೊದಲ ಸ್ಥಾನ ಹಾಗೂ ಒಟ್ಟಾರೆ ರ‍್ಯಾಂಕಿಂಗ್‌ನಲ್ಲಿ 2ನೇ ಸ್ಥಾನವನ್ನು ಪಡೆದಿದೆ.
* ಬೆಂಗಳೂರಿನ ನಿಮ್ಹಾನ್ಸ್‌ಗೆ ವೈದ್ಯಕೀಯ ವಿಭಾಗದಲ್ಲಿ 4ನೇ ಸ್ಥಾನ, ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿಗೆ 10ನೇ ಸ್ಥಾನ ಲಭಿಸಿವೆ.
* ಪ್ರಸ್ತುತ ದಂತ ವೈದ್ಯಕೀಯ ಕಾಲೇಜು ರ‍್ಯಾಂಕಿಂಗ್ ಪಟ್ಟಿಯಲ್ಲಿ: ಉಡುಪಿಯಲ್ಲಿನ ಮಣಿಪಾಲ ದಂತ ವೈದ್ಯಕೀಯ ಕಾಲೇಜು ಮೊದಲ ಸ್ಥಾನ, ಹಾಗೂ ಮಂಗಳೂರಿನ ಎ.ಬಿ.ಶೆಟ್ಟಿ ದಂತ ವೈದ್ಯಕೀಯ ಕಾಲೇಜು, ಮಂಗಳೂರಿನ ಮಣಿಪಾಲ ದಂತ ವೈದ್ಯಕೀಯ ಕಾಲೇಜು ಕ್ರಮವಾಗಿ 6 ಮತ್ತು 7ನೇ ಸ್ಥಾನವನ್ನು ಪಡೆದುಕೊಂಡಿವೆ.
* ಕಾನೂನು ಶಿಕ್ಷಣ: ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ಮೊದಲ ಸ್ಥಾನ ಪಡೆದುಕೊಂಡಿದೆ.
* ಎಂಜಿನಿಯರಿಂಗ್ ಶಿಕ್ಷಣ: ಸುರತ್ಕಲ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯು 10ನೇ ಸ್ಥಾನ ಪಡೆದಿದೆ.
* ಐಐಟಿ(IIT): ಭಾರತೀಯ ತಂತ್ರಜ್ಞಾನ ಸಂಸ್ಥೆ (IIT) ಮದ್ರಾಸ್ ಈ ವರ್ಷವೂ ಅಗ್ರಸ್ಥಾನ ಪಡೆದಿದೆ.
* ವೈದ್ಯಕೀಯ: ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಮೊದಲ ಸ್ಥಾನ ಲಭಿಸಿದೆ.

## ಸೆಪ್ಟೆಂಬರ್ 10: ವಿಶ್ವ ಆತ್ಮಹತ್ಯೆ ತಡೆ ದಿನ



* ಪ್ರಸ್ತುತ ಸೆಪ್ಟೆಂಬರ್. 10ರಂದು ವಿಶ್ವ ಆತ್ಮಹತ್ಯೆ ತಡೆ ದಿನವನ್ನು ಆಚರಣೆ ಮಾಡಲಾಯಿತು, ಈ ದಿನವನ್ನು ಆತ್ಮಹತ್ಯೆಯನ್ನು ತಡೆಗಟ್ಟಲು ವಿವಿಧ ಮಾರ್ಗಗಳನ್ನು ತೋರಿಸುವ ಸಲುವಾಗಿ ವಾರ್ಷಿಕವಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ.
* 2003 ರ ಸೆಪ್ಟೆಂಬರ್. 10 ರಂದು ವಿಶ್ವ ಆರೋಗ್ಯ ಸಂಸ್ಥೆ ಸಹಭಾಗಿತ್ವದಲ್ಲಿ ಅಂತಾರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವಿಕೆಯ ಉಪಕ್ರಮವಾಗಿ ಈ ದಿನವನ್ನು ಪರಿಗಣಿಸಲಾಗಿದೆ, ಹಾಗೂ ಆತ್ಮಹತ್ಯೆಗಳನ್ನು ತಡೆಯಬಹುದು ಎಂಬ ಪ್ರಮುಖ ಸಂದೇಶವನ್ನು ಸಾರಲು ಈ ದಿನವನ್ನು ರಚಿಸಲಾಗಿದೆ.
* 2011 ರ ಸಂದರ್ಭದಲ್ಲಿ ಈ ದಿನವನ್ನು ಗುರುತಿಸಲು ಸುಮಾರು 40 ದೇಶಗಳು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದವು.
* ಪ್ರಸ್ತುತ ಉದ್ದೇಶಪೂರ್ವಕವಾಗಿ ಜೀವ ತೆಗೆಯುವ ಕ್ರಿಯೆಗೆ ಆತ್ಮಹತ್ಯೆ ಎನ್ನುತ್ತಾರೆ.
* ಅಂತರರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವಿಕೆ ಸಂಘ (IASP) ಇದು ಒಂದು ಅಂತಾರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವ ಸಂಸ್ಥೆಯಾಗಿದೆ, ಹಾಗೂ ಈ ಸಂಸ್ಥೆಯನ್ನು 1960 ರಲ್ಲಿ ಎರ್ವಿನ್ ರಿಂಗಲ್ ಮತ್ತು ನಾರ್ಮನ್ ಫಾರ್ಬೆರೋವ್ ಅವರು ಸ್ಥಾಪನೆ ಮಾಡಿದ್ದಾರೆ.
* ಪ್ರಸ್ತುತ ಈ ಸಂಸ್ಥೆಯು 50 ದೇಶಗಳ ವೃತ್ತಿಪರರು ಹಾಗೂ ಸ್ವಯಂಸೇವಕರನ್ನು ಹೊಂದಿದೆ.

# 12-09-2021

## ಗುಜರಾತ್ ನೂತನ ಮುಖ್ಯಮಂತ್ರಿಯಾಗಿ ಭೂಪೇಂದ್ರ ಪಟೇಲ್ ಆಯ್ಕೆ



ಅಹ್ಮದಾಬಾದ್: ಗುಜರಾತಿನ ಭಾರತೀಯ ಜನತಾ ಪಕ್ಷವು ನೂತನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರನ್ನು ಆಯ್ಕೆ ಮಾಡಲಾಗಿದೆ. ಇತ್ತೀಚಿಗಷ್ಟೇ ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾನಿ ರಾಜೀನಾಮೆ ಸಲ್ಲಿಸಿದ್ದರು, ಈ ಹಿನ್ನಲೆಯಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆಯನ್ನು ಆರಂಭಿಸಲಾಗಿತ್ತು, ಇದೀಗ ಭೂಪೇಂದ್ರ ಪಟೇಲ್ ಹೆಸರನ್ನು ಅಧಿಕೃತವಾಗಿ ಘೋಷಿಸಲಾಗಿದೆ.

# 13-09-2021

## ಬ್ರಿಟನ್ ತಾರೆ ಎಮ್ಮಾ ರಾಡುಕಾನುಗೆ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ



* ಪ್ರಸ್ತುತ ಬ್ರಿಟನ್'ನ 18 ವರ್ಷದ ತಾರೆ ಎಮ್ಮಾ ರಾಡುಕಾನು ಅವರು ಅಮೇರಿಕ ಓಪನ್ ಮಹಿಳೆಯರ ಸಿಂಗಲ್ಸ್ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಯನ್ನು ಗೆದ್ದು ಇತಿಹಾಸ ನಿರ್ಮಿಸಿದ್ದಾರೆ.
* ಬ್ರಿಟನ್'ನ ಎಮ್ಮಾ ರಾಡುಕಾನು ಅವರು ಇತ್ತೀಚಿಗೆ ನಡೆದ ಮಹಿಳೆಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಕೆನಡಾದ ಲೇಲಾ ಫರ್ನಾಂಡೆಜ್ ವಿರುದ್ಧ ಜಯ ಸಾಧಿಸಿದ್ದಾರೆ.
* ಬ್ರಿಟನ್'ನ ಎಮ್ಮಾ ರಾಡುಕಾನು ಅವರು 1968ರ ನಂತರ ಅಮೇರಿಕನ್ ಓಪನ್ ಮಹಿಳೆಯರ ಸಿಂಗಲ್ಸ್ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಯನ್ನು ಗೆದ್ದ ಆಟಗಾರ್ತಿ ಇವರಾಗಿದ್ದಾರೆ.
* ಬ್ರಿಟನ್'ನ ಎಮ್ಮಾ ರಾಡುಕಾನು ಅವರು ಈ ಮೊದಲು 1977ರಲ್ಲಿ ವರ್ಜೀನಿಯಾ ವೇಡ್ ವಿಂಬಲ್ಡನ್ ಪ್ರಶಸ್ತಿಯನ್ನು ಜಯಿಸಿದ್ದರು.

## ರಷ್ಯಾದಿಂದ ತಜಕಿಸ್ತಾನಕ್ಕೆ ಸೇನಾ ವಾಹನ ರವಾನೆ



* ಪ್ರಸ್ತುತ ರಷ್ಯಾ ರಾಷ್ಟ್ರದಿಂದ ತಜಕಿಸ್ತಾನಕ್ಕೆ 12 ಶಸ್ತ್ರಸಜ್ಜಿತ ವಾಹನಗಳು ಹಾಗೂ ಸೇನಾ ಉಪಕರಣಗಳನ್ನು ರವಾನಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವರು ಮಾಹಿತಿ ನೀಡಿದ್ದಾರೆ.
* ರಷ್ಯಾ ದೇಶದ ಈ ನಡೆಯು ಅಫ್ಘಾನಿಸ್ತಾನದ ಜೊತೆ ಗಡಿ ಪ್ರದೇಶವನ್ನು ಹಂಚಿಕೊಂಡಿರುವ ತಜಕಿಸ್ತಾನ ರಾಷ್ಟ್ರದ ಜೊತೆ ಸಂಬಂಧ ಗಟ್ಟಿ ಪಡಿಸಿಲು ರಷ್ಯಾ ಸಿದ್ದವಾಗಿದೆ.
* ತಜಕಿಸ್ತಾನದ ಗಡಿ ಪ್ರದೇಶದಲ್ಲಿ ಹೆಚ್ಚುತ್ತಿರುವ ಅಸ್ಥಿರತೆಯ ಕಾರಣದಿಂದಾಗಿ ರಷ್ಯಾ ಭದ್ರತೆಯನ್ನು ಹೆಚ್ಚಿಸಲು ತಜಕಿಸ್ತಾನದ ಜೊತೆ ಕೆಲಸ ಮಾಡುತ್ತಿದ್ದೆ ಎಂದು ರಷ್ಯಾ ಮೇಜರ್ ಜನರಲ್ ಯೆವ್ಗೆನಿ ಸಿಂಡ್ಯಾಯ್ಕಿನ್ ಅವರು ತಿಳಿಸಿದ್ದಾರೆ.

## ಅಮೇರಿಕದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜಸ್ಕರನ್ ಮಲ್ಹೋತ್ರಾ ಅವರಿಂದ 6 ಎಸೆತಗಳಲ್ಲಿ 6 ಸಿಕ್ಸರ್



* ಪ್ರಸ್ತುತ ಅಮೇರಿಕದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜಸ್ಕರನ್ ಮಲ್ಹೋತ್ರಾ ಅವರು ಏಕದಿನ ಕ್ರಿಕೆಟ್'ನ ಒಂದು ಓವರ್ ನಲ್ಲಿ 6 ಎಸೆತಗಳಲ್ಲಿ 6 ಸಿಕ್ಸರ್'ಗಳನ್ನೂ ಬಾರಿಸಿದ್ದಾರೆ.
* ಈ ಪಂದ್ಯವು ಪಪುವಾ ನ್ಯೂ ಗಿನಿ ವಿರುದ್ಧ ನಡೆದ ಏಕದಿನ ಪಂದ್ಯವಾಗಿದೆ, ಇದಲ್ಲದೇ ಒಂದೇ ಓವರ್'ನಲ್ಲಿ 6 ಸಿಕ್ಸರ್ ಸಿಡಿಸಿದ 2ನೇ ವಿಕೆಟ್ ಕೀಪರ್ ಹಾಗೂ ಬ್ಯಾಟ್ಸ್‌ಮನ್ ಇವರಾಗಿದ್ದಾರೆ.
* ಅಮೇರಿಕದ ಮೊದಲ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿರುವ ಜಸ್ಕರನ್ ಮಲ್ಹೋತ್ರಾ ಅವರು ಏಕದಿನ ಕ್ರಿಕೆಟ್‌ನಲ್ಲಿ ಶತಕ ಬಾರಿಸಿದ ಎಂಬ ಹೆಗ್ಗಳಿಕೆ ಇವರದಾಗಿದೆ.
* ಜಸ್ಕರನ್ ಮಲ್ಹೋತ್ರಾ ಅವರು 124 ಎಸೆತಗಳಲ್ಲಿ 4 ಬೌಂಡರಿ

ಹಾಗೂ 16 ಸಿಕ್ಸರ್ ನೆರವಿನಿಂದ 173 ರನ್ ಕಲೆಹಾಕಿ ಅಜೇಯರಾಗಿದ್ದಾರೆ.

* ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಹರ್ಷಲ್ ಗಿಬ್ಸ್ ಅವರು 2007ರ ವಿಶ್ವಕಪ್‌ನಲ್ಲಿ ನೆದರ್ಲೆಂಡ್ ವಿರುದ್ಧ ಒಂದೇ ಓವರ್‌ನಲ್ಲಿ 6 ಎಸೆತಗಳಲ್ಲಿ 6 ಸಿಕ್ಸರ್ ಗಳನ್ನೂ ಬಾರಿಸಿ ದಾಖಲೆಯುನ್ನು ನಿರ್ಮಿಸಿದ್ದಾರೆ.

## ಕಾಬೂಲ್ ಗೆ ವಾಣಿಜ್ಯ ವಿಮಾನ ಸೇವೆ ಆರಂಭಿಸಿದ ಪಾಕಿಸ್ತಾನ




* ಪ್ರಸ್ತುತ ಪಾಕಿಸ್ತಾನದ ಅಂತಾರಾಷ್ಟ್ರೀಯ ಏರ್ ಲೈನ್ಸ್ (PIA) ಇಸ್ಲಾಮಾಬಾದ್ ನಿಂದ ಕಾಬೂಲ್'ಗೆ ವಾಣಿಜ್ಯ ವಿಮಾನ ಸೇವೆಯನ್ನು ಆರಂಭಿಸಲಿದೆ ಎಂದು ತಿಳಿದು ಬಂದಿದೆ.

* ಇತ್ತೀಚಿಗೆ ಅಫ್ಘಾನಿಸ್ತಾನ್ ರಾಷ್ಟ್ರವು ತಾಲಿಬಾನಿಗಳ ವಶವಾದ ನಂತರ ಪಾಕಿಸ್ತಾನ ಈ ಸೇವೆಯನ್ನು ಆರಂಭಿಸಲಿದೆ ಎಂದು ತಿಳಿದು ಬಂದಿದೆ.

* ಸದ್ಯ ಕಾಬೂಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಪುನಆರಂಭಿಸಲು ತಾಲೀಬಾನಿಗಳು ಕತಾರಿಯ ತಾಂತ್ರಿಕ ಸಹಾಯ ಪಡೆಯುತ್ತಿದ್ದಾರೆ ಎನ್ನಲಾಗಿದೆ.

* ಪ್ರಸ್ತುತ ಅಫ್ಘಾನಿಸ್ತಾನದ ಕಾಬೂಲ್'ಗೆ ವಿಮಾನಗಳ ಕಾರ್ಯಾಚರಣೆ ನಡೆಸಲು ಎಲ್ಲಾ ತಾಂತ್ರಿಕ ಅನುಮತಿ ಲಾಭಿಯವಾಗಿದೆ ಎಂದು ಪಾಕಿಸ್ತಾನ ತಿಳಿಸಿದೆ, ಹಾಗೂ ಇಸ್ಲಾಮಾಬಾದ್ ನಿಂದ ಮೊದಲ ವಾಣಿಜ್ಯ ವಿಮಾನವು ಕಾಬೂಲ್'ಗೆ ತೆರಳಲಿದೆ ಎಂದು ಪಿಐಎ(PIA) ವಕ್ತಾರ ಅಬ್ದುಲ್ಲಾ ಹಫೀಜ್ ಖಾನ್ ಮಾಹಿತಿ ನೀಡಿದ್ದಾರೆ.

## ಭಾರತ ಮತ್ತು ಆಸ್ಟ್ರೇಲಿಯಾದಿಂದ ತಾಲಿಬಾನ್ ಗೆ ಎಚ್ಚರಿಕೆ



* ಪ್ರಸ್ತುತ ಅಫ್ಘಾನಿಸ್ತಾನ ನೆಲದಲ್ಲಿ ಉಗ್ರ ಚಟುವಟಿಕೆ ಮಾಡುವಂತಿಲ್ಲ, ಹಾಗೂ ಯಾವುದೇ ರೀತಿಯ ಭಯೋತ್ಪಾದನಾ ದುರ್ಬಳಕೆ ಮಾಡಿಕೊಳ್ಳಬಾರದು ಎಂದು ಭಾರತ ಮತ್ತು ಆಸ್ಟ್ರೇಲಿಯಾ ಜೊತೆಯಾಗಿ ತಾಲಿಬಾನ್ ಆಡಳಿತಕ್ಕೆ ಎಚ್ಚರಿಕೆ ನೀಡಿವೆ.

* ಇತ್ತೀಚಿಗೆ ಅಫ್ಘಾನಿಸ್ತಾನದ ಕಾಬೂಲ್ ಪ್ರದೇಶವು ತಾಲಿಬಾನಿಗಳ ಕೈವಶವಾದ ನಂತರ ಭಾರತ ಮತ್ತು ಆಸ್ಟ್ರೇಲಿಯಾ ಉಭಯ ರಾಷ್ಟ್ರಗಳು '2 ಪ್ಲಸ್ 2' ಶೃಂಗಸಭೆಯಲ್ಲಿ ಭಾಗಿಯಾಗಿದ್ದವು, ಈ ಸಭೆಯಲ್ಲಿ ಆಸ್ಟ್ರೇಲಿಯಾದ ಮರೈಸ್ ಪೇಯ್ನ ಮತ್ತು ಪೀಟರ್ ಡಟ್ಟನ್ ಹಾಗೂ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರಕ್ಷಣ ಸಚಿವ ರಾಜನಾಥ್ ಸಿಂಗ್ ಭಾಗಿಯಾಗಿದ್ದರು.

* ಪ್ರಸ್ತುತ ಈ ರಾಷ್ಟ್ರಗಳು ಉಗ್ರ ಚಟುವಟಿಕೆಯೊಂದಿಗೆ ರಾಜಿ ಮಾಡಿಕೊಳ್ಳುವಂತಿಲ್ಲ, ಅಲ್ಲದೇ 'ಯುಎನ್‌ಎಸ್ಸಿ ರೆಸಲ್ಯೂಷನ್ 2593 ಮಾರ್ಗದರ್ಶನದ ಅಡಿಯಲ್ಲಿ ಉಗ್ರ ಚಟುವಟಿಕೆಗಳ ನಿಯಂತ್ರಣಕ್ಕೆ ಜಾಗತಿಕ ಸಮುದಾಯ ಒಗ್ಗಟ್ಟಾಗಿ ನಿಲ್ಲಬೇಕು ಎಂದು ತಿಳಿಸಿದ್ದಾರೆ, ಹಾಗೂ ಈ ರಾಷ್ಟ್ರಗಳು ಪರಸ್ಪರ ರಕ್ಷಣ, ವಾಣಿಜ್ಯ ಒಪ್ಪಂದಗಳಿಗೆ ಬದ್ಧವಾಗಿರಬೇಕು ಎಂದು ತಿಳಿಸಿವೆ.

## ಪಂಜಾಬ್ ಸರ್ಕಾರದಿಂದ ಕೊರೊನಾ ಲಸಿಕೆ ಪಡೆಯದ ಸರ್ಕಾರಿ ನೌಕರರಿಗೆ ಕಡ್ಡಾಯ ರಜೆ



* ಪ್ರಸ್ತುತ ಪಂಜಾಬ್ ರಾಜ್ಯ ಸರ್ಕಾರದ ಉದ್ಯೋಗಿಗಳನ್ನು ಕೋವಿಡ್ 19 ಲಸಿಕೆ ಪಡೆಯದೇ ಇರುವವರನ್ನು ಕಡ್ಡಾಯ ರಜೆ ಮೇಲೆ ಕೋವಿಡ್ 19 ಲಸಿಕೆ ಪಡೆಯಲು ಕಳುಹಿಸಲಾಗುವುದು ಎಂದು ಪಂಜಾಬ್ ಸರ್ಕಾರ ಆದೇಶ ಹೊರಡಿಸಿದೆ.

* ಪಂಜಾಬ್ ರಾಜ್ಯದಲ್ಲಿ ಕೊರೊನಾ ಲಸಿಕೆ ವಿತರಣೆಯನ್ನು ಕಾರ್ಯಕ್ರಮಕ್ಕೆ ವೇಗವನ್ನು ಹೆಚ್ಚಿಸಲು ಪಂಜಾಬ್ ಸರ್ಕಾರ ಈ ಹೊಸ ಆದೇಶ ಹೊರಡಿಸಲಾಗಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಕ್ಯಾಪ್ಟನ್ ಅಮರೀಂದರ್ ಸಿಂಗ್ ತಿಳಿಸಿದ್ದಾರೆ.

* ಪಂಜಾಬ್ ರಾಜ್ಯದಲ್ಲಿ ಕೊರೊನಾ ನಿರ್ಬಂಧಗಳನ್ನು ಸೆಪ್ಟೆಂಬರ್ 30 ರವರೆಗೆ ವಿತರಣೆ ಮಾಡಲಾಗಿದೆ ಎಂದು ಸಿಎಂ ಕ್ಯಾಪ್ಟನ್ ಅಮರೀಂದರ್ ಸಿಂಗ್ ಆದೇಶ ಹೊರಡಿಸಿದ್ದಾರೆ, ಈ ಹೊಸ ಆದೇಶದ ಪ್ರಕಾರ 300 ಕ್ಕೂ ಹೆಚ್ಚು ಪ್ರಜೆಗಳು ರಾಜಕೀಯ, ಹಾಗೂ ಎಲ್ಲ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ವಿರುವದಿಲ್ಲ ಎಂದು ತಿಳಿಸಿದ್ದಾರೆ.

## ಯುಎಸ್ ಓಪನ್ ಜಯಿಸಿದ ರಡುಕಾನು

* ಯುಎಸ್ ಓಪನ್ ಗ್ರಾಂಡ್ ಸ್ಲಾಂ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಬ್ರಿಟನ್‌ನ ಎಮ್ಮಾ ರಡುಕಾನು ಚೊಚ್ಚಲ ಗ್ರಾಂಡ್ ಸ್ಲಾಂ ಪ್ರಶಸ್ತಿ ಜಯಿಸಿದ್ದಾರೆ.

* ಯುಎಸ್ ಓಪನ್ ಗ್ರಾಂಡ್ ಸ್ಲಾಂ ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ರಡುಕಾನು 6 4, 6 3 ನೇರ ಸೆಟ್‌ಗಳಿಂದ 19 ವರ್ಷದ ಕೆನಡದ ಲೇಲಾಹ್ ಫೆರ್ನಾಂಡೆಜ್ ವಿರುದ್ಧ ಸುಲಭವಾಗಿ ಜಯ ಸಾದಿಸಿದರು. ಇದರೊಂದಿಗೆ ಬ್ರಿಟನ್ ಆಟಗಾರ್ತಿಯೊಬ್ಬರು 44 ವರ್ಷಗಳ ನಂತರ ಗ್ರಾಂಡ್ ಸ್ಲಾಂ ಪ್ರಶಸ್ತಿ ಪಡೆದರು.

## ಪ್ರಧಾನಿ ಮೋದಿ 'ಸರ್ದಾರ್ಧಂ' ಭವನವನ್ನು ಅಹಮದಾಬಾದ್‌ನಲ್ಲಿ ಉದ್ಘಾಟಿಸಿದರು



* ಪ್ರಸ್ತುತ ಗುಜರಾತ್ ರಾಜ್ಯದ ಅಹಮದಾಬಾದ್‌ನಲ್ಲಿನ ಕಲಾತ್ಮಕ ಸರ್ದಾರ್ಧಂ ಭವನವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವರ್ಚುವಲ್ ಸಭೆಯ ಮೂಲಕ ಉದ್ಘಾಟಿಸಿದರು, ಹಾಗೂ ಸರ್ದಾರ್ಧಂ ಹಂತ II ಕನ್ಯಾ ಛತ್ರಾಲಯದ ಶಿಲಾನ್ಯಾಸವನ್ನು ನೆರವೇರಿಸಿದರು.

* ಅಹಮದಾಬಾದ್‌ನಲ್ಲಿನ ಕಲಾತ್ಮಕ ಸರ್ದಾರ್ಧಂ ಭವನವನ್ನು 200 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.

* ಈ ಸರ್ದಾರ್ಧಂ ಭವನವನ್ನು ಪಾಟಿದಾರ್ ಸಮಾಜದಿಂದ ಗುಜರಾತ್ ರಾಜ್ಯದ ಅಹಮದಾಬಾದ್‌ನ ವೈಷ್ಣೋದೇವಿ ವೃತ್ತದಲ್ಲಿ ನಿರ್ಮಿಸಲಾಗಿದೆ.

* ಈ ಭವನವು ಗ್ರಂಥಾಲಯ, ಹಾಸ್ಟೆಲ್, ವೃತ್ತಿ ಮಾರ್ಗದರ್ಶನ ಮತ್ತು ಹುಡುಗರಿಗೆ ತರಬೇತಿ ಕೇಂದ್ರ ಹಾಗೂ ಗ್ರಾಮೀಣ ಪ್ರದೇಶದಿಂದ ಬರುವ ಹುಡುಗಿಯರು ಮತ್ತು ವಿವಿಧೋದ್ದೇಶ ಆಡಿಟೋರಿಯಂನಂತಹ ಆಧುನಿಕ ಸೌಲಭ್ಯಗಳನ್ನು ಒದಗಿಸಲಿದೆ ಎಂದು ತಿಳಿಸಿದ್ದಾರೆ.

* ಕನ್ಯಾ ಛತ್ರಾಲಯವು ಅವರ ಆರ್ಥಿಕ ಮಾನದಂಡಗಳನ್ನು ಪರಿಗಣಿಸದೆ 2000 ಹುಡುಗಿಯರನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಈ ಎರಡೂ ಸಂಸ್ಥೆಗಳನ್ನು ಅರ್ಪಿಸಲಾಗಿದೆ.

* ಈ ಸರ್ದಾರ್ಧಮ್ ಭವನವು ಮುಂದಿನ ಪೀಳಿಗೆಯ ಜೀವನದಲ್ಲಿ ಸರ್ದಾರ್ ಪಟೇಲ್ ಅನುಸರಿಸಿದ ತತ್ವಗಳನ್ನು ಅನುಸರಿಸಿ ಜೀವನ ನಡೆಸಲು ಪ್ರೇರೇಪಿಸುತ್ತದೆ, ಹಾಗೂ ಭಾರತದ ಮುಂದಿನ ಪೀಳಿಗೆಗೆ ಅಧಿಕಾರ ನೀಡಲಿದೆ.

* ಸರ್ದಾರ್ಧಂನ ಮಿಷನ್: ಶಿಕ್ಷಣ, ಸ್ವಯಂ ಉದ್ಯೋಗ ಮತ್ತು ಉದ್ಯಮಶೀಲತೆಯನ್ನು ಒದಗಿಸುವ ಮೂಲಕ ಮಹಿಳಾ ಸಬಲೀಕರಣ, ತಂಬಾಕು, ಮದ್ಯ, ಗುಟಕ ಮುಂತಾದ ಆರೋಗ್ಯ ಅಪಾಯಕಾರಿ ಅಭ್ಯಾಸಗಳ ನಿರ್ಮೂಲನೆ.

* ಮೊದಲ ಹಂತದಲ್ಲಿ 2000 ಬಾಲಕರು ಮತ್ತು ಬಾಲಕಿಯರಿಗೆ ಹಾಸ್ಟೆಲ್ ಸೌಲಭ್ಯಗಳನ್ನು ನೀಡಲಿದೆ, ಹಾಗೂ 2 ನೇ ಹಂತದಲ್ಲಿ 8000 ಬಾಲಕರು ಮತ್ತು ಬಾಲಕಿಯರಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಹೆಚ್ಚಿಸಲಾಗುವುದು ಎಂದು ತಿಳಿಸಿದ್ದಾರೆ.

## ತಮಿಳುನಾಡು ಸರ್ಕಾರವು ಸುಬ್ರಹ್ಮಣ್ಯ ಭಾರತಿಯವರ ಪುಣ್ಯತಿಥಿಯನ್ನು ಮಹಾಕವಿ ದಿನವೆಂದು ಆಚರಿಸಲು ನಿರ್ಧರಿಸಿದೆ



* ತಮಿಳುನಾಡು ರಾಜ್ಯದ ಕವಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಸುಬ್ರಹ್ಮಣ್ಯ ಭಾರತಿಯವರ ಪುಣ್ಯತಿಥಿ ಸೆಪ್ಟೆಂಬರ್ 11 ನ್ನು 'ಮಹಾಕವಿ ದಿನ'ವನ್ನಾಗಿ ಆಚರಿಸಲು ತಮಿಳುನಾಡು ಸರ್ಕಾರ ತೀರ್ಮಾನಿಸಿದೆ.

* 2021 ರ ಸೆಪ್ಟೆಂಬರ್ 11 ರಂದು ಕವಿ ಸುಬ್ರಹ್ಮಣ್ಯ ಭಾರತಿಯವರ 100 ನೇ ಮರಣೋತ್ಸವವನ್ನು ತಮಿಳನಾಡು ಸರ್ಕಾರ ಆಚರಿಸಲಿದೆ.

* ಕವಿ ಸುಬ್ರಹ್ಮಣ್ಯ ಭಾರತಿಯವರ ಶತಮಾನೋತ್ಸವದ ನಿಮಿತ್ತ, ಮುಂದಿನ ಒಂದು ವರ್ಷದವರೆಗೆ ರಾಜ್ಯದ ಭಾರತೀಯಾರ್ ಸ್ಮಾರಕ ಭವನದಲ್ಲಿ ಸಾಪ್ತಾಹಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವದು ಮತ್ತು ಸರ್ಕಾರವು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಕವನ ಸ್ಪರ್ಧೆಯನ್ನು ನಡೆಸಲಾಗುತ್ತದೆ ಅದರಲ್ಲಿ ಗೆದ್ದವರಿಗೆ ಒಂದು ಲಕ್ಷ ರೂ. ಬಹುಮಾನದ ಜೊತೆಗೆ 'ಭಾರತಿ ಯುವ ಕವಿ ಪ್ರಶಸ್ತಿ' ಎಂದು ತಮಿಳು ಸರ್ಕಾರ ತಿಳಿಸಿದೆ.

* ತಮಿಳನಾಡು ಸರ್ಕಾರವು ವಿಶ್ವ ತಮಿಳು ಸಂಘಗಳ ಸಹಭಾಗಿತ್ವದಲ್ಲಿ 'ಪರೆಂಗಂ ಭಾರತಿ' ಎಂಬ ವಿಷಯದ ಅಡಿಯಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸಲಿದೆ.

## ಮಧ್ಯಪ್ರದೇಶದ ಮೊರೆನಾದಲ್ಲಿ ಆಹಾರ ಸಂಸ್ಕರಣಾ ಘಟಕ ಉದ್ಘಾಟಣೆ




* ಪ್ರಸ್ತುತ ಮಧ್ಯಪ್ರದೇಶದ ಮೊರೆನಾದಲ್ಲಿ ಸಹಾರಾ ಘನೀಕೃತ ಆಹಾರಗಳ ಆಹಾರ ಸಂಸ್ಕರಣಾ ಘಟಕವನ್ನು ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ರಾಜ್ಯ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ಅವರು ಉದ್ಘಾಟಿಸಿದರು. * ಪ್ರಸ್ತುತ ಈ ಆಹಾರ ಸಂಸ್ಕರಣಾ ಘಟಕವನ್ನು ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆ ಎಂಬ ಕೇಂದ್ರ ವಲಯದ ಶೀತ ಸರಪಳಿ ಯೋಜನೆಯಡಿಯಲ್ಲಿ ಉದ್ಘಾಟಣೆ ಮಾಡಲಾಗಿದೆ.

* 2021 ರ ಸೆಪ್ಟೆಂಬರ್. 6 ರಿಂದ 2021 ರ ಸೆಪ್ಟೆಂಬರ್. 12 ರವರೆಗೆ 'ಆಜಾದಿ ಕಾ ಅಮೃತ್ ಮಹೋತ್ಸವ'ದ ಅಂಗವಾಗಿ ಆಹಾರ ಸಂಸ್ಕರಣಾ ವಾರವನ್ನು ಆಚರಣೆ ಮಾಡಲಾಯಿತು.

* ಪ್ರಸ್ತುತ ಸಹಾರಾ ಹೆಪ್ಪುಗಟ್ಟಿದ ಆಹಾರ ಘಟಕವು ಸುಮಾರು 700 ವ್ಯಕ್ತಿಗಳಿಗೆ ನೇರ ಮತ್ತು ಪರೋಕ್ಷ ಉದ್ಯೋಗವನ್ನು ನೀಡುತ್ತದೆ ಹಾಗೂ CPC ಮತ್ತು PPC ಜಲಾನಯನ ಪ್ರದೇಶದಲ್ಲಿನ ಸುಮಾರು 1000 ರೈತರಿಗೆ ಇದರ ಪ್ರಯೋಜನವನ್ನು ಲಭ್ಯವಾಗಲಿದೆ.

* ಘಟಕದ ಅಡಿಯಲ್ಲಿ ಸೌಲಭ್ಯಗಳು: ಡೀಪ್ ಫ್ರೀಜರ್ ಅಥವಾ ಫ್ರೋಜನ್ ಸ್ಟೋರ್ 4000 MT ಆಧುನಿಕ ಯಾರ್ಕಿಂಗ್ ವ್ಯವಸ್ಥೆ (ಪೇರಿಸುವಿಕೆ) 4000 ಎಂಟಿ ಹೈ ರೀಚ್ ಮೆಟೀರಿಯಲ್ ಹ್ಯಾಂಡ್ಲಿಂಗ್ 2 ಘಟಕಗಳು.

# 14-09-2021

## ಕಾಂಗ್ರೆಸ್ ನಾಯಕ ಆಸ್ಕರ್ ಫರ್ನಾಂಡಿಸ್ ನಿಧನ



* ಕಾಂಗ್ರೆಸ್ ನಾಯಕ ಕೇಂದ್ರದ ಮಾಜಿ ಸಚಿವ ಆಸ್ಕರ್ ಫರ್ನಾಂಡಿಸ್ ಅವರು ನಿಧನವಾಗಿದ್ದರೆ, ಇವರ ಈ ನಿಧನಕ್ಕೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

* ಆಸ್ಕರ್ ಫರ್ನಾಂಡಿಸ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಸುಮಾರು ಐದು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ.
* ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಆಸ್ಕರ್ ಫರ್ನಾಂಡಿಸ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.
* ಡಾ. ಆಸ್ಕರ್ ಫೆರ್ನಾಂಡಿಸ್ ಒಬ್ಬ ಭಾರತೀಯ ರಾಜಕಾರಣಿ, ಹಿರಿಯ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಾಯಕ ಮತ್ತು ಯುಪಿಎ ಸರ್ಕಾರದಲ್ಲಿ ಭಾರತ ಸರ್ಕಾರದ ಸಾರಿಗೆ, ರಸ್ತೆ ಮತ್ತು ಹೆದ್ದಾರಿ ಮತ್ತು ಕಾರ್ಮಿಕ ಮತ್ತು ಉದ್ಯೋಗದ ಕೇಂದ್ರ ಕ್ಯಾಬಿನೆಟ್ ಮಂತ್ರಿಯಾಗಿದ್ದರು.
* ಆಸ್ಕರ್ ಫೆರ್ನಾಂಡಿಸ್ ಅವರು ಮೂಲತಃ ಉಡುಪಿ ಯವರು ಇವರು 27 ಮಾರ್ಚ್ 1941 ರಲ್ಲಿ ಜನಿಸಿದ್ದಾರೆ.
* ಡಾ. ಆಸ್ಕರ್ ಫೆರ್ನಾಂಡಿಸ್ ಅವರು 1980 ರಿಂದ 1996 ವರೆಗೆ ಲೋಕಸಭಾ ಸದಸ್ಯರಾಗಿದ್ದರು.

## ಕವಚ ಯೋಜನೆ ಅಡಿ 120 ಆಂಬ್ಯುಲೆನ್ಸ್‌ಗಳು ಆರೋಗ್ಯ ಸೇವೆಗೆ ಸೇರ್ಪಡೆ



* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ಪಿಡುಗಿನ ನಡುವೆ ಆರೋಗ್ಯ ಸೇವೆಗೆ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಕವಚ ಯೋಜನೆಯಡಿ 120 ಆಂಬುಲೆನ್ಸ್'ಗಳನ್ನೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು.
* ಪ್ರಸ್ತುತ ರಾಜ್ಯ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಆರೋಗ್ಯ ಕವಚ ಯೋಜನೆ ಅಡಿಯಲ್ಲಿ 710 ಆಂಬ್ಯುಲೆನ್ಸ್ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದ್ದಾರೆ, ಹಾಗೂ ಲೋಕಾರ್ಪಣೆಗೊಂಡ ಈ 120 ಆಂಬ್ಯುಲೆನ್ಸ್ ಗಳು ಅಡ್ವಾನ್ಸ್ಡ್ ಲೈಫ್ ಸಪೋರ್ಟ್ (ALS) ವ್ಯಸ್ಥೆಯನ್ನು ಹೊಂದಿವೆ ಎಂದಿದ್ದಾರೆ.
* ಆರೋಗ್ಯ ಕವಚ ಸೇವೆಯು ಈ ಹಿಂದೆ 2008 ರಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅಂದಿನ ಆರೋಗ್ಯ ಸಚಿವ ಶ್ರೀರಾಮುಲು ಅವಧಿಯಲ್ಲಿ ಆರಂಭವಾಗಿದೆ.
* ಇದೀಗ ಪ್ರತಿ 1 ಲಕ್ಷ ಜನಸಂಖ್ಯೆಗೆ 1 ಆಂಬ್ಯುಲೆನ್ಸ್ ಮಾತ್ರ ಲಭ್ಯವಿದ್ದು, ಹಾಗೂ ಇನ್ನು ಮುಂದಿನ ದಿನಗಳಲ್ಲಿ 40 50 ಸಾವಿರ ಜನಸಂಖ್ಯೆಗೆ 1 ಆಂಬ್ಯುಲೆನ್ಸ್ ಲಭ್ಯವಾಗುವಂತೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಜೆಟ್ ಏರ್ವೇಸ್ ದೇಶೀಯ ಸೇವೆಗಳು 2022 ರ ಮೊದಲ ತ್ರೈಮಾಸಿಕದಿಂದ ಪುನಃ ಆರಂಭ



* 2022 ರ ಮೊದಲ ತ್ರೈಮಾಸಿಕದಿಂದ ಜೆಟ್ ಏರ್ವೇಸ್ ದೇಶೀಯ ವಿಮಾನಯಾನ ಸೌಲಭ್ಯಗಳನ್ನು ಪುನಃ ಆರಂಭಿಸಲಿವೆ.
* ಪ್ರಸ್ತುತ ಏರ್ಲೈನ್ಸ್ ನ ಬಿಡ್ಡರ್ ವಿಜೇತ ಜಲನ್ ಕಲ್ರಾಕ್ ಒಕ್ಕೂಟವು, ಜೆಟ್ ಏರ್ವೇಸ್ ಸಂಸ್ಥೆಯ ಅಂತಾರಾಷ್ಟ್ರೀಯ ವಿಮಾನಗಳ ಸೇವೆಯು 2022 ರ ಕೊನೆಯ ತ್ರೈಮಾಸಿಕದಿಂದ ಆರಂಭವಾಗಲಿವೆ ಎಂದು ತಿಳಿಸಿದ್ದಾರೆ.
* ಪುನಃ ಆರಂಭವಾಗುವ ಜೆಟ್ ಏರ್ವೇಸ್ ಮೊದಲನೆಯದಾಗಿ ದೆಹಲಿ ಮುಂಬೈ ಮಾರ್ಗವಾಗಿ ಆರಂಭವಾಗಲಿದೆ, ಇದಲ್ಲದೇ ಏರ್ ಲೈನ್ಸ್ ನ ಕೇಂದ್ರ ಕಚೇರಿ ಮುಂಬೈ ಯಿಂದ ದೆಹಲಿಗೆ ವರ್ಗಾವಣೆಯಾಗಲಿದೆ ಎಂದು ಏರ್ ಲೈನ್ಸ್ ಸಂಸ್ಥೆ ಮಾಹಿತಿ ನೀಡಿದೆ.
* ಜೆಟ್ ಏರ್ವೇಸ್ 3 ವರ್ಷಗಳಲ್ಲಿ 50ಕ್ಕೂ ಅಧಿಕ ಏರ್ ಕ್ರಾಫ್ಟ್'ಗಳು ಮತ್ತು 5 ವರ್ಷಗಳಲ್ಲಿ 100 ಕ್ಕೂ ಅಧಿಕ ವಿಮಾನಗಳನ್ನು ಆರಂಭಿಸುವದಕ್ಕೆ ಜೆಟ್ ಏರ್ವೇಸ್ 2.0 ಯೋಜನೆ ಹೊಂದಿದೆ ಎಂದು ತಿಳಿಸಿದ್ದಾರೆ.

## ಯುಎಸ್ ಟೆನ್ನಿಸ್ ಓಪನ್ 2021 ರ ಟ್ರೋಫಿ ಗೆದ್ದ ರಷ್ಯಾದ ಮೆಡ್ವೆಡೆವ್



* ಪ್ರಸ್ತುತ ಯುಎಸ್ ಓಪನ್ 2021 ರ ಗ್ರ್ಯಾಂಡ್ ಸ್ಲಾಂ ಟೆನ್ನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ರಷ್ಯಾದ ಡಾನಿಲ್ ಮೆಡ್ವೆಡೆವ್ ಅವರು ಈ ಬಾರಿಯ ಪ್ರಶಸ್ತಿಯನ್ನು ಜಯಿಸಿದ್ದಾರೆ.
* ವರ್ಲ್ಡ್ ನಂ.1 ಟೆನ್ನಿಸ್ ಆಟಗಾರ ನೋವಾಕ್ ಜೊಕೋವಿಕ್ ಅವರು ವಿರುದ್ಧ ರಷ್ಯಾದ ಡಾನಿಲ್ ಮೆಡ್ವೆಡೆವ್ ಅವರು ಗೆಲುವು ದಾಖಲಿಸಿದ್ದಾರೆ.
* ರಷ್ಯಾದ ಡಾನಿಲ್ ಮೆಡ್ವೆಡೆವ್ ಅವರು ಜಾಗತಿಕವಾಗಿ 2 ನೇ ರಾಂಕ್ ಹೊಂದಿದ್ದಾರೆ, ಹಾಗೂ ಇವರಿಗೆ ಇದು ಮೊದಲನೇ ಪ್ರಮುಖ ಚ್ಯಾಂಪಿಯನ್‌ಶಿಪ್ ಲಭಿಸಿದೆ.
* ಈ ಯುಎಸ್ ಟೆನ್ನಿಸ್ ಓಪನ್ 2021 ರ ಟ್ರೋಫಿ ನ್ಯೂಯಾರ್ಕನ ಆರ್ತರ್ ಆಶ್ ಸ್ಟೇಡಿಯಂನಲ್ಲಿ ನಡೆದಿದೆ.

## ದೂರಗಾಮಿ ಕ್ರೂಸ್ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಗೊಳಿಸಿದ ಉತ್ತರ ಕೊರಿಯಾ



* ಪ್ರಸ್ತುತ ಉತ್ತರ ಕೊರಿಯಾ ರಾಷ್ಟ್ರವು ದೂರಗಾಮಿ ಕ್ರೂಸ್ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ ಎಂದು ಸುದ್ದಿವಾಹಿನಿಗಳು ಮಾಹಿತಿಯನ್ನು ನೀಡಿವೆ.
* ಪ್ರಸ್ತುತ ಉತ್ತರ ಕೊರಿಯಾರಾಷ್ಟ್ರವು ತನ್ನಲ್ಲಿನ ಅಣ್ವಸ್ತ್ರ ಬಲವನ್ನು

ವೃದ್ಧಿಪಡಿಸಿಕೊಳ್ಳಲು ಈ ಕ್ಷಿಪಣಿ ಪ್ರಯೋಗ ನಡೆಸಿದೆ, ಹಾಗೂ ಅಮೇರಿಕ ವಿರುದ್ಧದ ಸಂಘರ್ಷದ ಕಾರಣದಿಂದಾಗಿ ಈ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ ಎನ್ನಲಾಗಿದೆ.

* ದೂರಗಾಮಿ ಕ್ರೂಸ್ ಕ್ಷಿಪಣಿಯ 1500 ಕಿ.ಮೀ. ದೂರದ ಗುರಿಯನ್ನು ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಕೊರಿಯನ್ ಸೆಂಟ್ರಲ್ ನ್ಯೂಸ್ ಏಜೆನ್ಸಿ ಮಾಹಿತಿ ನೀಡಿದೆ, ಹಾಗೂ ಈ ಪರೀಕ್ಷೆಯಿಂದಾಗಿ ಉತ್ತರ ಕೊರಿಯಾ ದೇಶದ ರಕ್ಷಣಾ ವಲಯವು ಮತ್ತಷ್ಟು ಶಕ್ತಿಶಾಲಿಯಾಗಲಿದೆ ಎಂದು ತಿಳಿಸಿದ್ದಾರೆ.

## ತಮಿಳುನಾಡು ಸರ್ಕಾರವು NEET ತಿರಸ್ಕರಿಸುವ ಮಸೂದೆ ಅಂಗೀಕರಿಸಿದೆ



* ಪ್ರಸ್ತುತ ತಮಿಳುನಾಡು ವಿಧಾನಸಭೆಯು ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆಯನ್ನು (NEET) ತಿರಸ್ಕರಿಸುವ ಮತ್ತು ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಳ್ಳಲು 12 ನೇ ತರಗತಿ ಅಂಕಗಳ ಆಧಾರದ ಮೇಲೆ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಮಸೂದೆಯನ್ನು ಅಂಗೀಕರಿಸಿದೆ.

* ತಮಿಳನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಮಸೂದೆಯನ್ನು ಮಂಡಿಸಿದ್ದಾರೆ ಮತ್ತು ಪ್ರಮುಖ ವಿರೋಧ ಪಕ್ಷ ಎಐಎಡಿಎಂಕೆ ಮತ್ತು ಅದರ ಮಿತ್ರ ಪಕ್ಷ ಪಿಎಂಕೆ ಹಾಗೂ ಕಾಂಗ್ರೆಸ್ ಇತರ ಎಲ್ಲಾ ಪಕ್ಷಗಳು ಈ ಮಸೂದೆಗೆ ಬೆಂಬಲ ನೀಡಿವೆ,

* NEET ಇದು ವೈದ್ಯಕೀಯ, ದಂತವೈದ್ಯಶಾಸ್ತ್ರ, ಭಾರತೀಯ ಔಷಧ ಮತ್ತು ಹೋಮಿಯೋಪತಿ ಯುಜಿ ಕೋರ್ಸ್‌ಗಳಿಗೆ ಪ್ರವೇಶವನ್ನು ಪಡೆಯಲು ಅವಕಾಶ ನೀಡುತ್ತದೆ.

* ನಿವೃತ್ತ ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರು ಹಾಗೂ ಅಂದಾಜು 86,000 ಪ್ರತಿನಿಧಿಗಳನ್ನು ಪರಿಶೀಲನೆಯನ್ನು ನಡೆಸಿದ ನಂತರ ಈ ವರದಿಯನ್ನು ತಯಾರಿಸಲಾಗಿದೆ, ಇವರಲ್ಲಿ ಹೆಚ್ಚಿನವರು ನೀಟ್ ತಿರಸ್ಕರಿಸುವ ಮಸೂದೆ ಬೆಂಬಲ ನೀಡಿದ್ದಾರೆ.

## ಡೆಫ್‌ಎಕ್ಸ್‌ಪೋ ಜೊತೆಗೆ ಭಾರತ ಆಫ್ರಿಕಾ ರಕ್ಷಣಾ ಸಂವಾದ



* ಪ್ರಸ್ತುತ ಸತತ 2 ವರ್ಷಗಳಿಗೊಮ್ಮೆ ನಡೆಯಲಿರುವ ಡೆಫ್‌ಎಕ್ಸ್‌ಪೋಸ್ ನಲ್ಲಿ 'ಇಂಡಿಯಾ ಆಫ್ರಿಕಾ ಡಿಫೆನ್ಸ್ ಡೈಲಾಗ್ ನ್ನು ಸಂಘಟಿಸಲು ಭಾರತ ಪ್ರಸ್ತಾವನೆಯನ್ನು ನೀಡಿದೆ, ಹಾಗೂ ಆಫ್ರಿಕನ್ ದೇಶಗಳು ಮತ್ತು ಭಾರತದ ನಡುವೆ ಅಸ್ತಿತ್ವದಲ್ಲಿರುವ ಪಾಲುದಾರಿಕೆಯನ್ನು ನಿರ್ಮಿಸಲು ಸಹಾಯ ಮಾಡುತ್ತದೆ.

* ಮನೋಹರ್ ಪರಿಕ್ಕರ್ ಇನ್ಸ್ಟಿಟ್ಯೂಟ್ ಫಾರ್ ಡಿಫೆನ್ಸ್ ಸ್ಟಡೀಸ್ ಮತ್ತು ಅನಾಲಿಸಿಸ್ ಇಂಡಿಯಾ ಆಫ್ರಿಕಾ ಡಿಫೆನ್ಸ್ ಡೈಲಾಗ್'ನ ಜ್ಞಾನ ಪಾಲುದಾರರಾಗಲು ಭಾರತ ತೀರ್ಮಾನ ಕೈಗೊಂಡಿದೆ, ಇದರಿಂದ 2 ದೇಶಗಳ ನಡುವಿನ ರಕ್ಷಣಾ ವ್ಯಸ್ಥೆಗೆ ಅಗತ್ಯವಾಗಿರುವ ಬೆಂಬಲವನ್ನು ನೀಡುತ್ತದೆ.

* ಭಾರತ ಆಫ್ರಿಕಾ ರಕ್ಷಣಾ ಸಂವಾದದ ಮುಂದಿನ ಆವೃತ್ತಿಯಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 'ಡೆಫ್‌ಎಕ್ಸ್‌ಪೋ'ನಲ್ಲಿ ಆಫ್ರಿಕನ್ ರಾಷ್ಟ್ರಗಳ ರಕ್ಷಣಾ ಮಂತ್ರಿಗಳನ್ನು ಆಯೋಜಿಸಲಿದ್ದಾರೆ.

* 2022 ರ ಮಾರ್ಚ್ ನಲ್ಲಿ ಗುಜರಾತ್‌ನ ಗಾಂಧಿನಗರದಲ್ಲಿ ಈ ಡಿಫೆಕ್ಸ್ ಪೋ ನಡೆಯಲಿದೆ.

* 2020 ರಫೆಬ್ರವರಿ. 6 ರಂದು ಪ್ರಪ್ರಥಮ ಭಾರತ ಆಫ್ರಿಕಾ ರಕ್ಷಣಾ ಮಂತ್ರಿಗಳ ಸಮಾವೇಶವು ಉತ್ತರ ಪ್ರದೇಶದ ಲಕ್ನೋದಲ್ಲಿ ಡೆಫ್ ಎಕ್ಸ್‌ಪೋ ಜೊತೆಯಲ್ಲಿ ನಡೆಯಿತು.

* ಭಾರತ ಆಫ್ರಿಕಾ ಎರಡು ದೇಶಗಳ ನಡುವಿನ ರಕ್ಷಣಾ ಸಂಬಂಧಗಳ ಅಡಿಪಾಯವು 'ಸಾಗರ್' ಮತ್ತು 'ವಸುಧೈವ ಕುಟುಂಬಕಂ' ಎಂಬ ಎರಡು ಮಾರ್ಗದರ್ಶಿ ತತ್ವಗಳನ್ನು ಹೊಂದಿವೆ.

## ಸೋಲಾರ್ ಪಿವಿ ಕೋಶಗಳ ಉತ್ಪಾದನೆಯನ್ನು ಹೆಚ್ಚಿಸಲು ಕರೆ ನೀಡಿದ ಉಪರಾಷ್ಟ್ರಪತಿ




* ಪ್ರಸ್ತುತ ಭಾರತದಲ್ಲಿನ ಸೋಲಾರ್ ಪಿವಿ ಮಾರಾಟ ಮತ್ತು ಮಾಡ್ಯೂಲ್‌ಗಳ ಉತ್ಪಾದನೆಯನ್ನು ಹೆಚ್ಚಿಸುವಂತೆ ಭಾರತದ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ರಾಜ್ಯಗಳಿಗೆ ಕರೆ ನೀಡಿದ್ದಾರೆ.

* ರಾಜ್ಯಗಳಿಗೆ ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಉದ್ಯೋಗಿಗಳಿಗೆ ತರಬೇತಿ ನೀಡಲು ಸೂಚಿಸಿದರು, ಇದಕ್ಕೆ 'ಸೂರ್ಯ ಮಿತ್ರಗಳ' ಯೋಜನೆಯ ಉದಾಹರಣೆಯನ್ನು ನೀಡಿದ್ದಾರೆ.

* ಪ್ರಸ್ತುತ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿನ ಪಾಂಡಿಚೇರಿ ವಿಶ್ವವಿದ್ಯಾಲಯದಲ್ಲಿ 2.4 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರವನ್ನು ಅವರು ಉದ್ಘಾಟಣೆ ಮಾಡಿದರು.

* ಪ್ರಸ್ತುತ ಭಾರತವು ತನ್ನ ಸೌರ ವಿದ್ಯುತ್ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ವಿಶ್ವದಲ್ಲಿ 5 ನೇ ಸ್ಥಾನದಲ್ಲಿದೆ.

## ಹೊಸ ಮನೆಗಳಿಗೆ ಇವಿ ಚಾರ್ಜರ್‌ಗಳನ್ನು ಕಡ್ಡಾಯಗೊಳಿಸಿದ ಮೊದಲ ದೇಶ ಇಂಗ್ಲೆಂಡ್



* ಇಂಗ್ಲೆಂಡ್ ದೇಶವು ಇವಿ ಚಾರ್ಜರ್‌ಗಳನ್ನು ಸ್ಥಾಪಿಸಲು ಹೊಸ ಮನೆಗಳನ್ನು ಕಡ್ಡಾಯಗೊಳಿಸಿದ ಮೊದಲ ದೇಶವಾಗಿದೆ, ಇದೀಗ

ಬ್ರಿಟಿಷ್ ಸರ್ಕಾರವು 2021 ರಲ್ಲಿ ಶಾಸನವನ್ನು ಪರಿಚಯಿಸುವುದಾಗಿ ಘೋಷಣೆ ಮಾಡಿದೆ, ಹಾಗೂ ಈ ಶಾಸನದ ಅಡಿಯಲ್ಲಿ ಹೊಸದಾಗಿ ನಿರ್ಮಾಣ ಮಾಡಲಾಗುವ ಎಲ್ಲಾ ಮನೆಗಳು ಮತ್ತು ಕಚೇರಿಗಳು ಇಂಗ್ಲೆಂಡ್‌ನಲ್ಲಿ ಎಲೆಕ್ಟ್ರಿಕ್ ವಾಹನ ಚಾರ್ಜರ್‌ಗಳನ್ನು ಒಳಗೊಂಡಿರಬೇಕು ಆದೇಶಿಸಿದೆ.

* ಬ್ರಿಟಿಷ್ ಸರ್ಕಾರದ ಈ ಕಾನೂನಿನ ಅಡಿಯಲ್ಲಿ ಎಲ್ಲ ಹೊಸ ಮನೆ, ಕಚೇರಿ ಬ್ಲಾಕ್‌ಗಳು ಪ್ರತಿ 5 ಪಾರ್ಕಿಂಗ್ ಸ್ಥಳಗಳಿಗೆ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಬೇಕಾಗುತ್ತದೆ.
* ಇಂಗ್ಲೆಂಡ್ ದೇಶದ ಎಲ್ಲ ಮನೆ ಮತ್ತು ಕಚೇರಿ ಇವಿ ಚಾರ್ಜರ್ ಪ್ರಸ್ತಾಪವು 2022 ರಲ್ಲಿ ಆರಂಭವಾಗಲಿದೆ ಎಂದಿದ್ದಾರೆ.
* ಸರ್ಕಾರವು ಈ ಹಿಂದೆ 2019 ರಲ್ಲಿ ಎಲ್ಲಾ ಹೊಸ ಮನೆಗಳು ಪಾರ್ಕಿಂಗ್ ಸ್ಥಳದೊಂದಿಗೆ ಚಾರ್ಜ್ ಪಾಯಿಂಟ್ ಹೊಂದಿರಬೇಕು ಘೋಷಣೆ ಮಾಡಿತ್ತು.
* ಯುನೈಟೆಡ್ ಕಿಂಗ್‌ಡಮ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಅವರು 2030 ಹೊತ್ತಿಗೆ ಗ್ಯಾಸೋಲಿನ್ ಚಾಲಿತ ವಾಹನಗಳ ಮಾರಾಟವನ್ನು ನಿಷೇಧಿಸುವುದಾಗಿ ಘೋಷಣೆ ಮಾಡಿದ್ದಾರೆ.

## ಜಪಾನ್ ವಿಯೆಟ್ನಾಂ ರಕ್ಷಣಾ ಸಲಕರಣೆಗಾಗಿ ಒಪ್ಪಂದ



* ಜಪಾನ್ ಮತ್ತು ವಿಯೆಟ್ನಾಂ ದೇಶಗಳು ರಕ್ಷಣಾ ಸಲಕರಣೆಗಾಗಿ ಇತ್ತೀಚೆಗೆ ಹೊಸ ಒಪ್ಪಂದಕ್ಕೆ ಸಹಿ ಹಾಕಿವೆ, ಜಪಾನ್ ದೇಶ ನಿರ್ಮಾಣ ಮಾಡಿರುವ ರಕ್ಷಣಾ ಉಪಕರಣ ಹಾಗೂ ತಂತ್ರಜ್ಞಾನವನ್ನು ವಿಯೆಟ್ನಾಂಗೆ ರಫ್ತು ಮಾಡಲು ಈ ಒಪ್ಪಂದ ಸಹಾಯ ಮಾಡಲಿದೆ.
* ಜಪಾನ್ ಮತ್ತು ವಿಯೆಟ್ನಾಂ ದೇಶಗಳು ಚೀನಾದ ಮಿಲಿಟರಿ ಪ್ರಭಾವ ಹೆಚ್ಚುತ್ತಿರುವ ಕಾರಣದಿಂದ ತಮ್ಮ ರಕ್ಷಣಾ ಸಹಕಾರವನ್ನು ಹೆಚ್ಚಿಸಲು ಈ ಒಪ್ಪಂದಕ್ಕೆ ಸಹಿ ಹಾಕಿವೆ.
* ಜಪಾನ್ ಮತ್ತು ವಿಯೆಟ್ನಾಂ ರಾಷ್ಟ್ರಗಳು ಇಂಡೋ ಪೆಸಿಫಿಕ್ ಪ್ರದೇಶದಲ್ಲಿ ನೌಕಾಯಾನ ಮತ್ತು ಓವರ್‌ಫ್ಲೈಟ್ ಮತ್ತು ಸೈಬರ್ ಭದ್ರತೆಯ ಹಲವಾರು ರಕ್ಷಣಾ ಕ್ಷೇತ್ರಗಳಲ್ಲಿ ಸಹಕಾರವನ್ನು ಕಾಪಾಡಿಕೊಳ್ಳಲು ಈ ಒಪ್ಪಂದಕ್ಕೆ ಸಹಿ ಹಾಕಿವೆ.
* ದಕ್ಷಿಣ ಚೀನಾ ಸಮುದ್ರದಲ್ಲಿರುವ ಸ್ಪ್ರಾಟ್ಲಿ ಮತ್ತು ಪ್ಯಾರಾಸೆಲ್ ದ್ವೀಪ ಗುಂಪುಗಳ ಕುರಿತು ಚೀನಾದೊಂದಿಗೆ ವಿಯೆಟ್ನಾಂ ಪ್ರಾದೇಶಿಕ ವಿವಾದಗಳನ್ನು ಒಳಗೊಂಡಿದೆ.

# 15-09-2021

## ಶ್ರೀಲಂಕಾ ವೇಗಿ ಲಸಿತ್ ಮಾಲಿಂಗ ಎಲ್ಲಾ ಮಾದರಿಯ ಕ್ರಿಕೆಟ್ ನಿಂದ ನಿವೃತ್ತಿ ಘೋಷಣೆ



* ಪ್ರಸ್ತುತ ಶ್ರೀಲಂಕಾ ಕ್ರಿಕೆಟ್ ತಂಡದ ಅನುಭವಿ ವೇಗಿ ಬೌಲರ್ ಲಸಿತ್ ಮಾಲಿಂಗಾ ಅವರು 2021 ರ ಸೆಪ್ಟೆಂಬರ್.14 ರಂದು ಎಲ್ಲಾ ಮಾದರಿಯ ಕ್ರಿಕೆಟ್ ನಿಂದ ನಿವೃತ್ತಿ ಘೋಷಿಸಿದ್ದಾರೆ, ತಮ್ಮ ನಿವೃತ್ತಿಯ ಕುರಿತು ಅಧಿಕೃತ ಸಾಮಾಜಿಕ ತಾಣ ಖಾತೆಯಲ್ಲಿ ತಾವೇ ಪ್ರಕಟಿಸಿದ್ದಾರೆ.
* ಲಸಿತ್ ಮಾಲಿಂಗಾ ಅವರು ಈ ಹಿಂದೆ 2014 ರಲ್ಲಿ ನಡೆದ ಟಿ ಟ್ವೆಂಟಿ ವಿಶ್ವಕಪ್ ನಲ್ಲಿ ವಿಜೇತರಾಗಿದ್ದ ಶ್ರೀಲಂಕಾ ತಂಡದ ನಾಯಕತ್ವವನ್ನು ವಹಿಸಿಕೊಂಡಿದ್ದರು.
* ಈ ಹಿಂದೆ 2021 ರ ಜನೇವರಿಯಲ್ಲಿ ಅವರು ಟಿ 20 ಫ್ರ್ಯಾಂಚೈಸ್ ಕ್ರಿಕೆಟ್ ನಿಂದ ನಿವೃತ್ತರಾಗಿದ್ದರು, ಆದರೆ ಟಿ 20 ಅಂತಾರಾಷ್ಟ್ರೀಯ ಪಂದ್ಯಗಳಿಂದ ದೂರವಾಗಿರಲಿಲ್ಲ, ಆದರೆ ಇದೀಗ ಎಲ್ಲ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.
* ಲಸಿತ್ ಮಾಲಿಂಗ ಆಗಸ್ಟ್.28 1983 ರಂದು ಜನಿಸಿದ್ದಾರೆ, ಇವರು ಶ್ರೀಲಂಕಾದ ಮಾಜಿ ಕ್ರಿಕೆಟಿಗ, ಸಾರ್ವಕಾಲಿಕ ಶ್ರೇಷ್ಠ ಸೀಮಿತ ಓವರ್ ಬೌಲರ್ ಆಗಿದ್ದರು, ಹಾಗು ಇವರು ತಮ್ಮ ವೃತ್ತಿ ಜೀವನದಲ್ಲಿ ಎರಡು ವಿಶ್ವಕಪ್ ಹ್ಯಾಟ್ರಿಕ್‌ಗಳನ್ನು ಪಡೆದ ವಿಶ್ವದ ಏಕೈಕ ಬೌಲರ್ ಇವರಾಗಿದ್ದಾರೆ, ಹಾಗೂ ಏಕದಿನದಲ್ಲಿ 3 ಹ್ಯಾಟ್ರಿಕ್ ಪಡೆದ ಏಕೈಕ ಬೌಲರ್, ಅಲ್ಲದೇ ಅಂತಾರಾಷ್ಟ್ರೀಯ ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಲ್ಲಿ 5 ಹ್ಯಾಟ್ರಿಕ್‌ಗಳನ್ನು ಪಡೆದ ಮೊದಲ ಬೌಲರ್ ಇವರಾಗಿದ್ದಾರೆ.
* ಲಸಿತ್ ಮಾಲಿಂಗ ಅವರು 2019 ರ ಜುಲೈ. 26 ರಂದು ಬಾಂಗ್ಲಾದೇಶದ ವಿರುದ್ಧದ ಮೊದಲ ಏಕದಿನ ಪಂದ್ಯದ ನಂತರ ಅವರು ಏಕದಿನ ಅಂತರಾಷ್ಟ್ರೀಯ ಕ್ರಿಕೆಟ್ ನಿಂದ ನಿವೃತ್ತಿ ಘೋಷಿಸಿದ್ದರು.

## ಜೊಮಾಟೊ ಸಂಸ್ಥೆ ತೊರೆದ ಸಹ ಸಂಸ್ಥಾಪಕ ಗೌರವ್ ಗುಪ್ತಾ




* ಪ್ರಸ್ತುತ ಜೊಮಾಟೊ ಸಹ ಸಂಸ್ಥಾಪಕ ಗೌರವ್ ಗುಪ್ತಾ ಅವರು ಜೊಮಾಟೊ ಸಂಸ್ಥೆ ತೊರೆದಿದ್ದಾರೆ, ಹಾಗೂ ಇವರು ಜೊಮಾಟೊ ಸಂಸ್ಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.
* ಗೌರವ್ ಗುಪ್ತಾ ಅವರನ್ನು 2019 ರಲ್ಲಿ ಅಧಿಕೃತವಾಗಿ ಜೊಮಾಟೊ ಸಹ ಸಂಸ್ಥಾಪಕ ಎಂದು ಘೋಷಣೆ ಮಾಡಲಾಗಿತ್ತು.
* ಜೊಮಾಟೊ ಜನಪ್ರಿಯ ಆಹಾರ ಪೂರೈಕೆ ಸಂಸ್ಥೆಯಾಗಿದೆ.
* ಗೌರವ್ ಗುಪ್ತಾ ಅವರು ಜೊಮಾಟೊ ಸಂಸ್ಥಾಪಕ ಹಾಗೂ ಸಿಇಒ ದೀಪಿಂದರ್ ಗೋಯಲ್ ಅವರಿಗೆ ಧನ್ಯವಾದ ತಿಳಿಸಿದ್ದಾರೆ.
* ಜೊಮಾಟೊ ಭಾರತೀಯ ಬಹುರಾಷ್ಟ್ರೀಯ ರೆಸ್ಟೋರೆಂಟ್ ಸಂಗ್ರಾಹಕ ಆಹಾರ ವಿತರಣಾ ಸಂಸ್ಥೆಯಾಗಿದೆ.
* ಜೊಮಾಟೊ ಸಂಸ್ಥೆಯನ್ನು ದೀಪೀಂದರ್ ಗೋಯಲ್, ಪಂಕಜ್ ಚಡ್ಡಾ ಮತ್ತು ಗುಂಜನ್ ಪಾಟಿದಾರ್ ಅವರು 2008 ರಲ್ಲಿ ಸ್ಥಾಪಿಸಿದ್ದಾರೆ.
* ಜೊಮಾಟೊ ಸಂಸ್ಥೆಯು ಹರಿಯಾಣ ರಾಜ್ಯದ ಗುರುಗ್ರಾಮ ಎಂಬಲ್ಲಿ ತನ್ನ ಪ್ರಧಾನ ಕಚೇರಿಯನ್ನು ಹೊಂದಿದೆ, ಹಾಗೂ 5,000 ಕ್ಕಿಂತಲೂ ಅಧಿಕ ಉದ್ಯೋಗಿಗಳನ್ನು ಹೊಂದಿದೆ.

## ಅಮೆಜಾನ್ ಇಂಡಿಯಾದ ಅತಿದೊಡ್ಡ ಫುಲ್‌ಫಿಲ್‌ಮೆಂಟ್ ಕೇಂದ್ರ ಬೆಂಗಳೂರಿನಲ್ಲಿ ಸ್ಥಾಪನೆ




* ಇ ಕಾಮರ್ಸ್ ನ ದೈತ್ಯ ಅಮೆಜಾನ್ ದೇಶದಲ್ಲಿ ತನ್ನ ಅತಿದೊಡ್ಡ ಫುಲ್ ಫಿಲ್‌ಮೆಂಟ್ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿದೆ, ಈ ಫುಲ್‌ಫಿಲ್‌ಮೆಂಟ್ ಕೇಂದ್ರವು 2.4 ಮಿಲಿಯನ್ ಕ್ಯೂಬಿಕ್ ಫೀಟ್ ಗಿಂತಲೂ ಅಧಿಕ ಸ್ಟೋರೇಜ್ ಸಾಮರ್ಥ್ಯ ಹೊಂದಿದೆ ಎಂದು ಅಮೆಜಾನ್ ಇಂಡಿಯಾ ತಿಳಿಸಿದೆ.
* ಪ್ರಸ್ತುತ ಕರ್ನಾಟಕದಲ್ಲಿನ 42,000 ಕ್ಕೂ ಅಧಿಕ ಮಾರಾಟಗಾರರಿಗೆ ದೇಶಾದ್ಯಂತ ದೊಡ್ಡ ಗ್ರಾಹಕ ಬಳಗವನ್ನು ನೀಡುವ ನಿಟ್ಟಿನಲ್ಲಿ ಈ ಕೇಂದ್ರವನ್ನು ತರೆದಿದೆ.
* ಪ್ರಸ್ತುತ ಅಮೆಜಾನ್ ಇಂಡಿಯಾ ಕಂಪನಿಯು ತನ್ನ 5 ಫುಲ್‌ಫಿಲ್ ಮೆಂಟ್ ಕೇಂದ್ರಗಳಲ್ಲಿ 6.5 ಮಿಲಿಯನ್ ಕ್ಯೂಬಿಕ್ ಫೀಟ್ ಸ್ಟೋರೇಜ್ ಸಾಮರ್ಥ್ಯವನ್ನು ಹೊಂದಿದೆ.

## ಅಲೀಗಡನ ರಾಜ ಮಹೇಂದ್ರ ಪ್ರತಾಪ್ ಸಿಂಗ್ ವಿಶ್ವವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಮೋದಿ



* ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶ ರಾಜ್ಯದ ಅಲೀಗಡನ ರಾಜಾ ಮಹೇಂದ್ರ ಪ್ರತಾಪ ಸಿಂಗ್ ವಿಶ್ವವಿದ್ಯಾಲಯಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದ್ದಾರೆ.
* ಈ ವಿಶ್ವವಿದ್ಯಾಲಯದ ಶಂಕುಸ್ಥಾಪನೆಯ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಹಾಗೂ ಉಪ ಮುಖ್ಯಮಂತ್ರಿ ದಿನೇಶ್ ಶರ್ಮಾ ಭಾಗಿಯಾಗಿದ್ದರು.
* ಪ್ರಸ್ತುತ ರಾಜಾ ಮಹೇಂದ್ರ ಪ್ರತಾಪ ಸಿಂಗ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣ ತಜ್ಞ, ಸಮಾಜ ಸುಧಾರಕರಾಗಿದ್ದರು, ಇವರ ಸವಿನೆನಪಿಗಾಗಿ ಮತ್ತು ಗೌರವಾರ್ಥವಾಗಿ ಉತ್ತರ ಪ್ರದೇಶ ಸರ್ಕಾರವು ವಿಶ್ವವಿದ್ಯಾಲಯವನ್ನು ನಿರ್ಮಿಸುತ್ತಿದೆ.
* ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸರ್ಕಾರವು ಉತ್ತರ ಪ್ರದೇಶ ರಾಜ್ಯದ ಅಲೀಗಡನ ಲೋಧಾ ಗ್ರಾಮದಲ್ಲಿ 92 ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ನಿರ್ಧರಿಸಿದೆ, ಪ್ರಸ್ತುತ ಅಲೀಗಡದ 395 ಕಾಲೇಜುಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರಲಿವೆ ಎಂದಿದ್ದಾರೆ.

## ರಾಷ್ಟ್ರಮಟ್ಟದ ಶೂಟರ್ ನಮನ್‌ವೀರ್ ಸಿಂಗ್ ಆತ್ಮಹತ್ಯೆ



* ಪ್ರಸ್ತುತ ರಾಷ್ಟ್ರಮಟ್ಟದ ಶೂಟರ್ ಕ್ರೀಡಾಪಟು ನಮನ್‌ವೀರ್ ಸಿಂಗ್ ಬ್ರಾರ್ ಅವರು ಮೊಹಾಲಿಯ ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.
* ಶೂಟರ್ ನಮನ್‌ವೀರ್ ಸಿಂಗ್ ಬ್ರಾರ್ ಅವರು ತಮ್ಮ ತಲೆಗೆ ತಾವೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ, ಆದರೆ ಅಧಿಕೃತ ಮಾಹಿತಿಯು ಮರಣೋತ್ತರ ಪರೀಕ್ಷೆಯ ಬಳಿಕ ತಿಳಿಯಲಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.
* ಶೂಟರ್ ನಮನ್‌ವೀರ್ ಸಿಂಗ್ ಬ್ರಾರ್ ಅವರು ಇತ್ತೀಚಿಗೆ ದಕ್ಷಿಣ ಕೊರಿಯಾದಲ್ಲಿ ನಡೆದಿರುವ ಜಾಗತಿಕ ವಿಶ್ವವಿದ್ಯಾಲಯಗಳ ಡಬಲ್ ಟ್ರ್ಯಾಪ್ ಶೂಟಿಂಗ್ ವಿಭಾಗದಲ್ಲಿ ಕಂಚಿಕ ಪದಕ ಜಯಿಸಿದ್ದರು. * ಟ್ರ್ಯಾಪ್ ಶೂಟರ್ ನಮನ್‌ವೀರ್ ಸಿಂಗ್ ಬ್ರಾರ್ ಅವರು ಈ ವರ್ಷದ ಮಾರ್ಚ್ ನಲ್ಲಿ ನಡೆದ ದೆಹಲಿ ಶೂಟಿಂಗ್ ವಿಶ್ವಕಪ್ ನ ಕನಿಷ್ಠ ಅರ್ಹತಾ ಸ್ಕೋರ್ ವಿಭಾಗದಲ್ಲಿ 4 ನೇ ಸ್ಥಾನವನ್ನು ಪಡೆದುಕೊಂಡಿದ್ದರು.

## ಭಾರತ ಅಮೆರಿಕ ಸಹಕಾರ ವೃದ್ಧಿಗಾಗಿ ಹವಾಮಾನ ಮತ್ತು ಶುದ್ಧ ಇಂಧನ ಪಾಲುದಾರಿಕೆ ಮಸೂದೆ ಮಂಡನೆ



* ಪ್ರಸ್ತುತ ಅಮೆರಿಕ ಸಂಸದ ರಾಬರ್ಟ್ ಮೆಂಡೇಜ್ ಅವರು ಅಮೆರಿಕ ಹಾಗೂ ಭಾರತ ರಾಷ್ಟ್ರಗಳ ಮಧ್ಯೆ ಹವಾಮಾನ ಹಾಗೂ ಶುದ್ಧ ಇಂಧನ ಕ್ಷೇತ್ರದಲ್ಲಿ ಸಹಕಾರವನ್ನು ಅಭಿವೃದ್ಧಿಗೊಳಿಸುವ ಮಸೂದೆಯೊಂದನ್ನು ಅಮೇರಿಕದ ಸೆನೆಟ್‌ನಲ್ಲಿ ಮಂಡಿನೆ ಮಾಡಿದ್ದಾರೆ.
* ಈ ಮಸೂದೆ ಮಂಡನೆಯೊಂದಿಗೆ ಉಭಯ ರಾಷ್ಟ್ರಗಳು ಜತೆಯಾಗಿ ಕೆಲಸ ಮಾಡುವದರಿಂದ ಉತ್ತಮ ಫಲಿತಾಂಶ ಸಿಗಲಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಭಾರತ ದೇಶದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪರಿಗಣಿಸಿ ಶುದ್ಧ ಇಂಧನ ಪಾಲುದಾರಿಕೆಯನ್ನು ಬಲಪಡಿಸಲು ಅಮೆರಿಕ ಭಾರತ ದೇಶಗಳಿಗೆ ಈ ಮಸೂದೆಯು ನೆರವಾಗಲಿದೆ ಎಂದು ತಿಳಿಸಿದ್ದಾರೆ.

## ಇದೇ ಸೆಪ್ಟೆಂಬರ್ 24 ರಂದು ಪ್ರಧಾನಿ ಮೋದಿ ಕ್ವಾಡ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ




* ಇದೇ ಸೆಪ್ಟೆಂಬರ್ 24 ರಂದು ವಾಷಿಂಗ್ಟನ್‌ನಲ್ಲಿ ನಡೆಯುವ ಕ್ವಾಡ್ ನಾಯಕರ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ.

* ಮತ್ತೇ ಇದೇ ಸೆಪ್ಟೆಂಬರ್ 25 ರಂದು ನ್ಯೂಯಾರ್ಕ್ ನಲ್ಲಿ ನಡೆಯುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 76 ನೇ ಅಧಿವೇಶನದಲ್ಲಿ ಪ್ರಧಾನಿ ಮೋದಿ ಭಾಗಿಯಾಗಲಿದ್ದಾರೆ, ಹಾಗೂ ಚತುರ್ಭುಜ ಚೌಕಟ್ಟಿನ ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕದ ನಾಯಕರ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

* ಮಾರ್ಚ್ 2021 ರ ಕ್ವಾಡ್ ಸಭೆಯಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಲಸಿಕೆ ಆರಂಭದ ಪ್ರಯತ್ನಗಳನ್ನು ಪ್ರಾರಂಭಿಸಿದ್ದರು.

* ಚತುರ್ಭುಜ ಸಂವಾದ: 2007 ರಲ್ಲಿ ಕ್ವಾಡ್ ಗೆ ಅಮೇರಿಕ, ಭಾರತ, ಜಪಾನ್ ಮತ್ತು ಆಸ್ಟ್ರೇಲಿಯಾ ಈ ನಾಲ್ಕು ದೇಶಗಳನ್ನು ಸೇರಿಸಲಾಯಿತು, ಮತ್ತೇ ಈ ಗುಂಪನ್ನು 2017 ರಲ್ಲಿ ಪುನರುಜ್ಜೀವನಗೊಳಿಸಲಾಯಿತು.

## ಕೇಂದ್ರ ಸರ್ಕಾರವು ಭಾರತದ 36,000 ಹಳ್ಳಿಗಳಲ್ಲಿ ಆದರ್ಶ ಗ್ರಾಮ ಯೋಜನೆಯನ್ನು ಆರಂಭಿಸಲಿದೆ




* ಪ್ರಸ್ತುತ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯನ್ನು ಭಾರತದ 36,000 ಹಳ್ಳಿಗಳಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಆರಂಭಿಸಲಿದೆ.

* ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಅಡಿಯಲ್ಲಿ ಸುಮಾರು 50 ಪ್ರತಿಶತ ಬುಡಕಟ್ಟು ಜನಸಂಖ್ಯೆ ಹೊಂದಿರುವ ಗ್ರಾಮಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

* ಪ್ರಸ್ತುತ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಅಡಿಯಲ್ಲಿ ಅಸ್ಸಾಂನ ಸುಮಾರು 1700 ಬುಡಕಟ್ಟು ಗ್ರಾಮಗಳನ್ನು ಮಾದರಿ ಗ್ರಾಮವಾಗಿ ಪರಿವರ್ತಿಸಲಾಗುತ್ತದೆ, ಹಾಗೂ 60 ಸಾವಿರ ಜನರಿಗೆ ಅನುಕೂಲವಾಗುವಂತೆ 184 ಹೊಸ ವನ್ ಧನ್ ಕೇಂದ್ರವನ್ನು ನಿರ್ಮಿಸಲಾಗುವದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

* 'ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಯು' ರಾಷ್ಟ್ರೀಯ ಮಟ್ಟದಲ್ಲಿ ತಾಂತ್ರಿಕ ಸಂಪನ್ಮೂಲ ಬೆಂಬಲವನ್ನು ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಗೆ ನೀಡಲಿದೆ ಎಂದು ತಿಳಿಸಲಾಗಿದೆ.

* ಪ್ರಸ್ತುತ ಆದರ್ಶ ಗ್ರಾಮವೆಂದು ಘೋಷಿಸಬೇಕಾದರೆ, ಆ ಗ್ರಾಮಗಳು ಮೂರು ವರ್ಷಗಳೊಳಗೆ ಕನಿಷ್ಠ ಮೂರು ಗುರಿಗಳನ್ನು ಸಾಧಿಸಬೇಕು. ಬಡತನ ನಿರ್ಮೂಲನೆ ಮತ್ತು ಮೂರು ವರ್ಷಗಳಲ್ಲಿ ಅದರ ಸಂಭವವನ್ನು 50% ರಷ್ಟು ಕಡಿಮೆಗೊಳಿಸುವುದು. 100% ದಾಖಲಾತಿ ಮತ್ತು ಪ್ರಾಥಮಿಕ ಹಂತದಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವುದು. ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ದರ ಇಳಿಕೆ. ಗ್ರಾಮಗಳು 100 % ಬಯಲು ಶೌಚ ಮುಕ್ತವಾಗಬೇಕು. ಸುಸ್ಥಿರ ಆಧಾರದ ಮೇಲೆ ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯಕ್ಕೆ ಪ್ರವೇಶ. ಗರ್ಭಿಣಿ ಮಹಿಳೆಯರಿಗೆ 100% ಸಾಂಸ್ಥಿಕ ಹೆರಿಗೆಗಳುಮಕ್ಕಳ ಸಂಪೂರ್ಣ ರೋಗನಿರೋಧಕ ಗ್ರಾಮಕ್ಕೆ ಎಲ್ಲಾ ಹವಾಮಾನದ ರಸ್ತೆ ಸಂಪರ್ಕ100% ಸಾವು ಮತ್ತು ಜನನದ ನೋಂದಣಿ ಬಾಲ್ಯ ವಿವಾಹಗಳು ಮತ್ತು ಬಾಲಕಾರ್ಮಿಕ ಪದ್ಧತಿ ಇಲ್ಲ ಮದ್ಯ ಮತ್ತು ಮಾದಕ ವಸ್ತುಗಳ ಸಾರ್ವಜನಿಕ ಬಳಕೆ ಇಲ್ಲಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ ಮನೆಗಳ 100% ಹಂಚಿಕೆ.

## ದಕ್ಷಿಣ ದಕ್ಷಿಣ ಸಹಕಾರಕ್ಕಾಗಿ ಸೆಪ್ಟೆಂಬರ್ 12 ರಂದು ಅಂತರರಾಷ್ಟ್ರೀಯ ದಿನ ಆಚರಣೆ

* ವಿಶ್ವಸಂಸ್ಥೆಯು ಪ್ರತಿ ವರ್ಷ ಸೆಪ್ಟೆಂಬರ್ 12 ರಂದು ದಕ್ಷಿಣ ದಕ್ಷಿಣ ಸಹಕಾರಕ್ಕಾಗಿ ಅಂತರರಾಷ್ಟ್ರೀಯ ದಿನವನ್ನು ಆಚರಣೆ ಮಾಡಲಾಗುತ್ತದೆ.

* ವಿಶ್ವಸಂಸ್ಥೆಯು ಅಭಿವೃದ್ಧಿಯಾಗುತ್ತಿರುವ ದೇಶಗಳ ನಡುವಿನ ಸಹಕಾರಕ್ಕಾಗಿ ಈ ದಿನವನ್ನು ಆಚರಿಸಲಾಗುತ್ತದೆ.

* ಇದು ದಕ್ಷಿಣ ಪ್ರದೇಶದಲ್ಲಿರುವ ದೇಶಗಳ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಗಳಿಗೆ ಒಂದು ಉಪಕ್ರಮವಾಗಿದೆ.

* ದಕ್ಷಿಣ ದಕ್ಷಿಣ ಸಹಕಾರ ಎಂದರೇ: ದಕ್ಷಿಣ ದಕ್ಷಿಣ ಸಹಕಾರವು ಜಾಗತಿಕ ದಕ್ಷಿಣದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ 'ತಾಂತ್ರಿಕ ಸಹಕಾರ'ವನ್ನು ಸೂಚಿಸುತ್ತದೆ.

* ಈ ದಕ್ಷಿಣ ದಕ್ಷಿಣ ಸಹಯೋಗವು ಅಭಿವೃದ್ಧಿಯಾಗುತ್ತಿರುವ ರಾಷ್ಟ್ರಗಳಿಗೆ ತಮ್ಮ ಅಭಿವೃದ್ಧಿ ಗುರಿಗಳನ್ನು ತಲುಪಲು ಜ್ಞಾನ, ಕೌಶಲ್ಯ ಹಾಗೂ ಸಂಪನ್ಮೂಲಗಳನ್ನು ವಿನಿಮಯ ಮಾಡಿಕೊಳ್ಳಲು ಸಹಾಯವನ್ನು ಒದಗಿಸಿಕೊಡುತ್ತದೆ.

*ದಕ್ಷಿಣ ದಕ್ಷಿಣ ಸಹಕಾರದ ಉದ್ದೇಶಗಳು: ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸ್ವಾವಲಂಬನೆಯನ್ನು ಅಧಿಕಗೊಳಿಸುವುದು ಹಾಗೂ ಅಭಿವೃದ್ಧಿ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು. ಅನುಭವದ ವಿಚಾರಗಳನ್ನೂ ವಿನಿಮಯ ಮಾಡಿಕೊಂಡು ಸ್ವಾವಲಂಬನೆಗೆ ಉತ್ತೇಜನ ನೀಡುವುದು. ಅಂತರರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳಲ್ಲಿ ಅಧಿಕವಾಗಿ ಪಾಲ್ಗೊಳ್ಳುವುದು, ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳ ಸಮಸ್ಯೆಗಳನ್ನು ಹಾಗೂ ಅಗತ್ಯ ಅವಶ್ಯಕತೆಗಳನ್ನು ಪರಿಗಣಿಸುವುದು.

## ಭಾರತ ಸಿಂಗಾಪುರ ಯುಪಿಐ ಮತ್ತು ಪೇನೌ(PayNow)ಲಿಂಕ್ ಮಾಡಲು ಘೋಷಣೆ



* ಪ್ರಸ್ತುತ ಭಾರತ ಹಾಗೂ ಸಿಂಗಾಪುರ್ ಏಕೀಕೃತ ಪಾವತಿ ಇಂಟರ್ಫೇಸ್ (UPI) ಹಾಗೂ ಪೇನೌ(PayNow) ಲಿಂಕ್ ಮಾಡುವುದನ್ನು ಘೋಷಣೆ ಮಾಡಿವೆ, ಇದರಿಂದಾಗಿ ಪ್ರಸ್ತುತ ಬಳಕೆದಾರರಿಗೆ ತ್ವರಿತ, ಕಡಿಮೆ ಬೆಲೆಯ ನಿಧಿ ವರ್ಗಾವಣೆಯನ್ನು ಮಾಡಲು ಸಹಾಯ ಮಾಡಿಕೊಡಲಾಗುತ್ತದೆ ಎಂದು ತಿಳಿಸಲಾಗಿದೆ.
* ಭಾರತೀಯ ರಿಸರ್ವ್ ಬ್ಯಾಂಕ್ (RBI) ಮತ್ತು ಸಿಂಗಾಪುರದ ಹಣಕಾಸು ಪ್ರಾಧಿಕಾರ (MAS)ವು ಭಾರತ ಸಿಂಗಾಪುರ ದೇಶಗಳ ವೇಗದ ಪಾವತಿ ವ್ಯವಸ್ಥೆಗಳನ್ನು ಲಿಂಕ್ ಮಾಡುವ ಯೋಜನೆಯನ್ನು ಘೋಷಿಸಿವೆ, ಈ ಲಿಂಕ್ಡ್ ಪೇಮೆಂಟ್ ಇಂಟರ್ಫೇಸ್ ಜುಲೈ 2022 ರೊಳಗೆ ಕಾರ್ಯರೋಪಕ್ಕೆ ತರಲಾಗುತ್ತದೆ ಎಂದು ತಿಳಿಸಿದ್ದಾರೆ.
* UPI ಎಂಬುವುದು ಮೊಬೈಲ್ ಆಧಾರಿತ ವೇಗದ ಪಾವತಿ ವ್ಯವಸ್ಥೆಯಾಗಿದೆ, UPI ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ, ಹಾಗೂ ವ್ಯಕ್ತಿಯಿಂದ ವ್ಯಾಪಾರಿಗೆ ಹಣವನ್ನು ಕಳುಹಿಸಲು ಅಥವಾ ಸ್ವೀಕರಿಸಲು ಇದು ಸಹಾಯ ಮಾಡುತ್ತದೆ.
* PayNow: ಎಂಬುವುದು ಸಿಂಗಾಪುರದ ವೇಗದ ಪಾವತಿ ವ್ಯವಸ್ಥೆಯಾಗಿದೆ, ಇದರಿಂದ ಬಳಕೆದಾರರು ತಮ್ಮ ಮೊಬೈಲ್ ಸಂಖ್ಯೆ, ಸಿಂಗಾಪುರ್ NRIC/FIN, ಅಥವಾ VPA ಅನ್ನು ಬಳಸಿ ಒಂದು ಬ್ಯಾಂಕ್ ಅಥವಾ ಇ ವ್ಯಾಲೆಟ್ ಖಾತೆಯಿಂದ ಮತ್ತೊಂದು ಖಾತೆಗೆ ವೇಗವಾಗಿ ಹಣವನ್ನು ಕಳುಹಿಸಲು ಮತ್ತು ಸ್ವೀಕರಿಸಲು ಸಹಾಯ ಮಾಡುತ್ತದೆ.

# 16-09-2021

## 2021 ರ ಟೈಮ್ ನಿಯತಕಾಲಿಕೆಯ 100 ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಮೋದಿ, ಮಮತಾ, ಪೂನಾವಲ



* ಪ್ರಸ್ತುತ 2021 ರ ಟೈಮ್ ನಿಯತಕಾಲಿಕೆಯ 100 ಅತ್ಯಂತ ಪ್ರಭಾವಶಾಲಿಗಳ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಸಿಇಒ (CEO) ಆದರ್ ಪೂನವಲ್ಲ ಸ್ಥಾನ ಪಡೆದುಕೊಂಡಿದ್ದಾರೆ.
* ಟೈಮ್ ವಾರ್ಷಿಕ 2021 ರ 100 ಪ್ರಭಾವಶಾಲಿಗಳ ಜಾಗತಿಕ ಪಟ್ಟಿಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬಿಡೆನ್, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಡ್ಯೂಕ್ ಮತ್ತು ಡಚೆಸ್ ಆಫ್ ಸಸೆಕ್ಸ್ ಪ್ರಿನ್ಸ್ ಹ್ಯಾರಿ ಮತ್ತು ಮೇಘನ್, ಮಾಜಿಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ತಾಲಿಬಾನ್ ಸಹ ಸಂಸ್ಥಾಪಕ ಮುಲ್ಲಾ ಅಬ್ದುಲ್ ಘನಿ ಬರದಾರ್ ಸ್ಥಾನ ಪಡೆದುಕೊಂಡಿದ್ದಾರೆ.
* ಈ ಹಿಂದೆ ಟೈಮ್ ಪ್ರಭಾವಶಾಲಿಗಳ ಪಟ್ಟಿಯಲ್ಲಿ ಜವಾಹರಲಾಲ್ ನೆಹರು ಹಾಗೂ ಇಂದಿರಾ ಗಾಂಧಿ ಅವರು ಸ್ಥಾನ ಪಡೆದುಕೊಂಡಿದ್ದರು.

## ಪ್ರಧಾನಿ ಮೋದಿಯಿಂದ 'ಸಂಸದ್ ಟಿವಿ' ಅನಾವರಣ




* ಪ್ರಧಾನಮಂತ್ರಿ ನರೇಂದ್ರ ಮೋದಿ, ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹಾಗೂ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸಂಸತ್ ಭವನದ ಅನುಬಂಧದ ಮುಖ್ಯ ಸಮಿತಿ ಕೊಠಡಿಯಲ್ಲಿ 'ಸಂಸದ್ ಟಿವಿ'ಗೆ ಚಾಲನೆ ನೀಡಿದರು, ಈ ಟಿವಿ ಚಾನೆಲ್ OTT, ಸಾಮಾಜಿಕ ಮಾಧ್ಯಮಗಳಲ್ಲಿ ಲಭ್ಯವಿದೆ, ಹಾಗೂ ಇದು ಆಪ್ ಸಹ ಹೊಂದಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಈ ಸಂಸದ್ ಟಿವಿ ಕ್ರಾಯಕ್ರಮವು ಪ್ರಾಥಮಿಕವಾಗಿ '4' ವಿಭಾಗಗಳಲ್ಲಿ ಇರಲಿದೆ: ಸಂಸತ್ತು ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳ ಕಾರ್ಯನಿರ್ವಹಣೆ, ಯೋಜನೆಗಳು, ನೀತಿಗಳ ಆಡಳಿತ ಮತ್ತು ಅನುಷ್ಠಾನ, ಭಾರತದ ಇತಿಹಾಸ, ಸಂಸ್ಕೃತಿ ಮತ್ತು ಸಮಕಾಲೀನ ಸ್ವರೂಪದ ಸಮಸ್ಯೆಗಳು, ಹಿತಾಸಕ್ತಿಗಳು, ಹಾಗೂ ಕಾಳಜಿಗಳು.

## ಭಾರತೀಯ ವಾಯುಪಡೆಯು ಶ್ರೀನಗರದ ದಾಲ್ ಸರೋವರದ ಮೇಲೆ ಏರ್ ಶೋ



* ಪ್ರಸ್ತುತ ಭಾರತೀಯ ವಾಯುಪಡೆಯು ಕಾಶ್ಮೀರದ ಯುವಕರನ್ನು ಸೇನೆಗೆ ಸೇರಲು ಪ್ರೇರೇಪಿಸುವ ಹಾಗೂ ಈ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸೆ.26 ರಂದು ಇಲ್ಲಿನ ಪ್ರಸಿದ್ಧ ದಾಲ್ ಸರೋವರದ ಮೇಲೆ ಏರ್ ಶೋ ನಡೆಸಲಿದೆ ಎಂದು ವಾಯುಪಡೆಯು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ಪ್ರಸ್ತುತ ಶ್ರೀನಗರದ ದಾಲ್ ಸರೋವರದ ಮೇಲೆ ನಡೆಯುವ ಏರ್ ಶೋ ಪ್ರದರ್ಶನದಲ್ಲಿ 3,000 ಕ್ಕೂ ಅಧಿಕ ಶಾಲಾ ಮಕ್ಕಳು ಮತ್ತು ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ.
* ಭಾರತೀಯ ವಾಯುಪಡೆಯು ಆಜಾದ ಕಾ ಅಮೃತ್ ಮಹೋತ್ಸವ ಆಚರಣೆಯ ಅಂಗವಾಗಿ ನಡೆಸುತ್ತಿರುವ ಈ ಏರ್ ಶೋ ಗೆ ವಿದ್ಯಾರ್ಥಿಗಳನ್ನು ಕರೆತರಲು ವಿವಿಧ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರ ಜೊತೆ ಮಾತುಕತೆನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## ಪಾಕಿಸ್ತಾನದ ಕರೆನ್ಸಿಯು ಏಷ್ಯಾದಲ್ಲೇ ಕಳಪೆ ಕರೆನ್ಸಿ ಎಂಬ ಅಪಖ್ಯಾತಿಗೆ ಪಾತ್ರವಾಗಿದೆ




* ಪ್ರಸ್ತುತ ಅಮೇರಿಕದ ಡಾಲರ್ ಎದುರು ಪಾಕಿಸ್ತಾನದ ರೂಪಾಯಿ ಮೌಲ್ಯವು 1 ರೂ. ಗಿಂತಲೂ ಹೆಚ್ಚು ಕುಸಿದಿದೆ, ಅಲ್ಲದೇ ಅಂತರ ಬ್ಯಾಂಕ್ ವಹಿವಾಟಿನಲ್ಲಿ 169.9 ರೂ.ಗಳಷ್ಟಾಗಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಪಾಕಿಸ್ತಾನದ ರೂಪಾಯಿ ಮೌಲ್ಯದ ದಾಖಲೆಯ ಕುಸಿತವನ್ನು ಕಂಡಿದೆ ಎನ್ನಲಾಗಿದೆ, ಇದಕ್ಕೂ ಮೊದಲು ಅಮೇರಿಕ ಡಾಲರ್ ಎದುರು ಪಾಕಿಸ್ತಾನದ ರೂಪಾಯಿ ಮೌಲ್ಯವು
168.94 ರೂ. ಗಳಷ್ಟಿತ್ತು, ಎಂದು ಈ ಮಾಹಿತಿಯನ್ನು ಪಾಕಿಸ್ತಾನದ ಎಕ್ಸ್ ಚೇಂಜ್ ಕಂಪನಿಗಳ ಅಸೋಸಿಯೇಶನ್‌ನ ಅಧ್ಯಕ್ಷ ಮಲಿಕ್ ಬೋಸ್ತಾನ್ ಮಾಧ್ಯಮಗಳಿಗೆ ಮಾಹಿತಿಯನ್ನು ನೀಡಿದ್ದಾರೆ.
* ಪ್ರಸ್ತುತ ಪಾಕಿಸ್ತಾನ ಕರೆನ್ಸಿ, ಏಷ್ಯಾದ ಇತರೆ ಕರೆನ್ಸಿಗಳಿಗಿಂತ ಕುಸಿತವನ್ನು ಕಂಡಿದೆ, ಇದೀಗ ಪಾಕಿಸ್ತಾನ ಕರೆನ್ಸಿಯು ಅತ್ಯಂತ ಕಳಪೆ ವಹಿವಾಟಿನ ಕರೆನ್ಸಿ ಎಂದು ಘೋಷಣೆ ಮಾಡಲಾಗಿದೆ.

## ಕೇಂದ್ರ ಸರ್ಕಾರವು ವಾಹನ, ಡ್ರೋನ್ ಉದ್ಯಮಕ್ಕೆ 26,058 ಕೋಟಿ ರೂ. ಪ್ಯಾಕೇಜ್ ಅನುಮೋದನೆ





* ಪ್ರಸ್ತುತ ಕೇಂದ್ರ ಸಚಿವ ಸಂಪುಟವು ಭಾರತದಲ್ಲಿನ ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸಲು ವಾಹನ ಹಾಗೂ ವಾಹನದ ಬಿಡಿಭಾಗಗಳು ಮತ್ತು ಡ್ರೋನ್ ಉದ್ಯಮಕ್ಕಾಗಿ 26,058 ಕೋಟಿ ರೂ. ಪ್ಯಾಕೇಜ್'ಗೆ ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.
* ಭಾರತದಲ್ಲಿ ಸುಧಾರಿತ ಆಟೋಮೋಟಿವ್ ತಂತ್ರಜ್ಞಾನಗಳ ಜಾಗತಿಕ ಪೂರೈಕೆಯನ್ನು ಉತ್ತೇಜಿಸಲು ಉತ್ಪಾದನೆ ಪ್ರೋತ್ಸಾಹಕ ಯೋಜನೆಯು ಸಹಾಯ ಮಾಡಲಿದೆ, ಇದು 7.6 ಲಕ್ಷಕ್ಕೂ ಹೆಚ್ಚಿನ ಉದ್ಯೋಗವನ್ನು ಸೃಷ್ಟಿ ಮಾಡಲಿದೆ ಎಂದಿದ್ದಾರೆ.
* ಈ 26,058 ಕೋಟಿ ರೂ. ಪ್ರೋತ್ಸಾಹ ಧನವನ್ನು ಮುಂದಿನ '5' ವರ್ಷಗಳಲ್ಲಿ ಉದ್ಯಮಕ್ಕೆ ನೀಡಲಾಗುತ್ತದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

## ಅಫ್ಘಾನಿಸ್ತಾನದ ಪ್ರಜೆಗಳಿಗೆ ನೆಲೆ ಒದಗಿಸುವ ನಿಟ್ಟಿನಲ್ಲಿ ಒಂದಾದ ಜಾರ್ಜ್ ಬುಷ್, ಬಿಲ್ ಕ್ಲಿಂಟನ್, ಒಬಾಮ



* ಪ್ರಸ್ತುತ ಅಮೆರಿಕದ ಮೂವರು ಮಾಜಿ ಅಧ್ಯಕ್ಷರು, ರಿಪಬ್ಲಿಕನ್ ಪಕ್ಷದ ಜಾರ್ಜ್ ಬುಷ್, ಹಾಗೂ ಡೆಮೊಕ್ರೆಟಿಕ್ ಪಕ್ಷದ ಬಿಲ್ ಕ್ಲಿಂಟನ್ ಮತ್ತು ಬರಾಕ್ ಒಬಾಮ ಅಮೇರಿಕಕ್ಕೆ ಆಗಮಿಸಿರುವ ಅಫ್ಘಾನಿಸ್ತಾನದ ನಿರಾಶ್ರಿತ ಪ್ರಜೆಗಳಿಗೆ ನೆಲೆಯನ್ನು ನೀಡುವ ನಿಟ್ಟಿನಲ್ಲಿ ಒಂದಾಗಿದ್ದಾರೆ.
* ಪ್ರಸ್ತುತ ಅಫ್ಘಾನಿಸ್ತಾನದ ನಿರಾಶ್ರಿತ ಪ್ರಜೆಗಳಿಗೆ ದಾನ ನೀಡಲು ಅಮೇರಿಕದ ಪ್ರಜೆಗಳು ವೆಬ್‌ಸೈಟ್ ನ್ನುಆರಂಭಿಸಿದ್ದಾರೆ ಎಂದು 'ರಾಯಿಟರ್ಸ್' ಮಾಹಿತಿಯನ್ನು ಪ್ರಕಟಿಸಿದೆ.
* ಮಾಜಿ ಅಧ್ಯಕ್ಷರು ಮತ್ತು ಅವರ ಪತ್ನಿಯರು ವೆಲ್‌ಕಮ್ US, ತಂಡಗಳು, ಅಮೆರಿಕದ ಉದ್ಯಮಿಗಳು ಹಾಗೂ ಇನ್ನು ಅನೇಕ ಸಂಘಸಂಸ್ಥೆಗಳ ನಾಯಕರ ಜೊತೆ ಕೆಲಸ ಮಾಡಲಿದ್ದಾರೆ, ಅಲ್ಲದೇ ರಿಪಬ್ಲಿಕನ್ ಮತ್ತು ಡೆಮಾಕ್ರೆಟಿಕ್ ಗವರ್ನರ್‌ಗಳು ಇದಕ್ಕೆ ಸಹಿ ಸಮ್ಮತಿಯನ್ನು ನೀಡಿದ್ದಾರೆ

## ಸೆಪ್ಟೆಂಬರ್. 15 ಇಂಜಿನಿಯರ್ಸ್ (Engineers) ದಿನ




* ಪ್ರತಿ ವರ್ಷವು ಸೆಪ್ಟೆಂಬರ್. 15 ರಂದು ಸರ್ ಎಮ್. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ ಇಂಜಿನಿಯರ್ಸ್ (Engineers) ದಿನ ಆಚರಣೆ ಮಾಡಲಾಗುತ್ತದೆ.
* ಇಂಜಿನಿಯರಿಂಗ್ ದಿನದಂದು ಎಂಜಿನಿಯರಿಂಗ್ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಕೊಡುಗೆಗಳನ್ನು ನೆನಪಿಸಿಕೊಳ್ಳಲಾಗುತ್ತದೆ ಹಾಗೂ ಯುವ ಪ್ರತಿಭೆಗಳಿಗೆ ತಿಳಿಸಲಾಗುತ್ತದೆ.
* ಸರ್ ಎಂ.ವಿಶ್ವೇಶ್ವರಯ್ಯನವರು ಭಾರತದಾದ್ಯಂತ ಅಣೆಕಟ್ಟುಗಳು, ಜಲಾಶಯಗಳು ಮತ್ತು ಜಲವಿದ್ಯುತ್ ಯೋಜನೆಗಳನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ.
* ಈ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರು 1903 ರಲ್ಲಿ ಪುಣೆಯ ಖಡಕ್ವಾಸ್ಲಾ ಜಲಾಶಯದಲ್ಲಿ 'ಸ್ವಯಂಚಾಲಿತ ತಡೆ ವಾಟರ್ ಫ್ಲಡ್ ಗೇಟ್‌ಗಳನ್ನು' ವಿನ್ಯಾಸಗೊಳಿಸಿ ಸ್ಥಾಪನೆ ಮಾಡಿದ್ದಾರೆ.
* ಪ್ರಸ್ತುತ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಭಾರತ, ಶ್ರೀಲಂಕಾ ಹಾಗೂ ಟಾಂಜಾನಿಯಾದಲ್ಲಿ ಎಂಜಿನಿಯರ್ ದಿನವನ್ನಾಗಿ ಆಚರಣೆ ಮಾಡುತ್ತಾರೆ.
* ಸರ್ ಎಂ ವಿಶ್ವೇಶ್ವರಯ್ಯನವರು ಭಾರತೀಯ ಸಿವಿಲ್ ಎಂಜಿನಿಯರ್ ಹಾಗೂ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ, ಇವರು ಮೈಸೂರು ಸಂಸ್ಥಾನದ 19 ನೇ ದಿವಾನರಾಗಿ ಕಾರ್ಯ ನಿರ್ವಹಿಸಿದ್ದಾರೆ, ಇವರು1955 ರಲ್ಲಿ ಭಾರತ ರತ್ನ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

## ಭಾರತ ಚಿಲಿ 7 ನೇ ವಿದೇಶಾಂಗ ಕಚೇರಿ ಸಮಾಲೋಚನೆಗಳು



* ಪ್ರಸ್ತುತ ಭಾರತ ಮತ್ತು ಚಿಲಿ ದೇಶಗಳ ನಡುವೆ 7 ನೇ ವಿದೇಶಾಂಗ ಕಚೇರಿ ಸಮಾಲೋಚನೆಗಳು ಸ್ಯಾಂಟಿಯಾಗೊದಲ್ಲಿ ಜರುಗಿತು.

* ಭಾರತವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರಿವಾ ಗಂಗೂಲಿ ದಾಸ್, ಹಾಗೂ ಚಿಲಿ ದೇಶದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಉಪ ಮಂತ್ರಿ ಶ್ರೀಮತಿ ಕೆರೊಲಿನಾ ವಾಲ್ಡಿವಿಯಾ ಟೊರೆಸ್ ಭಾಗವಹಿಸಿದ್ದರು.

* ಪ್ರಸ್ತುತ ಎರಡು ದೇಶಗಳ ವ್ಯಾಪಾರ ಹಾಗೂ ಹೂಡಿಕೆಗಳು, ಕೃಷಿ, ರಕ್ಷಣೆ, ಆರೋಗ್ಯ ಮತ್ತು ಔಷಧಗಳು, ಜಾಗ, ಶಕ್ತಿ, ವಿಪತ್ತು ನಿರ್ವಹಣೆ, ಹಾಗೂ ತಮ್ಮ ದ್ವಿಪಕ್ಷೀಯ ಸಂಬಂಧಗಳನ್ನು ಈ ಸಮಾಲೋಚನೆಯಲ್ಲಿ ಪರಿಶೀಲನೇ ಮಾಡಿಕೊಂಡರು.

* ಈ ಹಿಂದೆ 2006 ರಲ್ಲಿ ಆದ್ಯತೆಯ ವ್ಯಾಪಾರ ಒಪ್ಪಂದಕ್ಕೆ ಭಾರತ ನತ್ತು ಚಿಲಿ ದೇಶಗಳು ಸಹಿ ಹಾಕಿದ್ದವು, ಮತ್ತೆ ಇದನ್ನು 2017 ರಲ್ಲಿ ವಿಸ್ತರಿಸಲಾಗಿತ್ತು.

* ಪ್ರಸ್ತುತ ಚಿಲಿ ಲ್ಯಾಟಿನ್ ಅಮೇರಿಕಾ ಹಾಗೂ ಭಾರತಕ್ಕಾಗಿ ಪೆಸಿಫಿಕ್ ಅಲೈಯನ್ಸ್‌ಗೆ ದಾರಿದೀಪವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದೆ, ಅಲ್ಲದೇ ಭಾರತದ 5 ನೇ ಅತಿದೊಡ್ಡ ವ್ಯಾಪಾರ ಪಾಲುದಾರವನ್ನು ಲ್ಯಾಟಿನ್ ಅಮೇರಿಕನ್ ಪ್ರದೇಶದಲ್ಲಿ ಹೊಂದಿದೆ.

* ಅಂತರಾಷ್ಟ್ರೀಯ ಸೌರ ಒಕ್ಕೂಟದಲ್ಲಿ ಭಾರತ ಮತ್ತು ಚಿಲಿ ದೇಶಗಳು ಪಾಲುದಾರರಾಗಿದ್ದಾರೆ.

## ಭಾರತ ಅಮೇರಿಕ 17 ನೇ ಆರ್ಥಿಕ ಶೃಂಗಸಭೆ




* ಪ್ರಸ್ತುತ 17 ನೇ ಭಾರತ ಅಮೇರಿಕ ಆರ್ಥಿಕ ಶೃಂಗಸಭೆಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವರಾದ ನಿತಿನ್ ಗಡ್ಕರಿ ಅವರು ಮಾತನಾಡಿದರು, ಕಳೆದ ಎರಡು ದಶಕಗಳಲ್ಲಿ ಭಾರತ ಹಾಗೂ ಅಮೇರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರವು 16 ಬಿಲಿಯನ್ ಡಾಲರ್‌ನಿಂದ 149 ಬಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗಿದೆ, ಹಾಗೂ ಇದು ಮುಂಬರುವ 2025 ರ ವೇಳೆಗೆ 500 ಬಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗುವ ನಿರೀಕ್ಷೆಗಳಿವೆ ಎಂದು ತಿಳಿಸಿದ್ದಾರೆ.

* ಭಾರತದಾದ್ಯಂತ ರಸ್ತೆ ಮತ್ತು ಹೆದ್ದಾರಿ ಯೋಜನೆಗಳಲ್ಲಿ ಎಲ್ಲ ಅಮೇರಿಕನ್ ಹೂಡಿಕೆದಾರರಿಗೆ ವಿಶೇಷವಾಗಿ ವಿಮೆ ಮತ್ತು ಪಿಂಚಣಿ ನಿಧಿಯನ್ನು ಭಾರತದ ರಸ್ತೆ ಮತ್ತು ಹೆದ್ದಾರಿ ಮೂಲಸೌಕರ್ಯದಲ್ಲಿ ಹೂಡಿಕೆ ಮಾಡಲು ಆಹ್ವಾನಿಸಿದ್ದಾರೆ.

* 17 ನೇ ಭಾರತ ಯುಎಸ್ ಆರ್ಥಿಕ ಶೃಂಗಸಭೆಯನ್ನು ಇಂಡೋ ಅಮೇರಿಕನ್ ಚೇಂಬರ್ ಆಫ್ ಕಾಮರ್ಸ್ ಆಯೋಜಿಸಿದೆ.

* ಇಂಡೋ ಅಮೇರಿಕನ್ ಚೇಂಬರ್ ಆಫ್ ಕಾಮರ್ಸ್ (IACC)ಯನ್ನು 1968 ರಲ್ಲಿ ಸ್ಥಾಪನೆ ಮಾಡಲಾಗಿದೆ, ಹಾಗೂ ಇದು ಭಾರತ ಅಮೇರಿಕದ ದ್ವಿಪಕ್ಷೀಯ ಕೊಂಡಿಯಾಗಿದೆ, ಅಲ್ಲದೇ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಮತ್ತು ತಂತ್ರಜ್ಞಾನ ವರ್ಗಾವಣೆಗೆ ಉತ್ತೇಜನ ನೀಡುತ್ತದೆ.

# 17-09-2021

## ವಿರಾಟ್ ಕೊಹ್ಲಿ ಟಿ20 ನಾಯಕನ ಸ್ಥಾನದಿಂದ ನಿರ್ಗಮನ



* ಪ್ರಸ್ತುತ ಟೀಮ್ ಇಂಡಿಯಾ ನಾಯಕ ವಿರಾಟ್ ಕೊಹ್ಲಿ ಯುಎಇಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ನಂತರ ಟಿ20 ನಾಯಕ ಸ್ಥಾನದಿಂದ ನಿರ್ಗಮಿಸುವುದಾಗಿ ಘೋಷಣೆ ಮಾಡಿದ್ದಾರೆ.

* ವಿರಾಟ್ ಕೊಹ್ಲಿ ಅವರು ಭಾರತ ತಂಡದ ಕೋಚ್ ರವಿ ಶಾಸ್ತ್ರಿ, ಹಾಗೂ ಸಹ ಆಟಗಾರ ರೋಹಿತ್ ಶರ್ಮಾ ಅವರ ಸಲಹೆಯನ್ನು ಪಡೆದ ನಂತರ ಟಿ20 ನಾಯಕ ಸ್ಥಾನದಿಂದ ನಿರ್ಗಮಿಸುವ ಬಗ್ಗೆ ತೀರ್ಮಾನ ಕೈಗೊಂಡಿದ್ದೇನೆ ಎಂದು ತಿಳಿಸಿದ್ದಾರೆ, ಹಾಗೂ ಬಿಸಿಸಿಐ(BCCI) ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರಿಗೂ ಈ ನಿರ್ಧಾರದ ಬಗ್ಗೆ ತಿಳಿಸಿದ್ದಾರೆ.

* ಆದರೆ ಟೆಸ್ಟ್ ಹಾಗೂ ಏಕದಿನ ಪಂದ್ಯಗಳಿಗೆ ಭಾರತ ತಂಡದ ನಾಯಕನಾಗಿ ಮುಂದುವರೆಯಲಿದ್ದೇನೆ ಎಂದು ವಿರಾಟ್ ಕೊಹ್ಲಿ ಅವರು ತಿಳಿಸಿದ್ದಾರೆ.

## ರಾಷ್ಟ್ರಪತಿ 'ರಾಮನಾಥ್ ಕೋವಿಂದ್' ಹಿಮಾಚಲ ಪ್ರದೇಶದ ಶಿಮ್ಲಾಕ್ಕೆ ಆಗಮನ



* ಪ್ರಸ್ತುತ ರಾಷ್ಟ್ರಪತಿ 'ರಾಮನಾಥ್ ಕೋವಿಂದ್' ಅವರು ನಾಲ್ಕು ದಿನಗಳ ಅವಧಿಗೆ ಹಿಮಾಚಲ ಪ್ರದೇಶದ ಶಿಮ್ಲಾಕ್ಕೆ ಭೇಟಿ.

* ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿರುವ ರಾಜೇಂದ್ರ ವಿಶ್ವನಾಥ ಅರ್ಲೇಕರ್, ಹಾಗೂ ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಅವರು ರಾಷ್ಟ್ರಪತಿ 'ರಾಮನಾಥ್ ಕೋವಿಂದ್' ಅವರನ್ನು ಬರಮಾಡಿಕೊಂಡರು. * ರಾಷ್ಟ್ರಪತಿ 'ರಾಮನಾಥ್ ಕೋವಿಂದ್' ಅವರು ಹಿಮಾಚಲ ಪ್ರದೇಶದ ರಾಜ್ಯತ್ವದ ಸುವರ್ಣ ಮಹೋತ್ಸವದ ಅಂಗವಾಗಿ ರಾಜ್ಯ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಭಾಷಣ ಮಾಡಲಿದ್ದಾರೆ.

## ಚೀನಾ ಗಗನಯಾತ್ರಿಕರು ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಯ ಕಡೆಗೆ



* ಪ್ರಸ್ತುತ ಚೀನಾದ ಮೂವರು(3) ಗಗನಾಯತ್ರಿಗಳು ಬಾಹ್ಯಾಕಾಶ ನಿಲ್ದಾಣ ನಿರ್ಮಾಣ ಹಾಗೂ ದುರಸ್ತಿ, ಹೀಗೆ ಹಲವು ಕಾರ್ಯಗಳಿಗಾಗಿ ಮೂರು ತಿಂಗಳು ಅಂದರೆ 90 ದಿನಗಳ ಕಾಲ ಬಾಹ್ಯಾಕಾಶಕ್ಕೆ ಪ್ರಯಾಣ ಬೆಳಸಿದ್ದರು ಇದೀಗ ಈ ಗಗನಾಯತ್ರಿಗಳು ಮರಳಿ ಭೂಮಿಯ ಕಡೆಗೆ ಹೊರಟಿದ್ದಾರೆ.
* ಚೀನಾ ದೇಶದ ನೀ ಹೈಶೆಂಗ್, ಲಿಯು ಬೊಮಿಂಗ್ ಮತ್ತು ಟ್ಯಾಂಗ್ ಹಾಂಗೊ ಎಂಬ ಗಗನಯಾತ್ರಿಗಳು 90 ದಿನಗಳ ಕಾಲ ಬಾಹ್ಯಾಕಾಶ ನಿಲ್ದಾಣದಲ್ಲಿ ನೆಲೆಸಿದ್ದರು, ಇದೀಗ ಗಗನಯಾತ್ರಿಗಳು ಶೆನ್‌ಶಾವ್ 12 ಗಗನ ನೌಕೆ ಬಳಸಿಕೊಂಡು ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಯ ಕಡೆಗೆ ಹೊರಟಿದ್ದಾರೆ ಎಂದು ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಯು ಮಾಹಿತಿಯನ್ನು ನೀಡಿದೆ.
* ಭೂಮಿಯ ಕಡೆಗೆ ಹೊರಟಿರುವ ಗಗನಯಾತ್ರಿಗಳ ಗಗನ ನೌಕೆಯು ಜಿಯುಕ್ವಾನ್ ಉಡಾವಣಾ ಕೇಂದ್ರದ ಸಮೀಪದಲ್ಲಿರುವ ಗೋಬಿ ಮರುಭೂಮಿಗೆ ಬಂದು ತಲುಪಲಿದೆ ಎಂದು ತಿಳಿಸಿದ್ದಾರೆ.

## 'ಔಕಸ್' ಮೈತ್ರಿ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ನಡುವೆ ಸ್ಥಾಪನೆ



* ಪ್ರಸ್ತುತ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ದೇಶಗಳು ಹಿಂದೂ ಮಹಾಸಾಗರ ಪೆಸಿಫಿಕ್ ಪ್ರದೇಶದಲ್ಲಿ ತಮ್ಮ ಹಿತಾಸಕ್ತಿ ಕಾಯ್ದುರಿಸಿಕೊಳ್ಳಲು 'ಔಕಸ್'(AUKUS) ಎಂಬ ಹೊಸ ತ್ರಿಪಕ್ಷೀಯ ಭದ್ರತಾ ಮೈತ್ರಿಕೂಟವನ್ನು ಘೋಷಣೆ ಮಾಡಿವೆ.
* ಈ ಮೈತ್ರಿಯಿಂದಾಗಿ ಹಿಂದೂ ಮಹಾಸಾಗರ ಪೆಸಿಫಿಕ್ ಪ್ರದೇಶದಲ್ಲಿ ರಕ್ಷಣೆ, ಪರಮಾಣು ಚಾಲಿತ ಜಲಾಂತರ್ಗಾಮಿಗಳ ಅಭಿವೃದ್ಧಿಪಡಿಸಿಕೊಳ್ಳಲು ಹಾಗೂ ರಕ್ಷಣಾ ಸಾಮರ್ಥ್ಯಗಳನ್ನು ಹಂಚಿಕೊಳ್ಳುವ ಅವಕಾಶಗಳನ್ನು ಆಸ್ಟ್ರೇಲಿಯಾಗೆ ನೀಡಲಿದೆ.
* ಪ್ರಸ್ತುತ ಹಿಂದೂ ಮಹಾಸಾಗರ ಪೆಸಿಫಿಕ್ ಪ್ರದೇಶದಲ್ಲಿ ಚೀನಾ ದೇಶದ ಪ್ರಭಾವ ಹೆಚ್ಚುತ್ತಿರುವ ಹಿನ್ನಲೆಯಿಂದಾಗಿ ಈ ಮೂರು ರಾಷ್ಟ್ರಗಳು ಈ ಹೊಸ 'ಔಕಸ್' ಎಂಬ ಮೈತ್ರಿ ಮಾಡಿಕೊಂಡಿವೆ.
* ಈ ಹೊಸ 'ಔಕಸ್' ಎಂಬ ಮೈತ್ರಿ ಅಡಿಯಲ್ಲಿ ಮೂರು ರಾಷ್ಟ್ರಗಳು ಭದ್ರತೆ ಮತ್ತು ರಕ್ಷಣಾ, ವಿಜ್ಞಾನ, ತಂತ್ರಜ್ಞಾನ, ಕೈಗಾರಿಕಾ ನೆಲೆಗಳಿಗೆ ಪರಸ್ಪರ ಸಹಕಾರ ನೀಡಲಿವೆ ಎಂದು ತಿಳಿಸಿದ್ದಾರೆ.
* ಅಮೆರಿಕ ಮತ್ತು ಬ್ರಿಟನ್ ದೇಶಗಳು ಪರಮಾಣು ಚಾಲಿತಜಲಾಂತರ್ಗಾಮಿ ನೌಕೆಗಳನ್ನು ನಿರ್ಮಾಣ ಮಾಡಲು ಆಸ್ಟ್ರೇಲಿಯಾಗೆ ನೆರವು ನೀಡಲಿವೆ, ಹಾಗೂ ಇಂಡೊ ಪೆಸಿಫಿಕ್ ಪ್ರದೇಶದಲ್ಲಿ ಸ್ಥಿರತೆಯನ್ನು ಕಾಪಾಡುವ ಗುರಿಯನ್ನು ಈ ರಾಷ್ಟ್ರಗಳು ಹೊಂದಿದೆ.

## ಭಾರತಕ್ಕೆ ವಿಶ್ವದ 6 ನೇ ದೊಡ್ಡ ಷೇರು ಮಾರುಕಟ್ಟೆ ಸ್ಥಾನ



* ಭಾರತದ ಷೇರು ಮಾರುಕಟ್ಟೆಯ ವಿಶ್ವದ 6 ನೇ ಅತಿದೊಡ್ಡ ಷೇರು ಮಾರುಕಟ್ಟೆಯಾಗಿ ದಾಖಲೆ ನಿರ್ಮಿಸಿದೆ.
* ಪ್ರಸ್ತುತ ಭಾರತದ ಷೇರು ಮಾರುಕಟ್ಟೆಯ ಫ್ರೆಂಚ್ ಷೇರು ಮಾರುಕಟ್ಟೆಯನ್ನು ಹಿಂದಿಕ್ಕಿ ವಿಶ್ವದ 6 ನೇ ಅತಿದೊಡ್ಡ ಷೇರು ಮಾರುಕಟ್ಟೆಯಾಗಿ ಹೊರ ಹೊಮ್ಮಿದೆ.
* ಪ್ರಸ್ತುತ ವರ್ಷದಲ್ಲಿ ಬೆಂಚ್‌ಮಾರ್ಕ್ ಸೆನ್ಸೆಕ್ಸ್ ಶೇ. 23 ಕ್ಕಿಂತ ಅಧಿಕ ಜಿಗಿತ ಕಂಡಿದೆ. 2021 ರಲ್ಲಿ, ಭಾರತದ ಷೇರು ಮಾರುಕಟ್ಟೆ ಮೌಲ್ಯದ ದೃಷ್ಟಿಯಿಂದ ಅತಿದೊಡ್ಡ ಲಾಭವನ್ನುಗಳಿಸಿ ದಾಖಲೆಯನ್ನು ನಿರ್ಮಿಸಿದೆ ಅಲ್ಲದೇ 2020 ರ ಡಿಸೆಂಬರ್. 31 ರಿಂದ ಸ್ಟಾಕ್ ಮಾರುಕಟ್ಟೆ ಮೌಲ್ಯ 873.4 ಅರಬ್ ಡಾಲರ್ ಅಧಿಕವಾಗಿದೆ ಎಂದು ತಿಳಿದು ಬಂದಿದೆ.
* ವಿಶ್ವದ ಷೇರು ಮಾರುಕಟ್ಟೆಯಲ್ಲಿ ಯುಎಸ್ ಸ್ಟಾಕ್ ಮಾರ್ಕೆಟ್ ನಂಬರ್ ಒನ್ ಸ್ಥಾನ ಪಡೆದಿದೆ, ಹಾಗೂ ಚೀನಾ 2 ನೇ ಸ್ಥಾನ ಪಡೆದಿದೆ.
* ಜಪಾನ್, 3 ನೇ ಸ್ಥಾನ, ಹಾಂಕಾಂಗ್ 4 ನೇ ಸ್ಥಾನ, ಯುಕೆ 5 ನೇ ಸ್ಥಾನ ಪಡೆದುಕೊಂಡಿವೆ.

## ರೈಲಿನಿಂದ ಖಂಡಾಂತರ ಕ್ಷಿಪಣಿ ಪರೀಕ್ಷಿಸಿದ ಉತ್ತರ ಕೊರಿಯಾ



* ಮೊದಲ ಬಾರಿಗೆ ರೈಲಿನಿಂದ ಖಂಡಾಂತರ ಕ್ಷಿಪಣಿಗಳನ್ನು ಉತ್ತರ ಕೊರಿಯಾ ಯಶಸ್ವಿಯಾಗಿ ಉಡಾವಣೆ ಮಾಡಿದೆ.
* ಉತ್ತರ ಕೊರಿಯಾ ರಾಷ್ಟ್ರವು ತನ್ನ ಮಿಲಿಟರಿ ಸಾಮರ್ಥ್ಯ ಪ್ರದರ್ಶನದ ಅಂಗವಾಗಿ ಇತ್ತೀಚಿಗೆ ಎರಡು ಖಂಡಾಂತರ ಕ್ಷಿಪಣಿಗಳನ್ನು ಉಡಾವಣೆ ಮಾಡಿದೆ.
* ಉತ್ತರ ಕೊರಿಯಾ ರಾಷ್ಟ್ರವು ತನ್ನ ದೇಶದ ಪರ್ವತಗಳ ಮಧ್ಯ ಇರುವ ಪ್ರದೇಶದಲ್ಲಿ ರೈಲು ಹಳಿಗಳನ್ನೂ ಹೊಂದಿದೆ, ಹಾಗೂ ಅಲ್ಲಿನ ರೈಲುಗಳ ಮೇಲೆ ನಿರ್ಮಾಣ ಮಾಡಲಾಗಿರುವ ಲಾಂಚರ್'ಗಳಿಂದ ಖಂಡಾಂತರ ಕ್ಷಿಪಣಿಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ, ಈ ಕ್ಷಿಪಣಿಯ 800 ಕಿ.ಮೀ ದೂರದಲ್ಲಿರುವ ಸಮುದ್ರದ ಗುರಿಯನ್ನು ನಿಖರವಾಗಿ ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಪಯೋಂಗ್ಯಾಂಗ್‌ನ ಅಧಿಕೃತ ಸೆಂಟ್ರಲ್ ನ್ಯೂಸ್ ಮಾಹಿತಿಯನ್ನು ಪ್ರಕಟಿಸಿದೆ, ಅಲ್ಲದೇ ಉತ್ತರ ಕೊರಿಯಾ ಸರ್ಕಾರಿ ಮಾಧ್ಯಮಗಳು ಮಾಹಿತಿ ನೀಡಿವೆ.

## ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನ



* ವಿಶ್ವದಾದ್ಯಂತ ಸೆಪ್ಟೆಂಬರ್ 15 ನ್ನು ಪ್ರಜಾಪ್ರಭುತ್ವದ ಸ್ಥಿತಿಯನ್ನು ಪರಿಶೀಲನೇ ಮಾಡಲು ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನವನ್ನು ಆಚರಣೆ ಮಾಡುತ್ತಾರೆ.

* ಪ್ರಸ್ತುತ 'ಭವಿಷ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು', 2021 ನೇ ವರ್ಷದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಧ್ಯೆಯೇ ವಾಕ್ಯ.

* ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ದಿನವನ್ನು 1997 ರ ಸೆಪ್ಟೆಂಬರ್. 15 ರಂದು ಇಂಟರ್ ಪಾರ್ಲಿಮೆಂಟರಿ ಯೂನಿಯನ್ ಅಂಗೀಕರಿಸಿದೆ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2007 ರಲ್ಲಿ ಅಂಗೀಕರಿಸಿ ಸ್ಥಾಪಿಸಿದೆ, ಅಂತಿಮವಾಗಿ 2007 ರ ನವೆಂಬರ್. 8 ರಂದು ಈ ದಿನವನ್ನು ಸ್ಥಾಪನೆ ಮಾಡಲಾಗಿದೆ.

## 6 ನೇ ಆವೃತ್ತಿಯ ವ್ಯಾಯಾಮ SCO ಶಾಂತಿಯುತ ಮಿಷನ್



* ಪ್ರಸ್ತುತ ಭಾರತೀಯ ಸೇನಾ ತಂಡವು ಶಾಂತಿ ಮಿಷನ್ 2021 ಭಾರತೀಯ ವಾಯುಪಡೆಯ 38 ಸಿಬ್ಬಂದಿ ಸೇರಿ ಒಟ್ಟು 200 ಸಿಬ್ಬಂದಿಯ ಶಸ್ತ್ರಾಸ್ತ್ರ, ಸಂಯೋಜಿತ ಪಡೆಗಳು ಈ ವ್ಯಾಯಾಮದಲ್ಲಿ ಪಾಲ್ಗೊಳ್ಳಲಿವೆ.

* ಈ ವ್ಯಾಯಾಮ SCO ಶಾಂತಿಯುತ ಮಿಷನ್'ನ್ನು ಸೆಪ್ಟೆಂಬರ್ 13 ರಿಂದ 25 ರವರೆಗೆ ನೈಋತ್ಯ ರಷ್ಯಾದ ಒರೆನ್ಬರ್ಗ್ ಪ್ರದೇಶದಲ್ಲಿ ನಡೆಯುತ್ತಿದೆ.

* ಈ SCO ಶಾಂತಿಯುತ ಮಿಷನ್ ಒಂದು ಬಹುಪಕ್ಷೀಯ ಹಾಗೂ ಜಂಟಿ ಭಯೋತ್ಪಾದನೆ ವಿರುದ್ಧ ನಡೆಸುವ ವ್ಯಾಯಾಮವಾಗಿದೆ.

* ಈ SCO ಶಾಂತಿಯುತ ಮಿಷನ್'ನ್ನು ಶಾಂಘೈ ಸಹಕಾರ ಸಂಸ್ಥೆ (SCO) ಸದಸ್ಯ ರಾಷ್ಟ್ರಗಳ 'ಮಿಲಿಟರಿ ರಾಜತಾಂತ್ರಿಕತೆ' ಅಡಿಯಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ.

* ಭಾರತೀಯ ದಳವನ್ನು ಎರಡು ಐಎಲ್ 76 ವಿಮಾನಗಳಿಂದ ವ್ಯಾಯಾಮ ಪ್ರದೇಶಕ್ಕೆ ಸೇರ್ಪಡೆ ಮಾಡಲಾಗಿದೆ, ಈ ವ್ಯಾಯಾಮವು ಎಲ್ಲಾ ಸಶಸ್ತ್ರ ಪಡೆಗಳಿಗೆ ನಗರ ಸನ್ನಿವೇಶದಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆ ಮತ್ತು ಬಹುರಾಷ್ಟ್ರೀಯ ಮತ್ತು ಜಂಟಿ ಪರಿಸರದಲ್ಲಿ ತರಬೇತಿ ನೀಡಲು ಅವಕಾಶವನ್ನು ಒದಗಿಸುತ್ತದೆ, ಹಾಗೂ ಇದೊಂದು ಮಿಲಿಟರಿ ಸಂವಹನ ಮತ್ತು ಭಯೋತ್ಪಾದನೆ ವಿರುದ್ಧದ ಜಾಗತಿಕ ಸಹಕಾರದ ಒಂದು ಮಹತ್ವದ ಸಂಘಟನೆಯಾಗಿದೆ ಎಂದು ತಿಳಿಸಿದ್ದಾರೆ.

## ಆರ್ಎಂಐ(RMI)ಇಂಡಿಯಾ 'ಶೂನ್ಯ' ಅಭಿಯಾನವನ್ನು ಆರಂಭಿಸಿದೆ



* ನೀತಿ ಆಯೋಗ, RMI ಮತ್ತು RMI ಇಂಡಿಯಾ ಸಹಯೋಗದೊಂದಿಗೆ ಶೂನ್ಯ ಅಭಿಯಾನವನ್ನು ಆರಂಭಿಸಲಾಗಿದೆ.

* ಪ್ರಸ್ತುತ ಮಾಲಿನ್ಯ ರಹಿತ ವಿತರಣಾ ವಾಹನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಗ್ರಾಹಕರು ಮತ್ತು ಉದ್ಯಮದೊಂದಿಗೆ ಕೆಲಸ ಮಾಡುವ ಒಂದು ಉಪಕ್ರಮವೇ ಶೂನ್ಯ ಅಭಿಯಾನ.

* ಈ ಶೂನ್ಯ ಅಭಿಯಾನದ ಅಡಿಯಲ್ಲಿ ಎಲೆಕ್ಟ್ರಿಕ್ ವಾಹನಗಳ ಅಳವಡಿಕೆ, ಹಾಗೂ ಬಳಕೆ ಮತ್ತು ಮಾಲಿನ್ಯ ರಹಿತ ವಿತರಣೆಯ ಪ್ರಯೋಜನಗಳ ಬಗ್ಗೆ ಗ್ರಾಹಕರ ಜಾಗೃತಿ ಮೂಡಿಸಲು ಈ ಅಭಿಯಾನವನ್ನು ಆರಂಭಿಸಲಾಗಿದೆ.

* ಈ ಶೂನ್ಯ ಅಭಿಯಾನದ ಅಡಿಯಲ್ಲಿ, ಕಾರ್ಪೊರೇಟ್ ಬ್ರ್ಯಾಂಡಿಂಗ್ ಮತ್ತು ಸರ್ಟಿಫಿಕೇಶನ್ ಪ್ರೋಗ್ರಾಂನ್ನು ಅಂತಿಮ ಮೈಲೇಜ್ ವಿತರಣೆಗಾಗಿ ಎಲೆಕ್ಟ್ರಿಕ್ ವಾಹನಗಳ ಕಡೆಗೆ ಬದಲಾಯಿಸುವ ಪ್ರಯತ್ನವನ್ನು ಗುರುತಿಸಲು ಆರಂಭಿಸಲಾಗಿದೆ.

* ಪ್ರಸ್ತುತ ನಗರ ಸರಕು ವಲಯದಿಂದ ಮಾಲಿನ್ಯವನ್ನು ತಗೆದುಹಾಕುವದೇ ಈ ಶೂನ್ಯ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

* ಪ್ರಸ್ತುತ ಭಾರತದಲ್ಲಿನ ಸರಕು ಸಾಗಾಣಿಯ ವಾಹನಗಳಿಗೆ ಸಂಬಂಧಿತ CO2 ಹೊರಸೂಸುವಿಕೆಯ 10% ರಷ್ಟಿದೆ, ಹಾಗೂ ಇದೇ 2030 ರ ವೇಳೆಗೆ 114% ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ, ಆದರೆ ಎಲೆಕ್ಟ್ರಿಕ್ ವಾಹನಗಳು CO2 ವನ್ನು ಹೊರಸೂಸುವುದಿಲ್ಲ ಇದರಿಂದಾಗಿ ಗಾಳಿಯ ಗುಣಮಟ್ಟವನ್ನು ಸುಧಾರಿಸುವಲ್ಲಿ ಎಲೆಕ್ಟ್ರಿಕ್ ವಾಹನಗಳು ಕೊಡುಗೆ ನೀಡಿದಂತಾಗುತ್ತದೆ.

# 18-09-2021

## 36 ನೇ ಅಂತರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನ

* 2021 ರ ಸೆಪ್ಟೆಂಬರ್. 18 ರಂದು 36 ನೇ ಅಂತರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನವನ್ನು ವಿಶಾಖಪಟ್ಟಣದಲ್ಲಿನ ಈಸ್ಟರ್ನ್ ನೇವಲ್ ಕಮಾಂಡ್ ಆಚರಣೆ ಮಾಡಿತು.

* ಈಸ್ಟರ್ನ್ ನೇವಲ್ ಕಮಾಂಡ್ ನ ಯರಡಾ ಬೀಚ್, ಭೀಮಿಲಿ ಬೀಚ್ ಹಾಗೂ ವಿಶಾಖಪಟ್ಟಣದ ನೌಕಾ ಘಟಕಗಳ ಆವರಣ ಹಾಗೂ ಸಮುದ್ರ ಮುಂಭಾಗಗಳಲ್ಲಿ ಕರಾವಳಿ ಸ್ವಚ್ಛತಾ ಅಭಿಯಾನವನ್ನು ಸುಮಾರು 500 ನೌಕಾ ಸಿಬ್ಬಂದಿ, ರಕ್ಷಣಾ ನಾಗರಿಕರು ಕೈಗೊಂಡರು.

* ಅಂತರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನವನ್ನು ಸೆಪ್ಟೆಂಬರ್ 3 ನೇ ಶನಿವಾರ ಆಚರಣೆ ಮಾಡಲಾಗುತ್ತದೆ.

* ಪ್ರಸ್ತುತ 2021 ರ ಅಂತರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನವನ್ನು 'ಕಸದ ಬುಟ್ಟಿಯಲ್ಲಿ ಇರಿಸಿ ಮತ್ತು ಸಾಗರದಲ್ಲಿ ಅಲ್ಲ' ಎಂಬ ಧ್ಯೆಯೇ ವಾಕ್ಯ ಅಡಿಯಲ್ಲಿ ಆಚರಿಸಲಾಗಿದೆ.

## 'ಏಕ್ ಪಹಲ್ ಕ್ಯಾಂಪೇನ್' ನ್ನು ಮನೆ ಬಾಗಿಲಿಗೆ ನ್ಯಾಯ ವಿತರಣೆಗಾಗಿ ಆರಂಭಿಸಲಾಗಿದೆ



* 'ಏಕ್ ಪಹಲ್ ಡ್ರೈವ್' ಎಂಬ ಪ್ಯಾನ್ ಇಂಡಿಯಾ ವಿಶೇಷ ಅಭಿಯಾನವನ್ನು ಕಾನೂನು ಮತ್ತು ನ್ಯಾಯ ಸಚಿವಾಲಯವು ಮನೆ ಬಾಗಿಲಿಗೆ ನ್ಯಾಯ ವಿತರಣೆಗಾಗಿ ಆರಂಭಿಸಿದೆ.
* ಪ್ರಸ್ತುತ ಟೆಲಿ ಲಾ ಅಡಿಯಲ್ಲಿ ಸಾಮೂಹಿಕ ನೋಂದಣಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಹಾಗೂ ಈ ಅಭಿಯಾನವನ್ನು ನ್ಯಾಯಾಂಗ ಇಲಾಖೆ ಮತ್ತು ನಲ್ಸಾ ಪ್ರಾರಂಭಿಸಿವೆ.
* ಪ್ರಸ್ತುತ ನ್ಯಾಯಾಂಗ ಇಲಾಖೆಯು ಭಾರತದಾದ್ಯಂತ 'ಏಕ್ ಪಹಲ್ ಡ್ರೈವ್' ಅಭಿಯಾನವನ್ನು ಆರಂಭಿಸಿದೆ, ಹಾಗೂ ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ಟೆಲಿ ಲಾ ಅಡಿಯಲ್ಲಿ ಸಾಮೂಹಿಕ ನೋಂದಣಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಅಭಿಯಾನ ನಡೆಯಲಿದೆ, ಅಲ್ಲದೇ ಈ ಅಭಿಯಾನವು ಆರಂಭದಲ್ಲಿ 5480 ಫಲಾನುಭವಿಗಳ ನೋಂದಣಿ ಲಾಗಿನ್ ಮಾಡಿದೆ.
* ಪ್ರಸ್ತುತ ಈ ಟೆಲಿ ಲಾ ಪ್ಯಾನಲ್ ವಕೀಲರಿಂದ ಫಲಾನುಭವಿಗಳಿಗೆ ಮೊಕದ್ದಮೆ ಪೂರ್ವ ಸಲಹೆಗಳನ್ನೂ ನೀಡುತ್ತದೆ, ಇದು ಕೇಂದ್ರಾಡಳಿತ ಪ್ರದೇಶ ಮತ್ತು ರಾಜ್ಯಗಳು ಹಾಗೂ ಜಿಲ್ಲೆಗಳ ಗ್ರಾಮ ಪಂಚಾಯತ್ ಗಳಲ್ಲಿ ಸಾಮಾನ್ಯ ಸೇವಾ ಕೇಂದ್ರಗಳು ಜಾಲವನ್ನು ಬಳಸಲಿವೆ ಎಂದು ತಿಳಿಸಿದ್ದಾರೆ, ಹಾಗೂ 672 ಜಿಲ್ಲೆಗಳಲ್ಲಿ ಕಾನೂನು ನೆರವು ಬಗ್ಗೆ ಗ್ರಾಮ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವದು ಎಂದು ತಿಳಿಸಿದ್ದಾರೆ.

## 45 ನೇ GST ಕೌನ್ಸಿಲ್ ಸಭೆ




* ಪ್ರಸ್ತುತ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ 45 ನೇ ಜಿಎಸ್‌ಟಿ(GST) ಕೌನ್ಸಿಲ್ ಸಭೆಯು ಉತ್ತರ ಪ್ರದೇಶದ ಲಕ್ನೋದಲ್ಲಿ ಜರುಗಿತು, ಈ ಸಭೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ನ್ನು GST ಅಡಿಯಲ್ಲಿ ತರುವ ಕುರಿತು ಚರ್ಚಿಸಲಾಗಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಕೇರಳ ಹೈಕೋರ್ಟ್ ಪೆಟ್ರೋಲ್ ಮತ್ತು ಡೀಸೆಲ್ ಸಮಸ್ಯೆಯನ್ನು ಪ್ರಶ್ನೆ ಮಾಡಿತ್ತು ಈ ಕಾರಣದಿಂದಾಗಿ ಇದನ್ನು ಚರ್ಚಿಸಲಾಯಿತು, ಈ ಕೌನ್ಸಿಲ್ ಸಭೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಅನ್ನು GST ವ್ಯಾಪ್ತಿಗೆ ತರದಿರಲು ನಿರ್ಧವನ್ನು ಕೈಗೊಂಡಿದೆ, ಹಾಗೂ ಇದೇ ಸಭೆಯಲ್ಲಿ ಕೋವಿಡ್ 19 ಔಷಧಿಗಳ ಮೇಲೆ ರಿಯಾಯಿತಿ GST ದರಗಳನ್ನು ಘೋಷಣೆ ಮಾಡಲಾಯಿತು.
*ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಔಷಧಿಗಳ ಮೇಲಿನ ತೆರಿಗೆ ದರಗಳನ್ನು 12 ಪಿಸಿಯಿಂದ 5 ಪಿಸಿಗೆ ಕಡಿಮೆ ಮಾಡಲಾಗಿದೆ, ಹಾಗೂ ಜೈವಿಕ ಡೀಸೆಲ್‌ನ್ನು ಡೀಸೆಲ್ ನೊಂದಿಗೆ ಬೆರೆಸಲು ಜಿಎಸ್ ಟಿ ದರವನ್ನು 12 ಪಿಸಿಯಿಂದ 5 ಪಿಸಿಗೆ ಕಡಿಮೆ ಮಾಡಲಾಗಿದೆ.
* ಪ್ರಸ್ತುತ ಇ ಕಾಮರ್ಸ್ ಆಪರೇಟರ್ ಸಂಸ್ಥೆಗಳಾಗಿರುವ ಸ್ವಿಗ್ಗಿ ಮತ್ತು ಜೊಮಾಟೊ GST ಅಡಿಯಲ್ಲಿ ಬರಲಿವೆ ಎಂದಿದ್ದಾರೆ.

## ಅರ್ಥ್ ಶಾಟ್(ಪರಿಸರ) ಪ್ರಶಸ್ತಿ ಪಡೆಯಲು ಎರಡು ಭಾರತೀಯ ಯೋಜನೆಗಳು




* ಪ್ರಸ್ತುತ ಎರಡು ಭಾರತೀಯ ಯೋಜನೆಗಳನ್ನು ಪರಿಸರ ಪ್ರಶಸ್ತಿಯನ್ನು ಪಡೆಯಲು ಆಯ್ಕೆ ಮಾಡಲಾಗಿದೆ.
* ಸ್ತುತ ಅರ್ಥ್ ಶಾಟ್(ಪರಿಸರ) ಪ್ರಶಸ್ತಿ ಆಯ್ಕೆಯಾದ ಮೊದಲ ಯೋಜನೆ, ಸೌರಶಕ್ತಿ ಚಾಲಿತ ಇಸ್ತ್ರಿ ಕಾರ್ಟ್ ಯೋಜನೆ, ಇದನ್ನು 14 ವರ್ಷದ ತಮಿಳುನಾಡು ಶಾಲಾ ವಿದ್ಯಾರ್ಥಿನಿ ವಿನಿಶಾ ಉಮಾಶಂಕರ್ ಅಭಿವೃದ್ಧಿಪಡಿಸಿದ್ದಾಳೆ.
* ದೆಹಲಿಯ ಉದ್ಯಮಿ ಟಕಾಚಾರ್ ಅವರು 2 ನೇ ಯೋಜನೆಯನ್ನು ಅಭಿವೃದ್ಧಿಪಡಿಸಿದ್ದಾರೆ, ಇದನ್ನು 'ಕ್ಲೀನ್ ಅವರ್ ಏರ್ ಕ್ಯಾಟಗರಿ'ಯಲ್ಲಿ ನಾಮನಿರ್ದೇಶನ ಮಾಡಲಾಗಿದೆ, ಅದುವೇ ಕೃಷಿ ತ್ಯಾಜ್ಯ ಮರುಬಳಕೆ ಪರಿಕಲ್ಪನೆ ಯೋಜನೆ.
* ಪರಿಸರ ಪ್ರಶಸ್ತಿಗಾಗಿ ಒಟ್ಟಾರೆ 15 ಯೋಜನೆಗಳನ್ನು ಆಯ್ಕೆ ಮಾಡಲಾಗಿದೆ.
* ಈ ಪರಿಸರ ಪ್ರಶಸ್ತಿಯನ್ನು 2020 ರಲ್ಲಿ ಬ್ರಿಟನ್‌ನ ರಾಜಕುಮಾರ ವಿಲಿಯಂ ಹಾಗೂ ಡೇವಿಡ್ ಅಟೆನ್‌ಬರೋ ಅವರು ಆರಂಭಿಸಿದರು.
* ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ಅಂದರೆ ಪ್ರತಿವರ್ಷ 5 ವಿಜೇತರಿಗೆ 2021 ರಿಂದ 2030 ರವರೆಗೆ ನೀಡಲಾಗುತ್ತದೆ, ಹಾಗೂ ಈ ಪ್ರಶಸ್ತಿಯನ್ನು ಇಂಗ್ಲೆಂಡ್ ನ ರಾಯಲ್ ಫೌಂಡೇಶನ್ ನೀಡುತ್ತದೆ.

## ವಿಶ್ವ ರೋಗಿಗಳ ಸುರಕ್ಷತಾ ದಿನ




* ಪ್ರತಿ ವರ್ಷವು ಸೆಪ್ಟೆಂಬರ್. 17 ರಂದು ರೋಗಿಯ ಸುರಕ್ಷತೆಯ ಕುರಿತು ಜಾಗತಿಕ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವ ರೋಗಿಗಳ ಸುರಕ್ಷತಾ ದಿನವನ್ನು ವಿಶ್ವಾದ್ಯಂತ ಆಚರಿಸಲಾಯಿತು.
* ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಅದರ ಅಂತರಾಷ್ಟ್ರೀಯ ಪಾಲುದಾರರು ಈ ವಿಶ್ವ ರೋಗಿಗಳ ಸುರಕ್ಷತಾ ದಿನವನ್ನು ಆಚರಣೆ ಮಾಡುತ್ತಾರೆ.
* ಪ್ರಸ್ತುತ 2021 ನೇ ವರ್ಷದ ವಿಶ್ವ ರೋಗಿಗಳ ಸುರಕ್ಷತಾ ದಿನವನ್ನು 'ಸುರಕ್ಷಿತ ಹೆರಿಗೆ ಹಾಗೂ ನವಜಾತ ಶಿಶುಗಳ ಆರೈಕೆ'

ಎಂಬ ಉಪಕ್ರಮದಡಿಯಲ್ಲಿ ಆಚರಣೆ ಮಾಡಲಾಗಿದೆ.
* 2019 ರ ಮೇ ನಲ್ಲಿ ವಿಶ್ವ ರೋಗಿಗಳ ಸುರಕ್ಷತಾ ದಿನವನ್ನು ಸ್ಥಾಪನೆ ಮಾಡಲಾಯಿತು.
* WHO ಮಾಹಿತಿಯ ಪ್ರಕಾರ ಪ್ರತಿದಿನ ಅಂದಾಜು 810 ಮಹಿಳೆಯರು ಗರ್ಭಧಾರಣೆ ಹಾಗೂ ಹೆರಿಗೆಯ ಕಾರಣದಿಂದ ಮೃತರಾಗುತ್ತಿದ್ದಾರೆ, ಹಾಗೂ ಪ್ರತಿದಿನ ಅಂದಾಜು 6700 ಶಿಶುಗಳು ಸಾಯುತ್ತಿವೆ.
* ಆದರೆ ಪ್ರತಿ ವರ್ಷವು 2 ಮಿಲಿಯನ್ ಶಿಶುಗಳ ಜನನ ವಾಗುತ್ತಿವೆ.
* ಈ ವಿಶ್ವ ರೋಗಿಗಳ ಸುರಕ್ಷತಾ ದಿನವನ್ನು ಎಲ್ಲಾ ಮಹಿಳೆಯರು ಹಾಗೂ ನವಜಾತ ಶಿಶುಗಳಿಗೆ ಅನಗತ್ಯ ಅಪಾಯಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ದಿನವನ್ನು ಆಚರಣೆ ಮಾಡುತ್ತಾರೆ.

## ನೀತಿ ಆಯೋಗವು ಉಚಿತ ಶಿಕ್ಷಣವನ್ನು ಒದಗಿಸಲು ಬೈಜು(Byju's) ಪಾಲುದಾರಿಕೆ ಹೊಂದಿದೆ




* ಪ್ರಸ್ತುತ ನೀತಿ ಆಯೋಗವು ಭಾರತದ 112 ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಉಚಿತ ಪ್ರವೇಶವನ್ನು ನೀಡಲು ಬೈಜು(Byju's) ನೊಂದಿಗೆ ಪಾಲುದಾರಿಕೆ ಹೊಂದಿದೆ.
* ಪ್ರಸ್ತುತ ಬೈಜು(Byju's) ಉತ್ತಮ ಗುಣಮಟ್ಟದ ಶಿಕ್ಷಣದ ಪ್ರವೇಶವನ್ನು ಪಡೆಯಲು ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಹಾಗೂ ಟೆಕ್ ಚಾಲಿತ ಕಲಿಕಾ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶವನ್ನು ನೀಡಲಿದೆ.
* ನೀತಿ ಆಯೋಗ ಮತ್ತು ಬೈಜು(Byju's) ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ಶಾಲಾ ವಿದ್ಯಾರ್ಥಿಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಎರಡು ಮುಖ್ಯ ಅಂಶಗಳನ್ನು ಹೊಂದಿದೆ.
* BYJU'S ಕೆರಿಯರ್ ಪ್ಲಸ್ ಪ್ರೋಗ್ರಾಂ, ಈ ಕಾರ್ಯಕ್ರಮವು NEET ಮತ್ತು JEE ಗೆ ಹಾಜರಾಗುವ ಆಸಕ್ತಿ ಇಟ್ಟುಕೊಂಡಿರುವ 11 ಮತ್ತು 12 ನೇ ತರಗತಿಯ 3,000 ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಪರೀಕ್ಷಾ ಪೂರ್ವ ತರಬೇತಿ ನೀಡಲು ಸಿದ್ದವಾಗಿದೆ.
* ಸ್ವಯಂಪ್ರೇರಿತ ಕಾರ್ಯಕ್ರಮ, ಈ ಕಾರ್ಯಕ್ರಮವು ಎಲ್ಲರಿಗೂ ಶಿಕ್ಷಣ, ವಿದ್ಯಾರ್ಥಿಗಳು 3 ವರ್ಷಗಳ ಅವಧಿಗೆ ಬೈಜು(Byju's) ನ ಕಲಿಕಾ ಅಪ್ಲಿಕೇಶನ್‌ನಿಂದ ವಿಷಯವನ್ನು ಸ್ವೀಕರಿಸಲು ಆಯ್ಕೆ ಮಾಡಬಹುದಾಗಿದೆ ಎಂದು ತಿಳಿಸಿದೆ.
* ಉಚಿತ ಶಿಕ್ಷಣವನ್ನು ನೀಡಲು ವೃತ್ತಿ ಹಾಗೂ ಕಾರ್ಯಕ್ರಮಕ್ಕಾಗಿ ವಿದ್ಯಾರ್ಥಿಗಳನ್ನು ಪೂರ್ವ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುತ್ತದೆ, ಈ ಉಪಕ್ರಮವು ಅತ್ಯುತ್ತಮ ತರಗತಿ ಹಾಗೂ ಆನ್‌ಲೈನ್ ಕಲಿಕೆಯನ್ನು ಒದಗಿಸುತ್ತದೆ.

## ಪ್ಲಾನೆಟೇರಿಯಂ ಇನ್ನೋವೇಶನ್ ಚಾಲೆಂಜ್ ಆರಂಭಿಸಿದ ಮೈಗೋವ್(MyGov) ಇಂಡಿಯಾ




* ಪ್ರಸ್ತುತ ಭಾರತೀಯ ಸ್ಟಾರ್ಟ್ ಅಪ್ ಮತ್ತು ಟೆಕ್ ಉದ್ಯಮಿಗಳಿಗಾಗಿ 'ಪ್ಲಾನೆಟೇರಿಯಮ್ ಇನ್ನೋವೇಶನ್ ಚಾಲೆಂಜ್' ನ್ನು ಮೈಗೊವ್ ಇಂಡಿಯಾ ಪ್ರಾರಂಭಿಸಿದೆ.
* ಪ್ರಸ್ತುತ ಭಾರತದಿಂದ ಹೊರಬಂದ ಟೆಕ್ ಸಂಸ್ಥೆ ಹಾಗೂ ಸ್ಟಾರ್ಟ್ ಅಪ್ ಗಳನ್ನು ಕೂಡಿಸಲು ಈ ಪ್ಲಾನೆಟೇರಿಯಮ್ ಚಾಲೆಂಜ್ ನ್ನು ಆರಂಭಿಸಲಾಗಿದೆ.
* ಈ ಹಿಂದೆ 2019 ರಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಮೈಗೋವ್(MyGov) ಸಹಭಾಗಿತ್ವದಲ್ಲಿ ಇಸ್ರೋ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಿತ್ತು.
* ಮೈಗೋವ್ ಇಂಡಿಯಾ ಪ್ಲಾನೆಟೇರಿಯಂ ನಾವೀನ್ಯತೆ ಸವಾಲನ್ನು ಇತ್ತೀಚೆಗೆ ಪ್ರಾರಂಭಿಸಿದೆ, ಹಾಗೂ ಅಕ್ಟೋಬರ್ 10 ರವರೆಗೆ ನೋಂದಣಿ ಮಾಡಲು ಅವಕಾಶ ನೀಡಿದೆ.
* ಈ ಸ್ಪರ್ಧೆಯ ಪ್ರಥಮ, ದ್ವಿತೀಯ ಮತ್ತು ತೃತೀಯ ವಿಜೇತರಿಗೆ ಕ್ರಮವಾಗಿ 5 ಲಕ್ಷ, 3 ಲಕ್ಷ ಹಾಗೂ 2 ಲಕ್ಷ ರೂ.ಗಳ ನಗದು ಬಹುಮಾನವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಕೇಂದ್ರ ಸರ್ಕಾರವು 2014 ರ ಜುಲೈ. 26 ರಂದು ಭಾರತದ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ಭಾರತೀಯ ನಾಗರಿಕರು ಭಾಗವಹಿಸುವಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಮೈಗೋವ್'ನ್ನು ಆರಂಭಿಸಿದೆ.

## ಚೀನಾ ದೇಶವು ಏಷ್ಯಾ ಪೆಸಿಫಿಕ್ ಮುಕ್ತ ವ್ಯಾಪಾರಕ್ಕೆ ಸೇರಲು ಅರ್ಜಿ ಸಲ್ಲಿಸಿದೆ



* ಪ್ರಸ್ತುತ ಚೀನಾ ದೇಶವು ಅಂತಾರಾಷ್ಟ್ರೀಯ ನೀತಿಗಳ ಮೇಲೆ ತನ್ನ ಪ್ರಭಾವವನ್ನು ಹೆಚ್ಚಿಸಲು 11 ರಾಷ್ಟ್ರಗಳ ಏಷ್ಯಾ ಪೆಸಿಫಿಕ್ ಮುಕ್ತ ವ್ಯಾಪಾರ ಗುಂಪಿಗೆ ಸೇರಲು ಅರ್ಜಿ ಸಲ್ಲಿಸಿದೆ.
* ಪ್ರಸ್ತುತ ಚೀನಾ ವಾಣಿಜ್ಯ ಸಚಿವ ವಾಂಗ್ ವೆಂಟಾವೊ ಅವರು ಏಷ್ಯಾ ಪೆಸಿಫಿಕ್ ಮುಕ್ತ ವ್ಯಾಪಾರ ಗುಂಪಿನ ಸಮಗ್ರ ಹಾಗೂ ಪ್ರಗತಿ ಒಪ್ಪಂದದ ಪ್ರತಿನಿಧಿಯಾಗಿ ನ್ಯೂಜಿಲ್ಯಾಂಡ್‌ನ ವಾಣಿಜ್ಯ ಮಂತ್ರಿಗೆ ಅರ್ಜಿಯನ್ನು ಸಲ್ಲಿಸಿದ್ದಾರೆ.
* ಪ್ರಸ್ತುತ ಚೀನಾ ದೇಶವನ್ನು ಆರಂಭಿಕ ಗುಂಪಿನಲ್ಲಿ ಸೇರಿಸಲಾಗಿಲ್ಲ, ಹಾಗೂ 2017 ರಲ್ಲಿ ಡೊನಾಲ್ಡ್ ಟ್ರಂಪ್ ಅವರು ಈ ಗುಂಪನ್ನು ಹಿಂತೆಗೆದುಕೊಂಡಿದ್ದಾರೆ.
* CPTPP ಎಂಬುದು ಆಸ್ಟ್ರೇಲಿಯಾ, ಬ್ರೂನಿ, ಚಿಲಿ, ಕೆನಡಾ, ಜಪಾನ್, ಮೆಕ್ಸಿಕೋ, ಮಲೇಷಿಯಾ, ಪೆರು, ನ್ಯೂಜಿಲ್ಯಾಂಡ್, ಸಿಂಗಾಪುರ್ ಮತ್ತು ವಿಯೆಟ್ನಾಂ ಎಂಬ 11 ದೇಶಗಳ ನಡುವಿನ ವ್ಯಾಪಾರ ಒಪ್ಪಂದವಾಗಿದೆ, ಆದರೆ ಯುನೈಟೆಡ್ ಸ್ಟೇಟ್ಸ್

ಹಿಂತೆಗೆದುಕೊಳ್ಳುವ ಕಾರಣದಿಂದ ಇದು ಜಾರಿಗೆಯಾಗಿಲ್ಲ ಎಂದು ತಿಳಿದು ಬಂದಿದೆ.
* ಚೀನಾ ಸರ್ಕಾರವು ಸರಕುಗಳ ಆಮದನ್ನು ಹೆಚ್ಚಿಸುವ ಭರವಸೆಯನ್ನು ನೀಡಿದೆ.

# 20-09-2021

## ಡ್ರೋನ್ ನಿಷ್ಕ್ರಿಯಗೊಳಿಸಲು ರಬ್ಬರ್ ಬುಲೆಟ್ ಬಳಸುವಂತೆ ಭದ್ರತಾ ಪಡೆಗಳಿಗೆ ಸೂಚನೆ



* ಪ್ರಸ್ತುತ ರಬ್ಬರ್ ಬುಲೆಟ್‌ಗಳನ್ನು ಬಳಸಿಕೊಂಡು ಅತೀ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸುವ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸಲು ಕೇಂದ್ರೀಯ ಭದ್ರತಾ ಪಡೆಗಳಿಗೆ ನಿರ್ದೇಶನವನ್ನು ನೀಡಿದ್ದಾರೆ.
* ಕೇಂದ್ರೀಯ ಭದ್ರತಾ ಪಡೆಗಳು ವಿಮಾನ ನಿಲ್ದಾಣಗಳು ಹಾಗೂ ಪ್ರಮುಖ ಸ್ಥಳಗಳ ರಕ್ಷಣೆಯ ಜವಾಬ್ದಾರಿ ವಹಿಸಿಕೊಂಡಿವೆ ಈ ಕಾರಣದಿಂದ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸಲು ಭದ್ರತಾ ಪಡೆಗಳಿಗೆ ಸೂಚನೆಯನ್ನು ನೀಡಲಾಗಿದೆ.
* ಕೇಂದ್ರೀಯ ಶಸ್ತ್ರಾಸ್ತ್ರ ಪೊಲೀಸ್ ಪಡೆಯ ಅಧಿಕಾರಿಗಳು ನೀಡಿರುವ ಮಾಹಿತಿ ಪ್ರಕಾರ ಸುಮಾರು 60 ರಿಂದ 100 ಮೀ. ಗಳಷ್ಟು ಎತ್ತರದಲ್ಲಿ ಹಾರಾಡುವ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸಲು ರಬ್ಬರ್ ಬುಲೆಟ್‌ಗಳನ್ನು ಹಾರಿಸುವ ಮೂಲಕ ಹೊಡೆದುರಿಳಿಸಬಹುದು ಎಂದು ತಿಳಿಸಿದ್ದಾರೆ.
* ಪ್ರಸ್ತುತ ಗಡಿ ಭದ್ರತಾ ಪಡೆಗಳು 'ಐಎನ್‌ಎಸ್‌ಎಎಸ್'ರೈಫಲ್‌ಗಳನ್ನು ಬಳಸಿ ಡ್ರೋನ್‌ಗಳನ್ನು ನಾಶಪಡಿಸುವಂತೆ ತಿಳಿಸಿದ್ದಾರೆ.

## 2020 ರಲ್ಲಿ ರಸ್ತೆ ಅಪಘಾತಗಳಲ್ಲಿ 1.20 ಲಕ್ಷ ಜನ ಸಾವು




* ಪ್ರಸ್ತುತ ಈ ಹಿಂದಿನ ವರ್ಷ ಅಂದರೆ 2020 ರಲ್ಲಿ ಭಾರತದಲ್ಲಿ ರಸ್ತೆ ಅಪಘಾತಗಳಿಂದ 1.20 ಲಕ್ಷ ಜನರು ಸಾವನ್ನಪ್ಪಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ಮಾಹಿತಿ ನೀಡಿದೆ, 2020 ರಲ್ಲಿ ಪ್ರತಿ ದಿನ ಸರಾಸರಿ 328 ಜನರು ತಮ್ಮ ಪ್ರಾಣವನ್ನು ರಸ್ತೆ ಅಪಘಾತದಲ್ಲಿ ಕಳೆದುಕೊಂಡಿದ್ದಾರೆ.
* ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ನ ವಾರ್ಷಿಕ 'ಕ್ರೈಮ್ ಇಂಡಿಯಾ' ವರದಿ ಮಾಡಿರುವ ಪ್ರಕಾರ ಈ ಹಿಂದಿನ 3 ವರ್ಷಗಳಲ್ಲಿ ರಸ್ತೆ ಅಪಘಾತದಿಂದಾಗಿ 3.92 ಲಕ್ಷ ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದೆ.
* ಪ್ರಸ್ತುತ 2020 ರಲ್ಲಿ 41,196 ಹಿಟ್ ಅಂಡ್ ರನ್ ಪ್ರಕರಣಗಳು ದಾಖಲಾಗಿವೆ, ಎಂದು ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್‌ಸಿಆರ್‌ಬಿ ವರದಿ ಮಾಡಿದೆ.
* 2020 ನೇ ವರ್ಷದ ರೈಲು ಅಪಘಾತಗಳಲ್ಲಿ 52 ಸಾವು ಪ್ರಕರಣಗಳು, ಹಾಗೂ ಭಾರತದಲ್ಲಿ ವೈದ್ಯಕೀಯ ಸಿಬ್ಬಂದಿಗಳ ನಿರ್ಲಕ್ಷ್ಯದಿಂದ 133 ಸಾವು ಪ್ರಕರಣಗಳು ದಾಖಲಾಗಿವೆ.

## 2020 ನೇ ಸಾಲಿನ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ಪಡೆದ ಎಂ. ವೀರಪ್ಪ ಮೊಯಿಲಿ




* ಪ್ರಸ್ತುತ 2020 ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮಾಜಿ ಮುಖ್ಯಮಂತ್ರಿ ಹಾಗೂ ಸಾಹಿತಿಯಾಗಿರುವ ಎಂ.ವೀರಪ್ಪ ಮೊಯಿಲಿಗೆ ಪ್ರದಾನ ಮಾಡಲಾಗಿದೆ.
* ಎಂ. ವೀರಪ್ಪ ಮೊಯಿಲಿ ಅವರ ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ ಕೃತಿಗೆ ಈ ಕೇಂದ್ರ ಸಾಹಿತ್ಯ ಪ್ರಶಸ್ತಿ ಲಭಿಸಿದೆ, ಈ ಪ್ರಶಸ್ತಿಯನ್ನು ದೆಹಲಿಯ ಕಾರ್ಯಕ್ರಮದಲ್ಲಿ ವೀರಪ್ಪ ಮೊಯಿಲಿ ಅವರಿಗೆ ಪ್ರದಾನ ಮಾಡಲಾಗಿದೆ.
* ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿರುವ ಪ್ರೊ. ಚಂದ್ರಶೇಖರ್ ಕಂಬಾರ್ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು, ಈ ಪ್ರಶಸ್ತಿಯು ಒಂದು ಲಕ್ಷ ರೂ. ನಗದು ಬಹುಮಾನ ಹಾಗೂ ಸವಿನೆನಪಿನ ಕಾಣಿಕೆಯನ್ನು ಕೂಡ ಒಳಗೊಂಡಿದೆ.

## ಅಮೆಜಾನ್ ಸಂಸ್ಥೆಯಿಂದ ಮೂರು ಪ್ರಾದೇಶಿಕ ಭಾಷೆಗಳಲ್ಲಿ ಸೇವೆ




* ಪ್ರಸ್ತುತ ಇ ಕಾಮರ್ಸ್ ದೈತ್ಯ ಅಮೆಜಾನ್ ಸಂಸ್ಥೆಯು ಭಾರತದಲ್ಲಿ ಮಾರಾಟಗಾರರಿಗೆ ಸಹಾಯವಾಗುವ ನಿಟ್ಟಿನಲ್ಲಿ ಮತ್ತೇ ಮೂರು(3) ಪ್ರಾದೇಶಿಕ ಭಾಷೆಗಳಲ್ಲಿ ವ್ಯವಹರಿಸಲು ಅವಕಾಶ ನೀಡಿದೆ.
* ಅಮೆಜಾನ್ ಸಂಸ್ಥೆಯು ಭಾರತದಲ್ಲಿ ಮಲಯಾಳಂ, ತೆಲುಗು, ಮತ್ತು ಬಂಗಾಳಿ ಭಾಷೆಗಳಲ್ಲಿ ಮಾರಾಟಗಾರ ಹಾಗೂ ಗ್ರಾಹಕರು ವ್ಯವಹಾರ ನಡೆಸಲು ಸಹಾಯವಾಗಲಿದೆ ಎಂದು ಅಮೆಜಾನ್ ಇಂಡಿಯಾ ತಿಳಿಸಿದೆ. * ಅಮೆಜಾನ್ ಸಂಸ್ಥೆಯು ಈ ಮುಂಚೇ ಕನ್ನಡ, ತಮಿಳು, ಹಿಂದಿ, ಇಂಗ್ಲಿಷ್, ಮರಾಠಿ ಭಾಷೆಗಳಲ್ಲಿ ವ್ಯವಹಾರ ನಡೆಸಲು ಮಾರಾಟಗಾರರು ಹಾಗೂ ಗ್ರಾಹಕರಿಗೆ ಅನುಕೂಲವನ್ನು ನೀಡಿತ್ತು.
* ಸದ್ಯ ಅಮೆಜಾನ್‌ನಲ್ಲಿ ವ್ಯವಹರಿಸಲು ಒಟ್ಟಾರೆ 8 ಭಾಷೆಗಳು ಲಭ್ಯವಿವೆ ಎಂದು ಅಮೆಜಾನ್ ಇಂಡಿಯಾ ತಿಳಿಸಿದೆ, ಪ್ರಸ್ತುತ ಭಾರತದ 8.5 ಲಕ್ಷ ಮಾರಾಟಗಾರರು ಅಮೆಜಾನ್ ಇಂಡಿಯಾದಲ್ಲಿ ತಮ್ಮ

ಹೆಸರುಗಳನ್ನೂ ನೋಂದಾಯಿಸಿದ್ದಾರೆ.
* Amazon.com ಒಂದು ಅಮೇರಿಕನ್ ಬಹುರಾಷ್ಟ್ರೀಯ ಸಮೂಹವಾಗಿದೆ, ಇದು ಇ ಕಾಮರ್ಸ್, ಕ್ಲೌಡ್ ಕಂಪ್ಯೂಟಿಂಗ್, ಡಿಜಿಟಲ್ ಸ್ಟ್ರೀಮಿಂಗ್ ಮತ್ತು ಕೃತಕ ಬುದ್ಧಿಮತ್ತೆಯ ಮೇಲೆ ಕೇಂದ್ರೀಕರಿಸುತ್ತದೆ.
* ಪ್ರಸ್ತುತ ಅಮೆಜಾನ್ CEO: ಆಂಡಿ ಜಾಸ್ಸಿ, ಸ್ಥಾಪಕ: ಜೆಫ್ ಬೆಜೋಸ್ * ಅಮೆಜಾನ್ ಕಂಪನಿಯು 1994 ರ ಜುಲೈ.5 ರಂದು ಸ್ಥಾಪನೆಯಾಗಿದೆ, ಹಾಗೂ ಇದು ತನ್ನ ಪ್ರಧಾನ ಕಚೇರಿಯನ್ನು ಯುನೈಟೆಡ್ ಸ್ಟೇಟ್ಸ್, ವಾಷಿಂಗ್ಟನ್, ಸಿಯಾಟಲ್ ಎಂಬ ನಗರದಲ್ಲಿ ಹೊಂದಿದೆ.

## ಪ್ರಧಾನಿ ನರೇಂದ್ರ ಮೋದಿ ಅವರು ಉಡುಗೊರೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ



* ಪ್ರಧಾನಿ ನರೇಂದ್ರ ಮೋದಿ ಅವರು ಹಲವು ವರ್ಷಗಳಿಂದ ತಾವು ಪಡೆದುಕೊಂಡಿರುವ ಉಡುಗೊರೆಗಳು ಹಾಗೂ ಸವಿನೆನಪಿನ ಕಾಣಿಕೆಗಳನ್ನು ಹರಾಜು ಪ್ರಕ್ರಿಯೆ ಆರಂಭವಾಗಲಿದೆ, ಈ ಪ್ರಕ್ರಿಯೆಯಲ್ಲಿ ಜನಗಳು ಭಾಗವಹಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.
* ಈ ಹರಾಜು ಪ್ರಕ್ರಿಯಿಂದ ಬರುವ ಹಣ "ನವಾಮಿ ಗಂಗೆ' ಯೋಜನೆಗೆ ಬಳಸಲಾಗುತ್ತದೆ ಎಂದು ತಿಳಿಸಿದ್ದಾರೆ, ಈ ನವಾಮಿ ಗಂಗೆ ಯೋಜನೆಯು ಗಂಗಾ ನದಿಯ ಸಂರಕ್ಷಣೆ ಮತ್ತು ಪುನರುಜ್ಜೀವನದ ಗುರಿಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ.
* ಪ್ರಧಾನಿ ಅವರು ಇಲ್ಲಿಯವರೆಗೆ ಹಲವಾರು ಉಡುಗೊರೆ ಹಾಗೂ ಕಾಣಿಕೆಗಳನ್ನು ಪಡೆದಿದ್ದಾರೆ, ಹಾಗೂ ಈ ಹರಾಜು ಪ್ರಕ್ರಿಯೆಯಲ್ಲಿ ಒಲಿಂಪಿಕ್ ವಿಜೇತರು ನೀಡಿದ ವಿಶೇಷ ಕಾಣಿಕೆಗಳನ್ನು ಸಹ ಹರಾಜಿಗಿಡಲಾಗಿದೆ ಈ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ಮೋದಿ ಅವರು ಮನವಿ ಮಾಡಿಕೊಂಡಿದ್ದಾರೆ.

## ಚೀನಾದಿಂದ 3 ಲಕ್ಷ ಡೋಸ್ ಕೋವಿಡ್ ಲಸಿಕೆ ವಿಶ್ವಸಂಸ್ಥೆಗೆ ದೇಣಿಗೆ




* ಚೀನಾ ದೇಶದ ಸರ್ಕಾರವು 3 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ವಿಶ್ವಸಂಸ್ಥೆಗೆ ದೇಣಿಗೆ ರೂಪದಲ್ಲಿ ನೀಡಿದೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರ ವಕ್ತಾರರು ಮಾಹಿತಿ ನೀಡಿದ್ದಾರೆ.
* ಇದೇ ವರ್ಷದ ಮಾರ್ಚ್ ತಿಂಗಳಿನಲ್ಲಿ ಭಾರತ ಸರ್ಕಾರ 2 ಲಕ್ಷ ಡೋಸ್‌ಗಳಷ್ಟು ಕೋವಿಡ್ ಲಸಿಕೆಗಳನ್ನು ವಿಶ್ವಸಂಸ್ಥೆಗೆ ಉಡುಗೊರೆಯಾಗಿ ನೀಡಿತ್ತು ಎಂದು ಪ್ರಧಾನ ಕಾರ್ಯದರ್ಶಿಯವರ ವಕ್ತಾರ ಸ್ಟೀಫನ್ ಡುಜಾರಿಕ್ ಅವರು ತಿಳಿಸಿದ್ದಾರೆ.

## ಭಾರತೀಯ ವಾಯುಪಡೆಯು ಫ್ರೆಂಚ್ ವಾಯುಪಡೆಯ ವಿಮಾನಗಳನ್ನು ಖರೀದಿಸುವ ಒಪ್ಪಂದಕ್ಕೆ ಸಹಿ



* ಪ್ರಸ್ತುತ ಭಾರತೀಯ ವಾಯುಪಡೆ (IAF) ಮಿರಾಜ್ 2000 ಯುದ್ಧ ವಿಮಾನಗಳ ಸಮೂಹವನ್ನು ಉಳಿಸಿಕೊಳ್ಳಲು ಸಹಾಯ ಮಾಡುವ ನಿಟ್ಟಿನಲ್ಲಿ ಫ್ರೆಂಚ್ ವಾಯುಪಡೆಯ ವಿಮಾನಗಳನ್ನು ಖರೀದಿಸುವ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಭಾರತೀಯ ಸರ್ಕಾರವು ಮಾಹಿತಿ ನೀಡಿದೆ.
* ಫ್ರೆಂಚ್ ಮಿರಾಜ್ ಜೆಟ್‌ಗಳ ಸ್ಕ್ವಾಡ್ರನ್ ನ್ನು ಈ ಹಿಂದೆ ಸ್ಥಗಿತಗೊಳಿಸಲಾಯಿತು. ಆಗಸ್ಟ್ 31 ರಂದು, ಈ 50 ಮಿರಾಜ್ 2000 ರ ಸೇವಾ ಸಾಮರ್ಥ್ಯವನ್ನು ಸುಧಾರಿಸಲು ಬಿಡಿಭಾಗಗಳು ಹಾಗೂ ಏರ್‌ಫ್ರೇಮ್ ಸಾಮರ್ಥ್ಯವನ್ನು ಸುಧಾರಿಸುವ ವಿಮಾನಗಳನ್ನು ಸ್ವಾಧೀನಪಡಿಸಿಕೊಳ್ಳಲು ಒಪ್ಪಂದಕ್ಕೆ ಭಾರತೀಯ ವಾಯುಪಡೆ ಸಹಿ ಹಾಕಿದೆ ಎಂದು ತಿಳಿದು ಬಂದಿದೆ.
* ಭಾರತೀಯ ವಾಯುಪಡೆ ಖರೀದಿಸುವ ಯಾವುದೇ ವಿಮಾನವನ್ನು ಹಾರಾಟಕ್ಕೆ ಬಳಕೆ ಮಾಡುವದಿಲ್ಲ ಎಂದು ತಿಳಿಸಿದೆ, ಈ ಮೊದಲು ಭಾರತವು ಕಳೆದ ವರ್ಷ ಗ್ವಾಲಿಯರ್‌ಗೆ ತಲುಪಿದ್ದ ಹಳೆಯ ಮಿರಾಜ್ ಗಳನ್ನು ಪೂರೈಸಲು ಫ್ರೆಂಚ್ ಕಂಪನಿಗಳೊಂದಿಗೆ ಒಪ್ಪಂದಕ್ಕವನ್ನು ಮಾಡಿಕೊಂಡಿತ್ತು.
* ಈ ಹಿಂದೆ ಭಾರತ ಸರ್ಕಾರವು 1980 ರ ದಶಕದಲ್ಲಿ ವಿಮಾನಗಳನ್ನು ಫ್ರಾನ್ಸನಿಂದ ಪಡೆದುಕೊಂಡಿತ್ತು, ಆದರೆ ಆ ವಿಮಾನಗಳು ಮೂರು ದಶಕಗಳಷ್ಟು ಹಳೆಯದಾಗಿದ್ದವು ಆದರೂ ಅವುಗಳು ಅತ್ಯಂತ ಶಕ್ತಿಶಾಲಿ ವಿಮಾನಗಳಾಗಿದ್ದವು.
* ಭಾರತೀಯ ವಾಯುಪಡೆ (IAF) ಮಿರಾಜ್ 2000 ಯುದ್ಧ ವಿಮಾನಗಳು ಪಾಕಿಸ್ತಾನದ ಭಯೋತ್ಪಾದಕ ಶಿಬಿರಗಳ ವಿರುದ್ಧ ಬಾಲಾಕೋಟ್ ವಾಯುದಾಳಿಯಲ್ಲಿ ಪಾಲ್ಗೊಂಡು ಅಲ್ಲಿನ ಶಿಬಿರವನ್ನು ನಾಶಪಡಿಸಿದ್ದವು.

## ಪಂಜಾಬ್ ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ(EV) ಸಾರ್ವಜನಿಕ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ ಮಾಡಲು ಒಪ್ಪಂದ



* ಪ್ರಸ್ತುತ ಪಂಜಾಬ್ ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ(EV) ಸಾರ್ವಜನಿಕ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ ಮಾಡಲು ಪಂಜಾಬ್

ಎನರ್ಜಿ ಡೆವಲಪ್‌ಮೆಂಟ್ ಏಜೆನ್ಸಿ (PEDA) ಕನ್ವರ್ಜೆನ್ಸ್ ಎನರ್ಜಿ ಸರ್ವೀಸಸ್ ಲಿಮಿಟೆಡ್ (CESL) ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. * ಪಂಜಾಬ್ ಎನರ್ಜಿ ಡೆವಲಪ್‌ಮೆಂಟ್ ಏಜೆನ್ಸಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನವಜೋತ್ ಪಾಲ್ ಸಿಂಗ್ ರಾಂಧವಾ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ, ಹಾಗೂ ಈ ಒಪ್ಪಂದವು ಪಂಜಾಬ್ ರಾಜ್ಯದಲ್ಲಿ ಕೈಗೆಟುಕುವ ಚಾರ್ಜಿಂಗ್ ಮೂಲಸೌಕರ್ಯವನ್ನು ಒದಗಿಸಲು ನಿಟ್ಟಿನಲ್ಲಿ ಈ EV ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿದೆ.

* ಪ್ರಸ್ತುತ ಈ EV ಕೇಂದ್ರಗಳಿಂದ ಎರಡು, ಮೂರು, ನಾಲ್ಕು ಚಕ್ರದ ಇ ವಾಹನಗಳ(EV) ಅಳವಡಿಕೆಯನ್ನು ಉತ್ತೇಜಿಸುತ್ತಿದೆ.

* ಪಂಜಾಬ್ ಇಂಧನ ಅಭಿವೃದ್ಧಿ ಸಂಸ್ಥೆಯು ನವೀಕರಿಸಬಹುದಾದ ಇಂಧನ ಸಂರಕ್ಷಣಾ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ನೋಡಲ್ ಏಜೆನ್ಸಿಯಾಗಿ PEDA ನ್ನು1991 ರಲ್ಲಿ ಸ್ಥಾಪನೆ ಮಾಡಿದೆ, ಮತ್ತೇ 1860 ರ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ PEDA ನ್ನು ಸೊಸೈಟಿಯಾಗಿ ನೊಂದಣಿ ಮಾಡಲಾಯಿತು ಎಂದು ತಿಳಿಸಿದೆ.

## 500 ಆರೋಗ್ಯಕರ ನಗರಗಳನ್ನು ನಿರ್ಮಿಸಲು ಸಲಹೆ ನೀಡಿದ ನೀತಿ ಆಯೋಗ



* ಪ್ರಸ್ತುತ ನೀತಿ ಆಯೋಗವು 'ಭಾರತದಲ್ಲಿ ನಗರ ಯೋಜನಾ ಸಾಮರ್ಥ್ಯವನ್ನು ನಿರ್ಮಿಸುವುದು' ಮಾಹಿತಿಯನ್ನು ನಗರ ಯೋಜನೆಯ ಹಲವಾರು ವಿಷಯಗಳ ಬಗ್ಗೆ ಶಿಫಾರಸುಗಳ ಗುಂಪನ್ನು ಹೊಂದಿದೆ.

* ಆರೋಗ್ಯಕರ ನಗರಗಳನ್ನು ನಿರ್ಮಿಸಲು ಸಲಹೆಗಳು: ಆರೋಗ್ಯಕರ ನಗರಗಳನ್ನು ಯೋಜಿಸಲು ಮಧ್ಯಸ್ಥಿಕೆಗಳು ನಗರ ಪ್ರದೇಶದ ಅತ್ಯುತ್ತಮ ಬಳಕೆ ಮಾನವ ಸಂಪನ್ಮೂಲ ಸಾಮರ್ಥ್ಯಗಳನ್ನು ಹೆಚ್ಚಿಸುವುದು ನಗರ ಆಡಳಿತವನ್ನು ಬಲಪಡಿಸುವುದು ಸ್ಥಳೀಯ ನಾಯಕತ್ವವನ್ನು ನಿರ್ಮಿಸುವುದು ಖಾಸಗಿ ವಲಯದ ಪಾತ್ರವನ್ನು ಹೆಚ್ಚಿಸುವುದು ಮತ್ತು ನಗರ ಯೋಜನೆ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವುದು.

* ಆರೋಗ್ಯಕರ ನಗರಗಳನ್ನು ನಿರ್ಮಿಸಲು ಸಲಹೆಗಳ ಪ್ರಕಾರ ಮುಂಬರುವ 5 ವರ್ಷಗಳಲ್ಲಿ ಭಾರತಕ್ಕೆ 500 'ಆರೋಗ್ಯಕರ ನಗರಗಳನ್ನು' ನಿರ್ಮಿಸಲು ಕೇಂದ್ರೀಯಯೋಜನೆಯ ಅಗತ್ಯವಿದೆ ಹಾಗೂ ರಾಜ್ಯಗಳಲ್ಲಿ ಪಟ್ಟಣ ಯೋಜನೆ ಕಾಯಿದೆಗಳ ಪರಿಷ್ಕರಣೆ ಅಗತ್ಯವಿದೆ ಎಂದು ನೀತಿ ಆಯೋಗವು ತಿಳಿಸಿದೆ.

* ಕೇಂದ್ರ ವಲಯದ ಯೋಜನೆಯನ್ನು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಹಭಾಗಿವತ್ವದಲ್ಲಿ 500 ಆರೋಗ್ಯಕರ ನಗರಗಳನ್ನು ನಿರ್ಮಿಸುವ ಕಾರ್ಯವನ್ನು ಆರಂಭಿಸಬೇಕು ಎಂದು ನೀತಿ ಆಯೋಗ ತಿಳಿಸಿದೆ.

* ಈ ಹಿಂದೆ 2020 ರ ಅಕ್ಟೋಬರ್ ನಲ್ಲಿ ನೀತಿ ಆಯೋಗವು ಭಾರತದಲ್ಲಿ ನಗರ ಯೋಜನಾ ಶಿಕ್ಷಣದಲ್ಲಿ ಸುಧಾರಣೆಗಳನ್ನು ಪರಿಶೀಲಿಸುವ ಸಲಹಾ ಸಮಿತಿಯನ್ನು ರಚನೆ ಮಾಡಿದೆ.

## ವಿಶ್ವ ಓಜೋನ್ ದಿನ




* ವಿಶ್ವದಾದ್ಯಂತ ಪ್ರತಿವರ್ಷವು ಸೆಪ್ಟೆಂಬರ್ 16 ರಂದು ವಿಶ್ವ ಓಜೋನ್ ದಿನ ಅಥವಾ ಓಜೋನ್ ಪದರ ಸಂರಕ್ಷಣೆಗಾಗಿ ಅಂತರಾಷ್ಟ್ರೀಯ ದಿನವನ್ನು ಆಚರಣೆ ಮಾಡುತ್ತಾರೆ.

* ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 1994 ರಲ್ಲಿ ಮಾಂಟ್ರಿಯಲ್ ಪ್ರೋಟೋಕಾಲ್ ಗೆ ಸಹಿ ಹಾಕಿದ ನಂತರ ವಿಶ್ವ ಓಜೋನ್ ದಿನವನ್ನು ಘೋಷಣೆ ಮಾಡಿದೆ, ನಂತರ ಪ್ರತಿಯೊಂದು ದೇಶವು ಓಜೋನ್ ಪದರವನ್ನು ಸವೆಯುವ ಪದಾರ್ಥಗಳ ಮೇಲೆ ಮಾಂಟ್ರಿಯಲ್ ಪ್ರೋಟೋಕಾಲ್ ನ್ನು 1987 ರಲ್ಲಿ ಸಹಿ ಹಾಕಿವೆ.

* ಪ್ರಸ್ತುತ 'ಮಾಂಟ್ರಿಯಲ್ ಪ್ರೋಟೋಕಾಲ್ ನಮ್ಮನ್ನು, ನಮ್ಮ ಆಹಾರ ಮತ್ತು ಲಸಿಕೆಗಳನ್ನು ತಂಪಾಗಿರಿಸುವುದು' ಎನ್ನುವುದು 2021 ನೇ ವರ್ಷದ ಧ್ಯೇಯ ವಾಕ್ಯವಾಗಿದೆ, ಅಲ್ಲದೇ ವಿಶ್ವಸಂಸ್ಥೆಯ 197 ಸದಸ್ಯರಿಂದ ಅಂಗೀಕರಿಸಲಾಗಿರುವ ಮೊದಲ ಪ್ರೋಟೋಕಾಲ್ ಇದಾಗಿದೆ.

* ಈ ಹಿಂದೆ 2019 ರಲ್ಲಿ ಭಾರತದ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆಯ ಸಚಿವಾಲಯವು 'ಇಂಡಿಯಾ ಕೂಲಿಂಗ್ ಆಕ್ಷನ್ ಪ್ಲಾನ್'ನ್ನು ಆರಂಭಿಸಿದೆ.

* ಮಾಂಟ್ರಿಯಲ್ ಪ್ರೋಟೋಕಾಲ್ ಎಂಬುವದು ತಂಪಾಗಿಸುವಿಕೆ ಹಾಗೂ ಶೈತ್ಯೀಕರಣದ ಉದ್ದೇಶಗಳಿಗಾಗಿ ವ್ಯಾಪಕವಾಗಿ ಬಳಸುತ್ತಿರುವ ಕ್ಲೋರೊಫ್ಲೋರೋಕಾರ್ಬನ್ ಏರೋಸಾಲ್‌ಗಳು, ಹಾಲೋನ್‌ಗಳು ಎಲ್ಲಾ ಓಜೋನ್ ಖಾಲಿಯಾದ ಪದಾರ್ಥಗಳ ಅಸ್ತಿತ್ವವನ್ನು ತಡೆಯಲು ದೇಶಗಳಿಗೆ ಒಪ್ಪಂದವಾಗಿದೆ.

* ಹಾನಿಕಾರಕ ಪದಾರ್ಥಗಳ ಬಳಕೆಯಿಂದಾಗಿ ಅಂಟಾರ್ಟಿಕಾದಲ್ಲಿ ಓಜೋನ್ ಪದರಗಳಲ್ಲಿ ರಂಧ್ರವನ್ನು ಮಾಡಿದೆ ಎಂದು 1970 ರಲ್ಲಿ ಕಂಡುಹಿಡಿಯಲಾಗಿದೆ.

# 21-09-2021

## KSRTC ಗೆ 2021 ನೇ ಸಾಲಿನ ರಾಷ್ಟ್ರೀಯ ಎಕ್ಸಲೆನ್ಸ್ ಪ್ರಶಸ್ತಿ

* ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(KSRTC)ಕ್ಕೆ ಇದೀಗ ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ರಾಷ್ಟ್ರೀಯ ಎಕ್ಸಲೆನ್ಸ್ 5 ಪ್ರಶಸ್ತಿಗಳು ಲಭಿಸಿವೆ, ಎಂದು KSRTC ನ ಮುಖ್ಯ ಸಾರ್ವಜನಿಕ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

* ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯು, KSRTC ಗೆ ಸಾರ್ವಜನಿಕ ಸಂಪರ್ಕ ಕ್ಷೇತ್ರಗಳ ಉಪಕ್ರಮಗಳನ್ನು ಪರಿಗಣಿಸಿ ನೀಡುವ ಪಿ ಆರ್ ಸಿ ಐ ಎಕ್ಸಲೆನ್ಸ್ ಪ್ರಶಸ್ತಿಯ 5 ವರ್ಗಗಳಲ್ಲಿ ಲಭಿಸಿವೆ ಎಂದು ತಿಳಿಸಿದ್ದಾರೆ. ಸಾರ್ವಜನಿಕವಲಯದಲ್ಲಿ ಕೋವಿಡ್

ನಿರ್ವಹಣೆಗಾಗಿಬೆಳ್ಳಿ ಪದಕ ಅತ್ಯುತ್ತಮ ಸಾರ್ವಜನಿಕ ಉದ್ದಿಮೆ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಉಪ ಕ್ರಮಕ್ಕಾಗಿ ಕಂಚಿನ ಪದಕಆರೋಗ್ಯ ರಕ್ಷಣೆ ಸಂವಹನದ ಸಾಕ್ಷ್ಯ ಚಿತ್ರಗಳಿಗಾಗಿ ಕಂಚಿನ ಪದಕ ಪ್ರಾದೇಶಿಕ ಸಾರಿಗೆ ಸಂಪದಕ್ಕಾಗಿ ಚಿನ್ನದ ಪದಕಕೋವಿಡ್ 19 ಸಮಯದಲ್ಲಿ ನೂತನ ಗ್ರಾಹಕ ಸ್ನೇಹಿ ಉಪಕ್ರಮದ ಅಡಿಯಲ್ಲಿ ಚಿನ್ನದ ಪದಕ ಲಭಿಸಿದೆ, ಇತ್ತೀಚಿಗೆ ಅಂದರೆ ಇದೇ ಸೆಪ್ಟೆಂಬರ್. 18 ರಂದು ಗೋವಾದಲ್ಲಿ ನಡೆದ 15 ನೇ ವಿಶ್ವ ಸಾರ್ವಜನಿಕ ಸಂಪರ್ಕ ಮಂಡಳಿಯ ಕಾರ್ಯಕ್ರಮದಲ್ಲಿ ಗೋವಾದ ಕಲೆ ಹಾಗೂ ಸಂಸ್ಕೃತಿ ಬುಡಕಟ್ಟು ಕಲ್ಯಾಣ ಸಚಿವ ಗೋವಿಂದ ಗೌಡರವರು ಈ ಎಲ್ಲ ಪ್ರಶಸ್ತಿಗಳನ್ನು KSRTC ಗೆ ನೀಡಿದರು.

## ಭಾರತವು 'ಲಸಿಕೆ ಮೈತ್ರಿ' ಕಾರ್ಯಕ್ರಮದ ಅಡಿಯಲ್ಲಿ ಲಸಿಕೆ ರಫ್ತು ಆರಂಭಿಸಲಿದೆ




* ಪ್ರಸ್ತುತ ಭಾರತವು 'ಲಸಿಕೆ ಮೈತ್ರಿ' ಕಾರ್ಯಕ್ರಮದ ಅಡಿಯಲ್ಲಿ ಮುಂಬರುವ ತಿಂಗಳಿನಲ್ಲಿ ಹೆಚ್ಚುವರಿ ಕೋವಿಡ್ ಲಸಿಕೆಗಳ ರಫ್ತನ್ನು ಆರಂಭಿಸಲಿದೆ, ಹಾಗೂ ಅಕ್ಟೋಬರ್ ತಿಂಗಳಿನಲ್ಲಿ 30 ಕೋಟಿ ಡೋಸ್ ಮತ್ತು ಅದರ ನಂತರದ ಮೂರು ತಿಂಗಳಲ್ಲಿ 100 ಕೋಟಿ ಡೋಸ್ ಗಳು ನಮಗೆ ಲಭ್ಯವಾಗಲಿವೆ ಎಂದು ಅವರು ತಿಳಿಸಿದರು. ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ತಿಳಿಸಿದ್ದಾರೆ.
* ಪ್ರಸ್ತುತ ಭಾರತ ದೇಶಾದ್ಯಂತ ಇದುವರೆಗೆ 81 ಕೋಟಿ ಕೋವಿಡ್ 19 ಲಸಿಕೆಯ ಡೋಸ್‌ಗಳನ್ನು ನೀಡಲಾಗಿದೆ.
* ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಲಸಿಕೆ ಹಂಚಿಕೆ ಕಾರ್ಯಕ್ರಮವಾಗಿರುವ 'ಕೋವ್ಯಾಕ್ಸ್'ನ್ನು ನಿರ್ವಹಿಸುತ್ತಿದೆ.

## 2020 ನೇ ಸಾಲಿನ ನ್ಯಾಷನಲ್ ಫ್ಲೋರೆನ್ಸ್ ನೈಟಿಂಗೇಲ್ ಅವಾರ್ಡ್ ಪಡೆದ ಮರಿಯಮ್ಮ




* 2020 ನೇ ಸಾಲಿನ ನ್ಯಾಷನಲ್ ಫ್ಲೋರೆನ್ಸ್ ನೈಟಿಂಗೇಲ್ ಅವಾರ್ಡ್ ನ್ನು ಕರ್ನಾಟಕ ರಾಜ್ಯದ ಹೊಸಕೋಟೆ ತಾಲೂಕಿನ ನಂದಗುಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಯಾಗಿರುವ ಮರಿಯಮ್ಮ ಅವರಿಗೆ ಲಭಿಸಿದೆ.
* ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ವರ್ಚುವಲ್ ಸಭೆಯ ಮೂಲಕ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಯಾಗಿರುವ ಮರಿಯಮ್ಮ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದ್ದಾರೆ, ಮೂಲತಃ ಇವರು ಕಡಬ ತಾಲೂಕಿನ ನೂಜಿಬಾಳ್ತಿಲ ನಿವಾಸಿಯಾಗಿದ್ದಾರೆ, ಇದೀಗ ಇವರು ಕೊಯಿಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.
* ಮರಿಯಮ್ಮ ಅವರು 2007 ರಲ್ಲಿ ಉತ್ತಮ ಹೆಲ್ತ್ ಅಸಿಸ್ಟೆಂಟ್ ಅವಾರ್ಡ್, ಹಾಗೂ ಮತ್ತೇ 2011 ರಲ್ಲಿ ಬೆಸ್ಟ್ ಸಬ್ ಸೆಂಟರ್ ಅವಾರ್ಡ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

## ಪಂಜಾಬ್ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಚರಣ್‌ಜಿತ್ ಸಿಂಗ್ ಚನ್ನಿ



* ಪ್ರಸ್ತುತ ಪಂಜಾಬ್ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಚರಣ್ ಜಿತ್ ಸಿಂಗ್ ಚನ್ನಿ ಅವರು ಅಧಿಕಾರವನ್ನು ಸ್ವೀಕರಿಸಿದ್ದಾರೆ.
* ಚರಣಜಿತ್ ಸಿಂಗ್ ಚನ್ನಿ ಒಬ್ಬ ಭಾರತೀಯ ರಾಜಕಾರಣಿ ಹಾಗೂ ಪ್ರಸ್ತುತ ಪಂಜಾಬ್ ಸಿಎಂಆಗಿದ್ದಾರೆ, ಸದ್ಯ ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದಾರೆ.
* ಈ ಹಿಂದೆ 2018ರಲ್ಲಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ವಿರುದ್ಧ ಐಎಎಸ್ ಮಹಿಳಾ ಅಧಿಕಾರಿಗೆ ಅಶ್ಲೀಲ ಸಂದೇಶ ಕಳುಹಿಸಿರುವ ಹಿನ್ನಲೆಯಿಂದಾಗಿ ಇವರ ಮೇಲೆ ಮೀಟೂ ಆರೋಪವಿದೆ ಎಂದು ತಿಳಿದು ಬಂದಿದೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಪಂಜಾಬ್'ನ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವುದಾಗಿ ಮಹಿಳಾ ಆಯೋಗದ ಅಧ್ಯಕ್ಷೆ ಮನಿಷಾ ಗುಲಾಟಿ ಅವರು ತಿಳಿಸಿದ್ದಾರೆ.

## ಅಮೆಜಾನ್ ಸಂಸ್ಥೆಯು ಚೀನಾ ದೇಶದ 600 ಬ್ರ್ಯಾಂಡ್, 3000 ಆನ್‌ಲೈನ್ ಸ್ಟೋರ್'ಗೆ ನಿಷೇಧ ಹೇರಿದೆ

amazon

* ಪ್ರಸ್ತುತ ಅಮೆಜಾನ್ ಸಂಸ್ಥೆಯು ತನ್ನ ವೇದಿಕೆಯಲ್ಲಿ ಚೀನಾ ದೇಶದ 600 ಬ್ರ್ಯಾಂಡ್‌ಗಳಿಗೆ ಇ ಕಾಮರ್ಸ್ ಕಂಪನಿ ನಿಷೇಧ ಹೇರಿದೆ., ಹಾಗೂ ಸರಿ ಸುಮಾರು 3000 ಆನ್‌ಲೈನ್ ಸ್ಟೋರ್‌ಗಳನ್ನು ಸ್ಥಗಿತಗೊಳಿಸಿದೆ.
* ಪ್ರಸ್ತುತ ಚೀನಾ ಮೂಲದ ಹಲವು ಬ್ರ್ಯಾಂಡ್ ನಕಲಿ ವಿಮರ್ಶೆ, ಕಳಪೆ ಉತ್ಪನ್ನ ಮಾರಾಟ ಹಾಗೂ ಅಮೆಜಾನ್ ಪಾಲಿಸಿ ನೀತಿಯನ್ನು ಉಲ್ಲಂಘಿಸಿದ ಕಾರಣದಿಂದಾಗಿ ಆನ್‌ಲೈನ್ ಸ್ಟೋರ್‌ಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದೆ.
* ಅಮೆಜಾನ್ ಸಂಸ್ಥೆಯು ಚೀನಾದ 600 ಬ್ರ್ಯಾಂಡ್‌ಗಳ ಕಳಪೆ ದರ್ಜೆಯ ಉತ್ಪನ್ನ ಮತ್ತು ನಕಲಿ ವಿಮರ್ಶೆ ಮೇಲಿನ ಕ್ರಮ ಜರುಗಿಸಲಾಗುವದು ಎಂದು ತಿಳಿಸಿದೆ.

## ಭಾರತ ಎಲ್ ಸಾಲ್ವಡಾರ್ ನಡುವೆ 3ನೇ ವಿದೇಶಾಂಗ ಕಚೇರಿ ಸಮಾಲೋಚನೆ



* ಪ್ರಸ್ತುತ ಭಾರತ ಹಾಗೂ ಎಲ್ ಸಾಲ್ವಡಾರ್ ನಡುವೆ ಇತ್ತೀಚಿಗೆ ಸ್ಯಾನ್ ಸಾಲ್ವಡಾರ್ ನಲ್ಲಿ 3ನೇ ವಿದೇಶಾಂಗ ಕಚೇರಿ ಸಮಾಲೋಚನೆಗಳನ್ನು ಜರುಗಿದವು.
* ಈ ಸಭೆಯ ನೇತೃತ್ವವನ್ನು ಭಾರತದ ಕಾರ್ಯದರ್ಶಿ ರಿವಾ ಗಂಗೂಲಿ ದಾಸ್ ಹಾಗೂ ಎಲ್ ಸಾಲ್ವಡೋರನ್ ವಿದೇಶಾಂಗ ವ್ಯವಹಾರಗಳು ರಾಯಭಾರಿ ಅಡ್ರಿಯಾನಾ ಮರಿಯಾ ಅವರು ವಹಿಸಿಕೊಂಡಿದ್ದರು.
* ಈ ಸಭೆಯಲ್ಲಿ ಆರೋಗ್ಯ, ವ್ಯಾಪಾರ ಮತ್ತು ಹೂಡಿಕೆ, ಪ್ರವಾಸೋದ್ಯಮ, ಇಂಧನ, ಜಲಕೃಷಿ, ಸಾರಿಗೆ, ವಾಯುಯಾನ ಮತ್ತು ಮೂಲಸೌಕರ್ಯ, ಕ್ಷೇತ್ರಗಳ ಅಭಿವೃದ್ಧಿ ಹೀಗೆಎಲ್ಲಾ ದ್ವಿಪಕ್ಷೀಯ ಸಂಬಂಧಗಳನ್ನು ಪರಿಶೀಲಿನೇ ಮಾಡಿದರು, ಅಲ್ಲದೆ ಉಭಯ ದೇಶಗಳು ಸಾರ್ವಜನಿಕ ರಾಜತಾಂತ್ರಿಕ ಕ್ಷೇತ್ರದಲ್ಲಿ ಅಭ್ಯಾಸ, ವಿಚಾರಗಳನ್ನೂ ವಿನಿಮಯ ಮಾಡಿಕೊಳ್ಳಲು ಬದ್ಧರಾಗಿದ್ದಾರೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ 1979 ರ ಫೆಬ್ರವರಿ.12 ರಂದು ಈ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪನೆ ಮಾಡಲಾಗಿದೆ, ಪ್ರಸ್ತುತ ನವದೆಹಲಿಯಲ್ಲಿ ಎಲ್ ಸಾಲ್ವಡಾರ್ ತನ್ನ ರಾಯಭಾರ ಕಚೇರಿಯನ್ನು ಹೊಂದಿದೆ, ಹಾಗೂ ಭಾರತದ ರಾಯಭಾರ ಕಚೇರಿಯು ಸ್ಯಾನ್ ಸಾಲ್ವಡಾರ್ ಗ್ವಾಟೆಮಾಲಾದಲ್ಲಿದೆ.
* ಭಾರತ ಎಲ್ ಸಾಲ್ವಡಾರ್ ಎರಡೂ ದೇಶಗಳ ಆಯಾ ವಿದೇಶಿ ಸಚಿವಾಲಯಗಳು ಹಲವಾರು ಸಮಾಲೋಚನೆಗಳನ್ನೂ ನಡೆಸಿದ ನಂತರ 2004 ರ ಫೆಬ್ರವರಿಯಲ್ಲಿ ಒಪ್ಪಂದದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದವು, ಮತ್ತೇ 2012 ರಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರದಲ್ಲಿ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು.

## ಎಸ್.ನಟರಾಜ್ ಬೂದಾಳು ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿಗೆ ಆಯ್ಕೆ



* ಪ್ರಸ್ತುತ ಸಂಶೋಧಕ ಎಸ್.ನಟರಾಜ ಬೂದಾಳು ಅವರ 'ಸರಹಪಾದ' ಕೃತಿಯು ಕನ್ನಡ ವಿಭಾಗದಿಂದ ಕೇಂದ್ರ ಸಾಹಿತ್ಯ ಅಕಾಡೆಮಿಯು ಅನುವಾದಿತ ಕೃತಿಗೆ ನೀಡುವ 2020ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದೆ.
* ಪ್ರಸ್ತುತ ಈ ಅಕಾಡೆಮಿಯ ಅಧ್ಯಕ್ಷರಾಗಿರುವ ಡಾ.ಚಂದ್ರಶೇಖರ ಕಂಬಾರ ಅವರ 'ಶಿಖರ ಸೂರ್ಯ' ಕೃತಿಯ ಮಲಯಾಳಂ ಅನುವಾದದ 'ಶಿಖರಸೂರ್ಯನ್' ಕೃತಿಯು ಪ್ರಶಸ್ತಿಗೆಆಯ್ಕೆಯಾಗಿದೆ.
* ಕನ್ನಡದ ವಿವೇಕ್ ಶಾನಭಾಗ್ ಅವರ 'ಘಾಚಾರ್ ಘೋಚಾರ್' ಕೃತಿಯು ಇಂಗ್ಲಿಷ್‌ಗೆ ಅನುವಾದ ಹಾಗೂ ಗೋಪಾಲಕೃಷ್ಣ ಪೈ ಅವರ 'ಸ್ವಪ್ನ ಸಾರಸ್ವತ' ಕೃತಿಯು ಕೊಂಕಣಿಗೆ ಅನುವಾದ, ಅಲ್ಲದೇ ಶಾಂತಿನಾಥ ದೇಸಾಯಿ ಅವರ 'ಓಂ ಣಮೋ' ಕೃತಿಯು ತೆಲುಗಿಗೆ ಅನುವಾದವಾಗಿರುವ ಈ ಎಲ್ಲ ಕೃತಿಗಳು ಕನ್ನಡ ಮೂಲದ ಕೃತಿಗಳಾಗಿವೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿಗೆ ಭಾರತದ 24 ಭಾಷೆಗಳ ಅನುವಾದಿತ ಕೃತಿಗಳು ಈ ಪ್ರಶಸ್ತಿಗೆ ಆಯ್ಕೆಯಾಗಿವೆ, ಈ ಪ್ರಶಸ್ತಿ 50,000 ರೂ. ನಗದು ಮತ್ತು ಪ್ರಮಾಣ ಪತ್ರವನ್ನು ಒಳಗೊಂಡಿರಲಿದೆ ಎಂದು ತಿಳಿಸಿದ್ದಾರೆ.

## ರೈಲು ಕೌಶಲ್ಯ ವಿಕಾಸ ಯೋಜನೆ ಆರಂಭಿಸಿದ ಭಾರತೀಯ ರೈಲ್ವೇ



* ಪ್ರಸ್ತುತ ಭಾರತೀಯ ರೈಲ್ವೆ ಪ್ರಧಾನ ಮಂತ್ರಿ ಕೌಶಲ್ ವಿಕಾಸ ಯೋಜನೆ ಅಡಿಯಲ್ಲಿ 'ರೈಲ್ ಕೌಶಲ್ ವಿಕಾಸ್ ಯೋಜನೆ' ಪ್ರಾರಂಭಿಸಿದೆ, ಈ ಯೋಜನೆಯನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಉದ್ಘಾಟಿಸಿದರು.
* ಈ ಯೋಜನೆಯಿಂದ ಭಾರತದಾದ್ಯಂತ 75 ರೈಲ್ವೆ ತರಬೇತಿ ಸಂಸ್ಥೆಗಳ ಸಹಯೋಗದೊಂದಿಗೆ ಉದ್ಯಮಕ್ಕೆ ಸಂಬಂಧಪಟ್ಟ ಕೌಶಲ್ಯಗಳಲ್ಲಿ ರೈಲ್ವೇಗೆ ಪ್ರವೇಶದ ತರಬೇತಿಯನ್ನು ನೀಡುತ್ತದೆ.
* ಈ 'ರೈಲ್ ಕೌಶಲ್ ವಿಕಾಸ್ ಯೋಜನೆ'ಯು ಸುಮಾರು 50 ಸಾವಿರ ಯುವಕರಿಗೆ ತರಬೇತಿ ನೀಡಲಿದೆ, ಹಾಗೂ ಈ ಮಿಷನ್ ಯುವಕರ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಅಲ್ಲದೇ ಸ್ವಯಂ ಉದ್ಯೋಗಿಗಳ ಕೌಶಲ್ಯಗಳಿಗೆ ಒಟ್ಟು ನೀಡುತ್ತದೆ.
* ಈ 'ರೈಲ್ ಕೌಶಲ್ ವಿಕಾಸ್ ಯೋಜನೆ'ಯು 3 ವರ್ಷಗಳ ಸಮಯದಲ್ಲಿ 50,000 ಅಭ್ಯರ್ಥಿಗಳಿಗೆ ತರಬೇತಿ ನೀಡಲಿದೆ, ಆರಂಭದಲ್ಲಿ 1000 ಅಭ್ಯರ್ಥಿಗಳಿಗೆ ತರಬೇತಿ ನೀಡಲಿದೆ.
* ಪ್ರಸ್ತುತ ಈ ಯೋಜನೆ ಅಡಿಯಲ್ಲಿ ಯುವಕರಿಗೆ ಎಲೆಕ್ಟ್ರಿಷಿಯನ್, ವೆಲ್ಡರ್, ಮೆಷಿನಿಸ್ಟ್ ಹಾಗೂ ಫಿಟ್ಟರ್ ಈ 4 ಟ್ರೇಡ್‌ಗಳಲ್ಲಿ ತರಬೇತಿ ನೀಡಲಿದೆ, 10 ನೇ ತರಗತಿ ಉತ್ತೀರ್ಣವಾಗಿರುವ ಸುಮಾರು 18 35 ವರ್ಷದ ಅಭ್ಯರ್ಥಿಗಳು ಕೂಡ ಈ ಯೋಜನೆಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

## ಚೀನಾ ದೇಶದ ಮಾನವ ರಹಿತ ನೌಕೆಯ ಯಶಸ್ವಿ ಉಡಾವಣೆ



* ಪ್ರಸ್ತುತ ಚೀನಾ ದೇಶದ ಮಾನವ ರಹಿತ ಸರಕು ಹೊತ್ತ ಸಾಗುವ ಬಾಹ್ಯಾಕಾಶ ನೌಕೆಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ, ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಚೀನಾದ ಬಾಹ್ಯಾಕಾಶ ನಿಲ್ದಾಣಕ್ಕೆ

ಸಾಮಗ್ರಿಗಳನ್ನೂ ರವಾನಿಸಲು ಈ ನೌಕೆಯನ್ನು ಬಳಸಲಾಗಿದೆ.
* ಚೀನಾ ದೇಶದ ಲಾಂಗ್ ಮಾರ್ಚ್ 7 ವೈ 4 ರಾಕೆಟ್ ಟಿಯಾನ್‌ಜೌ 3 ಎಂಬ ನೌಕೆಯನ್ನು ಹೊತ್ತ ಹೈನಾನ್‌ನ ದಕ್ಷಿಣ ದ್ವೀಪ ಪ್ರಾಂತ್ಯದ ವೆಂಚಾಂಗ್ ಬಾಹ್ಯಾಕಾಶ ಉಡಾವಣಾ ಸ್ಥಳದಿಂದ ಉಡಾವಣೆ ಯಾಗಿದೆ ಎಂದು ಚೀನಾದ ಮಾನವ ಸಹಿತ ಬಾಹ್ಯಾಕಾಶ ಸಂಸ್ಥೆ ಮಾಹಿತಿ ನೀಡಿದೆ. * ಮುಂದಿನ ವರ್ಷದ ಅವಧಿಗೆ ಸಿದ್ಧಗೊಳ್ಳಲಿರುವ ಬಾಹ್ಯಾಕಾಶ ನಿಲ್ದಾಣ ಕೇಂದ್ರಕ್ಕೆ ಸಾಮಗ್ರಿಗಳನ್ನು ರವಾನಿಸಲು ಈ ಟಿಯಾನ್‌ಜೌ ನೌಕೆಯು ಬಳಸಲಾಗುತ್ತಿದೆ.

## ಜಪಾನಿನ 107 ವರ್ಷದ ಅವಳಿ ಸಹೋದರಿಯರ ಗಿನ್ನೆಸ್ ದಾಖಲೆ



* ಪ್ರಸ್ತುತ 107 ವರ್ಷ ಹಾಗೂ 330 ದಿನಗಳ ವಯಸ್ಸಿನ ಇಬ್ಬರು ಸಹೋದರಿಯರು ವಿಶ್ವದ ಅತ್ಯಂತ ಹಿರಿಯ ಅವಳಿ ಜೀವಗಳೆಂದು ವಿಶ್ವ ಗಿನ್ನೆಸ್ ದಾಖಲೆಯನ್ನು ಬರೆದಿದ್ದಾರೆ, ಹಾಗೂ ಇವರು ಮೂಲತಃ ಇವರು ಜಪಾನ್ ದೇಶದವರಾಗಿದ್ದರೆ.

* ಪ್ರಸ್ತುತ ಜಪಾನಿನ ರಾಷ್ಟ್ರೀಯ ರಜಾ ದಿನವನ್ನು ವೃದ್ಧರ ದಿನಾಚರಣೆಯಂದು ಈ ಘೋಷಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

* ಜಪಾನ್ ಮೂಲದ ಉಮೆನೊ ಸುಮಿಯಮಾ ಹಾಗೂ ಕೌಮೆ ಕೊಡಮಾ ಎಂಬ ಈ ಅವಳಿ ಸಹೋದರಿಯರು 1913 ರ ನವೆಂಬರ್ 5 ರಂದು ಪಶ್ಚಿಮ ಜಪಾನ್‌ನ ಶೋಡೋಶಿಮಾ ದ್ವೀಪದಲ್ಲಿ ಜನಿಸಿದ್ದಾರೆ.

* ಈ ಹಿಂದೆ ಜಪಾನಿನಲ್ಲಿ 107 ವರ್ಷಗಳು ಮತ್ತು 175 ದಿನಗಳು ಬದುಕಿರುವ ಕಿನ್ ನರಿಟಾ ಮತ್ತು ಜಿನ್ ಕಾನಿ ಎಂಬ ಅವಳಿ ಸಹೋದರಿಯರ ದಾಖಲೆಯನ್ನು ಮುರಿದಿದ್ದಾರೆ ಎಂದು ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ ಲಿಮಿಟೆಡ್ ಮಾಹಿತಿ ನೀಡಿದೆ.

* ಪ್ರಸ್ತುತ ಜಪಾನ್ ದೇಶದಲ್ಲಿ 12.50 ಕೋಟಿ ಜನಸಂಖ್ಯೆ ಇದೆ, ಹಾಗೂ ಈ ದೇಶವು ವಿಶ್ವದಲ್ಲಿ ಅತ್ಯಂತ ವೇಗವಾಗಿ ವಯಸ್ಸಾದ ಜನಸಂಖ್ಯೆ ಹೊಂದುತ್ತಿರುವ ದೇಶವಾಗಿದೆ ಎಂದು ತಿಳಿದು ಬಂದಿದೆ.

* ಜಪಾನ್ ದೇಶದಲ್ಲಿ ಜನಸಂಖ್ಯೆಯ ಶೇ. 29 ರಷ್ಟು ಜನರು 65 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಮತ್ತು ಕಲ್ಯಾಣ ಸಚಿವಾಲಯ ಮಾಹಿತಿ ನೀಡಿದೆ.

# 22-09-2021


## ಪ್ರಧಾನಿ ಮೋದಿ ಜೊತೆಗೆ ಸೌದಿ ವಿದೇಶಾಂಗ ಸಚಿವರ ಮಾತುಕತೆ



* ಪ್ರಸ್ತುತ ಸೌದಿ ಅರೇಬಿಯಾದ ವಿದೇಶಾಂಗ ಸಚಿವರಾಗಿರುವ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್ ಅವರು ಭಾರತೀಯ ಪ್ರಧಾನಿ ಮೋದಿ ಅವರನ್ನು ಭೇಟಿ ಮಾತುಕತೆ ನಡೆಸಿದ್ದಾರೆ, ಅದೇ ಸಂಧರ್ಭದಲ್ಲಿ ಸದ್ಯ ಅಫ್ಘಾನಿಸ್ತಾನದಲ್ಲಿನ ಪರಿಸ್ಥಿತಿಯ ಬಗ್ಗೆಯು ಕೂಡ ಮಾತುಕತೆಯನ್ನು ನಡೆಸಿದ್ದಾರೆ.

* ಈ ಮಾತುಕತೆಯಲ್ಲಿ ಉಭಯ ದೇಶಗಳ ನಾಯಕರು ರಕ್ಷಣಾ ವಲಯ, ವ್ಯಾಪಾರ, ಹೂಡಿಕೆ, ಇಂಧನ ಕ್ಷೇತ್ರಗಳ ದ್ವಿಪಕ್ಷೀಯ ಉಪಕ್ರಮಗಳಲ್ಲಿ ಆಗುತ್ತಿರುವ ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. * ಸದ್ಯ ಭಾರತವು ಸೌದಿ ಅರೇಬಿಯಾದಿಂದ ಇಂಧನ, ರಕ್ಷಣಾ ಉತ್ಪಾದನೆ ಕ್ಷೇತ್ರಗಳಲ್ಲಿ ಹೆಚ್ಚಿನ ಹೂಡಿಕೆಯನ್ನು ಬಯಸುತ್ತಿದೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

## ಚೀನಾ ದೇಶವು ತೈವಾನ್‌ನಿಂದ ಹಣ್ಣುಗಳ ಅಮದಿಗೆ ನಿರ್ಬಂಧ



* ಪ್ರಸ್ತುತ ಚೀನಾ ದೇಶವು ಈ ಹಿಂದೆ ತೈವಾನ್‌ದಿಂದ ಅನನಾಸುಗಳನ್ನು ಆಮದು ಮಾಡಿಕೊಳುವುದಕ್ಕೆ ಕೀಟದ ಸಮಸ್ಯೆಯ ಕಾರಣ ನೀಡಿ ನಿರ್ಬಂಧವನ್ನು ಹೇರಿತ್ತು, ಇದೀಗ ಮತ್ತೇ ಅದೇ ಕಾರಣ ನೀಡಿ ತೈವಾನ್ ಪ್ರಾಂತ್ಯದ ಸೀತಾ ಫಲ ಮತ್ತು ಜಂಬೂ ನೇರಳೆಯ ಆಮದಿಗೂ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದೆ.

* ಪ್ರಸ್ತುತ ತೈವಾನ್ ಪ್ರಾಂತ್ಯವು ಚೀನಾದ ಬೀಜಿಂಗನ್ನು ವಿಶ್ವ ವ್ಯಾಪಾರ ಸಂಸ್ಥೆಯ ಮುಂದೆ ನಿಲ್ಲಿಸುವುದಾಗಿ ಎಚ್ಚರಿಕೆ ನೀಡಿದೆ ಎಂದು ಅಲ್ಲಿನ ಸ್ಥಳೀಯ ಸುದ್ದಿ ವಾಹಿನಿ ಸಂಸ್ಥೆ ರಾಯಿಟರ್ಸ್ ವರದಿ ನೀಡಿದೆ.

* ಪ್ರಸ್ತುತ ತೈವಾನ್ ಪ್ರಾಂತ್ಯದಿಂದ ಚೀನಾ ರಾಷ್ಟ್ರಕ್ಕೆ ಆಮದಾಗುವ ಸೀತಾಫಲ ಮತ್ತು ಜಂಬೂ ನೇರಳೆಯ ಹಣ್ಣುಗಳಲ್ಲಿ 'ಪ್ಲನೋಕೋಕಸ್

ಮೈನರ್' ಎಂಬ ಕೀಟಗಳನ್ನು ಪತ್ತೆಯಾಗಿವೆ ಈ ಕಾರಣದಿಂದ ಹಣ್ಣುಗಳ ಆಮದಿಗೆ ನಿರ್ಬಂಧವನ್ನು ಹೇರಲಾಗಿದೆ ತಿಳಿಸಿದ್ದಾರೆ.

* ಪ್ರಸ್ತುತ ತೈವಾನ್ ಪ್ರಾಂತ್ಯವು ಮಾವಿನ ಹಣ್ಣು, ಸೀತಾಫಲ ಹಾಗು ಜಂಬೂ ನೇರಳೆ ಹಣ್ಣಿಗೆ ಹೆಸರುವಾಸಿಯಾದ ಪ್ರಾಂತ್ಯವಾಗಿದೆ.

## ತಾಲಿಬಾನ್ ಸರ್ಕಾರವು ಅಲ್ಲಿನ ಸರ್ಕಾರಿ ವಿಶ್ವವಿದ್ಯಾಲಯದ ಹೆಸರನ್ನು ಬದಲಿಸಿದೆ



* ಇತ್ತೀಚಿಗೆ ತಾಲಿಬಾನಿಗಳು ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದ ಸರಕಾರವನ್ನು ರಚಿಸಿವೆ, ಇದೀಗ ಅಲ್ಲಿನ ಸರ್ಕಾರಿ ವಿಶ್ವವಿದ್ಯಾಲಯದ ಹೆಸರನ್ನು ಕಾಬುಲ್ ಶಿಕ್ಷಣ ವಿಶ್ವವಿದ್ಯಾನಿಲಯ ಎಂದು ಬದಲಾವಣೆ ಮಾಡಿದೆ ಎಂದು ತಿಳಿದು ಬಂದಿದೆ.

* ಅಫ್ಘಾನಿಸ್ತಾನದಲ್ಲಿನ ತಾಲಿಬಾನ್ ಹಮಿದ್ ಕರ್ಝಾಯಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರನ್ನು ಕಾಬುಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಬದಲಾವಣೆ ಮಾಡಿದ್ದಾರೆ.
* ಈ ಮೊದಲು ಆ ಸರ್ಕಾರಿ ವಿಶ್ವವಿದ್ಯಾಲಯಕ್ಕೆ ಬರ್ಹಾನುದ್ದೀನ್ ರಬ್ಬಾನಿ ವಿಶ್ವವಿದ್ಯಾನಿಲಯ ಎಂಬ ಹೆಸರಿತ್ತು, ಅಫ್ಘಾನಿಸ್ತಾನದ ಮಾಜಿ ಅಧ್ಯಕ್ಷ ಬುರ್ಹನುದ್ದೀನ್ ರಬ್ಬಾನಿ ಅವರ ಹೆಸರನ್ನು ಅಲ್ಲಿನ ಸರ್ಕಾರಿ ವಿಶ್ವವಿದ್ಯಾಲಯಕ್ಕೆ ಇಡಲಾಗಿತ್ತು.

* ಅಫ್ಘಾನಿಸ್ತಾನದ ಮಾಜಿ ಅಧ್ಯಕ್ಷ ಬುರ್ಹನುದ್ದೀನ್ ರಬ್ಬಾನಿ ಅವರು 2009 ರಲ್ಲಿ ತನ್ನ ಮನೆಯಲ್ಲಿ ಆತ್ಮಹತ್ಯೆ ದಾಳಿಯಲ್ಲಿ ಮೃತರಾಗಿದ್ದರು.

## ಇಂಗ್ಲೆಂಡ್ ನ ಪುರುಷ ಹಾಗೂ ಮಹಿಳಾ ತಂಡಗಳು ಪಾಕಿಸ್ತಾನ ಪ್ರವಾಸ ರದ್ದು




* ಪ್ರಸ್ತುತ ಇಂಗ್ಲೆಂಡ್ ನ ಪುರುಷ ಹಾಗೂ ಮಹಿಳಾ ತಂಡಗಳು ಮುಂದಿನ ಅಕ್ಟೋಬರ್ ತಿಂಗಳಲ್ಲಿ ಪಾಕಿಸ್ತಾನಕ್ಕೆ ಪ್ರವಾಸ ಕೈಗೊಳ್ಳಬೇಕಾಗಿತ್ತು, ಆದರೆ ಇದೀಗ ಇಂಗ್ಲೆಂಡ್ ನ ಪುರುಷ ಹಾಗೂ ಮಹಿಳಾ ತಂಡಗಳು ಭದ್ರತೆ ಕಾರಣವನ್ನು ನೀಡಿ ಪಾಕಿಸ್ತಾನ ವಿರುದ್ಧದ ಕ್ರಿಕೆಟ್ ಸರಣಿಯ ಪ್ರವಾಸವನ್ನು ರದ್ದು ಪಡಿಸಿವೆ.

* ಪ್ರಸ್ತುತ ಕ್ರಿಕೆಟ್ ಆಟಗಾರರು ಮತ್ತು ಸಿಬ್ಬಂದಿಗಳ ಯೋಗಕ್ಷೇಮದ ಕಾರಣದಿಂದಾಗಿ ಪಾಕಿಸ್ತಾನದ ಪ್ರವಾಸ ರದ್ದು ಮಾಡಲಾಗಿದೆ ಎಂದು ಇಂಗ್ಲೆಂಡ್ ವೇಲ್ಸ್ ಕ್ರಿಕೆಟ್ ಮಂಡಳಿ(ECB) ತಿಳಿಸಿದೆ.

* ನ್ಯೂಜಿಲ್ಯಾಂಡ್ ತಂಡವು ಕೆಲದಿನಗಳ ಹಿಂದೆ ಪಾಕಿಸ್ತಾನಕ್ಕೆ ಪ್ರವಾಸ ಕೈಗೊಂಡಿತ್ತು, ಆದರೆ ಅಲ್ಲಿ ಮೊದಲ ಏಕದಿನ ಪಂದ್ಯ ಆರಂಭವಾಗುವ ಕೆಲ ಹೊತ್ತಿನಲ್ಲೇ ನ್ಯೂಜಿಲ್ಯಾಂಡ್ ತಂಡವು ಭದ್ರತೆ ಕಾರಣ ನೀಡಿ ಸರಣಿ ರದ್ದು ಪಡಿಸಿದೆ.

## 2020 ರಲ್ಲಿ ಅತಿ ಹೆಚ್ಚು ಬಾಲ್ಯ ವಿವಾಹ



* ಪ್ರಸ್ತುತ 2020 ನೇ ವರ್ಷದಲ್ಲಿ ದೇಶದಲ್ಲೇ ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚಿನ ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿವೆ ಎಂದು ಎನ್‌ಸಿಆರ್‌ಬಿ ವರದಿ ಮಾಡಿದೆ.

* 2020 ರ ಫೆಬ್ರುವರಿ ತಿಂಗಳಿಂದ ನವೆಂಬರ್ ತಿಂಗಳ ವರೆಗೆ ಕರ್ನಾಟಕದಲ್ಲಿ 2074 ಬಾಲ್ಯವಿವಾಹ ಪ್ರಕರಣಗಳು ವರದಿಯಾಗಿವೆ ಎಂದು ಕರ್ನಾಟಕದ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

* ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ನ (NCRB) 2020 ನೇ ವರ್ಷದ ಮಾಹಿತಿಯ ಪ್ರಕಾರ, ಬಾಲ್ಯ ವಿವಾಹ ನಿಷೇಧ ಕಾಯ್ದೆಯಡಿ ಅಡಿಯಲ್ಲಿ ಕರ್ನಾಟಕದಲ್ಲಿಯೇ 184, ಅಸ್ಸಾಂ 138, ಪಶ್ಚಿಮ ಬಂಗಾಳ 98, ತಮಿಳುನಾಡು 77 ಮತ್ತು ತೆಲಂಗಾಣ 62 ಪ್ರಕರಣಗಳು ದಾಖಲಾಗಿವೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಅತೀ ಹೆಚ್ಚು ಸಂಖ್ಯೆಯ ಹೆಣ್ಣುಮಕ್ಕಳು ಬಾಲ್ಯವಿವಾಹ ವಾಗುತ್ತಿರುವ ರಾಜ್ಯಗಳಲ್ಲಿ ಬಿಹಾರ, ಪಶ್ಚಿಮ ಬಂಗಾಳ ಹಾಗೂ ತ್ರಿಪುರ ರಾಜ್ಯಗಳು ಮೊದಲ ಸ್ಥಾನದಲ್ಲಿವೆ.

* ಬಾಲ್ಯವಿವಾಹದ ಪ್ರಮಾಣ: ಬಿಹಾರ ಶೇ.40.8, ತ್ರಿಪುರಾ ಶೇ.40.1, ಪಶ್ಚಿಮ ಬಂಗಾಳ ಶೇ.41.6 ರಷ್ಟಿದೆ, ಕರ್ನಾಟಕ ಶೇ. 21.3, ಅಸ್ಸಾಂ ಶೇ.31.8, ಆಂಧ್ರಪ್ರದೇಶ ಶೇ. 29.3, ಗುಜರಾತ್ ಶೇ. 21.8, ಮಹಾರಾಷ್ಟ್ರ ಶೇ. 21.9, ತೆಲಂಗಾಣ ಶೇ. 23.5 ಹಾಗೂ ದಾದ್ರ ಮತ್ತು ನಾಗರ್ ಹಾವೇಲಿಹಾಗೂ ದಿಯು ದಮನ್‌ನಲ್ಲಿ ಶೇ. 26.4 ನಲ್ಲಿಯೂ ಬಾಲ್ಯವಿವಾಹದ ಪ್ರಕರಣಗಳು ದಾಖಲಾಗಿವೆ.

## ಚೀನಾದ ಯಾವುದೇ ಕಂಪನಿಗಳು ಭಾರತದ ಇತ್ತೀಚಿನ ಹೈವೇ ಯೋಜನೆಗಳಲ್ಲಿ ಹಣ ಹೂಡಿಕೆ ಮಾಡಿಲ್ಲ



* ಪ್ರಸ್ತುತ ಚೀನಾ ದೇಶದ ಯಾವುದೇ ಕಂಪನಿಗಳು ಭಾರತದಲ್ಲಿನ ಇತ್ತೀಚಿಗಿನ ಹೈವೇ ಯೋಜನೆಗಳಲ್ಲಿ ಹಣ ಹೂಡಿಕೆ ಮಾಡಿಲ್ಲ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

* ಈ ಹಿಂದೆ 2020 ರ ಜುಲೈನಲ್ಲಿ ಚೀನಾ ಹಾಗೂ ಭಾರತದ ನಡೆವೆ ಗಡಿ ಸಂಘರ್ಷವಾದ ಸಂಧರ್ಭದಲ್ಲಿ ಇನ್ನು ಮುಂದೆ ಭಾರತದ ನೆಲದಲ್ಲಿನ ಯಾವುದೇ ಯೋಜನೆಗಳಿಗೆ ಚೀನಾ ಸಂಸ್ಥೆಗಳು ಹೂಡಿಕೆ ಮಾಡಲು ಬಿಡುವುದಿಲ್ಲ ಎಂಬ ನಿರ್ಧಾರವನ್ನು ತಗೆದುಕೊಂಡು, ಚೀನಾ ದೇಶದ ಕಂಪನಿಗಳು ಭಾರತದ ಹೈವೇ ಯೋಜನೆಗಳಲ್ಲಿ ಹಣ ಹೂಡಿಕೆ ಮಾಡಲು ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದ್ದಾರೆ.

## ಹಾರ್ಲೆ ಡೇವಿಡ್‌ಸನ್ ಎಲೆಕ್ಟ್ರಿಕ್ ಸೈಕಲ್ ಮಾರುಕಟ್ಟೆಗೆ



* ಪ್ರಸ್ತುತ ಬೈಕ್ ತಯಾರಿಕೆ ಕಂಪನಿ 'ಹಾರ್ಲೆ ಡೇವಿಡ್‌ಸನ್' ನೂರು ವರ್ಷಗಳ ಹಳೆಯ ವಿನ್ಯಾಸದ ಹೊಸ ಮಾದರಿಯ ಎಲೆಕ್ಟ್ರಿಕ್ ಬೈಸಿಕಲ್ ಗಳನ್ನೂ ಈ ವರ್ಷದ ಕೊನೆಗೆ ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂದು ತಿಳಿದು ಬಂದಿದೆ.

* 'ಹಾರ್ಲೆ ಡೇವಿಡ್‌ಸನ್' ಅಮೇರಿಕದ ಸ್ಯಾನ್‌ಫ್ರಾನ್ಸಿಸ್ಕೋ ಮೂಲದ ಮೋಟಾರ್ ಬೈಕ್ ತಯಾರಿಕ ಕಂಪನಿಯಾಗಿದೆ.

* 'ಹಾರ್ಲೆ ಡೇವಿಡ್‌ಸನ್' ಮೋಟಾರ್ ಬೈಕ್ ತಯಾರಿಕ ಕಂಪನಿಯು ಈ ಹಿಂದೆ 1903 ರಲ್ಲಿ "ಸೀರಿಯಲ್ 1" ಎಂಬ ಮೋಟಾರ್ ಸೈಕಲ್ ತಯಾರಿಸಿತ್ತು, ಇದೀಗ ಮತ್ತದೇ ವಿನ್ಯಾಸದ ಎಲೆಕ್ಟ್ರಿಕ್ ಸೈಕಲ್ ಅಭಿವೃದ್ಧಿ ಪಡಿಸಿದೆ.

* 'ಹಾರ್ಲೆ ಡೇವಿಡ್‌ಸನ್' ಮೋಟಾರ್ ಬೈಕ್ ತಯಾರಿಕ ಕಂಪನಿಯು ಪ್ರಾರಂಭದಲ್ಲಿ 650 ಎಲೆಕ್ಟ್ರಿಕ್ ಸೈಕಲ್‌ಗಳನ್ನು ಉತ್ಪಾದಿಸಿ ಅಮೆರಿಕ ಹಾಗೂ ಯುರೋಪ್ ಮಾರುಕಟ್ಟೆಗೆ ಬಿಡುವ ಉದ್ದೇಶವನ್ನು ಹೊಂದಿದೆ, ಮುಂದಿನ 10 ವರ್ಷಗಳಲ್ಲಿ ಇನ್ನ ಉಳಿದ ರಾಷ್ಟ್ರಗಳ ಮಾರುಕಟ್ಟೆಗೆ ಕಾಲಿಡಲಿದೆ ಎಂದು ಕಂಪನಿಯ ಮುಖ್ಯಸ್ಥ ಏರನ್ ಫ್ರಾಂಕ್ ಅವರು ತಿಳಿಸಿದ್ದಾರೆ.

* ಪ್ರಸ್ತುತ 'ಹಾರ್ಲೆ ಡೇವಿಡ್‌ಸನ್' ಅಷ್ಟೇ ಅಲ್ಲದೇ ಬಿಎಂಡಬ್ಲ್ಯೂ(BMW), ಆಡಿ(AUDI) 'ಮರ್ಸಿಡೀಸ್ ಬೆಂಜ್' ನಂತಹ ಕಂಪನಿಗಳು ಎಲೆಕ್ಟ್ರಿಕ್ ಸ್ಕೂಟರ್ ಸಿದ್ಧ ಪಡಿಸುತ್ತಿವೆ, ಆದರೆ ಫೋರ್ಡ್ ಕಂಪನಿ ಇ ಸ್ಕೂಟರ್ ತಯಾರಿಸಲು 'ಸ್ಪಿನ್' ಎಂಬ ಸ್ಟಾರ್ಟ್‌ಅಪ್ ಕಂಪನಿಯನ್ನು ಖರೀದಿಸಿದೆ.

## ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದ ರದ್ದುಪಡಿಸಿದ ಆಸ್ಟ್ರೇಲಿಯಾ

* ಈ ಮೊದಲು ಫ್ರಾನ್ಸ್ ಹಾಗೂ ಆಸ್ಟ್ರೇಲಿಯಾ ದೇಶಗಳ ನಡುವೆ



ಜಲಾಂತರ್ಗಾಮಿ ನೌಕೆಗಳನ್ನು ಖರೀದಿಸಲು ಒಪ್ಪಂದವಾಗಿತ್ತು, ಇದೀಗ ರಾಜತಾಂತ್ರಿಕ ಬಿಕ್ಕಟ್ಟಿನಿಂದಾಗಿ ಆ ಒಪ್ಪಂದವನ್ನು ರದ್ದುಗೊಂಡಿದೆ ಎಂದು ತಿಳಿದು ಬಂದಿದೆ.

* ಆಸ್ಟ್ರೇಲಿಯಾ ರಾಷ್ಟ್ರವು ಅಮೇರಿಕ ಮತ್ತು ಬ್ರಿಟನ್ ದೇಶಗಳ ಜೊತೆಗೆ ಹೊಸ ಒಪ್ಪಂದ ಮಾಡಿಕೊಳ್ಳುವ ನಿಟ್ಟಿನಲ್ಲಿ, ಈ ಮೊದಲು ಫ್ರಾನ್ಸ್‌ನೊಂದಿಗೆ ಮಾಡಿಕೊಂಡಿರುವ ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದವನ್ನು ರದ್ದುಪಡಿಸಿದೆ.

* ಈ ಒಪ್ಪಂದಆಗಿರುವ ಹಿನ್ನಲೆಯಿಂದಾಗಿ ಫ್ರಾನ್ಸ್ ದೇಶವು ಅಮೇರಿಕ ಮತ್ತು ಆಸ್ಟ್ರೇಲಿಯಾದಲ್ಲಿರುವ ತನ್ನ ದೇಶದ ರಾಯಭಾರಿಗಳನ್ನು ವಾಪಸ್ ಕರೆಸಿಕೊಂಡು ಬಿಕ್ಕಟ್ಟನ್ನು ಮತ್ತಷ್ಟು ತೀವ್ರಗೊಳಿಸಿದೆ.

* ಆಸ್ಟ್ರೇಲಿಯಾ ರಾಷ್ಟ್ರವು 12 ಸಾಂಪ್ರದಾಯಿಕ ಡೀಸೆಲ್ ಚಾಲಿತ ಜಲಾಂತರ್ಗಾಮಿ ನೌಕೆ ಖರೀದಿಗೆ ಫ್ರಾನ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿತ್ತು, ಈ ಒಪ್ಪಂದ 5 ಲಕ್ಷ ಕೋಟಿಯ ವ್ಯವಹಾರವಾಗಿತ್ತು. * ಪ್ರಸ್ತುತ ಅಮೇರಿಕ ಅಧ್ಯಕ್ಷ ಜೋ ಬೈಡನ್ ಅವರು ಆಸ್ಟ್ರೇಲಿಯಾ ಮತ್ತು ಬ್ರಿಟನ್ ಜೊತೆಗೆ ಇತ್ತೀಚೆಗೆ ಹೊಸ ಮೈತ್ರಿಕೂಟವನ್ನು ಘೋಷಣೆ ಮಾಡಿದ್ದರು ಈ ಸಂಧರ್ಭದಲ್ಲಿ ಅಣು ಇಂಧನ ಚಾಲಿತ 8 ಜಲಾಂತರ್ಗಾಮಿ ನೌಕೆಗಳನ್ನು ಆಸ್ಟ್ರೇಲಿಯಾದ ನೌಕಾಪಡೆಗೆ ಒದಗಿಸುವದಾಗಿ ಹೇಳಿತ್ತು ಈ ಕಾರಣದಿಂದಾಗಿ ಆಸ್ಟ್ರೇಲಿಯಾ ಫ್ರಾನ್ಸ್ ಜೊತೆಗಿನ ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದವನ್ನು ರದ್ದು ಪಡಿಸಿದೆ ಎನ್ನಲಾಗಿದೆ.

## ವಿರಾಟ್ ಕೊಹ್ಲಿ 2021 ರ IPL ಬಳಿಕ ಆರ್‌ಸಿಬಿ ನಾಯಕತ್ವ ತೊರೆಯಲಿದ್ದಾರೆ



* ಪ್ರಸ್ತುತ ಯುಎಇನಲ್ಲಿ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್(IPL)ನ 14 ನೇ ಆವೃತ್ತಿಯ ಟ್ವೆಂಟಿ 20 ಕ್ರಿಕೆಟ್ ಟೂರ್ನಿಯ ಕೊನೆಗೊಂಡ ಬಳಿಕ ವಿರಾಟ್ ಕೊಹ್ಲಿ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು(RCB) ತಂಡದ ನಾಯಕ ಸ್ಥಾನವನ್ನು ತೊರೆಯುವುದಾಗಿ ತಿಳಿಸಿದ್ದಾರೆ.

* ಅಷ್ಟೇ ಅಲ್ಲದೇ ಮುಂದಿನ ಐಸಿಸಿ(ICC) ಟ್ವೆಂಟಿ 20 ವಿಶ್ವಕಪ್ ಕ್ರಿಕೆಟ್‌ನ ನಾಯಕತ್ವವನ್ನು ತೊರೆಯುವುದಾಗಿ ವಿರಾಟ್ ಕೊಹ್ಲಿ ಅವರು ಘೋಷಣೆ ಮಾಡಿದ್ದಾರೆ.

* ಆದರೆ ವಿರಾಟ್ ಕೊಹ್ಲಿ ಅವರು IPL ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು(RCB) ತಂಡದ ನಾಯಕನಲ್ಲದೇ ಕೇವಲ ಒಬ್ಬ ಆಟಗಾರನಾಗಿ ಮುಂದುವರಿಯುತ್ತೇನೆ ಎಂದು ತಿಳಿಸಿದ್ದಾರೆ.

## ಕೇಂದ್ರ ಸರ್ಕಾರವು ಜಾರಿಗೊಳಿಸಿದ 'ಇ ಸಂಜೀವಿನಿ' ಕರ್ನಾಟಕ ದ್ವಿತೀಯ




* ಇತ್ತೀಚಿಗೆ ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಟೆಲಿಮೆಡಿಸಿನ್ ವ್ಯವಸ್ಥೆಯಾಗಿರುವ 'ಇ ಸಂಜೀವಿನಿ' ಪೋರ್ಟಲ್'ನ ಅಡಿಯಲ್ಲಿ 1.2 ಕೋಟಿ ಸಲಹೆಗಳನ್ನು ನೀಡಲಾಗಿದೆ.

* ಪ್ರಸ್ತುತ ಕರ್ನಾಟಕ ರಾಜ್ಯವು 'ಇ ಸಂಜೀವಿನಿ' ಪೋರ್ಟಲ್ ನ ಅಡಿಯಲ್ಲಿ 22,57,994 ಸಲಹೆಗಳನ್ನು ದ್ವಿತೀಯ ಸ್ಥಾನದಲ್ಲಿದೆ.

* ಆಂಧ್ರಪ್ರದೇಶ ರಾಜ್ಯವು 'ಇ ಸಂಜೀವಿನಿ' ಪೋರ್ಟಲ್ ನ ಅಡಿಯಲ್ಲಿ 37,04,258 ಸಲಹೆಗಳನ್ನು ನೀಡಿ ಪ್ರಥಮ ಸ್ಥಾನದಲ್ಲಿದೆ, ನಂತರದ ಸ್ಥಾನಗಳಲ್ಲಿ ತಮಿಳುನಾಡು 3 ನೇ ಸ್ಥಾನ, ಉತ್ತರ ಪ್ರದೇಶ 4 ನೇ ಸ್ಥಾನ, ಹಾಗೂ ಇನ್ನ ಉಳಿದ ಗುಜರಾತ್, ಮಧ್ಯಪ್ರದೇಶ, ಬಿಹಾರ, ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ಕೇರಳ, ರಾಜ್ಯಗಳು ಇ ಸಂಜೀವಿನಿ ಜಾಲತಾಣವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡಿವೆ ಎಂದು ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ ಮಾಹಿತಿ ನೀಡಿದೆ.
* ಪ್ರಸ್ತುತ ಕೇಂದ್ರ ಸರ್ಕಾರವು ಕೋವಿಡ್ 19 ಸಂಧರ್ಭದಲ್ಲಿ ಹಿರಿಯ ನಾಗರಿಕರಿಗೆ ದೂರವಾಣಿ ಮುಕಾಂತರ ಆರೋಗ್ಯ ಸಮಸ್ಯೆಗಳಿಗೆ ವೈದ್ಯಕೀಯ ಸಲಹೆ ಹಾಗೂ ಪರಿಹಾರವನ್ನು ಪಡೆಯಲು ಈ 'ಇ ಸಂಜೀವಿನಿ' ವ್ಯವಸ್ಥೆಯನ್ನು ಆರಂಭಿಸಿದೆ.

# 23-09-2021

## ವಿಶ್ವಸಂಸ್ಥೆಯಲ್ಲಿ ಮುಹಮ್ಮದ್ ಸುಹೈಲ್ ಶಹೀನ್ ರನ್ನು ಖಾಯಂ ಪ್ರತಿನಿಧಿ ನೇಮಕ ಮಾಡಿದ ಅಫ್ಘಾನಿಸ್ತಾನದ ತಾಲಿಬಾನ್



* ತಾಲಿಬಾನಿಗಳು ಇದೀಗ ವಿಶ್ವಸಂಸ್ಥೆಯಲ್ಲಿ ಅಫ್ಘಾನಿಸ್ತಾನದ ಖಾಯಂ ಪ್ರತಿನಿಧಿಯಾಗಿ ಮುಹಮ್ಮದ್ ಸುಹೈಲ್ ಶಹೀನ್ ಅವರನ್ನು ನೇಮಕ ಮಾಡಿದೆ, ಹಾಗೂ ಅಪ್ಘಾನಿಸ್ತಾನದ ತಾಲಿಬಾನ್ ಸರ್ಕಾರವು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಧಿವೇಶನದಲ್ಲಿ ಪ್ರಾತಿನಿಧ್ಯವನ್ನು ಮಂಡಿಸಿದೆ.

* ಈ ಮೊದಲು ಮುಹಮ್ಮದ್ ಸುಹೈಲ್ ಶಹೀನ್ ಅವರು ಕತರ್ ನಲ್ಲಿನ ದಂಗೆಕೋರರ ಜತೆಗೆ ನಡೆದ ಶಾಂತಿ ಸಂಧಾನ ಮಾತುಕತೆಯ ಸಂಧರ್ಭದಲ್ಲಿ ವಕ್ತಾರರಾಗಿ ಕಾರ್ಯ ನಿರ್ವಹಿಸಿದ್ದರು.

* ಆಫ್ಘಾನಿಸ್ತಾನದ ನೂತನ ಪ್ರತಿನಿಧಿಯಾಗಿ ಮುಂದೆ ಜರುಗುವ ವಿಶ್ವಸಂಸ್ಥೆ ಸಾಮಾನ್ಯ ಸಭೆ ಅಧಿವೇಶನದಲ್ಲಿ ಭಾಷಣ ಮಾಡುವಂತೆ ಮುಹಮ್ಮದ್ ಸುಹೈಲ್ ಶಹೀನ್ ಅವರಿಗೆ ತಾಲಿಬಾನ್ ಸೂಚನೆಯನ್ನು ನೀಡಿದೆ.

## ಅಂತಾರಾಷ್ಟ್ರೀಯ ಬ್ಲೂ ಫ್ಲ್ಯಾಗ್ ಮಾನ್ಯತೆ ಪಡೆದ ಭಾರತದ ಮತ್ತೆರಡು ಬೀಚ್



* ಪ್ರಸ್ತುತ ಅಂತಾರಾಷ್ಟ್ರೀಯ ಬ್ಲೂ ಫ್ಲ್ಯಾಗ್ ಮಾನ್ಯತೆಯನ್ನು ಡೆನ್ಮಾರ್ಕಿನ ಫೌಂಡೇಶನ್ ಫಾರ್ ಎನ್ವಿರಾನ್‌ಮೆಂಟ್ ಎಜುಕೇಷನ್ ನೀಡುತ್ತದೆ.
* ಪ್ರಸ್ತುತ ಸಮುದ್ರ ತೀರಗಳ ಉತ್ತಮ ನಿರ್ವಹಣೆ, ಹಾಗೂ ಆರೋಗ್ಯಕರ ವಾತಾವರಣ ಮತ್ತು ಸಮೃದ್ಧ ಜೀವಸಂಪತ್ತಿನ ಆಧಾರದ ಮೇಲೆ ಈ ಮಾನ್ಯತೆಯನ್ನು ನೀಡಲಾಗುತ್ತದೆ, ಇದೀಗ ಭಾರತದ ಮತ್ತೆರಡು ಸಮುದ್ರ ತೀರಗಳಿಗೆ ಅಂತರರಾಷ್ಟ್ರೀಯ 'ಬ್ಲೂ ಫ್ಲ್ಯಾಗ್' ಮಾನ್ಯತೆ ಲಭಿಸಿದೆ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅವರು ತಿಳಿಸಿದ್ದಾರೆ.
* ಪ್ರಸ್ತುತ ಭಾರತದ ತಮಿಳುನಾಡು ರಾಜ್ಯದ ಕೋವಲಮ್ ಬೀಚ್ ಹಾಗೂ ಪುದುಚೆರಿಯ ಈಡನ್ ಬೀಚ್‌ಗಳು ಇದೀಗ ಅಂತಾರಾಷ್ಟ್ರೀಯ ಬ್ಲೂ ಫ್ಲ್ಯಾಗ್ ಮಾನ್ಯತೆಯನ್ನು ಪಡೆದುಕೊಂಡಿವೆ.

* 2020 ರಲ್ಲಿ ಭಾರತದ 10 ಸಮುದ್ರ ತೀರಗಳು ಅಂತಾರಾಷ್ಟ್ರೀಯ ಬ್ಲೂ ಫ್ಲ್ಯಾಗ್ ಮಾನ್ಯತೆಯನ್ನು ಪಡೆದುಕೊಂಡಿವೆ.

## ನೇಪಾಳದ ನೂತನ ವಿದೇಶಾಂಗ ಸಚಿವರಾಗಿ ನೇಮಕವಾದ



## ನಾರಾಯಣ್ ಖಡ್ಕಾ

* ಪ್ರಸ್ತುತ ನೇಪಾಳದ ನೂತನ ವಿದೇಶಾಂಗ ಸಚಿವರನ್ನಾಗಿ ಹಿರಿಯ ಸಂಸದ ನಾರಾಯಣ್ ಖಡ್ಕಾ ಅವರನ್ನು ನೇಮಕ ಮಾಡಲಾಗಿದೆ.
* ನೇಪಾಳ ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಅವರ ಸರ್ಕಾರದ ಶಿಫಾರಸ್ಸಿನ ಮೇರೆಗೆ ನಾರಾಯಣ್ ಖಡ್ಕಾ ಅವರನ್ನು ನೇಮಕ ಮಾಡಿದ್ದಾರೆ.
* ನಾರಾಯಣ್ ಖಡ್ಕ, ನೇಪಾಳಿ ಕಾಂಗ್ರೆಸ್‌ನ ಕೇಂದ್ರ ಸದಸ್ಯ ಮತ್ತು ನೇಪಾಳದ ಪ್ರಸ್ತುತ ವಿದೇಶಾಂಗ ಸಚಿವರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ, ಈ ಮೊದಲು ಸುಶೀಲ್ ಕೊಯಿರಾಲಾ ನೇತೃತ್ವದ ಸರ್ಕಾರದ ಅಡಿಯಲ್ಲಿ ನಗರಾಭಿವೃದ್ಧಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು, ಅಷ್ಟೇ ಅಲ್ಲದೇ ಇವರು 2 ನೇ ನೇಪಾಳಿ ಸಂವಿಧಾನ ಸಭೆಯ ಸದಸ್ಯರಾಗಿದ್ದಾರೆ.

## 'ನಮ್ಮ ಮೆಟ್ರೊ' 2 ನೇ ಹಂತದ ವಿಸ್ತರಣೆ ಯೋಜನೆಯ ಸುರಂಗ ಕೊರೆದ "ಊರ್ಜಾ ಯಂತ್ರ'




* ಪ್ರಸ್ತುತ ಕರ್ನಾಟಕ ರಾಜ್ಯ ಬೆಂಗಳೂರಿನ ಶಿವಾಜಿನಗರದಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣದ ಕಾಮಗಾರಿ ನಡೆಯುತ್ತಿದೆ, ಪ್ರಸ್ತುತ 'ನಮ್ಮ ಮೆಟ್ರೊ' 2 ನೇ ಹಂತದ ವಿಸ್ತರಣೆ ಯೋಜನೆಯ ಸುರಂಗ ಮಾರ್ಗ ಕೊರೆಯುವ ಕೆಲಸವನ್ನು "ಊರ್ಜಾ ಯಂತ್ರ' ಪೂರ್ಣಗೊಳಿಸಿದೆ.
* ಈ ಹಿಂದೆ 2020 ರ ಜುಲೈನಲ್ಲಿ ಸುರಂಗ ಮಾರ್ಗ ಕೊರೆಯಲು "ಊರ್ಜಾ ಯಂತ್ರ'ವು ಭೂಮಿ ಒಳಗಡೆ ಸೇರಿಕೊಂಡಿತ್ತು, ಈ ಯಂತ್ರವು ಸುಮಾರು 14 ತಿಂಗಳ ನಂತರ ಬೆಂಗಳೂರಿನ ಶಿವಾಜಿನಗರದಲ್ಲಿನ ನೆಲದಿಂದ ಹೊರ ಬಂದು ತನ್ನ ಕೆಲಸವನ್ನು ಪೂರ್ಣಗೊಳಿಸಿದೆ.
* ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಸುರಂಗ ಕೊರೆಯುವ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಿಎಂಆರ್‌ಸಿಎಲ್(BMRCL) ಸಿಬ್ಬಂದಿಗೆ ಮತ್ತು ಕಾರ್ಮಿಕರಿಗೆ ಅಭಿನಂಧನೆಗಳನ್ನು ತಿಳಿಸಿದ್ದಾರೆ.
* ಈ ಊರ್ಜಾ ಸುರಂಗ ಕೊರೆಯುವ ಯಂತ್ರವು 855 ಮೀ ಸುರಂಗ ಮಾರ್ಗವನ್ನು ಯಶಸ್ವಿಯಾಗಿ ಕೊರೆದಿದೆ.

## ಭಾರತೀಯ ಅಮೆರಿಕನ್ ಆಶೀಶ್ ಪೆಂಟಗನ್ ಪ್ರಮುಖ ಹುದ್ದೆಗೆ ನೇಮಕ



* ಪ್ರಸ್ತುತ ಭಾರತೀಯ ಅಮೆರಿಕನ್ ಆಶೀಶ್ ವಜೀರಾನಿ ಅವರನ್ನು ಪೆಂಟಗನ್‌ನ ಪ್ರಮುಖ ಹುದ್ದೆಗೆ ನೇಮಕ ಮಾಡಲಾಗಿದೆ.
* ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ನೀಡಿರುವ ಮಾಹಿತಿಯ ಪ್ರಕಾರ ಭಾರತೀಯ ಅಮೆರಿಕನ್ ಆಶೀಶ್ ವಜೀರಾನಿ ಅವರನ್ನು ರಕ್ಷಣಾ ಇಲಾಖೆಯ ಸಿಬ್ಬಂದಿ ಮತ್ತು ಸನ್ನದ್ಧತೆ ವಿಭಾಗದ ಉಪ ಅಧೀನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದಿದ್ದಾರೆ.
* ಭಾರತೀಯ ಅಮೆರಿಕನ್ ಆಶೀಶ್ ವಜೀರಾನಿ ಅವರು ಅಮೆರಿಕ ನೌಕಾಪಡೆಯಲ್ಲಿ ಸುಮಾರು 1986 ರಿಂದ 1993 ರ ವರೆಗೆ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ, ಹಾಗೂ ಸದ್ಯ ಎ2ಒ ಸ್ಟ್ರಾಟಜೀಸ್ ಎಂಬ ಸಂಸ್ಥೆಯ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಶ್ವೇತಭವನವು ಪ್ರಕಟಣೆಯಲ್ಲಿ ಮಾಹಿತಿಯನ್ನು ನೀಡಿದೆ.

## ವಿ. ಆರ್. ಚೌಧರಿ ಅವರು ಭಾರತೀಯ ವಾಯುಪಡೆಯ ಮುಖ್ಯಸ್ಥರಾಗಿ ನೇಮಕ



* ಪ್ರಸ್ತುತ ಭಾರತ ಸರ್ಕಾರವು ಅಪಾರ ಅನುಭವ ಹೊಂದಿದ ಪೈಲಟ್ ಏರ್ ಮಾರ್ಷಲ್ ವಿವೇಕ್ ರಾಮ್ ಚೌಧರಿಯವರನ್ನು ಭಾರತೀಯ ವಾಯುಪಡೆಯ ಮುಖ್ಯಸ್ಥರ ಹುದ್ದೆಗೆ ನೇಮಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದೆ.
* ಇದೇ ಸೆಪ್ಟೆಂಬರ್ 30 ರಂದು ವಾಯುಪಡೆಯ ಈಗಿನ ಮುಖ್ಯಸ್ಥರಾದ ಏರ್‌ಚೀಫ್ ಮಾರ್ಷಲ್ ಆರ್.ಕೆ.ಎಸ್. ಬಧೌರಿಯಾ ಅವರು ನಿವೃತ್ತಿಯಾಗಲಿದ್ದಾರೆ, ಈ ಹಿನ್ನಲೆಯಿಂದಾಗಿ ಇವರ ನಂತರದ ಸ್ಥಾನಕ್ಕೆ ಅಂದರೆ ವಾಯುಪಡೆ ಮುಖ್ಯಸ್ಥರ ಹುದ್ದೆಗೆ ವಿ.ಆರ್. ಚೌಧರಿ ಅವರನ್ನು ನೇಮಿಸಲಾಗುವದು ಹಾಗೂ ಇವರು ಈ ಹುದ್ದೆ ನಿರ್ವಹಿಸಲಿದ್ದಾರೆ ಎಂದು ಭಾರತ ಸರ್ಕಾರ ತಿಳಿಸಿದೆ.
* ಪ್ರಸ್ತುತ ವಿ.ಆರ್. ಚೌಧರಿ ಅವರು ವಾಯುಪಡೆಯ ಉಪ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಇವರು ಮಿಗ್ 29

ಯುದ್ಧ ವಿಮಾನದ ಅನುಭವಿ ಪೈಲಟ್ ಆಗಿದ್ದಾರೆ, ಹಾಗೂ ಇವರು 1982 ರ ಡಿಸೆಂಬರ್. 29 ರಂದು ಫೈಟರ್ ಪೈಲಟ್ ಆಗಿ ಸೇವೆಗೆ ನಿಯೋಜನೆಯಾಗಿದ್ದಾರೆ.
* ವಿ.ಆರ್. ಚೌಧರಿ ಅವರು 2020 ರ ಆಗಸ್ಟ. 1 ರಿಂದ ಪಶ್ಚಿಮ ಏರ್ ಕಮಾಂಡ್‌ನ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಪ್ರಧಾನಿ ನರೇಂದ್ರ ಮೋದಿ ಮೂರು ದಿನಗಳ ಅಮೇರಿಕ ಪ್ರವಾಸ ಕ್ವಾಡ್ ನಾಯಕರ ಶೃಂಗಸಭೆ ಭಾಗಿ



* ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಅವಧಿಗೆ ಅಮೆರಿಕ ಪ್ರವಾಸ ಹಾಗೂ ಕ್ವಾಡ್ ನಾಯಕರ ಶೃಂಗಸಭೆಯಲ್ಲಿ ಪಾಲ್ಗೊಂಡು 76 ನೇ ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದ ಸಭೆಯಲ್ಲಿ ಚರ್ಚಿಸಲಿದ್ದಾರೆ.
* ಅಮೇರಿಕ ಅಧ್ಯಕ್ಷ ಜೊ ಬೈಡನ್ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದ್ವಿಪಕ್ಷೀಯ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ.
* ಈ ಅಮೇರಿಕ ಪ್ರವಾಸ ಕ್ವಾಡ್ ನಾಯಕರ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ, ವಿದೇಶಾಂಗ ಸಚಿವ ಎಸ್ ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಕೂಡ ಭಾಗಿಯಾಗಲಿದ್ದಾರೆ.
* ಅಧ್ಯಕ್ಷ ಜೊ ಬೈಡನ್ ಅವರ ಜೊತೆಗೆ ಉಗ್ರವಾದ, ಗಡಿಯಲ್ಲಿ ಭಯೋತ್ಪಾದನೆ ಹಾಗೂ ಜಾಗತಿಕ ಭಯೋತ್ಪಾದನೆ ಜಾಲವನ್ನು ನಿಗ್ರಹಿಸುವ ವಿಷಯಗಳ ಬಗ್ಗೆ ಮೋದಿ ಚರ್ಚಿಸಲಿದ್ದಾರೆ.
* ಪ್ರಸ್ತುತ ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳ ಸಹಯೋಗದ ಕ್ವಾಡ್ ನಾಯಕರ ಶೃಂಗಸಭೆಯಾಗಿದೆ, ಅಷ್ಟೇ ಅಲ್ಲದೇ ಇಂಡೊ ಫೆಸಿಫಿಕ್ ಪ್ರದೇಶಗಳ ಭದ್ರತೆ, ಸಹಕಾರ, ಬೆಳವಣಿಗೆಗಳಿಗೆ ಸಮಾನ ಆಸಕ್ತಿಯ ಬಗ್ಗೆ ಒಲವು ತೋರಿಸುವ ರಾಷ್ಟ್ರಗಳಾಗಿವೆ.

## ಐಪಿಎಲ್(IPL) ಪ್ರಸಾರವನ್ನು ನಿಷೇಧಿಸಿದ ತಾಲಿಬಾನ್



* ಪ್ರಸ್ತುತ ನಡೆಯಿತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್(IPL) ಟಿ20 ಕ್ರಿಕೆಟ್ ಟೂರ್ನಿಯ ಪ್ರಸಾರವನ್ನು ತಾಲಿಬಾನಿಗಳು ಅಫ್ಘಾನಿಸ್ತಾನದಲ್ಲಿ ನಿಷೇದಿಸಿದ್ದಾರೆ.
* ಇತ್ತೀಚಿಗೆ ಅಫ್ಘಾನಿಸ್ತಾನ ದೇಶವನ್ನು ತಾಲಿಬಾನ್ ತನ್ನ ವಶಕ್ಕೆ ಪಡೆದುಕೊಂಡ ನಂತರ ಈ ನಿರ್ಧಾರವನ್ನು ತಗೆದುಕೊಂಡಿದ್ದಾರೆ ಅಷ್ಟೇ ಅಲ್ಲದೇ ಮಹಿಳೆಯರು ಇನ್ನು ಮುಂದೆ ಯಾವುದೇ ಕ್ರೀಡೆಗಳಲ್ಲಿ ಭಾಗವಹಿಸಲು ಅವಕಾಶ ಇರುವದಿಲ್ಲ ಎಂದು ತಾಲಿಬಾನ್ ಸರ್ಕಾರ ತಿಳಿಸಿದೆ.
* ಪ್ರಸ್ತುತ ಅಫ್ಘಾನಿಸ್ತಾನ ರಾಷ್ಟ್ರೀಯ TVಯು IPL ಪ್ರಸಾರವನ್ನು ನಿಷೇಧಿಸಿದೆ, ಈ ಐಪಿಎಲ್ ಪಂದ್ಯಗಳು ನಡೆಯುವ ಸಂದರ್ಭಗಳಲ್ಲಿ ಹುಡುಗಿಯರು ನರ್ತಿಸುವುದು ಹಾಗೂ ಮಹಿಳೆಯರು ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ವೀಕ್ಷಿಸುವ ಚಿತ್ರಾವಳಿಗಳು ಪ್ರಸಾರವಾಗುವ ಹಿನ್ನಲೆಯಿಂದಾಗಿ, ಈ ಬಾರಿಯ IPL ಪ್ರಸಾರವನ್ನು ನಿಷೇಧಿಸಲು ಇಸ್ಲಾಮಿಕ್ ಎಮಿರೇಟ್ಸ್ ಆಫ್ ತಾಲಿಬಾನ್ ಆದೇಶವನ್ನು ನೀಡಿದೆ ಎಂದು ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿಯ ಸುದ್ದಿ ವಾಹಿನಿಯ ವ್ಯವಸ್ಥಾಪಕರಾದ ಎಂ. ಇಬ್ರಾಹಿಮ್ ಮೊಮಾಂದ್ ಅವರು ಈ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಆಫ್ಘಾನಿಸ್ತಾನದ ಆಟಗಾರರಾಗಿರುವ ರಶೀದ್ ಖಾನ್, ಮೊಹಮ್ಮದ್ ನಬಿ ಮತ್ತು ಮುಜೀಬ್ ಉರ್ ರೆಹಮಾನ್ ಅವರು ಈ ಬಾರಿ ಯುಎಇಯಲ್ಲಿ ಜರುಗುತ್ತಿರುವ ಐಪಿಎಲ್‌ನಲ್ಲಿ ಆಟವಾಡುತಿದ್ದಾರೆ.

## ಮಿಥಾಲಿ ರಾಜ್ ಗೆ ಮಹಿಳಾ ಏಕದಿನ ರ‍್ಯಾಂಕಿಂಗ್ ನಲ್ಲಿ ಮೊದಲ ಸ್ಥಾನ



* ಪ್ರಸ್ತುತ ಭಾರತೀಯ ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರು ಮಹಿಳಾ ಏಕದಿನ ರ‍್ಯಾಂಕಿಂಗ್ ನ ಬ್ಯಾಟಿಂಗ್ ವಿಭಾಗದಲ್ಲಿ ಅಗ್ರ ಸ್ಥಾನವನ್ನು ಪಡೆದುಕೊಂಡಿದ್ದಾರೆ.

* ಐಸಿಸಿ(ICC) ಇತ್ತೀಚಿಗೆ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಮಿಥಾಲಿ 762 ರ‍್ಯಾಂಕಿಂಗ್ ಪಾಯಿಂಟ್ ಗಳನ್ನೂ ಪಡೆದು ಅಗ್ರ ಸ್ಥಾನದಲ್ಲಿದ್ದಾರೆ.

* ಈ ಮೊದಲು ಮೊದಲನೇ ಸ್ಥಾನದಲ್ಲಿದ್ದ ದಕ್ಷಿಣ ಆಫ್ರಿಕಾದ ಆಟಗಾರ್ತಿ ಲಿಜೆಲಿ ಲೀ ಅವರು ಇದೀಗ 2 ನೇ ಸ್ಥಾನ ದಲ್ಲಿದ್ದಾರೆ, ಹಾಗೂ ಭಾರತೀಯ ಕ್ರಿಕೆಟ್ ಆಟಗಾರ್ತಿ ಸ್ಮೃತಿ ಮಂದಾನ 7 ನೇ ಸ್ಥಾನದಲ್ಲಿದ್ದಾರೆ.

* ಭಾರತದ ಜೂಲನ್ ಗೋಸ್ವಾಮಿ ಅವರು ಬೌಲಿಂಗ್ ವಿಭಾಗದಲ್ಲಿ 4 ನೇ ಸ್ಥಾನ, ಹಾಗೂ ಸ್ಪಿನ್ನರ್ ಪೂನಂ ಯಾದವ್ ಅವರು 9 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಐಸಿಸಿ(ICC) ತಿಳಿಸಿದೆ.

## ರಾಷ್ಟ್ರೀಯ ಏಕ ವಿಂಡೋ ವ್ಯವಸ್ಥೆಯನ್ನು ಹೂಡಿಕೆದಾರರು ಮತ್ತು ವ್ಯವಹಾರಗಳಿಗಾಗಿ ಪ್ರಾರಂಭ



* ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ, ಜವಳಿ, ಗ್ರಾಹಕ ವ್ಯವಹಾರ ಹಾಗೂ ವಿತರಣಾ ಸಚಿವರಾದ ಪಿಯೂಷ್ ಗೋಯಲ್ ಅವರು 'ರಾಷ್ಟ್ರೀಯ ಏಕ ವಿಂಡೋ ವ್ಯವಸ್ಥೆಯನ್ನು' ಆರಂಭಿಸಿದ್ದಾರೆ, ಇದನ್ನು ಹೂಡಿಕೆದಾರರು ಮತ್ತು ವ್ಯವಹಾರಗಳಿಗಾಗಿ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.

* ಈ ರಾಷ್ಟ್ರೀಯ ಏಕ ವಿಂಡೋ ವ್ಯವಸ್ಥೆಯ ನೋಂದಣಿಗಾಗಿ ಸರ್ಕಾರಿ ಕಚೇರಿಗಳ ಕಡೆಗೆ ಅಲೆದಾಡುವದನ್ನು ನಿಲ್ಲಿಸುತ್ತದೆ, ಅಷ್ಟೇ ಅಲ್ಲದೇ (Ease of doing business & Ease of living) ಈಸ್ ಆಫ್ ಡೂಯಿಂಗ್ ಮತ್ತು ಈಸ್ ಆಫ್ ಲಿವಿಂಗ್ ನ್ನು ತರಲಿದೆ ಎಂದಿದ್ದಾರೆ, ಇದರಿಂದಾಗಿ ವಿಂಡೋಸ್‌ನಿಂದ ಕಾಗದದ ಕೆಲಸ, ನಕಲು ಪ್ರತಿಗಳ ಅಗತ್ಯವನ್ನು ದೂರ ಮಾಡಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ರಾಷ್ಟ್ರೀಯ ಏಕ ವಿಂಡೋ ವ್ಯವಸ್ಥೆಯ ಅನುಮೋದನೆ ಹಾಗೂ ಕ್ಲಿಯರೆನ್ಸ್‌ಗಳ ಉದ್ದೇಶಕ್ಕಾಗಿ ಹೂಡಿಕೆದಾರರ ವ್ಯವಹಾರಗಳಿಗಾಗಿ ಒಂದು ಸ್ಟಾಪ್ ಶಾಪ್ ಆಗಲಿದೆ ಎಂದಿದ್ದಾರೆ.

* ಪ್ರಸ್ತುತ ಈ ಪೋರ್ಟಲ್ 18 ಕೇಂದ್ರ ಇಲಾಖೆಗಳು ಹಾಗೂ 9 ರಾಜ್ಯಗಳಲ್ಲಿ ಅನುಮೋದನೆಗಳನ್ನು ಹೊಂದಿದೆ, ಅಷ್ಟೇ ಅಲ್ಲದೇ 2021 ರ ಡಿಸೆಂಬರ್ ವೇಳೆಗೆ ಮತ್ತೇ 14 ಕೇಂದ್ರ ಇಲಾಖೆಗಳು ಹಾಗೂ 5 ರಾಜ್ಯಗಳ ಅನುಮೋದನೆಗಳನ್ನು ಪೋರ್ಟಲ್‌ಗೆ ಸೇರ್ಪಡೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ. ಸೇರಿಸಲಾಗುತ್ತದೆ. ರಾಷ್ಟ್ರೀಯ ಏಕ ವಿಂಡೋ ವ್ಯವಸ್ಥೆಯು 'ಎಂಡ್ ಟು ಎಂಡ್' ಸೌಲಭ್ಯವನ್ನು ನೀಡುತ್ತದೆ, ಹಾಗೂ ಅರ್ಜಿದಾರರ ಡ್ಯಾಶ್‌ಬೋರ್ಡ್'ನ್ನು ಕೂಡ ಹೊಂದಿರಲಿದೆ ಅವರ ಪ್ರಶ್ನೆಗಳಿಗೆ ಪ್ರತಿಕ್ರಿಯಿ ನೀಡಲು ಸಹಾಯ ಮಾಡುತ್ತದೆ.

* ಈ ರಾಷ್ಟ್ರೀಯ ಏಕ ವಿಂಡೋ ವ್ಯವಸ್ಥೆಯು ಜಾಲತಾಣವು ಸಾಮಾನ್ಯ ನೋಂದಣಿ ಹಾಗೂ ರಾಜ್ಯ ನೋಂದಣಿ ನಮೂನೆಯ ಇ ಸಂವಹನ ಮತ್ತು ದಾಖಲೆಗಳ ಸೇವೆಗಳನ್ನು ನೀಡುತ್ತದೆ.

## 24-09-2021

### ಅಭಿಷೇಕ್ ವರ್ಮಾ ವಿಶ್ವ ಆರ್ಚರಿ ಅಥ್ಲೀಟ್ಸ್ ಸಮಿತಿಗೆ ಆಯ್ಕೆ



* ಪ್ರಸ್ತುತ ವಿಶ್ವ ಆರ್ಚರಿಯ ಅಥ್ಲೀಟ್ಸ್ ಸಮಿತಿಗೆ ಭಾರತದ ಕಾಂಪೌಂಡ್ ಆರ್ಚರಿ ಪಟುವಾಗಿರುವ ಅಭಿಷೇಕ್ ವರ್ಮಾ ಅವರು ಆಯ್ಕೆಯಾಗಿದ್ದಾರೆ, ಇವರ ಅಧಿಕಾರವು 4 ವರ್ಷಗಳವರೆಗೆ ಇರಲಿದೆ.

* ಅಭಿಷೇಕ್ ವರ್ಮಾ ಅವರು ವಿಶ್ವಕಪ್‌ನಲ್ಲಿ 3 ಬಾರಿ, ಪೋಲೆಂಡ್ 2015, ಶಾಂಘೈ 2018, ಹಾಗೂ ಪ್ಯಾರಿಸ್ 2021, ವಿಶ್ವಕಪ್‌ಗಳಲ್ಲಿ ಚಾಂಪಿಯನ್ ಆಗಿದ್ದಾರೆ, ಅಷ್ಟೇ ಅಲ್ಲದೇ ಏಷ್ಯನ್ ಗೇಮ್ಸ್ ನಲ್ಲಿಯೂ ಕೂಡ ಜಯ ಸಾಧಿಸಿದ್ದಾರೆ.

* ರಷ್ಯಾದ ನತಾಲಿಯಾ ಅವ್ದೀವಾ ಮಹಿಳಾ ವಿಭಾಗದಲ್ಲಿನ ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

* ವಿಶ್ವ ಆರ್ಚರಿ ಅಥ್ಲೀಟ್ಸ್ ಸಮಿತಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಏಕೈಕ ಪುರುಷ ಅಭ್ಯರ್ಥಿ ಅಭಿಷೇಕ್ ವರ್ಮಾ ರವರಾಗಿದ್ದಾರೆ, ಈ ಆಯ್ಕೆ ಪ್ರಕ್ರಿಯೆಯಲ್ಲಿ ರಷ್ಯಾದ ನತಾಲಿಯಾ ಹಾಗೂ ಜರ್ಮನಿಯ ಜೆನ್ನೈನ್ ಮೇಸ್ನೆರ್ ಕೂಡ ಪ್ರತಿಸ್ಪರ್ಧಿಯಾಗಿ ಸ್ಪರ್ಧಿಸಿದ್ದರು. ಸಿದ್ದರು. ನತಾಲಿಯಾ 69 ಶೇಕಡಾ ಮತಗಳನ್ನು ಪಡೆದುಕೊಂಡರು.

### ಟಿ20 ವಿಶ್ವಕಪ್ ಟೂರ್ನಿಯ ಗೀತೆ ಬಿಡುಗಡೆ



* ಪ್ರಸ್ತುತ ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಒಮನ್‌ನಲ್ಲಿ ಆರಂಭವಾಗಲಿರುವ ಟ್ವೆಂಟಿ 20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ 'ಲಿವ್ ದ ಗೇಮ್, ಲವ್ ದ ಗೇಮ್' ಎಂಬ ಗೀತೆಯನ್ನು ಬಿಡುಗಡೆ ಮಾಡಿದ್ದಾರೆ.

* ಈ ಗೀತೆಯ ವಿಡಿಯೊವನ್ನು ಅವತಾರ್ಸ್ ಆಯನಿಮೇಷನ್ ಮಾದರಿಯಲ್ಲಿ ಸಿದ್ಧಪಡಿಸಲಾಗಿದೆ, ಈ ಆಯನಿಮೇಷನ್ ನಲ್ಲಿ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಹಾಗೂ ವೆಸ್ಟ್ ಇಂಡೀಸ್ ತಂಡದ ಆಟಗಾರ ಕೀರನ್ ಪೊಲಾರ್ಡ್ ಅವರ ಪ್ರತಿಕೃತಿಗಳಿವೆ, ಅಷ್ಟೇ ಅಲ್ಲದೇ ಬೇರೆ ಬೇರೆ ದೇಶಗಳ ಯುವ ಅಭಿಮಾನಿಗಳು ವಿಶ್ವಕಪ್ ಟೂರ್ನಿಗಾಗಿ ಕಾಯುತ್ತಿರುವ ಚಿತ್ರಗಳನ್ನು ಸಹ ಚಿತ್ರಿಸಲಾಗಿದೆ.

* ಪ್ರಸ್ತುತ ಸ್ಟಾರ್ ಸ್ಪೋರ್ಟ್ಸ್, ಬಿಸಿಸಿಐ (BCCI) ಮತ್ತು ಐಸಿಸಿ(ICC)ಯ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊವನ್ನು ಹಚ್ಚಿಕೊಳ್ಳಲಾಗಿದೆ ಎಂದು ಐಸಿಸಿ(ICC)ಯ ಸಂವಹನ ವಿಭಾಗದ ಕ್ಲೇರ್ ಫರ್ಲಾಂಗ್ ಅವರು ತಿಳಿಸಿದ್ದಾರೆ.

### ವಿಜ್ಞಾನ, ಸಾಹಿತ್ಯ ಕ್ಷೇತ್ರದಲ್ಲಿನ ನೊಬೆಲ್ ಪ್ರಶಸ್ತಿ ಪ್ರದಾನ



* ಪ್ರಸ್ತುತ ವಿಜ್ಞಾನ ಮತ್ತು ಸಾಹಿತ್ಯ ಕ್ಷೇತ್ರದಲ್ಲಿನ ನೊಬೆಲ್ ಪ್ರಶಸ್ತಿಗೆ ಆಯ್ಕೆಯಾಗಿರುವವರು ಇದೀಗ ತಮ್ಮ ನೆಲದಲ್ಲೇ ಈ ಪ್ರಶಸ್ತಿಯನ್ನು ಸ್ವೀಕಾರ ಮಾಡಲಿದ್ದಾರೆ ಎಂದು ನೊಬೆಲ್ ಪ್ರಶಸ್ತಿ ಪ್ರತಿಷ್ಠಾನವು ತಿಳಿಸಿದೆ.
* ಸತತವಾಗಿ 2 ನೇ ವರ್ಷವು ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನಲೆಯಿಂದಾಗಿ ಈ ರೀತಿ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ ಎಂದಿದ್ದಾರೆ.

* ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಗೆ ಆಯ್ಕೆಯಾದವರನ್ನು ಓಸ್ಲೋಗೆ ಕರೆಸುವ ವಿಚಾರವನ್ನು ಅಕ್ಟೋಬರ್ ಮಧ್ಯದಲ್ಲಿ ಪ್ರಕಟಿಸಲಾಗುವದು ಎಂದು ನೊಬೆಲ್ ಪ್ರಶಸ್ತಿ ನೀಡುವ ಸಮಿತಿಯು ಹೇಳಿದೆ.

* ಈ ಹಿಂದಿನ ವರ್ಷ ಸಾಂಕ್ರಾಮಿಕ ರೋಗ ಕೋವಿಡ್ 19 ಸಲುವಾಗಿ ವಿದೇಶ ಪ್ರಯಾಣಕ್ಕೆ ನಿರ್ಬಂಧ ಹೇರಲಾಗಿತ್ತು ಈ ಕಾರಣದಿಂದ ತಮ್ಮ ನೆಲದಲ್ಲಿ ವಿಜೇತರಿಗೆ ಈ ವಿಜ್ಞಾನ ಮತ್ತು ಸಾಹಿತ್ಯದ ನೊಬೆಲ್ ಪ್ರಶಸ್ತಿಗಳನ್ನು ಪ್ರಶಸ್ತಿಯನ್ನು ನೀಡಲಾಗಿದೆ, ಈ ಬಾರಿಯೂ ಕೂಡ ಅದೇ ತರೇನಾಗಿ 2021 ನೇ ಸಾಲಿನ ವಿಜೇತರು ತಮ್ಮ ಪ್ರಶಸ್ತಿ ತಾವ್ ಇರುವ ನೆಲದಲ್ಲೇ ಪ್ರಶಸ್ತಿ ಪಡೆಯಲಿದ್ದಾರೆ ಎಂದು ನೊಬೆಲ್ ಪ್ರತಿಷ್ಠಾನದ ಕಾರ್ಯನಿರ್ವಾಹಕ ನಿರ್ದೇಶಕ ವಿದಾರ್ ಹೆಲ್ಗೆಸನ್ ಅವರು ತಿಳಿಸಿದ್ದಾರೆ.

* ಈ ವರ್ಷ ನೊಬೆಲ್ ಪ್ರತಿಷ್ಠಾನಕ್ಕೆ 120 ನೇ ವರ್ಷದ ವಾರ್ಷಿಕೋತ್ಸವ, ಪ್ರಸ್ತುತ ವೈದ್ಯಕೀಯ, ರಾಸಾಯನ ವಿಜ್ಞಾನ, ಭೌತವಿಜ್ಞಾನ, ಸಾಹಿತ್ಯ ಮತ್ತು ಶಾಂತಿ ನೊಬೆಲ್ ಪ್ರಶಸ್ತಿಗಳನ್ನು ಇದೇ ಅಕ್ಟೋಬರ್ 4 ಮತ್ತು 11 ರ ಮಧ್ಯೆ ಘೋಷಣೆ ಮಾಡಲಾಗುವದು ಎಂದು ತಿಳಿಸಿದ್ದಾರೆ.

## ಕೇಂದ್ರ ಸರ್ಕಾರ: ಪಿಎಂ ಕೇರ್ಸ್ ಫಂಡ್ ಭಾರತ ಸರ್ಕಾರದ ಫಂಡ್ ಅಲ್ಲ




* ಪ್ರಸ್ತುತ ಪಿಎಂ ಕೇರ್ಸ್ ಫಂಡ್ ಭಾರತ ಸರ್ಕಾರದ ಸಂಸ್ಥೆಯಲ್ಲ, ಇದು ಭಾರತದ ಕಾನೂನಿನಡಿ ಚ್ಯಾರಿಟೇಬಲ್ ಟ್ರಸ್ಟ್ ಆಗಿದೆ, ಹಾಗೂ ಈ ಫಂಡ್ ಗೆ ಹರಿದು ಬರುವ ಹಣ ಕನ್ಸಾಲಿಡೇಟೆಡ್ ಫಂಡ್ ಆಫ್ ಇಂಡಿಯಾಗೆ ಸಮಬಂಧಪಟ್ಟಿರುವದಿಲ್ಲ ಎಂದು ಪ್ರಧಾನಿ ಕಾರ್ಯಾಲಯದ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರು ದಿಲ್ಲಿ ಹೈಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ.

* ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರು ತಿಳಿಸಿರುವ ಮಾಹಿತಿಯ ಪ್ರಕಾರ ಒಂದು ಟ್ರಸ್ಟ್ ಭಾರತದ ಸಂವಿಧಾನದ 12 ನೇ ವಿಧಿ ಅಡಿಯಲ್ಲಿ ಸರ್ಕಾರದಾಗಿರಲಿ ಅಥವಾ ಮಾಹಿತಿ ಹಕ್ಕು ಕಾಯಿದೆಯ ಸೆಕ್ಷನ್ 2 ರ ಅನ್ವಯ ಸಾರ್ವಜನಿಕ ಸಂಸ್ಥೆಯಾಗಿದ್ದರು 3 ನೇ ಪಕ್ಷ ವಿಷಯದ ಮಾಹಿತಿಯನ್ನು ಬಹಿರಂಗಪಡಿಸಲು ಅವಕಾಶವಿರುವದಿಲ್ಲ ದೆಹಲಿ ನ್ಯಾಯಾಲಯಕ್ಕೆ ಈ ಎಲ್ಲ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಈ ಪಿಎಂ ಕೇರ್ಸ್ ಫಂಡ್'ನ್ನು ಸರಕಾರಿ ಫಂಡ್ ಎಂದು ಘೋಷಣೆ ಮಾಡಲು ಸಂಯಕ್ ಗಂಗ್ವಾಲ್ ಎಂಬವರು ಅರ್ಜಿ ಸಲ್ಲಿಸಿದ್ದರು, ಈ ಅರ್ಜಿಗೆ ಪ್ರತಿಕ್ರಿಯೆಯಾಗಿ ಪ್ರಧಾನಿ, ಗೃಹ, ರಕ್ಷಣಾ, ವಿತ್ತ ಸಚಿವರು ಟ್ರಸ್ಟ್‌ಗಳ ಈ ಫಂಡ್ ಮೇಲೆ ಸರ್ಕಾರದ ನಿಯಂತ್ರಣ ಇರುವದಿಲ್ಲ ಎಂದು ತಿಳಿದು ನಾಗರಿಕರ ಪರವಾಗಿ ಈ ಅರ್ಜಿಯಲ್ಲಿ ನೀಡಲಾಗಿತ್ತು ಎಂದು ತಿಳಿಸಿದ್ದಾರೆ.

* ಈ ಟ್ರಸ್ಟ್ ನ ಅಧಿಕೃತ ವೆಬ್‌ಸೈಟ್‌ನಲ್ಲಿ ಪಾರದರ್ಶಕತೆಗಾಗಿ ಆಡಿಟ್ ಮಾಹಿತಿ ಹಾಗೂ ಈ ಟ್ರಸ್ಟ್ ಹಣ ಬಳಸಿರುವ ಮಾಹಿತಿಯನ್ನು ಕೂಡ ಅದರಲ್ಲಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

## ತ್ರಿಪಕ್ಷೀಯ 'ಔಕಸ್' ಮೈತ್ರಿಕೂಟಕ್ಕೆ ಭಾರತ, ಜಪಾನ್ ಸೇರ್ಪಡೆ ಇಲ್ಲ




* ಪ್ರಸ್ತುತ ಬ್ರಿಟನ್, ಆಸ್ಟ್ರೇಲಿಯಾ ಜೊತೆಗೂಡಿ ರಚಿಸಲಾದ ತ್ರಿಪಕ್ಷೀಯ ಔಕಸ್ ಮೈತ್ರಿಕೂಟಕ್ಕೆ ಭಾರತ ಹಾಗೂ ಜಪಾನ್ ರಾಷ್ಟ್ರಗಳನ್ನು ಸೇರ್ಪಡೆ ಮಾಡಲಾಗುವದಿಲ್ಲ ಎಂದು ಅಮೇರಿಕ ತಿಳಿಸಿದೆ.

* ಇತ್ತೀಚಿಗೆ ಬ್ರಿಟನ್, ಆಸ್ಟ್ರೇಲಿಯಾ ಹಾಗೂ ಅಮೇರಿಕ ದೇಶಗಳು ಹಿಂದೂ ಮಹಾಸಾಗರ ಪೆಸಿಫಿಕ್ ಪ್ರದೇಶದ ಭದ್ರತೆಗಾಗಿ ರಚಿಸಿರುವ ಈ ತ್ರಿಪಕ್ಷೀಯ ಮೈತ್ರಿಕೂಟದಲ್ಲಿ ಇತರ ದೇಶಗಳಿಗೆ ಸ್ಥಾನವನ್ನು ನೀಡಲಾಗುವದಿಲ್ಲ ಎಂದು ಅಮೇರಿಕ ತಿಳಿಸಿದೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಅವರು ತಿಳಿಸಿದ್ದಾರೆ.

* ಅಮೇರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಹಾಗೂ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಇದೇ ಸೆಪ್ಟೆಂಬರ್. 15 ರಂದು ಈ 'ಔಕಸ್' ಮೈತ್ರಿಕೂಟವನ್ನು ಘೋಷಣೆ ಮಾಡಿದ್ದಾರೆ.

## ಭಾರತ ಯುಎಇ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ



* ಭಾರತ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್ (UAE) ದೇಶಗಳ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗೆ ಚಾಲನೆ ಸಿಕ್ಕಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ಸಚಿವ ಪಿಯೂಷ್ ಗೋಯಲ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ಉಭಯ ರಾಷ್ಟ್ರಗಳು ಈ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗಳು ಈ ವರ್ಷದ ಕೊನೆಯಲ್ಲಿ ಮುಕ್ತಾಯಗೊಳ್ಳಲಿವೆ ಎಂದಿದ್ದಾರೆ, ಹಾಗೂ 2022 ರ ಮಾರ್ಚ್ ನಲ್ಲಿ ಈ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ ಉಭಯ ರಾಷ್ಟ್ರಗಳು ಸಹಿ ಹಾಕುವ ಸಾಧ್ಯತೆಗಳಿವೆ ಎಂದು ತಿಳಿದು ಬಂದಿದೆ.

* ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ಸಚಿವ ಪಿಯೂಷ್ ಗೋಯಲ್ ಅವರು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ವಿದೇಶಿ ವ್ಯಾಪಾರ ಖಾತೆ ಸಚಿವ ತಾನಿ ಬಿನ್ ಅಹ್ಮದ್ ಝಯೋದಿ ಅವರನ್ನು ಭೇಟಿಯಾಗಿ ಸದ್ಯ ಇರುವಂತಹ ವಹಿವಾಟುಗಳ ವಿಸ್ತರಣೆ ಹಾಗೂ ಹೂಡಿಕೆಯ ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಚರ್ಚೆ ನಡೆಸಿದರು.

* ಈ ಮೊದಲು ಭಾರತ ಮತ್ತು ಯುಎಇ 2017 ರಲ್ಲಿ ಸಮಗ್ರ ಪ್ರಮುಖ ಪಾಲುದಾರಿಕೆ ಒಪ್ಪಂದಗಳಿಗೆ ಸಹಿ ಹಾಕಿದ್ದವು.

* ಪ್ರಸ್ತುತ ಉಭಯ ದೇಶಗಳ ಮುಕ್ತ ವ್ಯಾಪಾರ ಒಪ್ಪಂದದಿಂದಾಗಿ ಉದ್ಯೋಗ, ಜನರ ಜೀವನಮಟ್ಟ ಸುಧಾರಣೆಯ ಗುರಿಯನ್ನು ಹೊಂದಿವೆ, ಹೊಸ ಆರ್ಥಿಕ ಒಪ್ಪಂದವು ಮುಂಬರುವ 5ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು 100 ಶತಕೋಟಿ ಡಾಲರ್ ಗೆ ವೃದ್ಧಿಸುವ ನಿರೀಕ್ಷೆಯಿದೆ ಎಂದು ಉಭಯ ದೇಶಗಳ ನಾಯಕರು ತಿಳಿಸಿದ್ದಾರೆ.

## ಅಸ್ಸಾಂ ಸರ್ಕಾರವು 2,479 ಖಡ್ಗಮೃಗಗಳ ಕೊಂಬುಗಳ ದಹನ ಮಾಡಿದೆ



* ಇತ್ತೀಚಿಗೆ ಅಸ್ಸಾಂ ಸರ್ಕಾರವು ತನ್ನ ಅಧೀನದಲ್ಲಿರುವ 2,479 ಖಡ್ಗಮೃಗಗಳ ಕೊಂಬುಗಳನ್ನು ಸಾರ್ವಜನಿಕವಾಗಿ ಜನಗಳ ಮುಂದೆಯೇ ದಹನ ಮಾಡಿದೆ, ಈ ದಹನ ಪ್ರಕ್ರಿಯೆಯು ಅಂತಾರಾಷ್ಟ್ರೀಯ ಖಡ್ಗಮೃಗಗಳ ದಿನಾಚರಣೆಯ ದಿನದಂದು ಜರುಗಿದೆ.

* ಅಸ್ಸಾಂ ರಾಜ್ಯದ ಜನಗಳು ಈ ಖಡ್ಗಮೃಗಗಳ ಕೊಂಬುಗಳು ಔಷಧಿಗೆ ಬಳಕೆಯಾಗುತ್ತವೆ ಎಂಬ ಮೂಢನಂಬಿಕೆಯನ್ನು ಹೊಂದಿದ್ದರು, ಈ ಮೂಢನಂಬಿಕೆಯನ್ನು ಹೋಗಲಾಡಿಸಲು ಕೊಂಬುಗಳ ದಹನ ಪ್ರಕ್ರಿಯೆಯನ್ನು ಮಾಡಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

* ಖಡ್ಗಮೃಗಗಳ ಕೊಂಬುಗಳು ಯಾವ ಕೆಲಸಕ್ಕು ಉಪಯೋಗವಿಲ್ಲ ಎಂದು ಖಡ್ಗಮೃಗಗಳನ್ನು ಬೇಟೆಯಾಡಿ ಕೊಂಬುಗಳನ್ನು ಸಂಗ್ರಹಿಸುವವರಿಗೆ ಇದರ ಮಾಹಿತಿಯನ್ನು ನೀಡಿದ್ದಾರೆ.

## ಹಿಮಾಲಯನ್ ಚಲನಚಿತ್ರೋತ್ಸವದ ಮೊದಲ ಆವೃತ್ತಿಯನ್ನು ಆಯೋಜಿಸುತ್ತಿರುವ ಲೇಹ್




* ಪ್ರಸ್ತುತ ಲೇಹ್'ನ ಸಿಂಧು ಸಂಸ್ಕೃತಿ ಕೇಂದ್ರದಲ್ಲಿ ಹಿಮಾಲಯನ್ ಚಲನಚಿತ್ರೋತ್ಸವದ ಮೊದಲ ಆವೃತ್ತಿಯನ್ನು ಆಯೋಜಿಸುತ್ತಿದೆ, ಹಾಗೂ ಈ ಕಾರ್ಯಕ್ರಮವನ್ನು ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಉದ್ಘಾಟಣೆ ಮಾಡಲಿದ್ದಾರೆ.

* ಈ ಹಿಮಾಲಯನ್ ಚಲನಚಿತ್ರೋತ್ಸವ ಇದೇ ಸೆಪ್ಟೆಂಬರ್ 24 ರಿಂದ 28 ರವರೆಗೆ ಅಂದರೆ 5ದಿನಗಳ ವರೆಗೆ ಜರುಗಲಿದೆ.

* ಪ್ರಸ್ತುತ ಭಾರತದ ಸ್ವಾತಂತ್ರ್ಯದ 75 ವರ್ಷಗಳ ಸ್ಮರಣಾರ್ಥ 'ಆಜಾದಿ ಕಾ ಅಮೃತ್ ಮಹೋತ್ಸವ'ದ ಅಂಗವಾಗಿ ಲಡಾಖ್ ಈ ಚಲನಚಿತ್ರೋತ್ಸವವನ್ನು ಆಯೋಜಿಸಲು ಸಿದ್ಧವಾಗಿದೆ, ಲಡಾಖ್'ನ್ನು ಆಕರ್ಷಕ ಚಲನಚಿತ್ರ ತಾಣವಾಗಿಸುವ ಉದ್ದೇಶದಿಂದ 5 ದಿನಗಳವರೆಗೆ ಈ ಚಲನಚಿತ್ರೋತ್ಸವವನ್ನು ಆಯೋಜಿಸಲಾಗುತ್ತಿದೆ.

* ಪ್ರಪಂಚದಾದ್ಯಂತದ ಇರುವ ಚಲನಚಿತ್ರ ನಿರ್ಮಾಪಕರನ್ನು ಭಾರತದ ಹಿಮಾಲಯ ಪ್ರದೇಶವು ರಮಣೀಯ ಕೊಡುಗೆಯಿಂದ ಆಕರ್ಷಣೆ ಮಾಡುತ್ತಿದೆ, ಹಾಗೂ ಸ್ಥಳೀಯ ಚಲನಚಿತ್ರ ನಿರ್ಮಾಪಕರಿಗೆ ಹಾಗೂ ಪ್ರೇಕ್ಷಕರಿಗೆ ಅವಕಾಶವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.

## ಭಾರತವು 2022 ರ ವೇಳೆಗೆ ಟ್ರಾನ್ಸ್ ಫ್ಯಾಟ್( trans fat) ಮುಕ್ತವಾಗಲಿದೆ




* ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ನಡೆಸಿರುವ ಅಧ್ಯಯನದ ಪ್ರಕಾರ, ಭಾರತವು 2022 ರ ವೇಳೆಗೆ ಕೈಗಾರಿಕಾ ಟ್ರಾನ್ಸ್ ಕೊಬ್ಬು ಮುಕ್ತವಾಗಿಸಲು ಎಲ್ಲಾ ಸಿದ್ಧತೆಯನ್ನು ಹೊಂದಿದೆ.

* ಪ್ರಸ್ತುತ FSSAI ಪ್ಯಾನ್ ಇಂಡಿಯಾ ಸಮೀಕ್ಷೆಯ ಪ್ರಕಾರ ಸಂಸ್ಕರಿಸಿದ ಆಹಾರ ಉತ್ಪನ್ನಗಳಲ್ಲಿ ಕೈಗಾರಿಕಾ ಟ್ರಾನ್ಸ್ ಕೊಬ್ಬಿನ ಅತಿಯಾದ ಬಳಕೆಯ ಗ್ರಹಿಕೆಯನ್ನು ತಗೆದು ಹಾಕಿದೆ ಎನ್ನಲಾಗಿದೆ, ಅಷ್ಟೇ ಅಲ್ಲದೇ WHO ನ ಮಾರ್ಗಸೂಚಿ ಬಿಡುಗಡೆ ಯಾಗುವದಕ್ಕೂಮೊದಲೇ ಅಂದರೆ 2022 ರ ವೇಳೆಗೆ ಭಾರತವನ್ನು ಕೈಗಾರಿಕಾ ಉತ್ಪಾದನೆಯ ಟ್ರಾನ್ಸ್ ಕೊಬ್ಬಿನ ಮಿತಿಯನ್ನು ಶೇ. 2 ಕ್ಕೆ ಕಡಿಮೆಗೊಳಿಸಲು ಭಾರತವು ಆದೇಶ ನೀಡಿದೆ.

* FSSAI ನ ಸಮೀಕ್ಷೆಯ ಪ್ರಕಾರ 6,000 ಸಂಸ್ಕರಿಸಿದ ಆಹಾರದ ಮಾದರಿಗಳಲ್ಲಿ 34% ಕೊಬ್ಬುಗಳಲ್ಲಿ ಅಧಿಕವಾಗಿದೆ, ಹಾಗೂ 3% ಪ್ಯಾಕ್ ಮಾಡಿದ ಆಹಾರ ಪದಾರ್ಥಗಳ ಮಾದರಿಗಳು 2% ಕ್ಕಿಂತ ಹೆಚ್ಚು ಟ್ರಾನ್ಸ್ ಕೊಬ್ಬನ್ನು ಹೊಂದಿವೆ ಎಂದು ತಿಳಿಸಿದ್ದಾರೆ.

* WHO ನ ಪ್ರಕಾರ ಟ್ರಾನ್ಸ್ ಕೊಬ್ಬಿನ ಶಕ್ತಿಯ ಸೇವನೆಯ 1% ಕ್ಕಿಂತ ಹೆಚ್ಚಿನ ಹೃದಯ ಕಾಯಿಲೆಯ ಸಾವಿನ ಪ್ರಕರಣಗಳು ಹೆಚ್ಚಲಿವೆ ಎಂದಿದ್ದಾರೆ, ಪ್ರಸ್ತುತ ವಿಶ್ವಾದ್ಯಂತ ಈ ಟ್ರಾನ್ಸ್ ಕೊಬ್ಬು ಸೇವನೆಯಿಂದಾಗಿ ಪ್ರತಿ ವರ್ಷ ಪರಿಧಮನಿಯ ಹೃದಯ ಕಾಯಿಲೆಯಿಂದ 5,00,000 ಅಕಾಲಿಕ ಮರಣಗಳು ಸಂಭವಿಸಿವೆ.

## ಶ್ರೀಲಂಕಾ ಕೋವಿಡ್ ಲಸಿಕೆ ಪಡೆಯಲು IMFನಿಂದ 100 ಮಿಲಿಯನ್ ಡಾಲರ್ ಸಾಲವನ್ನು ಕೇಳಿದೆ




* ಶ್ರೀಲಂಕಾ ದೇಶವು ಫೈಜರ್ ಕೋವಿಡ್ 19 ಲಸಿಕೆಯ 14 ಮಿಲಿಯನ್ ಡೋಸ್‌ಗಳನ್ನು ಸಂಗ್ರಹಣೆ ಮಾಡಲು ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ (IMF) 100 ಮಿಲಿಯನ್ ಡಾಲರ್ ಸಾಲವನ್ನು ಕೇಳುತ್ತಿದೆ.

* ಶ್ರೀಲಂಕಾ ಈ IMF ನ ಸಾಲದಿಂದಾಗಿ ಅಲ್ಲಿನ ಇತರ ವ್ಯಾಕ್ಸಿನೇಷನ್ ಕಾರ್ಯಕ್ರಮಗಳ ವೆಚ್ಚಗಳಿಗೆ ಹಣಕಾಸು ನೀಡಲಿದೆ ಎಂದು ಅಲ್ಲಿನ ಆರೋಗ್ಯ ಸಚಿವ ಕೆಹೆಲಿಯಾ ರಂಬುಕ್ವೆಲ್ಲಾ ತಿಳಿಸಿದ್ದಾರೆ.

* ಶ್ರೀಲಂಕಾ ದೇಶದಲ್ಲಿನ ಕೋವಿಡ್ 19 ಪ್ರತಿಕ್ರಿಯೆಗೆ ಸಹಾಯ ಒದಗಿಸಲು IMF ಇದೀಗ 100 ಮಿಲಿಯನ್ ಡಾಲರ್ ಸಾಲವನ್ನು ಒದಗಿಸಲು ಸಮ್ಮತಿಯನ್ನು ನೀಡಿದೆ.

* ಶ್ರೀಲಂಕಾ ದೇಶವು 21 ಮಿಲಿಯನ್ ಜನಸಂಖ್ಯೆಯಲ್ಲಿ ಶೇ. 50 ಕ್ಕಿಂತಲೂ ಹೆಚ್ಚಿನ ಜನಸಂಖ್ಯೆಗೆ ಕೋವಿಡ್ 19 ಲಸಿಕೆಯನ್ನು ಹಾಕಿದೆ. * IMF ಇದೊಂದು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಾಗಿದೆ, ಇದು ತನ್ನ ಪ್ರಧಾನ ಕಚೇರಿಯನ್ನು ಅಮೇರಿಕದ ವಾಷಿಂಗ್ಟನ್, DC ಯಲ್ಲಿ ಹೊಂದಿದೆ, ಹಾಗೂ ಇದು 190 ದೇಶಗಳನ್ನು ಒಳಗೊಂಡಿದೆ.

* ಈ IMF'ನ್ನು 1944 ರಲ್ಲಿ ಸ್ಥಾಪನೆ ಮಾಡಲಾಗಿದೆ ಆದರೆ ಇದು 1945 ರಲ್ಲಿ ಅಸ್ತಿತ್ವಕ್ಕೆ ತರಲಾಯಿತು.

# 25-09-2021

## ಆಹಾರ ಭದ್ರತೆಯ ಕುರಿತಾದ ಒಪ್ಪಂದಕ್ಕೆ WFP




## ICRISAT ಸಹಿ ಹಾಕಿವೆ

* ಪ್ರಸ್ತುತ ಆಹಾರ ಭದ್ರತೆಯ ಒಪ್ಪಂದಕ್ಕೆ ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ (WFP) ಹಾಗೂ ಸೆಮಿ ಏರಿಡ್ ಟ್ರಾಪಿಕ್ಸ್ ಗಾಗಿ ಅಂತರರಾಷ್ಟ್ರೀಯ ಬೆಳೆಗಳ ಸಂಶೋಧನಾ ಸಂಸ್ಥೆ (ICRISAT) ಸಹಿ ಹಾಕಿವೆ.

* ಭಾರತದಾದ್ಯಂತ ಆಹಾರ, ಪೌಷ್ಠಿಕಾಂಶ ಭದ್ರತೆ ಹಾಗೂ ಜೀವನೋಪಾಯಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

* ಈ ಒಪ್ಪಂದವು WFP ಹಾಗೂ ಇಕ್ರಿಸಾಟ್ ಮಧ್ಯದ ಕಾರ್ಯತಂತ್ರದ ಪಾಲುದಾರಿಕೆಯಾಗಿದೆ, ಆಹಾರ ಭದ್ರತೆಯ ದೃಷ್ಟಿಕೋನವನ್ನು ಹೊಂದಿವೆ.

* ಪ್ರಸ್ತುತ 'ಅಂತರರಾಷ್ಟ್ರೀಯ ಬೆಳೆಗಳ ಸಂಶೋಧನಾ ಸಂಸ್ಥೆ ಅರೆ ಶುಷ್ಕ ಉಷ್ಣವಲಯ'ಕ್ಕೆ ಇಕ್ರಿಸ್ಯಾಟ್ (ICRISAT) ಎನ್ನುವರು, ಇದು ಒಂದು ಗ್ರಾಮೀಣ ಅಭಿವೃದ್ಧಿಗೆ ಕೃಷಿ ಸಂಶೋಧನೆ ನಡೆಸುವ ಅಂತರಾಷ್ಟ್ರೀಯ ಸಂಸ್ಥೆಯಾಗಿದೆ, ಇದು ತನ್ನ ಪ್ರಧಾನ ಕಚೇರಿ ಹೈದರಾಬಾದ್'ನಲ್ಲಿ ಹೊಂದಿದೆ.

* 1972 ರಲ್ಲಿ ಇಕ್ರಿಸ್ಯಾಟ್ (ICRISAT)ನ್ನು ಸ್ಥಾಪನೆ ಮಾಡಲಾಗಿದೆ.
* ವಿಶ್ವ ಆಹಾರ ಕಾರ್ಯಕ್ರಮ(WFP)ವು ವಿಶ್ವಸಂಸ್ಥೆಯ ಆಹಾರ ಸಹಾಯ ವಿಭಾಗ ಹಾಗೂ ವಿಶ್ವದ ಅತಿದೊಡ್ಡ ಮಾನವೀಯ ಸಂಘಟನೆಯಾಗಿದೆ, ಅಷ್ಟೇ ಅಲ್ಲದೆ ಹಸಿವು ಹಾಗೂ ಆಹಾರ ಭದ್ರತೆಗಳ ಮೇಲೆ ಕೇಂದ್ರೀಕರಿಸುವ ಸಂಸ್ಥೆ, ಹಾಗೂ ಶಾಲಾ ಊ ಟ ಪೂರೈಕೆದಾರ ಸಂಸ್ಥೆಯಾಗಿದೆ.

* 1961 ರಲ್ಲಿ ವಿಶ್ವ ಆಹಾರ ಕಾರ್ಯಕ್ರಮ(WFP)ವನ್ನು ಸ್ಥಾಪನೆ ಮಾಡಲಾಗಿದೆ, ಇದು ತನ್ನ ಪ್ರಧಾನ ಕಚೇರಿಯನ್ನು ರೋಮ್'ನಲ್ಲಿ ಹೊಂದಿದೆ.

## ಮಹಿಳಾ ಕಾನ್ಸ್‌ಟೇಬಲ್‌ಗಳ ಕರ್ತವ್ಯದ ಸಮಯ ಕಡಿಮೆಗೊಳಿಸಿದ ಮಹಾರಾಷ್ಟ್ರ



* ಪ್ರಸ್ತುತ ಮಹಾರಾಷ್ಟ್ರ ಸರ್ಕಾರವು ಮಹಿಳಾ ಕಾನ್ಸ್‌ಟೇಬಲ್‌ಗಳಿಗೆ ವೃತ್ತಿ ಹಾಗೂ ವೈಯಕ್ತಿಕ ಜೀವನವನ್ನು ಸಮತೋಲವಾಗಿ ನಡೆಸಲು ಸಹಾಯ ಮಾಡುವ ನಿಟ್ಟಿನಲ್ಲಿ ಅವರ ಕೆಲಸದ ಸಮಯವನ್ನು 12 ಗಂಟೆಯಿಂದ 8 ಗಂಟೆಗೆ ಕಡಿಮೆಗೊಳಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

* ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿರುವ ಸಂಜಯ್ ಪಾಂಡೆ ಅವರು ಈ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ, ಪ್ರಸ್ತುತ ನಾಗ್ಪುರ ನಗರ, ಅಮರಾವತಿ ನಗರ ಹಾಗೂ ಪುಣೆ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಜಾರಿಗೆ ತರಲಾಗುವದು ಎಂದು ತಿಳಿಸಿದ್ದಾರೆ. ಅಷ್ಟೇ ಅಲ್ಲದೇ ಇನ್ನು ಕೆಲವೇ ದಿನಗಳಲ್ಲಿ ರಾಜ್ಯದ ನಗರ ಮತ್ತು ಜಿಲ್ಲೆಗಳಲ್ಲಿಯೂ ಕೂಡ ಮಹಿಳಾ ಕಾನ್ಸ್‌ಟೇಬಲ್‌ಗಳ ಕರ್ತವ್ಯದ ಸಮಯ ಕಡಿತಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ಕ್ರಮವನ್ನು ಆಗಸ್ಟ್ 28 ರಂದು ಮೊದಲು ಜಾರಿಗೆ ತರಲಾಗಿದೆ ಎಂದು ನಾಗ್ಪುರ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಅವರು ಹೇಳಿದ್ದಾರೆ.

## ಅತ್ಯುತ್ತಮ ಶಾಸಕ ಪ್ರಶಸ್ತಿ ಪಡೆದ ಬಿ ಎಸ್ ಯಡಿಯೂರಪ್ಪ



* ಇದೇ ಮೊದಲ ಬಾರಿಗೆ ಕರ್ನಾಟಕ ರಾಜ್ಯದ ವಿಧಾನಸಭೆಯ ಅಧಿವೇಶನದಲ್ಲಿ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ನೀಡಲಾಗಿದೆ, ಈ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ನೀಡಿ ಗೌರವಿಸಿದ್ದಾರೆ.

* ಈ ಮೊದಲು ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಲೋಕಸಭೆಯಲ್ಲಿ ನೀಡಲಾಗುತ್ತಿತ್ತು ಇದೀಗ ರಾಜ್ಯಸಭೆಯಲ್ಲಿಯೂ ನೀಡಲಾಗುತ್ತಿದೆ.

* ಪ್ರಸ್ತುತ ಜಂಟಿ ಅಧಿವೇಶನದಲ್ಲಿ ಇದೇ ಮೊದಲ ಬಾರಿಗೆ ಈ ಪ್ರಶಸ್ತಿಯನ್ನು ನೀಡುವ ಪ್ರಕ್ರಿಯೆ ಆರಂಭವಾಗಿದೆ, ಮುಂದಿನ ವರ್ಷದಿಂದ ಈ ಪ್ರಶಸ್ತಿ ಪ್ರಧಾನ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದ್ದಾರೆ.

## ಭಾರತೀಯ ರಕ್ಷಣಾ ಇಲಾಖೆಯು ಮಿಲಿಟರಿ ಸಾಗಣೆ ವಿಮಾನಗಳ ಖರೀದಿಯ ಒಪ್ಪಂದಕ್ಕೆ ಸಹಿ ಹಾಕಿದೆ



* ಭಾರತೀಯ ರಕ್ಷಣಾ ಇಲಾಖೆಯು 20,000 ಕೋಟಿ ರೂ. ವೆಚ್ಚದಲ್ಲಿ, 56 ಮಿಲಿಟರಿ ಸಾಗಣೆಯ ಸಿ 295 ವಿಮಾನಗಳ ಖರೀದಿಗೆ ಸ್ಪೇನ್ ಮೂಲದ ಕಂಪನಿ ಏರ್‌ಬಸ್ ಡಿಫೆನ್ಸ್ ಆಯಂಡ್ ಸ್ಪೇಸ್ ಜೊತೆಗಿನ ಒಪ್ಪಂದಕ್ಕೆ ಸಹಿ ಹಾಕಿದೆ.
* ಭಾರತೀಯ ವಾಯುಪಡೆ ಇದೀಗ ಅವ್ರೊ (AVRO) 748 ವಿಮಾನಗಳನ್ನು ಬಳಕೆ ಮಾಡುತ್ತಿದೆ, ಇದೀಗ ಈ ವಿಮಾನಗಳನ್ನು ಬದಲಾಯಿಸಲು ಸುಮಾರು 9 ವರ್ಷಗಳ ಹಿಂದೆಯೇ ತಾತ್ವಿಕ ಒಪ್ಪಿಗೆಯನ್ನು ನೀಡಲಾಗಿತ್ತು.
* ಇತ್ತೀಚಿಗೆ ಸಚಿವ ಸಂಪುಟ ಸಮಿತಿಯು ಸಿ 295 ವಿಮಾನಗಳ ಖರೀದಿಗೆ ಒಪ್ಪಿಗೆ ನೀಡಿದೆ, ಹಾಗೂ 16 ವಿಮಾನಗಳನ್ನು 4 ವರ್ಷಗಳ ಒಳಗೆ ಕಂಪನಿಯು ಪೂರೈಸಲಿದೆ ಎಂದು ಭಾರತೀಯ ರಕ್ಷಣಾ ಸಚಿವಾಲಯದ ವಕ್ತಾರರಾದ ಎ.ಭರತಭೂಷಣ್ ಬಾಬು ಅವರು ತಿಳಿಸಿದ್ದಾರೆ.
* ಪ್ರಸ್ತುತ ಭಾರತದಲ್ಲಿಯೇ ಇನ್ನುಳಿದ 40 ವಿಮಾನಗಳನ್ನು ಏರ್ ಬಸ್ ಡಿಫೆನ್ಸ್ ಆಯಂಡ್ ಸ್ಪೇಸ್ ಮತ್ತು ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್ ಲಿಮಿಟೆಡ್ ಜಂಟಿಯಾಗಿ ನಿರ್ಮಾಣ ಮಾಡಲಿವೆ, ಹಾಗೂ ಮುಂದಿನ 10 ವರ್ಷಗಳಲ್ಲಿ ಈ ವಿಮಾನಗಳು ಲಭ್ಯವಾಗಲಿವೆ ಎಂದು ತಿಳಿಸಿದ್ದಾರೆ.



## ಇಂಡೋ ಪೆಸಿಫಿಕ್ ಪ್ರದೇಶಕ್ಕೆ ಬದ್ಧತೆ ಪ್ರದರ್ಶಿಸಿದ ಭಾರತ ಜಪಾನ್

* ಭಾರತೀಯ ಪ್ರಧಾನಿ ನರೇಂದ್ರ ಮೋದಿ ಹಾಗೂ ಜಪಾನ್ ಪ್ರಧಾನಿ ಯೋಶಿಹಿದಾ ಸುಗಾ ಅವರು ಕ್ವಾಡ್ ಸಭೆಗೂ ಮುನ್ನ ಚರ್ಚೆಯನ್ನು ನಡೆಸಿದರು, ಈ ಚರ್ಚೆಯಲ್ಲಿ ಇಂಡೋ ಪೆಸಿಫಿಕ್ ಪ್ರದೇಶದ ಬದ್ಧತೆ ಬಗ್ಗೆ ಮಾತನಾಡಿದರು.
* ಎರಡು ದೇಶಗಳ ಪ್ರಧಾನಮಂತ್ರಿಗಳು ರಕ್ಷಣಾ ಉಪಕರಣಗಳು ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧ ಪಟ್ಟ ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ವೃದ್ಧಿಸಲು ಒಪ್ಪಿಗೆಯನ್ನು ನೀಡಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.
* ಭಾರತದ ಅತ್ಯಂತ ಮೌಲ್ಯಯುತ ಪಾಲುದಾರ ರಾಷ್ಟ್ರಗಳಲ್ಲಿ ಜಪಾನ್ ರಾಷ್ಟ್ರವು ಕೂಡ ಒಂದು ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.




## ಅಂತರರಾಷ್ಟ್ರೀಯ ಸಂಕೇತ(Sign) ಭಾಷೆಗಳ ದಿನ

* ಸಂಕೇತ(Sign) ಭಾಷೆಯ ಬಗ್ಗೆ ಜಾಗೃತಿ ಮೂಡಿಸಲು ಅಂತಾರಾಷ್ಟ್ರೀಯ ಸಂಕೇತ ಭಾಷೆಗಳ ದಿನವನ್ನು ಸೆಪ್ಟೆಂಬರ್ 23 ರಂದು ಆಚರಣೆ ಮಾಡುತ್ತಾರೆ.

* ಪ್ರತಿ ವರ್ಷವು ಯುಎನ್ ಜನರಲ್ ಅಸೆಂಬ್ಲಿಯಲ್ಲಿ ಅಂತಾರಾಷ್ಟ್ರೀಯ ಸಂಕೇತ ಭಾಷೆಗಳ ದಿನವನ್ನು ಆಚರಣೆ ಮಾಡಲಾಗುತ್ತದೆ, ಕಿವುಡ ಜನರ ಮಾನವ ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ಆಚರಣೆ ಮಾಡಲಾಗುತ್ತದೆ, ಹಾಗೂ ಕಿವುಡ ಜನಗಳ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಬೇಕಾಗಿರುವ ಉತ್ತಮ ಗುಣಮಟ್ಟದ ಶಿಕ್ಷಣದ ಸೈನ್ ಭಾಷೆಯಲ್ಲಿ ಹಲವಾರು ಸೇವೆಗಳನ್ನು ನೀಡಲು ಸಿದ್ಧವಾಗಿವೆ.

* ವಿಶ್ವ ಕಿವುಡರ ಒಕ್ಕೂಟವು ಅಂತಾರಾಷ್ಟ್ರೀಯ ಸಂಕೇತ ಭಾಷೆಯ ದಿನವನ್ನು 'ನಾವು ಮಾನವ ಹಕ್ಕುಗಳಿಗಾಗಿ ಸಹಿ ಮಾಡುತ್ತೇವೆ' ಎಂಬ 2021 ರ ಧ್ಯೇಯ ವಾಕ್ಯದ ಅಡಿಯಲ್ಲಿ ಆಚರಿಸಲಾಗಿದೆ.

* ವಿಶ್ವದಾದ್ಯಂತ ಮೊಟ್ಟಮೊದಲ ಬಾರಿ ಅಂತಾರಾಷ್ಟ್ರೀಯ ಸಂಕೇತ ದಿನವನ್ನು 2018 ರ ಸೆಪ್ಟೆಂಬರ್. 23 ರಂದು ಆಚರಣೆ ಮಾಡಲಾಗಿದೆ, ಪ್ರಸ್ತುತ ಈ ದಿನವನ್ನು ಅಂತಾರಾಷ್ಟ್ರೀಯ ಕಿವುಡರ ವಾರದ ಅಂಗವಾಗಿ ಆಚರಣೆ ಮಾಡಲಾಗುತ್ತದೆ.

* ಈ ಹಿಂದೆ 1958 ರಲ್ಲಿ ಅಂತಾರಾಷ್ಟ್ರೀಯ ಕಿವುಡರ ವಾರವನ್ನು ಆಚರಿಸಲಾಗಿದೆ.

## ಭಾರತ ಆಸ್ಟ್ರೇಲಿಯಾ ಮೊದಲ ಕಲ್ಲಿದ್ದಲು ಮತ್ತು ಗಣಿಗಳಲ್ಲಿ ಜಂಟಿ ಕಾರ್ಯ ಗುಂಪು ಸಭೆ

* ಭಾರತ ಹಾಗೂ ಆಸ್ಟ್ರೇಲಿಯಾ ದೇಶಗಳು ಕಲ್ಲಿದ್ದಲು ಮತ್ತು ಗಣಿಗಳಲ್ಲಿ ತಮ್ಮ ಮೊದಲ ಜಂಟಿ ಕಾರ್ಯ ಗುಂಪು ಸಭೆಯನ್ನು



ವರ್ಚುಲ್ ಸಭೆಯ ಮೂಲಕ ನಡೆಸಿವೆ.

* ಈ ಭಾರತ ಆಸ್ಟ್ರೇಲಿಯಾ ಜಂಟಿ ಕಾರ್ಯ ಗುಂಪು(JWG) ಸಭೆಯು ಮುಂದಿನ ಇಂಧನ ಬಗೆಗಿನ ಸಂಬಧಿಸಿದ ಪೂರ್ವಭಾವಿ



ಸಭೆಯಾಗಿದೆ, ಈ ಸಭೆಯು ಅಕ್ಟೋಬರ್ 2021 ರಲ್ಲಿ ನಡೆಯಲಿದೆ.

* 1941 ರಲ್ಲಿ ಸಿಡ್ನಿಯಲ್ಲಿ ಭಾರತದ ಕಾನ್ಸುಲೇಟ್ ಜನರಲ್'ನ್ನು ವ್ಯಾಪಾರ ಕಚೇರಿಯಾಗಿ ಆರಂಭಿಸುವದಾಗಿ ಸ್ವಾತಂತ್ರ್ಯ ಪೂರ್ವದಲ್ಲಿನ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪನೆ ಮಾಡಿದ್ದರು.

* 1944 ರಲ್ಲಿ ಲೆಫ್ಟಿನೆಂಟ್ ಜನರಲ್ ಐವನ್ ಮ್ಯಾಕೆ ಅವರನ್ನು ಭಾರತದ ಮೊದಲ ಹೈ ಕಮೀಷನರ್ ಆಗಿ ನೇಮಕ ಮಾಡಲಾಗಿತ್ತು, ಮತ್ತೇ 1945 ರಲ್ಲಿ ಭಾರತದ ಮೊದಲ ಹೈ ಕಮಿಷನರ್ ಆಸ್ಟ್ರೇಲಿಯಾದ ಕ್ಯಾನ್ಬೆರಾಕ್ಕೆ ಆಗಮಿಸಿದ್ದರು.

* ಆಸ್ಟ್ರೇಲಿಯಾ ದೇಶವು 2014 ರಲ್ಲಿ ಭಾರತದೊಂದಿಗೆ ಯುರೇನಿಯಂ ಪೂರೈಕೆ ಒಪ್ಪಂದಕ್ಕೆ ಪರಸ್ಪರ ಒಪ್ಪಿಕೊಂಡು ಸಹಿ ಹಾಕಿತ್ತು.

## PFRDA ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ ದಿವಸ್ ಆಚರಿಸಲು ಸಿದ್ಧವಾಗಿದೆ

* ಪ್ರಸ್ತುತ ಪಿಂಚಣಿ ನಿಯಂತ್ರಕ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (PFRDA) ಅಕ್ಟೋಬರ್. 1 ರಂದು ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (NPS) ದಿವಸ್ ಆಚರಿಸಲು ಸಿದ್ಧವಾಗಿದೆ.

* 'ಆಜಾದಿ ಕಾ ಅಮೃತ್ ಮಹೋತ್ಸವ' ಅಡಿಯಲ್ಲಿ ಪಿಂಚಣಿ ಮತ್ತು ನಿವೃತ್ತಿ ಯೋಜನೆಯನ್ನು ಉತ್ತೇಜಿಸುವ ಸಲುವಾಗಿ ಈ ಅಭಿಯಾನವನ್ನು ಆರಂಭಿಸಲಾಗುವದು ಎಂದು ತಿಳಿಸಿದ್ದಾರೆ.

* PFRDA ನಿವೃತ್ತಿಯ ನಂತರ ಆರ್ಥಿಕವಾಗಿ ಭವಿಷ್ಯವನ್ನು ರೂಪಿಸಿಕೊಳ್ಳಲು ಪ್ರತಿಯೊಬ್ಬ ಪ್ರಜೆಗೂ ಈ ಯೋಜನೆಯನ್ನು ಉತ್ತೇಜಿಸಲು ಈ ಅಭಿಯಾನವನ್ನು ಆಯೋಜಿಸಲಾಗುತ್ತಿದೆ, ಅಷ್ಟೇ ಅಲ್ಲದೇ ಈ ಅಭಿಯಾನದ ಮೂಲಕ ಸಾರ್ವಜನಿಕರಿಗೆ ಪಿಂಚಣಿ ಯೋಜನೆಗಳ ಬಗೆಗಿನ ಮಾಹಿತಿಯನ್ನು ನೀಡಲಾಗುತ್ತದೆ.

* ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಹಣಕಾಸು ಸಚಿವಾಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದೆ.




* 2003 ರ ಆಗಸ್ಟ್. 23 ರಂದು ಮಧ್ಯಂತರ ಪಿಂಚಣಿ ನಿಧಿ ನಿಯಂತ್ರಣ ಹಾಗೂ ಅಭಿವೃದ್ಧಿ ಪ್ರಾಧಿಕಾರವು ಪಿಂಚಣಿ ವಲಯವನ್ನು ಸುಧಾರಿಸುವ ನಿಟ್ಟಿನಲ್ಲಿ ಇದನ್ನು ಭಾರತ ಸರ್ಕಾರವು ಅಂಗೀಕರಿಸಿ ಸ್ಥಾಪಿಸಿದೆ.

## ಯುದ್ಧ ಸಾಮರ್ಥ್ಯ ಹೆಚ್ಚಿಸಲು ಭೂಸೇನೆಗೆ 118 ಯುದ್ಧ ಟ್ಯಾಂಕ್ ಖರೀದಿ

* ಭಾರತೀಯ ರಕ್ಷಣಾ ಸಚಿವಾಲಯ ಭೂಸೇನೆಗೆ 7,523 ಕೋಟಿ ರೂ. ಮೌಲ್ಯದ 118 ಯುದ್ಧ ಟ್ಯಾಂಕ್‌ಗಳ ಖರೀದಿಗೆ ಒಪ್ಪಿಗೆಯನ್ನು ನೀಡಿದೆ.

* ಪ್ರಸ್ತುತ ತಮಿಳನಾಡು ಚೆನ್ನೈನ ಆವಡಿಯಲ್ಲಿರುವ ಹೆವಿ ವೆಹಿಕಲ್ ಫ್ಯಾಕ್ಟರಿಯಲ್ಲಿ ಅರ್ಜುನ ಎಂಕೆ 1ಎ ಯುದ್ಧ ಟ್ಯಾಂಕ್‌ಗಳನ್ನು ನಿರ್ಮಿಸಲಾಗುತ್ತಿದೆ, ಈ ಹೊಸ ಮಾದರಿಯ ಟ್ಯಾಂಕ್, ಪ್ರಸ್ತುತ ಭಾರತೀಯ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಜುನ ಟ್ಯಾಂಕ್‌ನ ಮುಂದಿನ ಆವೃತ್ತಿಯಾಗಿದೆ.

* ಭಾರತೀಯ 'ಮೇಕ್ ಇನ್ ಇಂಡಿಯಾ' ಯೋಜನೆಯಡಿ ಹೊಸ ಮಾದರಿಯ ಅರ್ಜುನ ಟ್ಯಾಂಕ್‌ಗಳ ನಿರ್ಮಾಣದ ಪ್ರಕ್ರಿಯೆ ಆರಂಭವಾಗಲಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

## ಪ್ರಧಾನ ಮಂತ್ರಿ ಡಿಜಿಟಲ್ ಆರೋಗ್ಯ ಮಿಷನ್

* 2021 ರ ಸೆಪ್ಟೆಂಬರ್. 27 ರಂದು ಪ್ರಧಾನ ಮಂತ್ರಿ ಡಿಜಿಟಲ್ ಹೆಲ್ತ್ ಮಿಷನ್ (PM DHM) ನ್ನು ದೇಶಾದ್ಯಂತ ಬಿಡುಗಡೆ ಮಾಡುವುದಾಗಿ ಪ್ರಧಾನಿ ಮೋದಿ ತಿಳಿಸಿದ್ದಾರೆ

* ಪ್ರಸ್ತುತ ಭಾರತದಲ್ಲಿನ ಆರೋಗ್ಯ ವಿತರಣೆಯ ದಕ್ಷತೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಪ್ರಧಾನ ಮಂತ್ರಿ ಡಿಜಿಟಲ್ ಹೆಲ್ತ್ ಮಿಷನ್ ಆರಂಭಿಸಲಾಗುವದು.

* ಈ ಮಿಷನ್ ಆರೋಗ್ಯ ವೈದ್ಯರು ಹಾಗೂ ಆರೋಗ್ಯ ಸೌಲಭ್ಯಗಳಿಗಾಗಿ ಟೆಲಿಮೆಡಿಸಿನ್ ಹಾಗೂ ಇ ಫಾರ್ಮಸಿ, ವೈಯಕ್ತಿಕ ಆರೋಗ್ಯ ದಾಖಲೆಗಳನ್ನು ಒದಗಿಸಲಿದೆ, ರೋಗಿಗಳಿಗೆ ತಮ್ಮ ಆರೋಗ್ಯ ದಾಖಲೆಗಳು ಮತ್ತು ಆರೋಗ್ಯ ಸೌಲಭ್ಯಗಳನ್ನು ಹಂಚಿಕೊಳ್ಳಲು ಸಹಾಯ ಮಾಡಲಿದೆ.

* ಈ ಡಿಜಿಟಲ್ ಆರೋಗ್ಯ ID ಪ್ರತಿಯೊಬ್ಬ ವ್ಯಕ್ತಿಯ ಎಲ್ಲಾ ಆರೋಗ್ಯ ದಾಖಲೆಗಳ ಮಾಹಿತಿಯನ್ನು ಹೊಂದಿರಲಿದೆ ಎಂದು ತಿಳಿಸಿದ್ದಾರೆ, ಇದನ್ನು ಆಧಾರ್ ಹಾಗೂ ಮೊಬೈಲ್ ಸಂಖ್ಯೆ ಸಹಾಯದಿಂದ ರಚಿಸಲಾಗುತ್ತದೆ ಎಂದಿದ್ದಾರೆ.

* ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ದಾದ್ರಾ ಮತ್ತು ನಗರ ಹವೇಲಿ, ದಮನ್ ಮತ್ತು ದಿಯು, ಲಕ್ಷದ್ವೀಪ, ಚಂಡೀಗಢ, ಲಡಾಖ್ ಹಾಗೂ ಪುದುಚೇರಿಯಲ್ಲಿ ಈ ಮಿಷನ್ ಪ್ರಾಯೋಗಿಕ ಹಂತದಲ್ಲಿದೆ ಎಂದು ತಿಳಿದು ಬಂದಿದೆ.

# 27-09-2021

## QUAD ನಾಯಕರ ಶೃಂಗಸಭೆ 2021

* ಭಾರತ, ಆಸ್ಟ್ರೇಲಿಯಾ, ಯುನೈಟೆಡ್ ಸ್ಟೇಟ್ಸ್ ಮತ್ತು ಜಪಾನ್‌ನ ದೇಶಗಳ QUAD ನ ಸಭೆಯು ಇದೇ ಸೆಪ್ಟೆಂಬರ್ 24. ರಂದು ವಾಷಿಂಗ್ಟನ್ ಜರುಗಿತು.

* ಈ QUAD ಸಭೆಯಲ್ಲಿ ಪಾಲ್ಗೊಂಡಿರುವ ಪ್ರಧಾನಿಗಳಿಗೆ ಅಮೇರಿಕ ಅಧ್ಯಕ್ಷ ಜೋ ಬಿಡೆನ್ ಅವರು ಶ್ವೇತಭವನದಲ್ಲಿ ಆತಿಥ್ಯ ವಹಿಸಿದ್ದರು.

* ಈ ಕ್ವಾಡ್ ಸಭೆಯಲ್ಲಿ 'ಕ್ವಾಡ್ ಲಸಿಕೆ ಉಪಕ್ರಮ' ಇಂಡೋ ಪೆಸಿಫಿಕ್ ರಾಷ್ಟ್ರಗಳಿಗೆ ಸಹಾಯವಾಗಲಿದೆ ಎಂದು ಮೋದಿ ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಪಾಕಿಸ್ತಾನ ದೇಶದ ಮೇಲೆ ಎಚ್ಚರಿಕೆಯ ಕಣ್ಣಿಡಲು ಕ್ವಾಡ್'ನ ನಾಯಕರು ಸಮ್ಮತಿಯನ್ನು ನೀಡಿದರು.



* ಈ ಹಿಂದೆ ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಯುನೈಟೆಡ್ ಸ್ಟೇಟ್ಸ್ ದೇಶಗಳು ಮಾರ್ಚ್. 2021 ರ ಒಪ್ಪಂದದ ಪ್ರಕಾರ, ಭಾರತವು ಅಕ್ಟೋಬರ್. 2021 ರೊಳಗೆ ಕ್ವಾಡ್ 8 ಮಿಲಿಯನ್ ಇಂಡೋ ಪೆಸಿಫಿಕ್ಲಸಿಕೆ ಪ್ರಮಾಣವನ್ನು ರಫ್ತು ಮಾಡಲು ಪ್ರಸ್ತಾವನೆಯನ್ನು ನೀಡಿದೆ.

* ಈ ಹಿಂದೆ 2007 ರಲ್ಲಿ ಜಪಾನ್ ಪ್ರಧಾನಿ ಶಿಂಜೋ ಅಬೆ ಅವರು ಕ್ವಾಡ್ ನಾಯಕರ ಅಂದರೆ ಭಾರತ, ಅಮೆರಿಕ, ಜಪಾನ್ ಹಾಗೂ ಆಸ್ಟ್ರೇಲಿಯಾ ದೇಶಗಳ ನಾಯಕರ ಮಾತುಕತೆಯನ್ನು ಪ್ರಾರಂಭಿಸಿದ್ದರು.

## ಅಮೃತ ಗ್ರಾಮ ಪಂಚಾಯಿತಿ ಯೋಜನೆ



* ಪ್ರಸ್ತುತ 'ಅಮೃತ ಗ್ರಾಮ ಪಂಚಾಯಿತಿ ಯೋಜನೆಗೆ ಯರಗೋಳ ಗ್ರಾಮ ಪಂಚಾಯಿತಿ ಆಯ್ಕೆಯಾಗಿದೆ.

* ರಾಜ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಗಸ್ಟ 15 ರಂದು 75 ನೇ ಸ್ವಾತಂತ್ರ್ಯೋತ್ಸವದ ಸವಿ ನೆನಪಿಗಾಗಿ

ಅಮೃತ ಗ್ರಾಮ ಪಂಚಾಯಿತಿ ಯೋಜನೆಯನ್ನು ಘೋಷಣೆ ಮಾಡಿದ್ದರು.

* ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಇದೇ ಸೆಪ್ಟೆಂಬರ್. 23 ರಂದು 'ಅಮೃತ ಗ್ರಾಮ ಪಂಚಾಯಿತಿ ಯೋಜನೆ'ಗೆ ಚಾಲನೆಯನ್ನು ನೀಡಿದ್ದರು.

* ಈ 'ಅಮೃತ ಗ್ರಾಮ ಪಂಚಾಯಿತಿ ಯೋಜನೆ'ಗೆ ಯಾದಗಿರಿ ಜಿಲ್ಲೆಯಿಂದ 14 ಗ್ರಾಮ ಪಂಚಾಯಿತಿಗಳು ಆಯ್ಕೆಯಾಗಿವೆ ಎಂದು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

* ಈ 'ಅಮೃತ ಗ್ರಾಮ ಪಂಚಾಯಿತಿ ಯೋಜನೆ'ಗೆ ಆಯ್ಕೆಯಾದ ಪ್ರತಿ ಗ್ರಾಮ ಪಂಚಾಯಿತಿಗಳ, ಬೀದಿ ದೀಪಗಳ ಅಳವಡಿಕೆ, ಕುಡಿಯುವ ನೀರಿನ ನಳ, ಶೇ. 100 ರಷ್ಟು ಘನ ತ್ಯಾಜ್ಯ ವಿಂಗಡಣೆ ಮತ್ತು ವಿಲೆವಾರಿ, ಅಲ್ಲಿನ ಪಂಚಾಯಿತಿ ಕಟ್ಟಡಗಳಿಗೆ ಸೌರ ವಿದ್ಯುತ್ ಅಳವಡಿಕೆ ಮಾಡುವದು, ಉದ್ಯಾನ ವನಗಳ ನಿರ್ಮಾಣ, ಗ್ರಂಥಾಲಯಗಳ ಡಿಜಿಟಲಿಕರಣ, ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯಗಳಿಗೆ ಸೌಲಭ್ಯವನ್ನು ನೀಡುವುದು, ಅಷ್ಟೇ ಅಲ್ಲದೇ ರೈತರ ಕೃಷಿ ಉಪಯೋಗಗಳಿಗೆ ಅನುಕೂಲವಾಗುವಂತೆ ಗೋದಾಮು ನಿರ್ಮಾಣ, ಕೆರೆಗಳ ಶುದ್ಧಿಕರಣ ಮಾಡುವುದು ಹೀಗೆ ಹಲವಾರು ಕಾರ್ಯಗಳು ಈ ಯೋಜನೆಯಲ್ಲಿ ಸೇರಿವೆ.

* ಪ್ರಸ್ತುತ ಈ 'ಅಮೃತ ಗ್ರಾಮ ಪಂಚಾಯಿತಿ ಯೋಜನೆ' ಅಡಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಹೆಚ್ಚುವರಿಯಾಗಿ 25 ಲಕ್ಷ ರೂ. ಹಣವನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.



## ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಕಮಲಾ ಭಾಸಿನ್ ನಿಧನ

* ಇತ್ತೀಚಿಗೆ ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಹಾಗೂ ಲೇಖಕಿಯಾಗಿರುವ ಕಮಲಾ ಭಾಸಿನ್ ಅವರು ತಮ್ಮ 75 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಹೋರಾಟಗಾರ್ತಿ ಕಮಲಾ ಭಾಸಿನ್ ಅವರು 1946 ರಲ್ಲಿ ಪಂಜಾಬ್‌ನಲ್ಲಿ ಜನಸಿದ್ದಾರೆ, ಇವರು ಕಮಲಾ ಅವರು ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಲೇಖನ ಹಾಗೂ ಕವನಗಳನ್ನು ಬರೆಯುತ್ತಿದ್ದರು, ಅಷ್ಟೇ ಅಲ್ಲದೇ ಇವರು ಭಾರತ ಮತ್ತು ದಕ್ಷಿಣ ಏಷ್ಯಾ ದೇಶಗಳಲ್ಲಿ ಅತೀ ಹೆಚ್ಚಾಗಿ ಮಹಿಳಾ ಹಕ್ಕುಗಳ ಪರ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದರು.

* ಲೇಖಕಿ ಕಮಲಾ ಭಾಸಿನ್ ಅವರು ನವದೆಹಲಿಯಲ್ಲಿ ವಾಸವಾಗಿದ್ದರು, ಇವರ ನಿಧನಕ್ಕೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಂತಾಪವನ್ನು ಸೂಚಿಸಿದ್ದಾರೆ.

## ಪ್ರಧಾನಿ 'ಮೋದಿ'ಯಿಂದ ಕೋವಿಡ್ 19 ಗೆ ವಿಶ್ವದ ಮೊದಲ ಡಿಎನ್ಎ ಲಸಿಕೆ ಘೋಷಣೆ



* ಇತ್ತೀಚಿಗೆ ನ್ಯೂಯಾರ್ಕ್ ನಲ್ಲಿ ನಡೆದ 76 ನೇ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತೀಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜಾಗತಿಕ ವೇದಿಕೆಯಿಂದ ಕೋವಿಡ್ ಗೆ ವಿಶ್ವದ ಮೊದಲ ಡಿಎನ್ ಎ ಲಸಿಕೆಯನ್ನು ಘೋಷಣೆ ಮಾಡಿದ್ದಾರೆ.

* ಪ್ರಸ್ತುತ ಭಾರತವು ವಿಶ್ವದ ಮೊದಲ ಡಿಎನ್ಎ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ, ಈ ಡಿಎನ್ಎ ಲಸಿಕೆಯನ್ನು 12 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ಜನರಿಗೂ ನೀಡಬಹುದಾಗಿದೆ ಎಂದು ತಿಳಿಸಿದ್ದಾರೆ.

* ದೇಶದ ಲಸಿಕೆ ಕಾರ್ಯಕ್ರಮದ ಭಾಗವಾಗಿ ಸ್ವಳೀಯವಾಗಿ ಈ ಡಿಎನ್ ಎ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ ಎಂದು ನೀತಿ ಆಯೋಗದ ಸದಸ್ಯ ಡಾ ವಿ ಕೆ ಪೌಲ್ ಸುದ್ದಿವಾಹಿನಿಗಳ ಮುಂದೆ ಮಾಹಿತಿಯನ್ನು ನೀಡಿದ್ದಾರೆ, ಅಷ್ಟೇ ಅಲ್ಲದೇ ಝೈಡಸ್ ಕ್ಯಾಡಿಲಾ ಅವರ ಡಿಎನ್ಎ ಲಸಿಕೆಯ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲು ಎಲ್ಲ ಸಿದ್ಧತೆಗಳುನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಅಕ್ಟೋಬರ್ ತಿಂಗಳನ್ನು 'ಹಿಂದೂ ಪರಂಪರೆ ಮಾಸ' ಎಂದು ಘೋಷಿಸಿದ ಅಮೇರಿಕ



* ಪ್ರಸ್ತುತ ಅಕ್ಟೋಬರ್ ತಿಂಗಳನ್ನು 'ಹಿಂದೂ ಪರಂಪರೆಯ ಮಾಸ' ಎಂದು ಅಮೇರಿಕದ ಟೆಕ್ಸಾಸ್, ಫ್ಲಾರಿಡಾ, ನ್ಯೂಜೆರ್ಸಿ, ಓಹಿಯೊ ಮತ್ತು ಮೆಸ್ಸಾಚ್ಯುಸೆಟ್ಸ್ ಎಂಬ ಕೆಲ ರಾಜ್ಯಗಳು ಘೋಷಿಸಿವೆ.

* ಪ್ರಸ್ತುತ ಹಿಂದೂ ಧರ್ಮವು ತನ್ನ ವಿಶಿಷ್ಟ ಇತಿಹಾಸ ಹಾಗೂ ಪರಂಪರೆಯನ್ನು ಹೊಂದಿದೆ, ಅಷ್ಟೇ ಅಲ್ಲದೇ ನಮ್ಮ ರಾಜ್ಯ ಹಾಗೂ ದೇಶಕ್ಕೆ ಹಲವಾರು ಕೊಡುಗೆಗಳನ್ನೂ ನೀಡಿದೆ ಎಂದು ಅಮೇರಿಕ ತಿಳಿಸಿದೆ. * ಅಮೇರಿಕದಲ್ಲಿನ ಹಲವು ರಾಜ್ಯಗಳು ಅಕ್ಟೋಬರ್ ತಿಂಗಳನ್ನು ಹಿಂದೂ ಪರಂಪರೆಯ ಮಾಸ ಎಂದು ಘೋಷಣೆ ಮಾಡಿವೆ, ಇದೀಗ ಅಲ್ಲಿನ ಹಿಂದೂ ಸಂಘಟನೆಗಳು ಈ ಮಾಸಾಚರಣೆಯ ಸಂಭ್ರಮವನ್ನು ಆಚರಿಸಲು ಸಿದ್ಧವಾಗಿವೆ.
* ಆದರೆ ಅಲ್ಲಿನ ಹಿಂದೂ ಸಂಘಟನೆಗಳು ಅಧಿಕೃತವಾಗಿ ಅಕ್ಟೋಬರ್

ತಿಂಗಳನ್ನು ಹಿಂದೂ ಪರಂಪರೆಯ ತಿಂಗಳಾಗಿ ಘೋಷಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರಲ್ಲಿ ಕೇಳಿಕೊಂಡಿದ್ದಾರೆ.

## ವಿಶ್ವದ ಅತಿ ಎತ್ತರದ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಕೇಂದ್ರ ಹಿಮಾಚಲ ಪ್ರದೇಶದಲ್ಲಿ



* ಪ್ರಸ್ತುತ ವಿಶ್ವದ ಅತೀ ಎತ್ತರದ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಕೇಂದ್ರವನ್ನು ಹಿಮಾಚಲ ಪ್ರದೇಶದ ಲಾಹೌಲ್ ಹಾಗೂ ಸ್ಪಿತಿ ಜಿಲ್ಲೆಯ ಕಾಜಾದಲ್ಲಿ ಆರಂಭಿಸಲಾಗಿದೆ, ಈ ಪ್ರದೇಶವು ಸಮುದ್ರ ಮಟ್ಟದಿಂದ 12,500 ಅಡಿ ಎತ್ತರದಲ್ಲಿದೆ.
* ಪ್ರಸ್ತುತ ಲಾಹೌಲ್ ಹಾಗೂ ಸ್ಪಿತಿ ಜಿಲ್ಲೆ ಕಾಜಾದಲ್ಲಿನ ಈ ಚಾರ್ಜಿಂಗ್ ಕೇಂದ್ರವು ವಿಶ್ವದ ಅತೀ ಎತ್ತರದ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಕೇಂದ್ರವಾಗಿದೆ ಎಂದು ಕಾಜಾ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್‌ರಾಗಿರುವ ಮಹೇಂದ್ರ ಪ್ರತಾಪ್ ಸಿಂಹ ಅವರು ತಿಳಿಸಿದ್ದಾರೆ, ಅಲ್ಲದೇ ಈ ಚಾರ್ಜಿಂಗ್ ಕೇಂದ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ ಇನ್ನು ಹೆಚ್ಚಿನ ಚಾರ್ಜಿಂಗ್ ಕೇಂದ್ರಗಳನ್ನೂ ಸ್ಥಾಪನೆ ಮಾಡಲಾಗುವದು ಎಂದು ತಿಳಿಸಿದ್ದಾರೆ.
* ಪ್ರಸ್ತುತ ವಾಹನಗಳು ಹೊರಸೂಸುವ ಅನಿಲದಿಂದಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿದೆ, ಈ ಕಾರಣದಿಂದಾಗಿ, ಚಾರ್ಜಿಂಗ್ ಕೇಂದ್ರಗಳನ್ನೂ ಆರಂಭಿಸಲಾಗುತ್ತಿದೆ, ಇವುಗಳಿಂದ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಲಿದೆ ಎಂದು ಮಹೇಂದ್ರ ಪ್ರತಾಪ್ ಸಿಂಹ ಅವರು ತಿಳಿಸಿದ್ದಾರೆ.

## ಬೆಳಗಾವಿ ಜಿಲ್ಲೆಯ ಮಹಾನಗರ ಪಾಲಿಕೆಯಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ




* ಕರ್ನಾಟಕ ರಾಜ್ಯ ಬೆಳಗಾವಿ ಜಿಲ್ಲೆಯಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪನೆ ಮಾಡಲಾಗಿದೆ, ಈ ಗ್ರಂಥಾಲಯವು ಒಂದು ಹಂತದಲ್ಲಿ ಯಶಸ್ವಿಯಾದರೆ ಇದೇ ರೀತಿಯಲ್ಲಿ ರಾಜ್ಯದ ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಮಾಡಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿಕೆ ನೀಡಿದ್ದಾರೆ.
* ಬೆಳಗಾವಿ ಜಿಲ್ಲೆಯಲ್ಲಿ ದೇಶಭಕ್ತರಾಗಿದ್ದ ರವೀಂದ್ರ ಕೌಶಿಕ್ ಅವರ ಹೆಸರಿನಲ್ಲಿ ಈ ಡಿಜಿಟಲ್ ಗ್ರಂಥಾಲಯವನ್ನು ಆರಂಭಿಸಲಾಗಿದೆ, ಈ ಗ್ರಂಥಾಲಯವು ಓದುಗರಿಗೆ, ಬರಹಗಾರರಿಗೆ, ಬಹಳ ಉಪಯುಕ್ತವಾಗಲಿದೆ ಎಂದು ತಿಳಿಸಿದ್ದಾರೆ.

## ಅಮಿತ್ ಶಾರೊಂದಿಗೆ ನಕ್ಸಲ್ ಬಾಧಿತ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ



* ಪ್ರಸ್ತುತ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭದ್ರತಾ ಪರಿಸ್ಥಿತಿಯ ಕುರಿತು ನಕ್ಸಲ್ ಬಾಧಿತ 6 ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿದರು.
* ನಕ್ಸಲ್ ಬಾಧಿತ 6 ರಾಜ್ಯಗಳ ಮುಖ್ಯಮಂತ್ರಿಗಳು: ನವೀನ್ ಪಟ್ನಾಯಕ್, ಒಡಿಶಾ ರಾಜ್ಯ, ಕೆ.ಚಂದ್ರಶೇಖರ ರಾವ್, ತೆಲಂಗಾಣ ರಾಜ್ಯ, ನಿತೀಶ್ ಕುಮಾರ್, ಬಿಹಾರ ರಾಜ್ಯ, ಶಿವರಾಜ ಸಿಂಗ್ ಚೌಹಾಣ್, ಮಧ್ಯಪ್ರದೇಶ ರಾಜ್ಯ, ಉದ್ಧವ್ ಠಾಕ್ರೆ, ಮಹಾರಾಷ್ಟ್ರ ರಾಜ್ಯ, ಹೇಮಂತ್ ಸೊರೆನ್, ಜಾರ್ಖಂಡ್ ರಾಜ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆಯನ್ನು ನಡೆಸಿದ್ದಾರೆ.
* ಇವರಷ್ಟೇ ಅಲ್ಲದೇ ಪಶ್ಚಿಮ ಬಂಗಾಳ, ಛತ್ತೀಸಗಡ, ಆಂಧ್ರಪ್ರದೇಶ, ಕೇರಳ ರಾಜ್ಯಗಳ ಉನ್ನತ ಅಧಿಕಾರಿಗಳು ಈ ಚರ್ಚೆಯಲ್ಲಿ ಭಾಗಿಯಾಗಿದ್ದರು.
* ಅಮಿತ್ ಶಾ ಅವರು ನಡೆಸಿರುವ ಈ ಸಭೆಯಲ್ಲಿ ಈ 6ರಾಜ್ಯಗಳಲ್ಲಿನ ಭದ್ರತಾ ಪರಿಸ್ಥಿತಿ, ಹಾಗೂ ರಾಜ್ಯಗಳ ರಸ್ತೆ, ಸೇತುವೆ, ಶಾಲೆ, ಆರೋಗ್ಯ ಕೇಂದ್ರಗಳ ನಿರ್ಮಾಣದ ಕಾರ್ಯಗಳ ಬಗ್ಗೆಯು ಚರ್ಚಿಸಿದರು.
* 2015 ರಿಂದ 2020 ರ ನಡುವೆ ನಕ್ಸಲ್ ಬಾಧಿತ ಜಿಲ್ಲೆಗಳಲ್ಲಿ ನಡೆದಿರುವ ಕೃತ್ಯಗಳಲ್ಲಿ 380 ಭದ್ರತಾ ಸಿಬ್ಬಂದಿ, 1000 ನಾಗರಿಕರು, ಅಷ್ಟೇ ಅಲ್ಲದೇ 900 ಜನ ನಕ್ಸಲರು ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯ ಮಾಹಿತಿ ನೀಡಿದೆ.

## ಕ್ರಿಪ್ಟೋಕರೆನ್ಸಿ ವಹಿವಾಟುಗಳನ್ನು ಕಾನೂನುಬಾಹಿರ ಎಂದು ಘೋಷಿಸಿದ ಚೀನಾ



* ಪ್ರಸ್ತುತ ಇದೇ ಸೆಪ್ಟೆಂಬರ್. 23 ರಂದು ಎಲ್ಲಾ ಕ್ರಿಪ್ಟೋಕರೆನ್ಸಿ ವಹಿವಾಟುಗಳನ್ನು ಕಾನೂನುಬಾಹಿರ ಎಂದು ಚೀನಾ ದೇಶದ ಸೆಂಟ್ರಲ್ ಬ್ಯಾಂಕ್ ಆಫ್ ಚೀನಾ ಘೋಷಣೆ ಮಾಡಿದೆ.
* 2020 2021 ರ ಅವಧಿಯಲ್ಲಿ ಬಿಟ್‌ಕಾಯಿನ್ ಹಾಗೂ ಕ್ರಿಪ್ಟೋಕರೆನ್ಸಿಗಳ ಜಾಗತಿಕ ಮೌಲ್ಯಗಳು ಚೀನಾ ದೇಶದ ನಿಯಮಾವಳಿಗಳಿಂದಾಗಿ ಭಾರೀ ಏರಿಳಿತವನ್ನು ಕಂಡಿದ್ದವು.
* ಪೀಪಲ್ಸ್ ಬ್ಯಾಂಕ್ ಆಫ್ ಚೀನಾ ನೀಡಿರುವ ಮಾಹಿತಿಯ ಪ್ರಕಾರ ವರ್ಚುವಲ್ ಕರೆನ್ಸಿಯ ವ್ಯಾಪಾರ ವಹಿವಾಟವು ಕಾನೂನುಬಾಹಿರ ಹಣಕಾಸು ಚಟುವಟಿಯಾಗಿವೆ ಎಂದು ತಿಳಿಸಿದೆ.
* ಕ್ರಿಪ್ಟೋ ಕರೆನ್ಸಿಯ ನಿಷೇಧದಿಂದ ಚೀನಾ ದೇಶವು ತನ್ನದೇ ಡಿಜಿಟಲ್ ಕರೆನ್ಸಿಯನ್ನು ಪರಿಚಯಿಸಲು ಸಿದ್ಧವಾಗಿದೆ, ಅಷ್ಟೇ ಅಲ್ಲದೇ ಚೀನಾ ದೇಶದ

ಡಿಜಿಟಲ್ ಕರೆನ್ಸಿ ಇದೀಗ ಪೈಪ್‌ಲೈನ್‌ನಲ್ಲಿದೆ ಹಾಗೂ ಅದರ ವಹಿವಾಟುಗಳ ಮೇಲ್ವಿಚಾರಣೆಯನ್ನು ಮಾಡಲು ಚೀನಾದ ಸರ್ಕಾರವು ಅವಕಾಶ ನೀಡಲಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ 2019 ರಿಂದ ಕ್ರಿಪ್ಟೋ ಕರೆನ್ಸಿ ಸೃಷ್ಟಿ ಹಾಗೂ ವ್ಯಾಪಾರವು ಚೀನಾದಲ್ಲಿ ಕಾನೂನುಬಾಹಿರವಾಗಿದೆ.

* ಕ್ರಿಪ್ಟೋಕರೆನ್ಸಿ ಒಂದು ಬೈನರಿ ಡೇಟಾ ಆಗಿದ್ದು, ಇದನ್ನು ವಿನಿಮಯ ಮಾಧ್ಯಮವಾಗಿ ಕೆಲಸ ಮಾಡಲು ಅಭಿವೃದ್ಧಿ ಪಡಿಸಲಾಗಿದೆ.

### ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಮೊದಲ ರೇಷ್ಮೆ ನೂಲು ಉತ್ಪಾದನಾ ಕೇಂದ್ರವನ್ನು ಒಡಿಶಾದಲ್ಲಿ ಸ್ಥಾಪಿಸಲಿದೆ



* ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು (KVIC)ದ ಅಧ್ಯಕ್ಷ ವಿನಯ್ ಕುಮಾರ್ ಸಕ್ಸೇನಾ ಅವರು ಮೊದಲ ರೇಷ್ಮೆ ನೂಲು ಉತ್ಪಾದನಾ ಕೇಂದ್ರವನ್ನು ಒಡಿಶಾ ರಾಜ್ಯದ ಕಟಕ್ ಜಿಲ್ಲೆಯ ಚೌದ್ವಾರ್‌ನಲ್ಲಿ ಸ್ಥಾಪನೆ ಮಾಡಲು ಉಪಕ್ರಮವನ್ನು ಪ್ರಾರಂಭಿಸಿದರು.
* ಈ ಕೇಂದ್ರದಿಂದ ಟಸ್ಸಾರ್ ರೇಷ್ಮೆ ನೂಲಿನ ಸ್ಥಳೀಯ ಲಭ್ಯತೆಯನ್ನು ಹೆಚ್ಚಿಸಲಿದೆ, ರೇಷ್ಮೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಸಹಾಯ ಮಾಡಲಿದೆ ಮತ್ತು ಅಲ್ಲಿನ ಸ್ಥಳೀಯ ಜನರಿಗೆ ಉದ್ಯೋಗವನ್ನು ಒದಗಿಸಿಕೊಡುತ್ತದೆ.
* ಈ ಕೇಂದ್ರವು ವಾರ್ಷಿಕವಾಗಿ 94 ಲಕ್ಷ ಮೌಲ್ಯದ 200 ಕೆಜಿ ರೇಷ್ಮೆ ನೂಲನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ, ಸುಮಾರು 75 ಲಕ್ಷ ರೂ. ವೆಚ್ಚದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.
* ಒಡಿಶಾದಲ್ಲಿ ಟುಸ್ಸಾರ್ ರೇಷ್ಮೆ ನೂಲು ಉತ್ಪಾದನಾ ಕೇಂದ್ರವು ರಾಜ್ಯದ ಒಟ್ಟು ಖಾದಿ ಬಟ್ಟೆಯ ಉತ್ಪಾದನೆಯ ಸುಮಾರು 75% ರೇಷ್ಮೆಯನ್ನು ಈ ಕೇಂದ್ರವೇ ಹೊಂದಿದೆ, ರಾಜ್ಯದಲ್ಲಿನ ಈ ಕೇಂದ್ರದಿಂದಾಗಿ 34 ಮಹಿಳೆಯರು ಹಾಗೂ 50 ಕುಶಲಕರ್ಮಿಗಳಿಗೆ ನೇರ ಉದ್ಯೋಗವನ್ನು ಒದಗಿಸಿದೆ ಎಂದು ತಿಳಿಸಿದ್ದಾರೆ.

## 28-09-2021

### ವಿಶ್ವದ 8 ನೇ ಅತಿ ಎತ್ತರದ ಶಿಖರ ಮೌಂಟ್ ಮನಸ್ಲು



* ಪ್ರಸ್ತುತ ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP) ಪಡೆಯ ಅಧಿಕಾರಿಗಳು ನೇಪಾಳದಲ್ಲಿರುವ ಮೌಂಟ್ ಮನಸ್ಲು ಪರ್ವತವನ್ನು ಅಳತೆ ಮಾಡಿದ್ದಾರೆ.
* ITBP ಪಡೆಯ ಕಮಾಂಡೆಂಟ್ ರತನ್ ಸಿಂಗ್ ಸೋನಲ್ ಹಾಗೂ ಉಪ ಕಮಾಂಡೆಂಟ್ ಅನೂಪ್ ನೇಗಿ ಎಂಬ ಅಧಿಕಾರಿಗಳು ಈ ಪರ್ವತದ ಅಳತೆ ಯೋಜನೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.
* ಪ್ರಸ್ತುತ ಈ ಪರ್ವತವು ವಿಶ್ವದ 8ನೇ ಅತೀ ಎತ್ತರದ ಶಿಖರವಾಗಿದೆ, ಇದು ಮನಸ್ಲು ಪರ್ವತವು 8,163 ಮೀ. ಎತ್ತರವಿದೆ ಎಂದು ITBP ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ITBP ಪಡೆಯ ಅಧಿಕಾರಿಗಳು ಇದೇ ಸೆಪ್ಟೆಂಬರ್. 7 ರಂದು ಶಿಖರ ಏರಲು ಪ್ರಾರಂಭಿಸಿದ್ದರು, ಈ ಶಿಖರದ ಎತ್ತರದ ಅಳತೆಯನ್ನು



ಮಾಡುವ ಕಾರ್ಯವು ಸೆಪ್ಟೆಂಬರ್. 25 ರಂದು ಪೂರ್ಣಗೊಳಿಸಿದ್ದಾರೆ.

### ಇಂಗ್ಲೆಂಡ್ ನ ಆಲ್‌ರೌಂಡರ್ ಮೋಯಿನ್ ಅಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯ

* ಪ್ರಸ್ತುತ ಇಂಗ್ಲೆಂಡ್‌ನ ಆಲ್‌ರೌಂಡರ್ ಕ್ರಿಕೆಟ್ ಆಟಗಾರ ಮೋಯಿನ್ ಅಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಣೆ ಮಾಡಿದ್ದಾರೆ.
* ಆಲ್‌ರೌಂಡರ್ ಆಟಗಾರ ಮೋಯಿನ್ ಅಲಿ ಅವರು 2014ರಲ್ಲಿ ಹೆಡಿಂಗ್ಲೆಯಲ್ಲಿ ನಡೆದಿರುವ ಶ್ರೀಲಂಕಾ ವಿರುದ್ಧದ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆಯನ್ನು ಮಾಡಿದ್ದಾರೆ.
* ಇಂಗ್ಲೆಂಡ್ ತಂಡವು 2019ರ ಏಕದಿನ ವಿಶ್ವಕಪ್ ಜಯಿಸಿತ್ತು ಆ ಸಂಧರ್ಭದಲ್ಲಿ ಮೋಯಿನ್ ಅಲಿ ಅವರು ಇಂಗ್ಲೆಂಡ್ ತಂಡದ ಆಟಗಾರರಾಗಿದ್ದರು.
* ಮೋಯಿನ್ ಅಲಿ ಅವರು ಇತ್ತೀಚಿಗೆ ನಡೆದಿರುವ ಆಸ್ಟ್ರೇಲಿಯಾ ವಿರುದ್ಧದ ಟ್ವೆಂಟಿ 20 ಪಂದ್ಯದ ನಾಯಕ ಸ್ಥಾನವನ್ನು ವಹಿಸಿಕೊಂಡಿದ್ದರು.
* ಈ ಮೊದಲು ಮೋಯಿನ್ ಅಲಿ ಅವರಿಗಿಂತಲೂ ಮುಂಚಿತವಾಗಿ 2003 ರಲ್ಲಿ ನಾಸಿರ್ ಹುಸೇನ್ ಅವರು ಇಂಗ್ಲೆಂಡ್ ತಂಡದ ನಾಯಕನಾಗಿ ಮೊದಲ ಏಷ್ಯನ್ ಮೂಲದ ಬ್ರಿಟಿಷ್ ಆಟಗಾರರಾಗಿದ್ದಾರೆ.
* ಮೋಯಿನ್ ಅಲಿ ಅವರು 64 ಟೆಸ್ಟ್ ಪಂದ್ಯಗಳನ್ನೂ ಆಡಿ ರನ್ 2914 ಗಳನ್ನೂ ಕಲೆಹಾಕಿದ್ದಾರೆ, ಇದರಲ್ಲಿ ಇವರು 5 ಶತಕವನ್ನು ಸಿಡಿಸಿ, ಹಾಗೂ 195 ವಿಕೆಟ್‌ಗಳನ್ನೂ ಪಡೆದಿದ್ದಾರೆ.

### ಪ್ರಧಾನಿ ಮೋದಿ 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್'ಗೆ ಚಾಲನೆ




* ಪ್ರಧಾನ್ ಮಂತ್ರಿ ನರೇಂದ್ರ ಮೋದಿ ಅವರು 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್'ಗೆ ಚಾಲನೆಯನ್ನು ನೀಡಿದ್ದಾರೆ.

* ಈ ಆರೋಗ್ಯ ಅಭಿಯಾನವನ್ನು ಕಳೆದ 7 ವರ್ಷಗಳ ಹಿಂದೆ ಆರಂಭಿಸಲಾಗಿತ್ತು, ಇದೀಗ ಮೋದಿ ಅವರ ಈ ಅಭಿಯಾನದ ಚಾಲನೆಯು 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್'ಗೆ ಉತ್ತೇಜನ ನೀಡಿದಂತಾಗಿದೆ, ಹಾಗೂ ಭಾರತೀಯ ಜನರ ಆರೋಗ್ಯ ರಕ್ಷಣೆಯಲ್ಲಿ ಕ್ರಾಂತಿಕಾರಿ ಶಕ್ತಿಯನ್ನು ನೀಡಲಿದೆ ಎಂದು ತಿಳಿಸಿದ್ದಾರೆ.
* ಈ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಯೋಜನೆಯಡಿಲ್ಲಿ ಪ್ರತಿ ಭಾರತೀಯ ಪ್ರಜೆಗೂ ಡಿಜಿಟಲ್ ಆರೋಗ್ಯ ಐಡಿ ನೀಡಲಾಗುತ್ತದೆ, ಅಷ್ಟೇ ಅಲ್ಲದೇ ಪ್ರತಿ ನಾಗರಿಕನಿಗೂ ಆರೋಗ್ಯ ದಾಖಲೆಗಳನ್ನೂ ಡಿಜಿಟಲ್ ವ್ಯವಸ್ಥೆಯಡಿ ರಕ್ಷಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* ಈ ಹಿಂದೆ 3 ವರ್ಷಗಳ ಹಿಂದೆ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಈ ಆಯುಷ್ಮಾನ್ ಯೋಜನೆಯನ್ನು ಪ್ರಾರಂಭಿಸಲಾಗಿದೆ.
* ಪ್ರಸ್ತುತ ಕೊರೊನಾ (ಕೋವಿಡ್ 19) ಸೋಂಕು ಹರಡುವುದನ್ನು ತಡೆಯಲು ಕೇಂದ್ರ ಸರ್ಕಾರವು ಆರೋಗ್ಯ ಸೇತು ಆಯಪ್'ನ್ನು ಆರಂಭಿಸಿದೆ, ಅಷ್ಟೇ ಅಲ್ಲದೇ 90 ಕೋಟಿ ಡೋಸ್ ವ್ಯಾಕ್ಸಿನೇಷನ್'ನ್ನು ಉಚಿತ ಲಸಿಕೆ ಅಭಿಯಾನದ ಅಡಿಯಲ್ಲಿ ಭಾರತವು ಪೂರೈಸಿದೆ ಎಂದು ತಿಳಿಸಿದೆ.

## ಪ್ರಥಮ ಮಹಿಳಾ ಮೇಯರ್ ಜರ್ಮನಿ ರಾಜಧಾನಿ ಬರ್ಲಿನ್ ಗೆ ಆಯ್ಕೆ



* ಪ್ರಸ್ತುತ ಜರ್ಮನಿಯ ರಾಜಧಾನಿ ಬರ್ಲಿನ್ ನಗರದ ಮೇಯರ್ ಆಗಿ ಮೊಟ್ಟ ಮೊದಲ ಬಾರಿಗೆ ಮಹಿಳೆಯೊಬ್ಬರು ಅಧಿಕಾರವನ್ನು ಸ್ವೀಕಾರ ಮಾಡಲಿದ್ದಾರೆ.
* ಜರ್ಮನಿಯ ರಾಜಧಾನಿ ಬರ್ಲಿನ್'ನ ಸ್ಥಳೀಯ ಸಂಸ್ಥೆಗೆ ಚುನಾವಣೆಯನ್ನು ನಡೆಸಲಾಗಿತ್ತು ಆ ಚುನಾವಣೆಯಲ್ಲಿ ಸೋಷಿಯಲ್ ಡೆಮಾಕ್ರಾಟ್ಸ್ ಪಕ್ಷವು ಜಯ ಸಾಧಿಸಿದೆ, ಪ್ರಸ್ತುತ ಸೋಷಿಯಲ್ ಡೆಮಾಕ್ರಾಟ್ಸ್ ಪಕ್ಷದ ಅಭ್ಯರ್ಥಿಯಾದ ಫ್ರಾಂಜಿಸ್ಕಾ ಗಿಫೆ ಅವರು ಬರ್ಲಿನ್ ನಗರದ ಮೇಯರ್ ಆಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಟಿ20 ಕ್ರಿಕೆಟ್‌ನಲ್ಲಿ 10,000 ರನ್ ಮೈಲಿಗಲ್ಲು ಪೂರೈಸಿದ ವಿರಾಟ್ ಕೊಹ್ಲಿ

* ಇತ್ತೀಚಿಗೆ ದುಬೈನಲ್ಲಿ ನಡೆಯುತ್ತಿರುವ ಟ್ವೆಂಟಿ 20 ಕ್ರಿಕೆಟ್‌ನಲ್ಲಿ ಭಾರತೀಯ ಕ್ರಿಕೆಟ್ ತಂಡದ ನಾಯಕ ವಿರಾಟ್



ಕೊಹ್ಲಿ ಅವರು 10,000 ರನ್‌ಗಳ ಮೈಲಿಗಲ್ಲನ್ನು ಪೂರೈಸಿದ್ದಾರೆ.
* ಪ್ರಸ್ತುತ ಟಿ20 ಕ್ರಿಕೆಟ್‌ನಲ್ಲಿ 10,000 ರನ್ ಮೈಲಿಗಲ್ಲು ಪೂರೈಸಿದ ವಿಶ್ವದ 5ನೇ ಹಾಗೂ ಭಾರತದ ಮೊಟ್ಟ ಮೊದಲ ಬ್ಯಾಟ್ಸ್‌ಮನ್ ಇವರಾಗಿದ್ದಾರೆ.
* ರಾಯಲ್ ಚಾಲೆಂಜರ್ಸ್ ಬೆಂಗಳೂರು(RCB) ತಂಡದ ನಾಯಕ ವಿರಾಟ್ ಕೊಹ್ಲಿ ಅವರು IPL ನ ಟ್ವೆಂಟಿ 20 ಕ್ರಿಕೆಟ್ ಟೂರ್ನಿಯಲ್ಲಿ, ಮುಂಬೈ ಇಂಡಿಯನ್ಸ್ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಈ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದ್ದಾರೆ.
* ಟ್ವೆಂಟಿ 20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿ ದಾಖಲೆಯನ್ನು ಹೊಂದಿದವರು: ವೆಸ್ಟ್‌ಇಂಡೀಸ್, ಕ್ರಿಸ್ ಗೇಲ್ 14,275 ವೆಸ್ಟ್‌ಇಂಡೀಸ್ ಕೀರನ್ ಪೊಲಾರ್ಡ್ 11,195 ಪಾಕಿಸ್ತಾನ, ಶೋಯಬ್ ಮಲಿಕ್ 10,808 ಆಸ್ಟ್ರೇಲಿಯಾ, ಡೇವಿಡ್ ವಾರ್ನರ್ 10,019 ಭಾರತ, ವಿರಾಟ್ ಕೊಹ್ಲಿ 10,000 ಗಳ ಮೈಲಿಗಲ್ಲನ್ನು ತಲುಪಿದ್ದಾರೆ.

## ವಿಶ್ವ ಆರ್ಚರಿ ಚಾಂಪಿಯನ್‌ಷಿಪ್ ನಲ್ಲಿ ಜ್ಯೋತಿ ವೆನ್ನಮ್‌ಗೆ ಬೆಳ್ಳಿ



* ಪ್ರಸ್ತುತ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಜ್ಯೋತಿ ಸುರೇಖಾ ವೆನ್ನಮ್ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಜ್ಯೋತಿ ಸುರೇಖಾ ವೆನ್ನಮ್ ಅವರು ಮಹಿಳೆಯರ ವೈಯಕ್ತಿಕ ಕಂಪೌಂಡ್ ವಿಭಾಗದ ಫೈನಲ್ ಕೊಲಂಬಿಯಾದ ಸಾರಾ ಲೋಪೆಜ್ ಎದುರು ಸೋಲ ಅನಿಭವಿಸಿ ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.
* 3 ಬಾರಿಯ ವಿಶ್ವಕಪ್ ವಿಜೇತರಾದ ಅಭಿಷೇಕ್ ವರ್ಮಾ ಅವರು ಪುರುಷರ ವೈಯಕ್ತಿಕ ಕಂಪೌಂಡ್ ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಲ ಅನುಭವಿಸಿ ಹೊರ ನಡೆದಿದ್ದಾರೆ.
* ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೆದರ್ಲೆಂಡ್ಸ್‌ನ ಮೈಕ್ ಶೋಲೆಸರ್ ಎದುರು ಅಭಿಷೇಕ್ ವರ್ಮಾ ಅವರು ಅವರು ಕೇವಲ ಒಂದು ಪಾಯಿಂಟ್‌ನಿಂದ 147 148 ಸೋಲ ಅನುಭವಿಸಿದ್ದಾರೆ.
* ಪ್ರಸ್ತುತ ಭಾರತೀಯ ಆರ್ಚರಿ ಪಟುಗಳು ಚಾಂಪಿಯನ್‌ಷಿಪ್‌ನ ಕಂಪೌಂಡ್ ವಿಭಾಗದಲ್ಲಿ ಒಟ್ಟಾರೆ 3 ಬೆಳ್ಳಿ ಪದಕಗಳನ್ನು ಜಯಿಸಿದ್ದಾರೆ.
* ಈ ಹಿಂದೆ 2019 ರಲ್ಲಿ ನೆದರ್ಲೆಂಡ್ಸ್‌ನ ಡೆನ್ ಬಾಶ್‌ನಲ್ಲಿ ನಡೆದಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಜ್ಯೋತಿ ಸುರೇಖಾ ವೆನ್ನಮ್ ಅವರು ಕಂಚಿನ ಪದಕವನ್ನು ಜಯಿಸಿದ್ದರು.

## ರಷ್ಯಾದ ಗ್ರ್ಯಾಂಡ್ ಪ್ರಿಕ್ಸ್ ನಲ್ಲಿ ಮೊದಲ ಸ್ಥಾನ ಪಡೆದ ಲೆವಿಸ್ ಹ್ಯಾಮಿಲ್ಟನ್



* ಪ್ರಸ್ತುತ ಸೆಪ್ಟೆಂಬರ್. 26 ರಂದು ಜರುಗಿದ ರಷ್ಯಾದ ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ ಲೆವಿಸ್ ಹ್ಯಾಮಿಲ್ಟನ್ ಅವರು ಮೊದಲ ಸ್ಥಾನ ಪಡೆದುಕೊಂಡಿದ್ದಾರೆ, ಲೂಯಿಸ್ ಹ್ಯಾಮಿಲ್ಟನ್ ಅವರು ಮೊದಲ 100 ಫಾರ್ಮುಲಾ ಒನ್ ಚಾಲಕರಾಗಿ ಹೊರಹೊಮ್ಮಿದ್ದಾರೆ.
* ಲೂಯಿಸ್ ಹ್ಯಾಮಿಲ್ಟನ್ ಅವರು 7 ಬಾರಿಯ ವಿಶ್ವ ಚಾಂಪಿಯನ್ ಪಟ್ಟ ಪಡೆದುಕೊಂಡ ಲ್ಯಾಂಡೊ ನಾರ್ರಿಸ್ ಅವರನ್ನು ಹಿಂದಿಕ್ಕಿ ಈ ಬಾರಿ ಮೊದಲ ಸ್ಥಾನ ಪಡೆದಿದ್ದಾರೆ.
* ಹ್ಯಾಮಿಲ್ಟನ್ ಅವರು ಅತೀ ಹೆಚ್ಚಿನ ಎಫ್ 1 ಗೆಲುವಿನ ದಾಖಲೆಗಳನ್ನೂ ಹೊಂದಿದ್ದಾರೆ.
* ಲೂಯಿಸ್ ಕಾರ್ಲ್ ಡೇವಿಡ್ಸನ್ ಹ್ಯಾಮಿಲ್ಟನ್ ಅವರು ಬ್ರಿಟಿಷ್ ರೇಸಿಂಗ್ ಚಾಲಕರಾಗಿದ್ದಾರೆ ಹಾಗೂ ಇವರು ಪ್ರಸ್ತುತ ಮರ್ಸಿಡಿಸ್ ಫಾರ್ಮುಲಾ ಒನ್ ನಲ್ಲಿ ಭಾಗಿಯಾಗುತ್ತಾರೆ, ಇವರು ಹ್ಯಾಮಿಲ್ಟನ್ ಫಾರ್ಮುಲಾ ಒನ್‌ನಲ್ಲಿ ಜಂಟಿಯಾಗಿ 7 ವಿಶ್ವ ಚಾಲಕರ ಚಾಂಪಿಯನ್‌ಶಿಪ್ ಪ್ರಶಸ್ತಿಗಳನ್ನು ಜಯಿಸಿದ್ದಾರೆ.

## ವಿಶ್ವ ಪ್ರವಾಸೋದ್ಯಮ ದಿನ




* ಪ್ರತಿ ವರ್ಷ ಸೆಪ್ಟೆಂಬರ್ 27 ರಂದು ವಿಶ್ವ ಪ್ರವಾಸೋದ್ಯಮ ದಿನವನ್ನು ವಿಶ್ವಸಂಸ್ಥೆಯ ಸಂಸ್ಥೆಗಳು ಆಚರಣೆ ಮಾಡುತ್ತವೆ.
* 2021 ರ ವಿಶ್ವ ಪ್ರವಾಸೋದ್ಯಮ ದಿನವನ್ನು 'ಪ್ರವಾಸೋದ್ಯಮ ಅಂತರ್ಗತ ಬೆಳವಣಿಗೆಗೆ' ಎಂಬ ಧ್ಯೆಯೇವ್ಯಾಕದಡಿಯಲ್ಲಿ ಆಚರಣೆ ಮಾಡಲಾಯಿತು.
* ವಿಶ್ವಸಂಸ್ಥೆಯ ಸಂಸ್ಥೆಗಳ ನೀಡಿರುವ ಮಾಹಿತಿಯ ಪ್ರಕಾರ ಪ್ರವಾಸೋದ್ಯಮವು ಭೂಮಿಯ ಇರುವಂತಹ ಪ್ರತಿ ಹತ್ತು ಜನರಲ್ಲಿ ಒಬ್ಬರಿಗೆ ಉದ್ಯೋಗವನ್ನು ನೀಡುತ್ತದೆ, ಬೇರೆ ದೇಶಗಳಲ್ಲಿ ಪ್ರವಾಸೋದ್ಯಮವು ಜಿಡಿಪಿ(GDP)ಯ ಶೇ. 20 ಕ್ಕಿಂತ ಹೆಚ್ಚು ಆ ದೇಶವನ್ನು ಪ್ರತಿನಿಧಿಸುತ್ತವೆ.
* 1980 ರಲ್ಲಿ ವಿಶ್ವ ಪ್ರವಾಸೋದ್ಯಮ ದಿನದ ಮೊದಲ ಆಚರಣೆಯನ್ನು ನಡೆಸಲಾಯಿತು, UNWTO ಶಾಸನಗಳನ್ನು ಅಂಗೀಕರಿಸಿ ಸೆಪ್ಟೆಂಬರ್. 27 ನ್ನು ವಿಶ್ವ ಪ್ರವಾಸೋದ್ಯಮ ದಿನವಾಗಿ ಆಯ್ಕೆಮಾಡಲಾಯಿತು.
* ಪ್ರಸ್ತುತ 1970 ರ ಸೆಪ್ಟೆಂಬರ್. 27 ರಂದು ವಿಶ್ವ ಪ್ರವಾಸೋದ್ಯಮವನ್ನು UNWTO ಶಾಸನಗಳನ್ನು ಅಂಗೀಕರಿಸಿವೆ.

## ಮಿಲಿಟರಿ ಎಂಜಿನಿಯರಿಂಗ್ ಸೇವೆಗಳ ದಿನ

MILITARY ENGINEER SERVICES

* ಪ್ರಸ್ತುತ ಸೆಪ್ಟೆಂಬರ್. 26 ರಂದು 99 ನೇ ಮಿಲಿಟರಿ ಎಂಜಿನಿಯರಿಂಗ್ ಸೇವೆಗಳನ್ನು ಹೆಚ್ಚಿಸುವ ದಿನವನ್ನು ಆಚರಣೆ ಮಾಡಲಾಯಿತು.
* ಮಿಲಿಟರಿ ಎಂಜಿನಿಯರ್ ಸೇವೆಗಳ ಬಗ್ಗೆ (MES) ಇದೊಂದು ಪ್ರಮುಖ ನಿರ್ಮಾಣ ಸಂಸ್ಥೆಯಾಗಿದೆ, ಅಷ್ಟೇ ಅಲ್ಲದೇ ಭಾರತೀಯ ಸೇನೆಯ ಕಾರ್ಪ್ಸ್ ಆಫ್ ಇಂಜಿನಿಯರ್ಸ್‌ನ ಮುಖ್ಯವಾದ ಆಧಾರ ಸ್ತಂಭವಾಗಿದೆ, MES ಸಶಸ್ತ್ರ ಪಡೆಗಳು ಹಾಗೂ ರಕ್ಷಣಾ ಸಚಿವಾಲಯದ ಸಂಸ್ಥೆಗಳಿಗೆ ಬೆಂಬಲವನ್ನು ನೀಡುತ್ತದೆ.
* MES ಭಾರತದ ಅತಿದೊಡ್ಡ ನಿರ್ಮಾಣ ಹಾಗೂ ನಿರ್ವಹಣಾ ಸಂಸ್ಥೆಯಾಗಿದೆ, MES ಭಾರತದಾದ್ಯಂತ ವಸತಿ ಹಾಗೂ ಕಚೇರಿ ಕಟ್ಟಡಗಳು, ರಸ್ತೆಗಳು, ಆಸ್ಪತ್ರೆಗಳು, ಓಡುದಾರಿಗಳು ಮತ್ತು ಸಾಗರ ರಚನೆಗಳಂತಹ ಬಹುಮುಖಿ ನಿರ್ಮಾಣ ಕಾರ್ಯಗಳ ನಿರ್ವಹಣೆಯನ್ನು ಮಾಡುತ್ತದೆ.
* MES ಕೋವಿಡ್ 19 ಸಂಧರ್ಭದಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಿದೆ, ಆ ಆಸ್ಪತ್ರೆಗೆ ಅಗತ್ಯವಿರುವ ಎಲ್ಲ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ 2021 ರ ಜನೇವರಿಯಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಿದೆ.
* MES ಇಂಧನ ಸಂರಕ್ಷಣೆ ಹಾಗೂ ಪರಿಸರ ವ್ಯವಸ್ಥೆಯನ್ನು ಸುಧಾರಿಸಲು ಸೌರ ವಿದ್ಯುತ್ ಯೋಜನೆ, ಹಾಗೂ ಎಲ್ಇಡಿ ಐಸೇಶನ್ ಅಷ್ಟೇ ಅಲ್ಲದೇ GRIHA ಎಂಬ ಹಸಿರು ಕಟ್ಟಡದ ನಿಯಮಗಳನ್ನು ಅಳವಡಿಸಿಕೊಳ್ಳಲು ಸಿದ್ಧವಾಗಿದೆ ಎಂದು ತಿಳಿಸಿದೆ.

## ಸಲಿಂಗ ವಿವಾಹವನ್ನು ಕಾನೂನು ಬದ್ಧಗೊಳಿಸಿದ ಸ್ವಿಟ್ಜರ್ಲೆಂಡ್



* ಪ್ರಸ್ತುತ ಸ್ವಿಟ್ಜರ್‌ಲ್ಯಾಂಡ್ ದೇಶವು ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಲು ನಿರ್ಧಾರವನ್ನು ಕೈಗೊಂಡಿದೆ, ಸ್ವಿಟ್ಜರ್ ಲ್ಯಾಂಡ್ ಪಶ್ಚಿಮ ಯುರೋಪಿನ ಕೊನೆಯ ದೇಶಗಳಲ್ಲಿ ಒಂದಾಗಿದೆ.
* ಸ್ವಿಟ್ಜರ್‌ಲ್ಯಾಂಡ್'ನ ಸರ್ಕಾರವು ಜನಾಭಿಪ್ರಾಯ ಸಂಗ್ರಹದಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ವಿವಾಹ ಕಾನೂನಿನ ತಿದ್ದುಪಡಿಯನ್ನು ಅನುಮೋದಿಸಿದೆ, ಹಾಗೂ ಈ ಕಾನೂನು ಸಲಿಂಗಕಾಮಿ ದಂಪತಿಗಳಿಗೆ ವೀರ್ಯ ಬ್ಯಾಂಕುಗಳಿಗೆ ಪ್ರವೇಶವನ್ನು ಒದಗಿಸಿಕೊಡುತ್ತದೆ, ಅಷ್ಟೇ ಅಲ್ಲದೇ ಸಲಿಂಗ ದಂಪತಿಗಳು ಮಕ್ಕಳನ್ನು ದತ್ತು ಪಡೆದುಕೊಳ್ಳಲು ಅವಕಾಶವನ್ನು ನೀಡುತ್ತದೆ.
* ಪ್ರಸ್ತುತ ಸ್ವಿಟ್ಜರ್ಲೆಂಡ್ ದೇಶದಲ್ಲಿ ಸಲಿಂಗ ವಿವಾಹಕ್ಕೆ ವ್ಯಾಪಕ ಅನುಮೋದನೆ ಸಿಕ್ಕಿದೆ, ಹಾಗೂ ಶೇ. 64.1 ರಷ್ಟು ಮತದಾರರು ಈ ಶಾಸನ ಬದಲಾವಣೆಗೆ ಒಪ್ಪಿಗೆಯನ್ನು ನೀಡಿದ್ದಾರೆ.
* ಈ ಹಿಂದೆ 2007 ರಿಂದ ಸ್ವಿಟ್ಜರ್‌ಲ್ಯಾಂಡ್‌ನಲ್ಲಿನ ಸಲಿಂಗ ದಂಪತಿಗಳು ಅಲ್ಲಿನ ನಾಗರಿಕ ಪಾಲುದಾರಿಕೆಯನ್ನು ಪಡೆದುಕೊಂಡಿದ್ದಾರೆ.

## 29-09-2021

## ಉತ್ತರಾಖಂಡದಲ್ಲಿ ಮೊದಲ ಪಾಲ್ಮೆಟಮ್ (ತಾಳೆ) ಉದ್ಘಾಟನೆ

* ಪ್ರಸ್ತುತ ಉತ್ತರಾಖಂಡ ರಾಜ್ಯದ ಅರಣ್ಯ ಇಲಾಖೆಯು ತನ್ನ ರಾಜ್ಯದ ಮೊದಲ ಪಲ್ಮೆಟಮ್ (Palmetum)ನ್ನು ಉದ್ಘಾಟನೆ ಮಾಡಿದೆ. ಈ ಪಲ್ಮೆಟಮ್ ನ್ನು ಉತ್ತರಾಖಂಡ ರಾಜ್ಯದ ನೈನಿತಾಲ್ ಜಿಲ್ಲೆಯ ಹಲ್ದ್ವಾನಿ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗಿದೆ.
* ಈ ಪಾಲ್ಮೆಟಮ್ ಸುಮಾರು 110 ಜಾತಿಯ ತಾಳೆಗರಿಗಳನ್ನು ಹೊಂದಿದೆ, ಹಾಗೂ ಇದು ಉತ್ತರ ಭಾರತದಲ್ಲಿ ಅತೀ ದೊಡ್ಡ ಪಾಲ್ಮೆಟಮ್ ಆಗಿದೆ, ಇದನ್ನು 3 ಎಕರೆ ಪ್ರದೇಶದಲ್ಲಿ ಸ್ಥಾಪನೆ ಮಾಡಲಾಗಿದೆ.
* ಪ್ರಸ್ತುತ ಪಾಲ್ಮೆಟಮ್ ನ ಸಂರಕ್ಷಣೆ ಹಾಗೂ ಸಂಶೋಧನೆಗೆ ಹೆಚ್ಚಿನ ಮಹತ್ವ ನೀಡಲು ಹಾಗೂ ವಿವಿಧ ತಾಳೆ ಜಾತಿಗಳ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸಲು ಇದನ್ನು ಉದ್ಘಾಟನೆ ಮಾಡಲಾಗಿದೆ.
* ಉತ್ತರಾಖಂಡದ ತಾಳೆ ಜಾತಿಗಳು: ಪ್ರಸ್ತುತ ಪಾಲ್ಮೇಟಂ ಉತ್ತರಾಖಂಡಕ್ಕೆ ಸ್ಥಳೀಯವಾದ ಒಂದು ಪಾಮ್ ಪ್ರಭೇದವಾಗಿದೆ, ಹಾಗೂ ಇದನ್ನು ಟಾಕಿಲ್ ಪಾಮ್ ಎಂದು ಕರೆಯುತ್ತಾರೆ.
* ಉತ್ತರಾಖಂಡ ರಾಜ್ಯದ ಜೀವವೈವಿಧ್ಯ ಮಂಡಳಿಯು ಈ ಪ್ರಭೇದವನ್ನು ಅಪಾಯದ ಜಾತಿ ಎಂದು ಘೋಷಣೆ ಮಾಡಿದೆ, ಪ್ರಸ್ತುತ ಪಾಲ್ಮೆಟಂನಲ್ಲಿ ಅಳಿವಿನಂಚಿನಲ್ಲಿರುವ ಇತರ ಜಾತಿಗಳು ಫೋನಿಟೇಲ್ ಪಾಮ್, ಬಾಟಲ್ ಪಾಮ್, ರೆಡ್ನೆಕ್ ಪಾಮ್ ಮತ್ತು ಸ್ಪಿಂಡಲ್ ಪಾಮ್'ಗಳು ಸೇರಿಕೊಂಡಿವೆ.

## 'ಆಕಾಶ್ ಪ್ರೈಮ್' ಕ್ಷಿಪಣಿ ಪರೀಕ್ಷೆ ಯಶಸ್ವಿಗೊಳಿಸಿದ ಭಾರತೀಯ ವಾಯುಪಡೆ



* ಪ್ರಸ್ತುತ ಭಾರತೀಯ ವಾಯುಪಡೆಯ ಆಕಾಶ್ ಕ್ಷಿಪಣಿಯ ನವೀಕರಿಸಲಾಗಿರುವ ಹೊಸ ಮಾದರಿ 'ಆಕಾಶ್ ಪ್ರೈಮ್' ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಗೊಳಿಸಿದೆ.
* ಈ ಆಕಾಶ್ ಪ್ರೈಮ್ ಕ್ಷಿಪಣಿಯು ನಿರ್ದಿಷ್ಟ ಗುರಿಯನ್ನು ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿದೆ, ಇದರಿಂದಾಗಿ ಭಾರತೀಯ ಕ್ಷಿಪಣಿ ವಲಯವು ಮತ್ತಷ್ಟು ಬಲಿಷ್ಠವಾದಂತಾಗಿದೆ.
* ಒಡಿಶಾ ರಾಜ್ಯದ ಚಂಡೀಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯ, ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು ಈ ಆಕಾಶ್ ಪ್ರೈಮ್ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ.
* ಪ್ರಸ್ತುತ ಈ ಆಕಾಶ್ ಪ್ರೈಮ್ ಕ್ಷಿಪಣಿಯು ಶತ್ರು ಪಡೆಗಳ ಮಾನವ ರಹಿತ ವೈಮಾನಿಕ ಗುರಿಯನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದೆ ಎಂದು DRDO ಮಾಹಿತಿಯನ್ನು ನೀಡಿದೆ, ಅಷ್ಟೇ ಅಲ್ಲದೇ ಈಗಿನ ಆಕಾಶ್ ಕ್ಷಿಪಣಿ ವ್ಯವಸ್ಥೆಗೆ ಇದು ಹೊಸದಾಗಿ ಸೇರಿಕೊಂಡಿದೆ.
* ಪ್ರಸ್ತುತ ಭಾರತೀಯ ವಾಯುಪಡೆಯು ಈ ಆಕಾಶ್ ಕ್ಷಿಪಣಿಯನ್ನು ಬಳಸುತ್ತಿದೆ, ಈ ಹೊಸ ಮಾದರಿಯ ಆಕಾಶ್ ಪ್ರೈಮ್ ಕ್ಷಿಪಣಿಯಿಂದಾಗಿ ಭಾರತೀಯ ಸೇನೆಗೆ ಮತ್ತಷ್ಟು ಶಕ್ತಿ ಬಂದಂತಾಗಿದೆ.

## ಚೆನ್ನೈ ಸೆಂಟ್ರಲ್ ರೈಲ್ವೇ ನಿಲ್ದಾಣವು ಪರಿಸರ ಸ್ನೇಹಿ



## ನಿಲ್ದಾಣಗಳ ಪಟ್ಟಿಗೆ



* ಪ್ರಸ್ತುತ ಚೆನ್ನೈನ ತಲೈವಾ ಡಾ. ಎಂ.ಜಿ. ರಾಮಚಂದ್ರನ್ ಸೆಂಟ್ರಲ್ ರೈಲ್ವೇ ನಿಲ್ದಾಣವು ಇದೀಗ ಪರಿಸರ ಸ್ನೇಹಿ ನಿಲ್ದಾಣಗಳ ಪಟ್ಟಿಗೆ ಸೇರ್ಪಡೆಯಾಗಿದೆ.
* ಈ ರೈಲ್ವೇ ನಿಲ್ದಾಣದಲ್ಲಿ 1.5 ಮೆ.ವ್ಯಾ ವಿದ್ಯುತ್'ನ್ನು ಉತ್ಪಾದಣೆ ಮಾಡುವ ಸೋಲಾರ್ ಫಲಕಗಳನ್ನು ಅಳವಡಿಸಲಾಗಿದೆ, ಈ ರೈಲ್ವೇ ನಿಲ್ದಾಣದಲ್ಲಿ ಅಳವಡಿಸಲಾಗಿರುವ ಸೌರ ಫಲಕಗಳಿಂದ ಉತ್ಪಾದಣೆಯಾದ ವಿದ್ಯುತ್ ನ್ನು ಈ ರೈಲು ನಿಲ್ದಾಣವು ಹಗಲಿನ ಸಮಯದಲ್ಲಿ ಬಳಸಿಕೊಳ್ಳುತ್ತದೆ.
* ಪ್ರಸ್ತುತ ರೈಲ್ವೇ ಸಚಿವಾಲಯ ಭಾರತಿಯ ರೈಲ್ವೇಗೆ ಸಂಬಂಧಿಸಿರುವ ಖಾಲಿ ಜಾಗಗಳಲ್ಲಿ ಸೌರ ಫಲಕಗಳನ್ನು ಅಳವಡಿಸಲು ನಿರ್ಧಾರವನ್ನು ಕೈಗೊಂಡಿದೆ, ಇದರಿಂದಾಗಿ ಈಗಿನ ರೈಲ್ವೇಗಳು ಹೊರಸೂಸುವ ಇಂಗಾಲದ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು ರೈಲ್ವೆ ಇಲಾಖೆ ಹೊಂದಿದೆ.
* ಪ್ರಸ್ತುತ ರೇಲ್ವೆ ಇಲಾಖೆಯು ಹಲವಾರು ರೈಲು ನಿಲ್ದಾಣಗಳ ಛಾವಣಿಗಳ ಮೇಲೆ ಸೋಲಾರ್ ಫಲಕಗಳ ಅಳವಡಿಕೆಮಾಡಿದೆ, ಈ ಸೌರ ಫಲಕಗಳಿಂದ 100 MW ನಷ್ಟು ವಿದ್ಯುತ್ ಉತ್ಪಾದಣೆ ಮಾಡಲು ಆರಂಭಿಸಿದೆ.
* ರೈಲ್ವೇ ಇಲಾಖೆಯು BHEL ಸಹಯೋಗದೊಂದಿಗೆ ಈ ಅಭಿಯಾನಕ್ಕೆ ಚಾಲನೆಯನ್ನು ನೀಡಿದೆ.

## ರಕ್ಷಣಾ ಸಚಿವಾಲಯವು ಶಸ್ತ್ರಾಸ್ತ್ರ ಕಾರ್ಖಾನೆ ಮಂಡಳಿಯನ್ನು ರದ್ದುಪಡಿಸಿದೆ

OFB
ORDNANCE FACTORY BOARD

* ಪ್ರಸ್ತುತ ರಕ್ಷಣಾ ಸಚಿವಾಲಯವು ಅಕ್ಟೋಬರ್. 1 ರಿಂದ ಜಾರಿಗೆ ಬರುವಂತೆ 246 ವರ್ಷಗಳಷ್ಟು ಹಳೆಯದಾದ ಕಾರ್ಖಾನೆ ಕಾರ್ಖಾನೆ ಬೋರ್ಡ್ (ಆರ್ಡನೆನ್ಸ್ ಫ್ಯಾಕ್ಟರಿ ಬೋರ್ಡ್(OFB))ನ್ನು ಆರ್ಡನೆನ್ಸ್ ಫ್ಯಾಕ್ಟರಿ ಬೋರ್ಡ್(OFB)ನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿದ್ದಾರೆ, ಅಲ್ಲಿರುವಂತಹ

ಉದ್ಯೋಗಿಗಳು ಹಾಗೂ ಆಸ್ತಿಯ ನಿರ್ವಹಣೆಯನ್ನು 7 ಸಾರ್ವಜನಿಕ ವಲಯದ ಘಟಕಗಳಿಗೆ ವರ್ಗಾವಣೆ ಮಾಡಿದೆ.

* ಕೇಂದ್ರ ಸರ್ಕಾರವು ಆತ್ಮನಿರ್ಭರ ಭಾರತ್ ಯೋಜನೆಯ ಅಂಗವಾಗಿ, ಈ ಹಿಂದಿನ ವರ್ಷವೇ ಅಂದರೆ ಮೇ. 16 ರಂದು OFBಯನ್ನು ಕಾರ್ಪೊರೇಟೈಸೇಶನ್ ಮಾಡುವ ಮೂಲಕ ಹೊಣೆಗಾರಿಕೆ ಹಾಗೂ



ಯುದ್ಧ ಸಾಮಗ್ರಿಗಳ ದಕ್ಷತೆಯನ್ನು ಸುಧಾರಿಸಲ್ಲಾಗುತ್ತದೆ ಎಂದು ತಿಳಿಸಿದ್ದಾರೆ.

* ಭಾರತ ಸರ್ಕಾರವು 2021 ರ ಅಕ್ಟೋಬರ್. 1 ರಿಂದ ಅನ್ವಯವಾಗುವಂತೆ, ಅಲ್ಲಿನ 41 ಉತ್ಪಾದನಾ ಘಟಕಗಳ ನಿರ್ವಹಣೆಯನ್ನು 7 ಸರ್ಕಾರಿ ಕಂಪೆನಿಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಭಾರತ ಸರ್ಕಾರದ ಆದೇಶದ ಪ್ರಕಾರ, 7 ರಕ್ಷಣಾ ಸಾರ್ವಜನಿಕ ವಲಯದ ಘಟಕಗಳಾಗಿರುವ ಮುನಿಷನ್ ಇಂಡಿಯಾ ಲಿಮಿಟೆಡ್, ಆರ್ಮರ್ಡ್ ವೆಹಿಕಲ್ಸ್ ನಿಗಮ್ ಲಿಮಿಟೆಡ್, ಅಡ್ವಾನ್ಸ್ಡ್ ವೆಪನ್ಸ್ ಅಂಡ್ ಇಕ್ವಿಪ್ಮೆಂಟ್ ಇಂಡಿಯಾ ಲಿಮಿಟೆಡ್, ಟ್ರೂಪ್ ಕಂಫರ್ಟ್ಸ್ ಲಿಮಿಟೆಡ್, ಯಂತ್ರ ಇಂಡಿಯಾ ಲಿಮಿಟೆಡ್, ಇಂಡಿಯಾ ಆಪ್ಟೆಲ್ ಲಿಮಿಟೆಡ್ ಹಾಗೂ ಗ್ಲೈಡರ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

* OFB ಇದೊಂದು ರಕ್ಷಣಾ ಸಚಿವಾಲಯದ ಘಟಕವಾಗಿತ್ತು, ಈ




ಘಟಕವು 3 ಸಶಸ್ತ್ರ ಪಡೆಗಳು ಹಾಗೂ ಸೇನಾಪಡೆಗಳಿಗೆ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ಪೂರೈಕೆ ಮಾಡುತಿತ್ತು.

## ಹೊಸ ಪಾಸ್‌ಪೋರ್ಟ್ ಹಾಗೂ ರಾಷ್ಟ್ರೀಯ ಗುರುತಿನ ಚೀಟಿ ಘೋಷಿಸಿದ ತಾಲಿಬಾನ್

* ಇತ್ತೀಚಿಗೆ ಅಫ್ಘಾನಿಸ್ತಾನದಲ್ಲಿ ಹೊಸದಾಗಿ ರಚನೆಯಾದ ತಾಲಿಬಾನ್ ಸರ್ಕಾರವು ಇದೀಗ ತನ್ನ ದೇಶದ ಎಲ್ಲಅಫ್ಘಾನ್ ಪ್ರಜೆಗಳಿಗೂ ಹೊಸ ಪಾಸ್‌ಪೋರ್ಟ್ ಹಾಗೂ ರಾಷ್ಟ್ರೀಯ ಗುರುತಿನ ಚೀಟಿಯನ್ನು ಒದಗಿಸಲಾಗುವದು ಎಂದು ತಾಲಿಬಾನ್ ಸರ್ಕಾರ ತಿಳಿಸಿದೆ.

* ಪ್ರಸ್ತುತ ಈ ತಾಲಿಬಾನ್ ಸರ್ಕಾರವು ನೀಡುವ ಹೊಸಪಾಸ್‌ಪೋರ್ಟ್ ಹಾಗೂ ರಾಷ್ಟ್ರೀಯ ಗುರುತಿನ ಚೀಟಿಯಲ್ಲಿ 'ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನ್' ಎಂದು ಬರೆಯಲಾಗಿರುತ್ತದೆ ಎಂದು ತಾಲಿಬಾನ್ ಸರ್ಕಾರ ತಿಳಿಸಿದೆ.

* ಈ ಮೊದಲು ಅಫ್ಘಾನಿಸ್ತಾನದಲ್ಲಿನ ಆಡಳಿತದ ಸರ್ಕಾರವು ನೀಡಿರುವ ಪಾಸ್‌ಪೋರ್ಟ್ ಹಾಗೂ ರಾಷ್ಟ್ರೀಯ ಗುರುತಿನ ಚೀಟಿಯಲ್ಲಿ 'ರಿಪಬ್ಲಿಕ್ ಆಫ್ ಅಫ್ಘಾನ್' ಎಂದು ಬರೆಯಲಾಗಿತ್ತು, ಇದೀಗ ತಾಲಿಬಾನ್ ಸರ್ಕಾರವು ನೀಡುವ ಪಾಸ್‌ಪೋರ್ಟ್ ಹಾಗೂ ರಾಷ್ಟ್ರೀಯ ಗುರುತಿನ ಚೀಟಿಗಳು' ಮೇಲೆ 'ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನ್' ಎಂದು ಬರೆಯಲಾಗುತ್ತದೆ ಎಂದು ಮಾಹಿತಿ ಮತ್ತು ಸಂಸ್ಕೃತಿ ಇಲಾಖೆಯ ಉಪ ಮಂತ್ರಿ ಹಾಗೂ ತಾಲಿಬಾನ್‌ನ ವಕ್ತಾರ ಜಬಿಯುಲ್ಲಾ ಮುಜಾಹಿದ್ ಅವರು ತಿಳಿಸಿದ್ದಾರೆ.

## ಪ್ರಧಾನಿ ಮೋದಿಯಿಂದ ಅಪೌಷ್ಟಿಕತೆ ನಿವಾರಣೆಗೆ '35' ಬೆಳೆ ತಳಿಗಳ ಬಿಡುಗಡೆ

* ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಪೌಷ್ಟಿಕತೆ ನಿವಾರಣೆಗೋಸ್ಕರ 35 ಹೊಸ ವಿಧದ ಬೀಜಗಳನ್ನು ಬಿಡುಗಡೆ ಮಾಡಿದರು, ಈ ಬೀಜಗಳು ಹೆಚ್ಚಿನ ಪೌಷ್ಟಿಕಾಂಶ ಮೌಲ್ಯವನ್ನು ಹಾಗೂ ಹವಾಮಾನ ಬದಲಾವಣೆಗೆ ನಿರೋಧಕವಾಗಿರುತ್ತವೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ರೈತರಿಗೆ ಈ ಹೊಸ ತಳಿಯ ಬೀಜಗಳು ರೋಗಗಳಿಂದ ಬೆಳೆಗಳನ್ನು ರಕ್ಷಣೆ ಮಾಡುತ್ತವೆ, ಹಾಗೂ ಅಧಿಕ ಇಳುವರಿಯನ್ನು ನೀಡಲಿವೆ, ಇದರಿಂದಾಗಿ ರೈತರು ಅಧಿಕ ಲಾಭವನ್ನು ಪಡೆಯಬಹುದು.

* ಪ್ರಸ್ತುತ ರಬಿ ಋತುವಿನಲ್ಲಿ 430 ಲಕ್ಷಕ್ಕೂ ಅಧಿಕ ಮೆಟ್ರಿಕ್ ಟನ್ ಗಳಷ್ಟು ಗೋಧಿಯನ್ನು ಖರೀದಿಸಲಾಗಿದೆ, ಇದರಿಂದ ರೈತರಿಗೆ 85 ಸಾವಿರ ಕೋಟಿ ರೂ. ಹಣವನ್ನು ಸಂದಾಯಮಾಡಲಾಗಿದೆ.

* ಈ ಹೊಸ ತಳಿಯ ಬೀಜಗಳಿಂದ ರೈತರನ್ನು ಬೆಳೆ ಆಧಾರಿತ ಆದಾಯ ವ್ಯವಸ್ಥೆಯಿಂದ ಹೊರತರಲಾಗುತ್ತಿದೆ, ಹಾಗೂ ಇನ್ನಿತರ ಇತರ ಕೃಷಿಗಳಿಗೆ ಉತ್ತೇಜನವನ್ನು ನೀಡಲಾಗುತ್ತದೆ ಎಂದು ತಿಳಿದು ಬಂದಿದೆ, ಮುಂದಿನ ವರ್ಷವನ್ನು "ರಾಗಿ ವರ್ಷ" ಎಂದು ಘೋಷಣೆ ಮಾಡಿದೆ, ಅಷ್ಟೇ ಅಲ್ಲದೇ ವಿಶ್ವಸಂಸ್ಥೆ ನೀಡುವ ಅವಕಾಶಗಳನ್ನು ಜನರು ಬಳಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

## ಹಳೆಯ ಕೋಲಾ ಬೇಟೆಯ ಹದ್ದಿನ ಪಳೆಯುಳಿಕೆ ಆಸ್ಟ್ರೇಲಿಯಾದಲ್ಲಿ ಪತ್ತೆ



* ಪ್ರಸ್ತುತ ವಿಜ್ಞಾನಿಗಳು ದಕ್ಷಿಣ ಆಸ್ಟ್ರೇಲಿಯಾದ ಬಂಜರು ಸರೋವರದ ಬಳಿ ಪುರಾತನವಾಗಿರುವ ಹದ್ದಿನ ಅವಶೇಷಗಳನ್ನು ಪತ್ತೆ ಮಾಡಿದ್ದಾರೆ. * ಈ ಹಕ್ಕಿಯು 25 ದಶಲಕ್ಷ ವರ್ಷಗಳಷ್ಟು ಹಳೆಯದಾಗಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ, ದಕ್ಷಿಣ ಆಸ್ಟ್ರೇಲಿಯಾದ ಭೂಮಿಯು ಹಚ್ಚ ಹಸಿರಿನ ಭೂ ಪ್ರದೇಶವಾಗಿದೆ.

* ಈ ಹದ್ದಿನ ಅವಶೇಷಗಳು ಆಸ್ಟ್ರೇಲಿಯಾದ ಪಿನ್ಪಾ ಸರೋವರದ ಬಳಿ ಪತ್ತೆಯಾಗಿವೆ.

* ಪ್ರಸ್ತುತ ಈ ಕೋಲಾ ಬೇಟೆ ಹದ್ದಿನ ಪಳೆಯುಳಿಕೆಯು ಗಾತ್ರದಲ್ಲಿ ಬೆಣೆ ಬಾಲದ ಹದ್ದುಗಿಂತ ಸ್ವಲ್ಪ ಚಿಕ್ಕದಾಗಿದೆ.

* ಹದ್ದುಗಳು ತಮ್ಮ ಆಹಾರಕ್ಕಾಗಿ ಅಳಿಲುಗಳು, ಹುಲ್ಲುಗಾವಲು

ನಾಯಿಗಳು, ಹಾಗೂ ಮೊಲಗಳನ್ನು ಬೇಟೆಯಾಡುತ್ತವೆ.
* ಬೆಣೆ ಬಾಲದ ಹದ್ದುಗಳನ್ನೂ ವೈಜ್ಞಾನಿಕವಾಗಿ ಅಕ್ವಿಲಾ ಔಡಾಕ್ಸ್ ಎನ್ನುವರು, ಹಾಗೂ ಇವುಗಳು ಆಸ್ಟ್ರೇಲಿಯಾದ ಅತೀದೊಡ್ಡ ಬೇಟೆಯ ಪಕ್ಷಿಗಳಾಗಿವೆ.

## ರಾಷ್ಟ್ರೀಯ ಮಹಿಳಾ ಆಯೋಗವು ಮಹಿಳೆಯರಿಗಾಗಿ ಹೈನುಗಾರಿಕೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆರಂಭಿಸಿದೆ

* ಪ್ರಸ್ತುತ ರಾಷ್ಟ್ರೀಯ ಮಹಿಳಾ ಆಯೋಗವು (NCW) ಮಹಿಳೆಯರಿಗಾಗಿ ಹೈನುಗಾರಿಕೆಯಲ್ಲಿ ದೇಶ್ಯಾದಂತ್ಯ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.
* ಈ ಯೋಜನೆಯಡಿಲ್ಲಿ ಮಹಿಳಾ ಸ್ವ ಸಹಾಯ ಗುಂಪುಗಳಿಗಾಗಿ ಹಿಸಾರ್ ನ ಲಾಲಾ ಲಜಪತ್ ರಾಯ್ ಪಶುವೈದ್ಯಕೀಯ ಹಾಗೂ ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿನ 'ಮೌಲ್ಯವರ್ಧಿತ ಡೈರಿ ಉತ್ಪನ್ನ'ಗಳು ಬಗೆಗಿನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ, ಈ ಕಾರ್ಯಕ್ರಮವನ್ನೂ ಹರಿಯಾಣ ರಾಜ್ಯ ಗ್ರಾಮೀಣ ಪ್ರದೇಶದ ಜನಗಳ ಜೀವನೋಪಾಯ ಮಿಷನ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾಯಿದೆ.
* ಪ್ರಸ್ತುತ ಗ್ರಾಮೀಣ ಭಾರತದಲ್ಲಿರುವ ಮಹಿಳೆಯರು ಹೈನುಗಾರಿಕೆಯಲ್ಲಿ ತಮ್ಮ ತಾವೇ ತೊಡಗಿಸಿಕೊಂಡಿದ್ದಾರೆ ಆದರೆ ಆ ಮಹಿಳೆಯರು ಯಾವುದೇ ರೀತಿಯ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಸಾಧ್ಯವಾಗಿಲ್ಲ, ಆದರೆ ಈ ಯೋಜನೆಯು ಮಹಿಳೆಯರ ಸಬಲೀಕರಣಗೊಳಿಸುವ ಹಾಗೂ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಸಹಾಯ ಮಾಡಲಿದೆ ಎಂದಿದ್ದಾರೆ.
* ರಾಷ್ಟ್ರೀಯ ಮಹಿಳಾ ಆಯೋಗ ಸಂಸ್ಥೆಯು 1992 ರ ಜನೇವರಿ.31 ರಂದು ಸ್ಥಾಪನೆಯಾಗಿದೆ.

## ಸ್ವಚ್ಛ ಸರ್ವೇಕ್ಷಣೆಯ 7 ನೇ ಆವೃತ್ತಿ




* ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರಾಗಿರುವ ಹರ್ದೀಪ್ ಸಿಂಗ್ ಪುರಿ ಅವರು ನವದೆಹಲಿಯಲ್ಲಿ 7ನೇ ಆವೃತ್ತಿಯ ಸ್ವಚ್ಛ ಸರ್ವೇಕ್ಷಣೆಯ ಕಾರ್ಯಕ್ರಮವನ್ನು ಆರಂಭಿಸಿದರು.
* ಈ ಸ್ವಚ್ಛ ಭಾರತ್ ಮಿಷನ್ ವಿಶ್ವದ ಅತಿದೊಡ್ಡ ನಗರಗಳ ಸ್ವಚ್ಛತಾ ಸಮೀಕ್ಷೆಯಾಗಿದೆ, ಇದನ್ನು ಎಂಬ 'ಪೀಪಲ್ ಫಸ್ಟ್' ಎಂಬ ಚಾಲನಾ ತತ್ವದಿಂದ ಅಭಿವೃದ್ಧಿ ಪಡಿಸಲಾಗಿದೆ.
* ಸ್ವಚ್ಛ ಸರ್ವೇಕ್ಷಣೆಯನ್ನು ಈ ಮೊದಲು ನೈರ್ಮಲ್ಯ ಕಾರ್ಮಿಕರ ಕಲ್ಯಾಣ ಹಾಗೂ ಯೋಗಕ್ಷೇಮಕ್ಕಾಗಿ ನಗರಗಳ ಉಪಕ್ರಮಗಳ ಅಡಿಯಲ್ಲಿ ಆರಂಭಿಸಲಾಗಿದೆ.
* ಸ್ವಚ್ಛ ಸಮೀಕ್ಷೆ 2022 ರ ಆವೃತ್ತಿಯು ನಗರ ನೈರ್ಮಲ್ಯದಲ್ಲಿನ ಕೆಲಸಗಾರರಿಗೆ ಜೀವನೋಪಾಯದ ಅವಕಾಶಗಳನ್ನು ಬದಲಾವಣೆ ಮಾಡಿಕೊಳ್ಳಲು ನಗರಗಳನ್ನು ಪ್ರೇರೇಪಿಸುತ್ತದೆ.
* ಸ್ವಚ್ಛ ಸರ್ವೇಕ್ಷಣೆ ಇದು ಭಾರತದ ನಗರಗಳು ಮತ್ತು ಪಟ್ಟಣಗಳಲ್ಲಿ ಸ್ವಚ್ಛತೆ, ನೈರ್ಮಲ್ಯದ ವಾರ್ಷಿಕ ಸಮೀಕ್ಷೆಯಾಗಿದೆ, ಈ ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆಯನ್ನು ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ಆರಂಭಿಸಲಾಗಿದೆ.
* ಪ್ರಸ್ತುತ ಈ ಮೊದಲ 2016 ರಲ್ಲಿ 73 ನಗರಗಳನ್ನು ಸೇರಿದಂತೆ ಸಮೀಕ್ಷೆಯನ್ನು ಕೈಗೊಳ್ಳಲಾಗಿತ್ತು, ಹಾಗೂ 2020 ರ ಅವಧಿಗೆ ಅಂದಾಜು 4242 ನಗರಗಳನ್ನು ಸೇರಿದಂತೆ ಸಮೀಕ್ಷೆಯನ್ನು ನಡೆಸಲಾಗಿದೆ.

## ಭಾರತ ಅಮೇರಿಕ ಆರೋಗ್ಯ ಸಂವಾದ 2021



* ಭಾರತ ಅಮೇರಿಕ ದೇಶಗಳು 2021 ರ ಆರೋಗ್ಯ ಸಂವಾದದ 4 ನೇ ಅಧಿವೇಶನವನ್ನು ಉದ್ಘಾಟಿಸಿವೆ, ಭಾರತವು ಈ ಆರೋಗ್ಯ ಸಂವಾದದ ಅಧಿವೇಶನವನ್ನು ಆಯೋಜಿಸುತ್ತಿದೆ.
* ಪ್ರಸ್ತುತ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರಾದ ಭಾರತಿ ಪ್ರವೀಣ್ ಪವಾರ್ ಅವರು ಭಾರತ ಅಮೇರಿಕ ನಡುವಿನ ಪರಸ್ಪರ ಒಗ್ಗಟ್ಟನ್ನು ಬೆಂಬಲಿಸಿದರು.
* ಆರೋಗ್ಯ ಸಂವಾದದ 4 ನೇ ಅಧಿವೇಶನದಲ್ಲಿ ಸಾಂಕ್ರಾಮಿಕ ರೋಗ ಸಂಶೋಧನೆ ಹಾಗೂ ಕಣ್ಗಾವಲು, ಲಸಿಕೆ ಅಭಿವೃದ್ಧಿ, ಒಂದು ಆರೋಗ್ಯ, ಝೂಓನೋಟಿಕ್ ಮತ್ತು ವೆಕ್ಟರ್ ಹರಡುವ ರೋಗಗಳು, ಆರೋಗ್ಯ ವ್ಯವಸ್ಥೆಗಳು ಮತ್ತು ಆರೋಗ್ಯ ನೀತಿಗಳು.
* ಭಾರತ ಅಮೇರಿಕ ರಾಷ್ಟ್ರಗಳ ಪ್ರಮುಖ ಕ್ಷೇತ್ರಗಳಲ್ಲಿನ ಆರೋಗ್ಯ ಸುರಕ್ಷತೆ ಹಾಗೂ ಭದ್ರತೆ ಒಳಗೊಂಡ ಸಭೆ ಇದಾಗಿದೆ, ಇದಲ್ಲದೇ ಆರೋಗ್ಯ ನೀತಿ ಮತ್ತು ಆರೋಗ್ಯ ವ್ಯವಸ್ಥೆಗಳು ಒಳಗೊಂಡ ಸಭೆಯಾಗಿದೆ ಎಂದು ತಿಳಿಸಿದ್ದಾರೆ.

# 30-09-2021

## ದೆಹಲಿಯ ಸರ್ಕಾರಿ ಶಾಲೆಗಳಲ್ಲಿ ದೇಶಭಕ್ತಿ ಪಾಠ ಆರಂಭ



* ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ದೆಹಲಿಯ ಸರ್ಕಾರಿ ಶಾಲೆಗಳಲ್ಲಿ 'ದೇಶಭಕ್ತಿ ಪಾಠ'ವನ್ನು ಪ್ರಾರಂಭಿಸಿದ್ದಾರೆ.
* ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ದೇಶ ಭಕ್ತ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಜನ್ಮದಿನದ ಅಂಗವಾಗಿ ದೆಹಲಿಯಲ್ಲಿನ ಛತ್ರಸಾಲ ಸ್ಟೇಡಿಯಂನಲ್ಲಿ ಈ ದೇಶಭಕ್ತಿ ಪಾಠದ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದ್ದಾರೆ.
* ಪ್ರಸ್ತುತ ದೇಶಭಕ್ತಿ ಪಾಠಗಳ ಬೋಧನೆಯಿಂದಾಗಿ ಪ್ರತಿ ಮಗುವಿನಲ್ಲಿಯೂ ನಿಜವಾದ ದೇಶಭಕ್ತಿ ಹುಟ್ಟುತ್ತದೆ ಎಂದಿದ್ದಾರೆ, ಈ

ದೇಶಭಕ್ತಿ ಪಾಠಗಳ ಭೋಧನೆಯಿಂದಾಗಿ ಮುಂದಿನ ದಿನಗಳಲ್ಲಿ ರಾಷ್ಟ್ರದ ಅಭಿವೃದ್ಧಿ ಹಾಗೂ ರಾಷ್ಟ್ರವನ್ನು ಮುನ್ನಡೆಸುವ ಶಕ್ತಿ ಮಕ್ಕಳಲ್ಲಿ ಹೆಚ್ಚಲಿದೆ ಎಂದಿದ್ದಾರೆ.

* ಪ್ರಸ್ತುತ ಈ ದೇಶಭಕ್ತಿ ಪಾಠಗಳನ್ನೂ 12 ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಭೋದನೆ ಮಾಡಲಾಗುತ್ತದೆ,

* ದೇಶಭಕ್ತಿ ಪಾಠವನ್ನು ಶಿಶುವಿಹಾರ ದಿಂದ 5 ನೇ ತರಗತಿ, ಮತ್ತು 6 ರಿಂದ 8 ನೇ ತರಗತಿ ವರೆಗೆ, ಹಾಗೂ 9 ರಿಂದ 12 ನೇ ತರಗತಿಗಳ ವರೆಗೆ 3 ವಿಭಾಗಗಳನ್ನು ರಚಿಸಲಾಗಿದೆ, ಅಷ್ಟೇ ಅಲ್ಲದೇ ಬೋಧನೆಗೆ ಸರಳವಾಗುವ ನಿಟ್ಟಿನಲ್ಲಿ 2 ಕೈಪಿಡಿಗಳನ್ನೂ ನೀಡಲಾಗುತ್ತದೆ. ಆ ಕೈಪಿಡಿಗಳು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ದೇಶಭಕ್ತರ ಸುಮಾರು 100 ಕತೆಗಳು ಹೊಂದಿರಲಿವೆ ಎಂದಿದ್ದಾರೆ.

## ದೆಹಲಿಯಲ್ಲಿ 2022 ರ ಜನೇವರಿವರೆಗೆ ಪಟಾಕಿ ಸಂಪೂರ್ಣ ನಿಷೇಧ



* ಪ್ರಸ್ತುತ ದೆಹಲಿಯಲ್ಲಿ 2022 ರ ಜನೇವರಿ. 01 ರವರೆಗೆ ಪಟಾಕಿ ಹಚ್ಚುವದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ದೆಹಲಿ ಮಾಲಿನ್ಯ ನಿಯಂತ್ರಣ ಸಮಿತಿಯು ಆದೇಶ ಹೊರಡಿಸಿದೆ, ಹಾಗೂ ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಜಿಲ್ಲಾಧಿಕಾರಿ ಹಾಗೂ ಉಪ ಆಯುಕ್ತರಿಗೆ ತಿಳಿಸಿದ್ದಾರೆ.

* ಈ ಹಿಂದೆ ಹಸಿರು ಪಟಾಕಿಗಳಿಗೆ ಅವಕಾಶವನ್ನು ಒದಗಿಸಲಾಗಿತ್ತು, ಇದೀಗ ಆ ಪಟಾಕಿಗಳನ್ನು ಸಿಡಿಸುವದಕ್ಕೂ ಅವಕಾಶವನ್ನು ನೀಡಲಾಗುವದಿಲ್ಲ ಎಂದು ಡಿಪಿಸಿಸಿ ಮಾಹಿತಿ ನೀಡಿದೆ.

* ಪ್ರಸ್ತುತ ದೆಹಲಿಯಲ್ಲಿನ ಅತ್ಯಧಿಕವಾದ ವಾಯುಮಾಲಿನ್ಯದಿಂದಾಗಿ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಈ ಆದೇಶವನ್ನು ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ದೆಹಲಿಯಲ್ಲಿನ ಈ ಮಾಲಿನ್ಯದಿಂದ ಆರೋಗ್ಯವಾಗಿರುವ ಜನರಿಗೂ ಕೂಡಾ ಉಸಿರಾಟದ ಸಮಸ್ಯೆಗಳು ಎದುರಾಗುವ ಅಪಾಯವಿದೆ, ಹಾಗೂ ಶ್ವಾಸಕೋಶ ಮತ್ತು ಹೃದ್ರೋಗಕ್ಕೆ ಸಂಬಂಧಿಸಿದ ಸಮಸ್ಯೆ ಇರುವ ಜನರಿಗೆ ಗಂಭೀರ ಸಮಸ್ಯೆಗಳನ್ನು ಎದುರಾಗಲಿವೆ ಎಂದು ದೆಹಲಿ ಮಾಲಿನ್ಯ ನಿಯಂತ್ರಣ ಸಮಿತಿಯು ಎಚ್ಚರಿಕೆಯನ್ನು ನೀಡಿದೆ.

## ಜಪಾನ್ ಪ್ರಧಾನಿಯಾಗಿ ಆಯ್ಕೆಯಾದ ಫುಮಿಯೋ ಕಿಶಿಡಾ

* ಪ್ರಸ್ತುತ ಫುಮಿಯೋ ಕಿಶಿಡಾ ಅವರು ಜಪಾನ್‌ನ ಮುಂದಿನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ, ಇದೀಗ ಚುನಾವಣೆಯ ಫಲಿತಾಂಶದ ಪ್ರಕಾರ ಫುಮಿಯೋ ಕಿಶಿಡಾ ಜಪಾನಿನ ಮುಂದಿನ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

* ಈ ಮೊದಲು ಫುಮಿಯೋ ಕಿಶಿಡಾ ಅವರು ಎಲ್‌ಡಿಪಿ



ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ 2012 ರಿಂದ 17 ರ ವರೆಗೆ ವಿದೇಶಾಂಗ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ, ಅದೇ ಸಂಧರ್ಭದಲ್ಲಿ ದಕ್ಷಿಣ ಕೊರಿಯಾ ದೇಶದ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದರು, ಅಷ್ಟೇ ಅಲ್ಲದೇ ಇವರು ಅಧಿಕಾರದಲ್ಲಿರುವಾಗ ಸಲಿಂಗ ವಿವಾಹಕ್ಕೆ ಬೆಂಬಲವನ್ನು ನೀಡಿದ್ದರು.

* ಈ ಹಿಂದೆ 2020 ರಲ್ಲಿ ಯೋಶಿಹಿಡೆ ಸುಗಾ ಅವರು ಪ್ರಧಾನಿಯಾಗಿ ಅಧಿಕಾರವನ್ನು ವಹಿಸಿಕೊಂಡಿದ್ದರು, ಆದರೆ ಇದೀಗ ಜಪಾನ್ ದೇಶವು ಮತ್ತೊಬ್ಬ ಪ್ರಧಾನಿಯನ್ನು ಆಯ್ಕೆ ಮಾಡಿದೆ.

* ಜಪಾನ್ ದೇಶವು 8 ವರ್ಷಗಳಲ್ಲಿ ಮೊದಲ ಬಾರಿ 2020 ರಲ್ಲಿ ನಾಯಕತ್ವ ಬದಲಾವಣೆಯನ್ನು ಮಾಡಿದೆ, ಆದರೆ ಇದೀಗ ಮತ್ತೇ ಪ್ರಧಾನಿಯನ್ನು ಬದಲಾವಣೆ ಮಾಡುತ್ತಿದೆ.

## ವಿಶ್ವ ಮಹಿಳಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಸೋಲು



* ಪ್ರಸ್ತುತ ವಿಶ್ವ ಮಹಿಳೆಯರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ರಷ್ಯಾ ಎದುರು ಭಾರತ ತಂಡವು ಸೋಲ ಅನುಭವಿಸಿದೆ.

* ಭಾರತದ ಆಟಗಾರ್ತಿಯರು 'ಎ' ಗುಂಪಿನ ಪಂದ್ಯದಲ್ಲಿ 1 3 ಅಂತರದಲ್ಲಿ ರಷ್ಯಾ ಎದುರು ಸೋಲ ಅನುಭವಿಸಿದ್ದಾರೆ, ಆದರೆ ಭಾರತ ತಂಡವು ಕ್ವಾರ್ಟರ್‌ಫೈನಲ್ ಹಂತವನ್ನು ತಲುಪಿದೆ ಈ ಕಾರಣದಿಂದ ಭಾರತವು ಫ್ರಾನ್ಸ್ ಎದುರು 5 ನೇ ಸುತ್ತಿನಲ್ಲಿ ಆಡಲಿದೆ.

* ಈ ಮೊದಲು ಭಾರತ ತಂಡವು ಬಲಿಷ್ಠ ಆರ್ಮೇನಿಯಾ ಎದುರು 2.5 1.5ರಿಂದ ಜಯ ಸಾಧಿಸಿತ್ತು, ಅಷ್ಟೇ ಅಲ್ಲದೇ ಸ್ಪೇನ್ ತಂಡವನ್ನು 2.5 1.5 ಅಂತರದಿಂದ ಸೋಲಿಸಿತ್ತು.

## ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷಾ ಪ್ರಯೋಗ ಯಶಸ್ವಿಗೊಳಿಸಿದ ಉತ್ತರ ಕೊರಿಯಾ

* ಪ್ರಸ್ತುತ ಉತ್ತರ ಕೊರಿಯಾ ದೇಶವು ಇತ್ತೀಚಿಗೆ 'ಹೈಪರ್‌ಸಾನಿಕ್'



ಕ್ಷಿಪಣಿಯ ಮೊದಲ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಗೊಳಿಸಿದೆ ಎಂದು ಉತ್ತರ ಕೊರಿಯಾದ ಸರ್ಕಾರಿ ಸುದ್ದಿವಾಹಿನಿಗಳು ಮಾಹಿತಿ ನೀಡಿವೆ.

* ಉತ್ತರ ಕೊರಿಯಾ ರಾಷ್ಟ್ರವು ತನ್ನ ದೇಶದಲ್ಲಿನ ಪರಮಾಣು ಸಾಮರ್ಥ್ಯದ ಅಭಿವೃದ್ಧಿಯನ್ನು ಹೆಚ್ಚಿಸಲು ಈ ಕ್ಷಿಪಣಿಯನ್ನು ಸಿದ್ದಪಡಿಸಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಉತ್ತರ ಕೊರಿಯಾ ರಾಷ್ಟ್ರವು ಇದೇ ತಿಂಗಳಿನಲ್ಲಿ 3 ನೇ ಸುತ್ತಿನ ಕ್ಷಿಪಣಿಯ ಪರೀಕ್ಷೆಯು ಪ್ರಯೋಗವನ್ನು ಯಶಸ್ವಿಗೊಳಿಸಿದೆ.

* ಪ್ರಸ್ತುತ ಅಮೇರಿಕದ ಸುರಕ್ಷಾ ಕ್ಷಿಪಣಿಯು ಈ ಹೈಪರ್‌ಸಾನಿಕ್

ಕ್ಷಿಪಣಿಯನ್ನು ಬೇಧಿಸುವುದು ಅಸಾಧ್ಯ ಎಂದು ತಿಳಿಸಿದ್ದಾರೆ.

## ಕಿರನ್ ಪೊಲ್ಲಾರ್ಡ್ ಟಿ20 ಕ್ರಿಕೆಟ್ ನಲ್ಲಿ ಹೊಸ ವಿಶ್ವದಾಖಲೆ



* ವೆಸ್ಟ್ ಇಂಡೀಸ್ ತಂಡದ ಕಿರನ್ ಪೊಲ್ಲಾರ್ಡ್ ಅವರು ಟಿ20 ಕ್ರಿಕೆಟ್'ನಲ್ಲಿ ಹೊಸ ವಿಶ್ವದಾಖಲೆಯನ್ನು ನಿರ್ಮಿಸಿದ್ದಾರೆ, ಅದುವೇ ಟಿ20ಯಲ್ಲಿ 10,000 ರನ್, ಮತ್ತು 300 ವಿಕೆಟ್ ಪಡೆದಿರುವ ಸಾಧನೆಯಾಗಿದೆ, ಪ್ರಸ್ತುತ ಈ ಸಾಧನೆಯನ್ನು ಮಾಡಿರುವ ಮೊದಲ ಮತ್ತು ಏಕೈಕ ಆಟಗಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

* ಇತ್ತೀಚಿಗೆ ಅಬುದಾಬಿಯಲ್ಲಿ ನಡೆಯುತ್ತಿರುವ ಐಪಿಎಲ್ ಪಂದ್ಯಗಳಲ್ಲಿ ಕಿರನ್ ಪೊಲ್ಲಾರ್ಡ್ 300 ವಿಕೆಟ್ ಗಳನ್ನೂ ಪಡೆದುಕೊಂಡು ವಿಶ್ವದಾಖಲೆ ಬರೆದಿದ್ದಾರೆ.

* ಕಿರನ್ ಪೊಲ್ಲಾರ್ಡ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಹಾಗೂ ವಿಶ್ವದ ವಿವಿಧ ದೇಶಗಳ 25 ಕ್ಕೂ ಅಧಿಕ ಫ್ರಾಂಚೈಸಿ ತಂಡಗಳ ಟಿ20 ಕ್ರಿಕೆಟ್'ನಲ್ಲಿ ಆಟವಾಡಿದ್ದಾರೆ.

* ಒಟ್ಟಾರೆ ಕಿರನ್ ಪೊಲ್ಲಾರ್ಡ್ ಅವರು 565 ಟಿ20 ಪಂದ್ಯಗಳಲ್ಲಿ ಆಟವಾಡಿ 11 ಸಾವಿರಕ್ಕೂ ಅಧಿಕ ರನ್ ಗಳನ್ನೂ ಕಲೆಹಾಕುವದರ ಜೊತೆಗೆ 300 ವಿಕೆಟ್ ಗಳನ್ನೂ ಪಡೆದಿದ್ದಾರೆ.

## ಸಿಖ್ ಯೋಧನಿಗೆ ಟರ್ಬನ್ ಧರಿಸಲು ಅನುಮತಿ ನೀಡಿದ ಅಮೇರಿಕ ನೌಕಾಪಡೆ



* ಪ್ರಸ್ತುತ ಅಮೇರಿಕದ ನೌಕಾಪಡೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಖ್ ಸಮುದಾಯದ ಲೆಫ್ಟಿನೆಂಟ್ ಸುಕ್ಬೀರ್ ತೂರ್ ಅವರಿಗೆ ಟರ್ಬನ್ ಧರಿಸಲು ಅಮೇರಿಕ ನೌಕಾಪಡೆ ಅನುಮತಿ ನೀಡಿದೆ.

* ಪ್ರಸ್ತುತ ಅಮೇರಿಕದ ಇತಿಹಾಸದಲ್ಲಿ ಅಂದರೆ 246 ವರ್ಷಗಳಲ್ಲಿ ಮೊಟ್ಟ ಮೊದಲ ಬಾರಿಗೆ ಈ ವಿನಾಯಿತಿಯನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ.

* ಸಿಖ್ ಸಮುದಾಯದ ಲೆಫ್ಟಿನೆಂಟ್ ಸುಕ್ಬೀರ್ ತೂರ್ ಅವರು ಅಮೇರಿಕ ಸೇನೆಯಲ್ಲಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ, ಇದೀಗ ಇವರಿಗೆ ಟರ್ಬನ್ ಧರಿಸಲು ಅಮೇರಿಕ ನೌಕಾಪಡೆ ಅನುಮತಿ ನೀಡಿದೆ, ಆದರೆ ಸಂಘರ್ಷ ನಡೆಯುವ ಸಂಧರ್ಭದಲ್ಲಿ ಕರ್ತವ್ಯದಲ್ಲಿರುವಾಗ ಹಾಗೂ ಸಾರ್ವಜನಿಕರು ನೋಡುವ ಕಾರ್ಯಕ್ರಮದಲ್ಲಿ ಟರ್ಬನ್ ಧರಿಸಲು ಅನುಮತಿವಿಲ್ಲ ಎಂಬ ಷರತ್ತುನ್ನು ಹೇರಿದೆ.

* ಪ್ರಸ್ತುತ ಅಮೇರಿಕದ ವಾಯುಪಡೆ ಹಾಗೂ ಭೂಸೇನೆಯಲ್ಲಿ ಸುಮಾರು 100 ರಷ್ಟು ಸಿಖ್ ಯೋಧರು ಸೇವೆ ಸಲ್ಲಿಸುತ್ತಿದ್ದಾರೆ, ಇದೀಗ ಇವರಿಗೆ ಗಡ್ಡ ಬಿಡಲು ಹಾಗೂ ಟರ್ಬನ್ ಧರಿಸಲು ಅನುಮತಿಯನ್ನು ನೀಡಲಾಗಿದೆ ಎಂದು ತಿಳಿದು ಬಂದಿದೆ.

## ಭಾರತದಲ್ಲಿ 'ಅಮೆಜಾನ್ ಫ್ಯೂಚರ್ ಇಂಜಿನಿಯರ್ ಪ್ರೋಗ್ರಾಂ'ನ್ನು ಪ್ರಾರಂಭಿಸಲಿರುವ ಅಮೆಜಾನ್

amazon future engineer

* ಪ್ರಸ್ತುತ ಇ ಕಾಮರ್ಸ್ ದೈತ್ಯ ಸಂಸ್ಥೆಯಾಗಿರುವ ಅಮೆಜಾನ್ ಇಂಡಿಯಾ ಇದೀಗ ಭಾರತದಲ್ಲಿ 'ಅಮೆಜಾನ್ ಫ್ಯೂಚರ್ ಇಂಜಿನಿಯರ್'ನ್ನು ಪ್ರಾರಂಭಿಸುವದಾಗಿ ಘೋಷಣೆ ಮಾಡಿದೆ.

* ಅಮೆಜಾನ್ ಫ್ಯೂಚರ್ ಪ್ರೋಗ್ರಾಮ್ ಇದು ಜಾಗತಿಕ ಕಂಪ್ಯೂಟರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮವಾಗಿದೆ.

* ಭಾರತದ ಕಡಿಮೆ ಸಮುದಾಯಗಳ ವಿದ್ಯಾರ್ಥಿಗಳಿಗೆ ಅಮೆಜಾನ್ ಫ್ಯೂಚರ್ ಇಂಜಿನಿಯರ್ ಪ್ರೋಗ್ರಾಂ ವಿಶೇಷವಾಗಿ ಕಂಪ್ಯೂಟರ್ ವಿಜ್ಞಾನ, ಉತ್ತಮ ಗುಣಮಟ್ಟದ ಕಂಪ್ಯೂಟರ್ ವಿಜ್ಞಾನ ಶಿಕ್ಷಣಕ್ಕೆ ಪ್ರವೇಶ ಒದಗಿಸಿಕೊಡುತ್ತದೆ.

* ಅಮೆಜಾನ್ ಫ್ಯೂಚರ್ ಪ್ರೋಗ್ರಾಮ್ ಆರಂಭವಾದ ಮೊದಲನೇ ವರ್ಷದಲ್ಲಿ ಭಾರತದ 7 ರಾಜ್ಯಗಳ 900 ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿನ ಸುಮಾರು 1 ಲಕ್ಷ ವಿದ್ಯಾರ್ಥಿಗಳಿಗೆ ಕಲಿಕಾ ಅವಕಾಶಗಳನ್ನು ಒದಗಿಸಿಕೊಡಲಿದೆ ಎಂದು ತಿಳಿಸಿದೆ.

* ಅಮೆಜಾನ್ ಇಂಡಿಯಾ ಜಾಗತಿಕ ಜ್ಞಾನ ಪಾಲುದಾರ ಕೋಡ್ ಓಆರ್‌ಜಿ ಸಹಭಾಗಿತ್ವದಲ್ಲಿ ಆರಂಭಿಸಲಿದೆ, ಇದೊಂದು ಕಂಪ್ಯೂಟರ್ ವಿಜ್ಞಾನ ಶಿಕ್ಷಣಕ್ಕೆ ಮಹತ್ವ ನೀಡುವ ಜಾಗತಿಕ ಲಾಭರಹಿತ ಸಂಸ್ಥೆಯಾಗಿದೆ.

## ಅಮುಲ್ ಹನಿ(ಜೇನು) ಬಿಡುಗಡೆ



* ಪ್ರಸ್ತುತ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು 'ಅಮುಲ್ ಹನಿ' ಯನ್ನು ಬಿಡುಗಡೆ ಮಾಡಿದ್ದಾರೆ, ಇದು ಗುಜರಾತ್ ಸಹಕಾರಿ ಹಾಲು ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್ ನ ಉತ್ಪನ್ನವಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಗುಜರಾತ್ ಸಹಕಾರಿ ಹಾಲು ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್ ಈ ಉತ್ಪನ್ನವನ್ನು 'ರಾಷ್ಟ್ರೀಯ ಬೀ ಬೋರ್ಡ್' ಸಹಭಾಗಿತ್ವದಲ್ಲಿ ಆರಂಭಿಸಿದೆ, ಇದು ಸಣ್ಣ ರೈತರ ಆದಾಯವನ್ನು ಹೆಚ್ಚಿಸಲಿದೆ ಎಂದು ತಿಳಿಸಿದ್ದಾರೆ.

* ಭಾರತದಲ್ಲಿ ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನು ಮಿಷನ್'ನ್ನು ಜಾರಿಗೆ ತರಲಾಗುತ್ತಿದೆ, ಇದರ ಅಡಿಯಲ್ಲಿ ಜೇನುತುಪ್ಪದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು, 5 ಬೃಹತ ಪ್ರಮಾಣದ ಪ್ರಾದೇಶಿಕ ಜೇನು ಪರೀಕ್ಷಾ ಪ್ರಯೋಗಾಲಯ ಹಾಗೂ 100 ಮಿನಿ ಜೇನು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪನೆ ಮಾಡಲಾಗುತ್ತದೆ ಎಂದು

ಕೇಂದ್ರ ಕೃಷಿ ಸಚಿವರು ತಿಳಿಸಿದ್ದಾರೆ.
* ರಾಷ್ಟ್ರೀಯ ಬೀ ಮಂಡಳಿ (NBB)ಯನ್ನು ಸೊಸೈಟಿಗಳ ನೋಂದಣಿಯನ್ನು 1860 ರ ಕಾಯಿದೆ ಅಡಿಯಲ್ಲಿ ಇದನ್ನು ಒಂದು ಸಣ್ಣರೈತರ ಕೃಷಿ ವ್ಯಾಪಾರ ಒಕ್ಕೂಟದ ಸೊಸೈಟಿಯಾಗಿ 2000 ರಲ್ಲಿ ಸ್ಥಾಪಿಸಲಾಗಿದೆ.
* ಆತ್ಮ ನಿರ್ಭರ ಭಾರತ್ ಯೋಜನೆ ಅಡಿಯಲ್ಲಿ ಘೋಷಣೆ ಮಾಡಲಾಗಿರುವ 'ಸಿಹಿ ಕ್ರಾಂತಿ' ಗುರಿಯನ್ನು ಸಾಧಿಸುವ ಉದ್ದೇಶದಿಂದ ಈ ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನು ಮಿಷನ್'ನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App